ವಿಶ್ವವಾಣಿ
ವಿಶ್ವಾಸವೇ ವಿಶ್ವ

ರವೀಂದ್ರ ಜಡೇಜಾ ಮೈಲಿಗಲ್ಲು

ಭಾರತ-ದ.ಆಫ್ರಿಕಾ ನಡುವೆ ಕೋಲ್ಕತ್ತಾದಲ್ಲಿ ನಡೆಯುತ್ತಿರುವ 1ನೇ ಟೆಸ್ಟ್‌ನಲ್ಲಿ ರವೀಂದ್ರ ಜಡೇಜಾ ವಿಶೇಷ ಮೈಲುಗಲ್ಲನ್ನು ಸಾಧಿಸಿದ್ದಾರೆ. ಅವರು ಟೆಸ್ಟ್‌ನಲ್ಲಿ 4000 ರನ್ ಹಾಗೂ 300ಕ್ಕೂ ಅಧಿಕ ವಿಕೆಟ್ ಪಡೆದ 2ನೇ ಭಾರತೀಯ ಆಲ್‌ರೌಂಡರ್. ಇವರಿಗೂ ಮೊದಲು ಕಪಿಲ್‌ದೇವ್ ಈ ಸಾಧನೆ ಮಾಡಿದ ಭಾರತೀಯ ಆಟಗಾರರಾಗಿದ್ದಾರೆ.

ಸೊಂಪಾದ ಪುಟಗಳು

ಕಿಬೂತ್: ಇಸ್ರೇಲಿನ ಮರುಭೂಮಿಯಲ್ಲಿ ಹುಟ್ಟಿದ ಸಮಾಜದ ಮಾದರಿ

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್ 6

ಅಹಂಕಾರಜನ್ಯ ವ್ಯಾಧಿಗಳಿಗೆ ಭಿಕ್ಷಾನ್ನವೇ ಪರಮೌಷಧ

ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ 7

ದಾರಿದೀಪೋಕ್ತಿ



ನಮ್ಮ ಹೆಚ್ಚುಗಾರಿಕೆಯಿರುವುದು ಎಂದಿಗೂ ಬೀಳದಿರುವುದರಲ್ಲಿ ಅಲ್ಲ, ಅದರ ಬದಲು ಪ್ರತಿ ಸಲ ಬಿದ್ದಾಗಲೆಲ್ಲ ಎದ್ದೇಳುವುದರಲ್ಲಿ ಮತ್ತು ಎದ್ದು ನಿಂತು ಮತ್ತಷ್ಟು ಗಟ್ಟಿಯಾಗುವುದರಲ್ಲಿ.

ವಕ್ರತುಂಡೋಕ್ತಿ

ಗೂಗಲ್ ಗೆ ಎಲ್ಲವೂ ಗೊತ್ತಿರಬಹುದು. ಆದರೆ ಅದೇ ಅಭಿಪ್ರಾಯವನ್ನು ಅಲ್ಲಿ ಕೆಲಸ ಮಾಡುವವರ ಬಗ್ಗೆ ಇಟ್ಟುಕೊಳ್ಳಬೇಕಿಲ್ಲ.

ರಾಜಮೌಳಿ 1000 ಕೋಟಿ ರು. ಚಿತ್ರದ ಹೆಸರು ವಾರಾಣಸಿ

ಹೈದರಾಬಾದ್: ಎಸ್.ಎಸ್.ರಾಜಮೌಳಿ ನಿರ್ದೇಶನ, ಮಹೇಶ್ ಬಾಬು ಅಭಿನಯದ ಬಹುನಿರೀಕ್ಷಿತ ಚಿತ್ರದ ಹೆಸರನ್ನು ಶನಿವಾರ ಹೈದರಾಬಾದ್‌ನಲ್ಲಿ ಚಿತ್ರತಂಡ ಪ್ರಕಟಿಸಿದೆ. 1000 ಕೋಟಿ ರು. ಬಜೆಟ್‌ನ ಸಿನಿಮಾ ಎಂದು ಕರೆಸಿಕೊಂಡಿರುವ ಚಿತ್ರಕ್ಕೆ ವಾರಾಣಸಿ ಎಂದು ಹೆಸರಿಡಲಾಗಿದೆ. ಸಿನಿಮಾದ ಕಥೆಯ ಬಗ್ಗೆ ಕುತೂಹಲ ತೀವ್ರಗೊಂಡಿದೆ. ಮಹೇಶ್ ಬಾಬು ಎತ್ತಿನ ಮೇಲೆ ಸವಾರಿ ಮಾಡು ತ್ತಿರುವ ಚಿತ್ರ ಇನ್ನಷ್ಟು ಹುಡುಕಾಟಕ್ಕೆ ಕಾರಣವಾಗಿದೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ಮಾರ್ಕೆಟಲ್ಲಿ ನಕಲಿ ENO ಪ್ರೊಡಕ್ಟ್

ಸುದ್ದಿ

ನಾಳೆ ಸಿಎಂ ಸಿದ್ದು-ಖರ್ಗೆ ಭೇಟಿ, ಬಳಿಕ ಪುನಾರಚನೆ ಕುರಿತು ಸ್ಪಷ್ಟನೆ?

ಪ್ರಧಾನಿ ಜತೆ ಸಿಎಂ ಕಬ್ಬಿನ ಚರ್ಚೆ, ನಂತರ ಖರ್ಗೆಯೊಂದಿಗೆ ಮಾತುಕತೆ

ತಣಿಯದ ಸಂಪುಟ ಕುತೂಹಲ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಹುನಿರೀಕ್ಷಿತ ದೆಹಲಿ ಪ್ರವಾಸ ಹಾಗೂ ರಾಹುಲ್ ಗಾಂಧಿ ಭೇಟಿಯ ವೇಳೆ ರಾಜ್ಯದ ಹಲವು ಕಾಂಗ್ರೆಸಿಗರು ಕಾತುರದಿಂದ ಕಾಯುತ್ತಿರುವ ಸಂಪುಟ ಪುನಾರಚನೆಗೆ ಸಂಬಂಧಿಸಿದಂತೆ ಯಾವುದೇ ಸ್ಪಷ್ಟನೆ ಸಿಕ್ಕಿಲ್ಲ. ರಾಹುಲ್ ಗಾಂಧಿ ಅವರನ್ನು ಸಿದ್ದರಾಮಯ್ಯ ಅವರು ಭೇಟಿಯಾದರೂ ಪುನಾರಚನೆಗೆ ಸಂಬಂಧಿಸಿದಂತೆ ಚರ್ಚಿಸಲು ಇದು 'ಸೂಕ್ತ' ಸಮಯವಲ್ಲ ಎನ್ನುವ ಕಾರಣಕ್ಕೆ ಈ ಬಗ್ಗೆ ಚರ್ಚಿಸಿಲ್ಲ. ಸೋಮವಾರದ ಬಳಿಕ ಈ ಗೊಂದಲಗಳಿಗೆ ಸ್ಪಷ್ಟನೆ ಸಿಗುವ ಸಾಧ್ಯತೆಯಿದೆ.

ಕಪಿಲ್ ಸಿಬಲ್ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸಲು ದೆಹಲಿಗೆ ತೆರಳಿದ್ದ ಸಿದ್ದರಾಮಯ್ಯ ಅವರು ಶನಿವಾರ ಮಧ್ಯಾಹ್ನ ರಾಹುಲ್ ಗಾಂಧಿ ಅವರನ್ನು ಭೇಟಿಯಾದರು. ಆದರೆ ಈ ಭೇಟಿ ರಾಗಾ ಅವರಿಗೆ 'ಧೈರ್ಯ' ತುಂಬುವುದಕ್ಕೆ ಮಾತ್ರ ಸೀಮಿತವಾಗಿದೆ. ಆದರೆ ಸೋಮವಾರ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಲು ಸಿದ್ದುಗೆ ಸಮಯ ಸಿಕ್ಕಿದ್ದು, ಮೋದಿ ಭೇಟಿಯ ಬಳಿಕ ಮಲ್ಲಿಕಾರ್ಜುನ ಖರ್ಗೆ ಅವರನ್ನು ಸಿದ್ದರಾಮಯ್ಯ ಭೇಟಿಯಾಗಲಿದ್ದಾರೆ. ಈ ಸಮಯದಲ್ಲಿ ಸಂಪುಟ ಪುನಾರಚನೆಗೆ ಸಂಬಂಧಿಸಿದಂತೆ ಸ್ಪಷ್ಟನೆ ಸಿಗುವ ಸಾಧ್ಯತೆಯಿದೆ.

ರಾಹುಲ್ ಗಾಂಧಿ ಅವರನ್ನು ಭೇಟಿಯಾಗುವ ಮೊದಲು ಸಿದ್ದರಾಮಯ್ಯ ಅವರು ತಮ್ಮ ಆಪ್ತರೊಂದಿಗೆ ಸಭೆ ನಡೆಸಿದ್ದರಿಂದ ಸಂಪುಟ ಪುನಾರಚನೆ ಬಗ್ಗೆ ಚರ್ಚಿಸುವುದು ಬಹುತೇಕ ಖಚಿತ ಎನ್ನಲಾಗಿತ್ತು. ಆದರೆ ಬಿಹಾರ ಚುನಾವಣೆಯಲ್ಲಿ ಹೀನಾಯವಾಗಿ ಸೋತಿರುವ ಈ ಸಮಯದಲ್ಲಿ ರಾಜ್ಯದ ಪುನಾರಚನೆ ಬಗ್ಗೆ ಚರ್ಚಿಸುವುದು ಸೂಕ್ತವಲ್ಲ ಎನ್ನುವ ಕಾರಣಕ್ಕೆ ಈ ಬಗ್ಗೆ ಚರ್ಚಿಸಿಲ್ಲ. ಬದಲಿಗೆ ಬಿಹಾರ ಚುನಾವಣಾ ಸೋಲಿಗೆ ಕಾರಣ, ಹೈಕಮಾಂಡ್‌ನೊಂದಿಗೆ 'ನಾವು' ಇದ್ದೇವೆ ಎನ್ನುವ ಆತ್ಮಸ್ಥೈರ್ಯದ ಮಾತುಗಳಿಗೆ ಈ ಭೇಟಿ ಸೀಮಿತವಾಗಿತ್ತು.

ರಾಹುಲ್ ಗಾಂಧಿ, ಸಿದ್ದರಾಮಯ್ಯ ಅವರು ಭೇಟಿಯಾದ ಸಮಯದಲ್ಲಿ ಸಂಪುಟ ಪುನಾರಚನೆಗೆ ಒಪ್ಪಿಗೆ ಸಿಕ್ಕಿದೆ ಎಂದೇ ಹೇಳಲಾಗಿತ್ತು. ಆದರೆ ಸಚಿವ ಸಂಪುಟ ಪುನಾರಚನೆಗೆ ಸಂಬಂಧಿಸಿದಂತೆ ಯಾವುದೇ ಚರ್ಚೆಯಾಗಿಲ್ಲವೆಂದು ಸ್ವತಃ ಸಿದ್ದರಾಮಯ್ಯ ಅವರೇ ಸ್ಪಷ್ಟನೆ ನೀಡಿದ್ದಾರೆ.

→ 4

ರಾಹುಲ್ ಗಾಂಧಿಯನ್ನು ಭೇಟಿಯಾದ ಸಮಯದಲ್ಲಿ ಸಚಿವ ಸಂಪುಟ ಪುನಾರಚನೆಗೆ ಸಂಬಂಧಿಸಿದಂತೆ ಯಾವುದೇ ಚರ್ಚೆಯಾಗಿಲ್ಲ. ಬಿಹಾರ ಚುನಾವಣೆಗೆ ಸಂಬಂಧಿಸಿದಂತೆ ಭೇಟಿ ಸೀಮಿತವಾಗಿದೆ. ಈ ಭೇಟಿಯ ವೇಳೆ ಅವರೊಂದಿಗೆ ನಾವು ಇದ್ದೇವೆ ಎನ್ನುವ ಮಾತನ್ನು ಹೇಳಿದ್ದೇನೆ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ರಾಹುಲ್ ಗಾಂಧಿಯನ್ನು ಸಿದ್ದರಾಮಯ್ಯ ಭೇಟಿಯಾದ ಸಮಯದಲ್ಲಿ ಯಾವ ಚರ್ಚೆ ನಡೆದಿದೆ ಎನ್ನುವುದು ಗೊತ್ತಿಲ್ಲ. ದೆಹಲಿಗೆ ಮುಖ್ಯಮಂತ್ರಿಗಳು ಬಂದಾಗ ನಮ್ಮ ನಾಯಕರನ್ನು ಭೇಟಿಯಾಗುವುದು ಸಹಜ. ಅದರಲ್ಲಿ ತಪ್ಪೇನಿದೆ? ಬೇರೆ ಪಕ್ಷದವರನ್ನು ಭೇಟಿಯಾಗಲು ಸಾಧ್ಯವೇ?

-ಶಿವಕುಮಾರ್, ಉಪಮುಖ್ಯಮಂತ್ರಿ

ಕಬ್ಬಿನ ಬೆಲೆ: ಮೋದಿ ಜತೆ ಸಿದ್ದರಾಮಯ್ಯ ಚರ್ಚೆ

ಈ ನಡುವೆ ಕಬ್ಬಿಗೆ ನಿಗದಿಪಡಿಸಿರುವ ಎಫ್‌ಆರ್‌ಪಿ ಪರಿಷ್ಕರಿಸಲು, ಎಥೆನಾಲ್, ವಿದ್ಯುತ್ ಖರೀದಿಗೆ ಸಂಬಂಧಿಸಿದಂತೆ ಬೆಲೆ ಪರಿಷ್ಕರಣೆ ಮಾಡಬೇಕು ಎನ್ನುವ ಬೇಡಿಕೆಗಳ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಲು ಸಿದ್ದರಾಮಯ್ಯ ಸಮಯ ಕೇಳಿದ್ದರು. ಭೇಟಿಗೆ ಸೋಮವಾರ ಸಮಯ ಸಿಕ್ಕಿದ್ದು, ಕಬ್ಬು ಬೆಳೆಗಾರರ ಸಂಕಷ್ಟ ಸೇರಿದಂತೆ ನೀರಾವರಿ ಯೋಜನೆಗಳಿಗೆ ಸಂಬಂಧಿಸಿ ಮೋದಿ ಅವರೊಂದಿಗೆ ಚರ್ಚಿಸುವ ಸಾಧ್ಯತೆಯಿದೆ ಎಂದು ತಿಳಿದುಬಂದಿದೆ.

ಏನೇನಾಯ್ತು?

1. ಶನಿವಾರ ರಾಹುಲ್ ಗಾಂಧಿ ಭೇಟಿಯಾದ ಸಿಎಂ ಸಿದ್ದರಾಮಯ್ಯ
2. ಬಿಹಾರ ಸೋಲಿನ ಹಿನ್ನೆಲೆಯಲ್ಲಿ ಪುನಾರಚನೆ ಬಗ್ಗೆ ಚರ್ಚೆಯಾಗಿಲ್ಲ
3. ನಿಮ್ಮೊಂದಿಗೆ ನಾವಿದ್ದೇವೆ: ರಾಹುಲ್‌ಗೆ ಸಿದ್ದರಾಮಯ್ಯ ಸಾಂತ್ವನ
4. ಇಂದು ರಾಹುಲ್, ಶಿವಕುಮಾರ್ ಭೇಟಿಯಾಗುವ ಸಾಧ್ಯತೆ

ಇಂದು ರಾಹುಲ್ ಗಾಂಧಿ-ಶಿವಕುಮಾರ್ ಭೇಟಿ?

ಸಿದ್ದರಾಮಯ್ಯ ಅವರು ಪಕ್ಷದ ವರಿಷ್ಠ ರಾಹುಲ್ ಗಾಂಧಿ ಅವರನ್ನು ಭೇಟಿಯಾಗಿದ್ದು, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರಿಗೆ ಸಮಯಾವಕಾಶ ಸಿಕ್ಕಿಲ್ಲ. ರಾಹುಲ್ ಗಾಂಧಿ ಸೇರಿದಂತೆ ಪಕ್ಷದ ವರಿಷ್ಠರನ್ನು ಭಾನುವಾರ ಭೇಟಿಯಾಗುವ ಸಾಧ್ಯತೆಯಿದೆ. ಈ ನಡುವೆ ಸಿದ್ದರಾಮಯ್ಯ ಅವರು ಶನಿವಾರ ರಾತ್ರಿಯೇ ಬೆಂಗಳೂರಿಗೆ ವಾಪಸಾಗಿದ್ದಾರೆ. ಭಾನುವಾರ ಬೆಳಗ್ಗೆ ಡಿ.ಕೆ.ಶಿವಕುಮಾರ್ ಅವರು ಖರ್ಗೆ, ವೇಣುಗೋಪಾಲ್, ಸುರ್ಜೇವಾಲ ಸೇರಿದಂತೆ ಹಲವು ನಾಯಕರನ್ನು ಭೇಟಿಯಾಗಲಿದ್ದಾರೆ ಎಂದು ತಿಳಿದುಬಂದಿದೆ. ರಾಹುಲ್ ಗಾಂಧಿ ಭೇಟಿಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿರುವ ಡಿ.ಕೆ.ಶಿವಕುಮಾರ್, ದೆಹಲಿಗೆ ಆಗಮಿಸಿದ್ದೇವೆ. ರಾಹುಲ್ ಗಾಂಧಿಯನ್ನು ಭಾನುವಾರ ಭೇಟಿಯಾಗುವ ನಿರೀಕ್ಷೆಯಿದೆ. ಅವಕಾಶ ನೀಡಿದರೆ ಭೇಟಿಯಾಗುವೆ ಎಂದಿದ್ದಾರೆ.

ದೆಹಲಿ ದುರಂತ ಸಂಬಂಧಿತ ಅಮೋನಿಯಂ ನೈಟ್ರೇಟ್ ಹರ್ಯಾಣದಲ್ಲಿ ವಶ, ಕಾಶ್ಮೀರದ ನೌಗಾಮಲ್ಲಿ ಬ್ಲಾಸ್ಟ್

ಇದು ಉಗ್ರಕೃತ್ಯವಲ್ಲ, ಕಾರಣಪತ್ತೆಗೆ ತನಿಖೆ: ಪೊಲೀಸ್

ಶ್ರೀನಗರದಲ್ಲಿ ಭೀಕರ ಸ್ಫೋಟ: ಒಂಬತ್ತು ಬಲಿ

ಶ್ರೀನಗರ: ಜಮ್ಮುಕಾಶ್ಮೀರದ ಶ್ರೀನಗರದ ಹೊರವಲಯ ನೌಗಾಮ್‌ನಲ್ಲಿ ಶುಕ್ರವಾರ ತಡರಾತ್ರಿ ನಡೆದ ಭಾರೀ ಸ್ಫೋಟದಲ್ಲಿ ವಿಶೇಷ ತನಿಖಾ ತಂಡದ (ಎಸ್‌ಐಎ) 9 ಮಂದಿ ಸಾವನ್ನಪ್ಪಿದ್ದು, 32 ಮಂದಿ ಗಾಯಗೊಂಡಿದ್ದಾರೆ. ಕಟ್ಟಡ ಧರೆಗುರುಳಿದೆ, ಸಾವನ್ನಪ್ಪಿದ್ದ ವ್ಯಕ್ತಿಗಳ ಅವಯವಗಳು ಹತ್ತಿರಹತ್ತಿರ 300 ಮೀಟರ್‌ವರೆಗೆ ಸಿಡಿದು ಬಿದ್ದಿದ್ದು ಪ್ರಕರಣದ ತೀವ್ರತೆಯನ್ನು ಸಾರುತ್ತದೆ. ದುರಂತವೆಂದರೆ ಈ ಸ್ಫೋಟಕ್ಕೂ ದೆಹಲಿ ಸ್ಫೋಟಕ್ಕೂ ಸಂಬಂಧವಿರುವುದು. ಆದರೆ ಇದು ಉಗ್ರಕೃತ್ಯವಲ್ಲ ಎಂದು ಜಮ್ಮುಕಾಶ್ಮೀರ ಪೊಲೀಸರು ಸ್ಪಷ್ಟವಾಗಿ ಹೇಳಿದ್ದಾರೆ.

ನ.10ರಂದು ದೆಹಲಿಯಲ್ಲಿ ಕಾರು ಬಾಂಬ್ ಸ್ಫೋಟಿಸಿ 13 ಮಂದಿ ಬಲಿಯಾಗುವುದಕ್ಕೂ ಮುನ್ನ ಜಮ್ಮುಕಾಶ್ಮೀರ ಪೊಲೀಸರು, ಹರ್ಯಾಣದ ಫರೀದಾಬಾದ್‌ನಲ್ಲಿ 3000 ಕೆಜಿಯಷ್ಟು ಅಮೋನಿಯಂ ನೈಟ್ರೇಟ್ ಅನ್ನು ವಶಪಡಿಸಿಕೊಂಡಿದ್ದರು. ಅದನ್ನು ಜಮ್ಮುಕಾಶ್ಮೀರದ ರಾಜಧಾನಿ ಶ್ರೀನಗರದ ಹೊರವಲಯದಲ್ಲಿರುವ ನೌಗಾಮ್ ಪೊಲೀಸ್ ಠಾಣೆಯಲ್ಲಿಡಲಾಗಿತ್ತು. ಅದನ್ನು ಎಸ್‌ಐಎ ತಂಡ ವಿಧಿವಿಜ್ಞಾನ ಪ್ರಯೋಗಾಲಯದಲ್ಲಿ ತಪಾಸಣೆಗೊಳಪಡಿಸಿ, ಸಂಗ್ರಹಿಸುತ್ತಿದ್ದಾಗ ಸ್ಫೋಟ ಸಂಭವಿಸಿದೆ. ಇದರಲ್ಲಿ ಎಸ್‌ಐಎನ



ಎಫ್‌ಎಸ್‌ಎಲ್ ತಂಡದ ಮೂವರು, ಇಬ್ಬರು ಛಾಯಾಗ್ರಾಹಕರು, ಇಬ್ಬರು ಕಂದಾಯ ಅಧಿಕಾರಿಗಳು, ಇನ್ನೊಬ್ಬ ಟೈಲರ್ ಜೀವ ಕಳೆದುಕೊಂಡಿದ್ದಾರೆ.

ದುರಂತಕ್ಕೆ ಸಂಬಂಧಿಸಿದಂತೆ ಎಸ್‌ಐಎನ ಅಗ್ರ ಅಧಿಕಾರಿ, ಜಮ್ಮುಕಾಶ್ಮೀರ ಪೊಲೀಸ್ ಮುಖ್ಯಸ್ಥ ನಳಿನ್ ಪ್ರಭಾತ್ ಸ್ಪಷ್ಟನೆ ನೀಡಿ, ಘಟನೆ ಆಕಸ್ಮಿಕವಾಗಿ ಸಂಭವಿಸಿದೆ. ಇದರಲ್ಲಿ ಪಾಕ್ ಮೂಲದ ಉಗ್ರರ ಕೈವಾಡವಿಲ್ಲ ಎಂದು ಹೇಳಿದ್ದಾರೆ. ಆದರೆ ಹೇಗೆ ಮತ್ತು ಯಾಕೆ ಸ್ಫೋಟ ಸಂಭವಿಸಿದೆ ಎಂದು ತನಿಖೆ ನಡೆಸಲಾಗುತ್ತಿದೆ ಎಂದು ಕೇಂದ್ರ ಗೃಹ ಸಚಿವಾಲಯ ಹೇಳಿದೆ.

→ 4

ಪೋಸ್ಟರ್‌ನಿಂದ ಶುರು ರೋಚಕ ಶೋಧ

ಭಾರತದ ಭದ್ರತೆಗೆ ದೊಡ್ಡ ಕುತ್ತು ತರಲು ಮಾಡಿದ್ದ ಉಗ್ರರ ಸಂಚು ಬಯಲಾಗಿದ್ದು ಜಮ್ಮುಕಾಶ್ಮೀರ ಪೊಲೀಸರು ಒಂದು ಪೋಸ್ಟರ್ ಹಿಂದೆ ಬಿದ್ದಾಗ! ಜಮ್ಮುಕಾಶ್ಮೀರದ ಶ್ರೀನಗರದಲ್ಲಿ ಜೈಶ್ ಎ ಮೊಹಮ್ಮದ್‌ಗೆ ಸಂಬಂಧಿಸಿದ ಪೋಸ್ಟರ್ ಕಂಡುಬಂದಿತ್ತು. ಅದರಲ್ಲಿ ಭಾರೀ ದಾಳಿಯ ಸೂಚನೆ ನೀಡಲಾಗಿತ್ತು. ಈ ಹಿನ್ನೆಲೆಯಲ್ಲಿ ಅ.19ರಂದು ನೌಗಾಮ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಈ ಪೋಸ್ಟರ್ ಬೆನ್ನುಹತ್ತಿ ಹೋದ ಪೊಲೀಸರಿಗೆ ಭಾರತದ ಭದ್ರತೆಗೆ ಸವಾಲಾಗುತ್ತ ಹೋದ ಸಂಚುಗಳು ತೆರೆದುಕೊಳ್ಳುತ್ತ ಹೋದವು. ಇದರ ತನಿಖೆಯಲ್ಲಿ ಹಲವು ಮೌಲ್ವಿಗಳು, ಹರ್ಯಾಣದ ಫರೀದಾಬಾದ್‌ನಲ್ಲಿರುವ ಅಲ್ ಫತಾಹ್ ವಿವಿಯ ವೈದ್ಯರು ಬಂಧನಕ್ಕೊಳಗಾದರು.

ಸ್ಫೋಟಕ ಶ್ರೀನಗರ ತಲುಪಿದ್ದು ಹೇಗೆ?

ಪೋಸ್ಟರ್ ವಿಚಾರದಲ್ಲಿ ಪೊಲೀಸರು ತನಿಖೆ ಮಾಡುತ್ತ ಹೋದಾಗ ಶ್ರೀನಗರದ ಮಸೀದಿಯಲ್ಲಿ ಇಮಾಮ್ ಆಗಿದ್ದ ಇರ್ಫಾನ್ ವಗಾಯ್ ಬಂಧನಕ್ಕೊಳಗಾದ. ಈತ ಜೈಶ್ ಹಾಗೂ ಅನ್ಸರ್ ಘಝ್ವತ್ ಉಲ್ ಹಿಂದ್ (ಎಜಿಯುಎಚ್)ನ ನಗರ ಘಟಕಗಳೊಂದಿಗೆ ಸಂಬಂಧ ಹೊಂದಿದ್ದಾನೆಂದು ತನಿಖೆಯಲ್ಲಿ ಗೊತ್ತಾಯಿತು. ಇದನ್ನೇ ಪರಿಶೀಲಿಸುತ್ತ ಹೋದಾಗ ಪ್ರಕರಣ ಹರ್ಯಾಣದ ಫರೀದಾಬಾದ್‌ವರೆಗೆ ಹೋಯಿತು. ಅಲ್ಲಿನ 2 ಹಳ್ಳಿಗಳಲ್ಲಿ ನ.10ರಂದು 3000 ಕೆಜಿಯಷ್ಟು ಅಮೋನಿಯಂ ನೈಟ್ರೇಟ್ ವಶಪಡಿಸಿಕೊಂಡು ಶ್ರೀನಗರದ ನೌಗಾಮ್‌ಗೆ ತರಲಾಯಿತು. ಇದೇ ವೇಳೆ ಪೊಲೀಸರು ಅಲ್ ಫತಾಹ್ ವಿವಿ ವೈದ್ಯರನ್ನು ಬಂಧಿಸಿದರು. ನ.10ರಂದೇ ಡಾ.ಉಮರ್ ಕಾರು ಬಾಂಬ್ ಸ್ಫೋಟಿಸಿದನು.

ವೃಕ್ಷಮಾತೆ ತಿಮ್ಮಕ್ಕ ಇನ್ನು ವಿಶ್ವಮಾತೆ

ಬೆಂಗಳೂರು: ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಸಾಲುಮರದ ತಿಮ್ಮಕ್ಕ ಅವರ ಅಂತ್ಯಕ್ರಿಯೆ ಬೆಂಗಳೂರಿನ ಜ್ಞಾನಭಾರತಿ ಕಲಾಗ್ರಾಮದಲ್ಲಿ ಸಕಲ ಸರಕಾರಿ ಗೌರವಗಳೊಂದಿಗೆ ಶನಿವಾರ ನೆರವೇರಿತು. ಪುತ್ರ ಉಮೇಶ್ ಅವರು ಹಿಂದೂ ಸಂಪ್ರದಾಯದಂತೆ ವಿಧಿವಿಧಾನ ನೆರವೇರಿಸಿ ಅಂತಿಮ ಸಂಸ್ಕಾರ ನೆರವೇರಿಸಿದರು. ಅಂತ್ಯಕ್ರಿಯೆಯ ವೇಳೆ ಮೂರು ಸುತ್ತು ಕುಶಾಲತೋಪು ಸಿಡಿಸುವ ಮೂಲಕ ಪೊಲೀಸರು ತಿಮ್ಮಕ್ಕ ಅವರಿಗೆ ವಿಶೇಷ ಗೌರವ ಸಲ್ಲಿಸಿದರು.

ಚಿತ್ತಾಪುರದಲ್ಲಿ ಇಂದು ಆರ್‌ಎಸ್‌ಎಸ್ ಪಥಸಂಚಲನ

ಕಲಬುರಗಿ: ದೀರ್ಘಕಾಲ ರಾಜ್ಯ ಸರಕಾರ ಹಾಗೂ ಆರ್‌ಎಸ್‌ಎಸ್ ನಡುವೆ ಕಾನೂನು ಸಂಘರ್ಷಕ್ಕೆ ಕಾರಣವಾಗಿದ್ದ ಚಿತ್ತಾಪುರ ಪಥ ಸಂಚಲನ ಭಾನುವಾರ ನಡೆಯಲಿದೆ.

ಚಿತ್ತಾಪುರ ಪಟ್ಟಣದ ಬಜಾಜ್ ಕಲ್ಯಾಣ ಮಂಟಪದಿಂದ ಆರಂಭವಾಗುವ ಈ ಪಥಸಂಚಲನದಲ್ಲಿ 300 ಗಣವೇಷಧಾರಿ ಸ್ವಯಂಸೇವಕರು ಹಾಗೂ 50 ಘೋಷ್ ವಾದಕರು ಸೇರಿದಂತೆ ಒಟ್ಟು 350 ಮಂದಿ ಪಾಲ್ಗೊಳ್ಳಲಿದ್ದಾರೆ. ಪಥ ಸಂಚಲನವು ಬಸ್ ನಿಲ್ದಾಣ, ಅಂಬೇಡ್ಕರ್ ವೃತ್ತ, ಸರಕಾರಿ ಗ್ರಂಥಾಲಯ, ಬಸವ ಆಸ್ಪತ್ರೆ, ಕಾಶಿ ಗಲ್ಲಿ, ತಾಲೂಕು ಪಂಚಾಯತ್ ಕಚೇರಿ, ಸರಕಾರಿ ಪಿಯು ಕಾಲೇಜು ಮಾರ್ಗವಾಗಿ ಮರುಬಾರಿ ಬಜಾಜ್ ಮಂಟಪದಲ್ಲೇ ಸಭೆಯೊಂದಿಗೆ ಸಂಪನ್ನಗೊಳ್ಳಲಿದೆ. ಭದ್ರತೆಗೆ 650 ಪೊಲೀಸರು, 60 ಸಿಸಿಟಿವಿ ಅಳವಡಿಸಲಾಗಿದೆ.

ನಾಳೆಯಿಂದ ಶಬರಿಮಲೆ ಯಾತ್ರೆ: ಭಾರೀ ಎಚ್ಚರಿಕೆ

ಪತ್ತನಂತಿಟ್ಟ: ಭಾನುವಾರದಿಂದ ಶಬರಿಮಲೆ ಅಯ್ಯಪ್ಪ ಸ್ವಾಮಿ ಗರ್ಭಗುಡಿ ತೆರೆಯಲಿದ್ದು ಪೂಜೆ ಆರಂಭವಾಗಲಿದೆ. ಸೋಮವಾರದಿಂದ ಭಕ್ತಾದಿಗಳ ಯಾತ್ರೆಯೂ ಶುರುವಾಗಲಿದೆ.

ಮುಂದಿನ ವರ್ಷ ಜ.20 ರವರೆಗೆ ಭಕ್ತಾದಿಗಳಿಗೆ ತೆರೆದಿರಲಿದೆ. ಕೇರಳದಲ್ಲಿ ಕಳೆದ ಕೆಲ ತಿಂಗಳುಗಳಿಂದ ಪತ್ತೆಯಾಗಿರುವ ಅಮೀಬಿಕ್ ಮೆನಿಂಗೊಎನ್ಸೆಫಾಲಿಟಿಸ್ ಎಂಬ ಮೆದುಳು ಜ್ವರ ಕಾಣಿಸಿಕೊಂಡಿದೆ. ಈ ಹಿನ್ನೆಲೆಯಲ್ಲಿ ಕೇರಳ ಸರಕಾರವು ಶಬರಿಮಲೆಯ ವಾರ್ಷಿಕ ಯಾತ್ರೆ ಕೈಗೊಳ್ಳುವ ವರಿಗೆ ಸೂಚನೆ ನೀಡಿದ್ದು, ಮೂಗಿನೊಳಗೆ ನೀರು ಹೋಗದಂತೆ ಎಚ್ಚರ ವಹಿಸಬೇಕೆಂದು ಸೂಚಿಸಿದೆ. ತುರ್ತು ಪರಿಸ್ಥಿತಿಯಲ್ಲಿ 04735203232 ಸಂಖ್ಯೆಯನ್ನು ಸಂಪರ್ಕಿಸಬೇಕು ಎಂದು ಕೇರಳ ಸರಕಾರ ಹೇಳಿದೆ.

2, 3 ದಿನಗಳಲ್ಲಿ ಸರಕಾರ ರಚನೆ ಪ್ರಕ್ರಿಯೆ | ಸದ್ಯವೇ ನಿತೀಶ್-ರಾಜ್ಯಪಾಲರ ಭೇಟಿ

ಬಿಹಾರ ಸಿಎಂ: ಎನ್‌ಡಿಎ ಮೌನ

ಪಟನಾ: ಬಿಹಾರ ಚುನಾವಣಾ ಫಲಿತಾಂಶ ಶುಕ್ರವಾರ ಪ್ರಕಟವಾಗಿ ಬಿಜೆಪಿ-ಜೆಡಿಯು ನೇತೃತ್ವದ ಎನ್‌ಡಿಎ 202 ಸ್ಥಾನ ಗೆದ್ದ ನಂತರ, ಸರಕಾರ ರಚನೆ ಯಾವಾಗ ಎಂಬ ಕುತೂಹಲ ಶುರುವಾಗಿದೆ. ಈ ಕುರಿತ ಪ್ರಕ್ರಿಯೆಗಳು ಇನ್ನು 2, 3 ದಿನಗಳಲ್ಲಿ ಆರಂಭವಾಗಲಿವೆ ಎಂದು ಎನ್‌ಡಿಎ ಮೂಲಗಳು ಹೇಳಿವೆ. ಇದರ ಮಧ್ಯೆ ಎನ್‌ಡಿಎ ಇನ್ನೂ ತನ್ನ ಮುಖ್ಯಮಂತ್ರಿಯ ಹೆಸರನ್ನು ಅಧಿಕೃತವಾಗಿ ಘೋಷಿಸಿಲ್ಲ. ಎಲ್‌ಜೆಪಿ ನಾಯಕ ಚಿರಾಗ್ ಪಾಸ್ವಾನ್, ನಿತೀಶ್ ಕುಮಾರ್‌ರನ್ನು ಭೇಟಿಯಾಗಿ ತಮ್ಮ ಶುಭಾಶಯ ಸಲ್ಲಿಸಿದ್ದಾರೆ. ಚಿರಾಗ್ ಉಪಮುಖ್ಯಮಂತ್ರಿಯಾಗಲಿದ್ದಾರೆ ಎಂಬ ಸುದ್ದಿಗಳು ಹರಿದಾಡುತ್ತಿವೆ.

ಸದ್ಯ ಬಿಹಾರದಲ್ಲಿ ಅಸ್ತಿತ್ವದಲ್ಲಿರುವ ಜೆಡಿಯು-ಬಿಜೆಪಿ ಸರಕಾರದ ಅವಧಿ ನ.22ರವರೆಗೆ ಇರಲಿದೆ. ಆ ದಿನ ಅಥವಾ ಅದಕ್ಕೂ ಒಂದು ದಿನ ಮುನ್ನ ಬಿಹಾರದಲ್ಲಿ ನೂತನ ಸರಕಾರದ ಪ್ರಮಾಣವಚನ ನಡೆಯಲಿದೆ. ಈ ಸಂಬಂಧ ಸದ್ಯದಲ್ಲೇ ರಾಜ್ಯಪಾಲರನ್ನು ಭೇಟಿಯಾಗಲಿರುವ ನಿತೀಶ್ ಕುಮಾರ್ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಲಿದ್ದಾರೆ. ಅನಂತರ ಹೊಸ ಸರಕಾರದ ಪ್ರಮಾಣವಚನದ ದಿನಾಂಕದ ಬಗ್ಗೆ ಚರ್ಚೆ ನಡೆಸಲಿದ್ದಾರೆ ಎಂದು ಮೂಲಗಳು ಹೇಳಿವೆ. ಇವೆಲ್ಲ ನಡೆಯುವುದಕ್ಕೆ

ಇನ್ನು 2-3 ದಿನಗಳು ಬೇಕಾಗುವುದರಿಂದ ಅನಂತರ ಸರಕಾರ ರಚನೆ ಪ್ರಕ್ರಿಯೆ ಶುರುವಾಗಲಿದೆ ಎನ್ನಲಾಗಿದೆ.

ಹೊಸ ಮುಖ್ಯಮಂತ್ರಿ ಯಾರು?: ಬಿಹಾರದ ಮುಖ್ಯಮಂತ್ರಿಯಾಗಿ ನಿತೀಶ್ ಕುಮಾರ್ ಅವರೇ ಮುಂದುವರಿಯುತ್ತಾರಾ, ಇಲ್ಲವಾ ಎಂಬ ಕುತೂಹಲ ಶುರುವಾಗಿದೆ. ಇದಕ್ಕೆ ಕಾರಣ ಎನ್‌ಡಿಎ ನಿತೀಶ್ ಹೆಸರನ್ನು ಅಧಿಕೃತವಾಗಿ ಘೋಷಿಸದಿರುವುದು. ಕೆಲ ಮೂಲಗಳು ಸಿಎಂ ಪಟ್ಟವನ್ನು ಬಿಜೆಪಿ ಪಡೆದುಕೊಳ್ಳಲಿದೆ ಎಂದು ಹೇಳಿವೆ. ಅದೇನೇ ಇದ್ದರೂ ನಿತೀಶ್ 5ನೇ ಬಾರಿ ಸಿಎಂ ಆಗುವುದು ಖಚಿತ ಎಂದೂ ಹೇಳಲಾಗಿದೆ.

ಕುಟುಂಬ, ರಾಜಕೀಯದಿಂದ ದೂರಾದ ಲಾಲೂ ಪುತ್ರಿ



ಬಿಹಾರ ಮಾಜಿ ಮುಖ್ಯಮಂತ್ರಿ ಲಾಲೂ ಪ್ರಸಾದ್ ಯಾದವ್‌ಗೆ ತಮ್ಮ ಒಂದು ಕಿಡ್ನಿಯನ್ನು ದಾನ ಮಾಡಿದ್ದ ಮಗಳು ರೋಹಿಣಿ ಆಚಾರ್ಯ ತಮ್ಮ ಕುಟುಂಬದಿಂದಲೇ ದೂರ ಸರಿದಿದ್ದಾರೆ. ಹಾಗೆಯೇ ರಾಜಕೀಯದಿಂದಲೂ ದೂರ ಸರಿದಿರುವುದಾಗಿ ಘೋಷಿಸಿದ್ದಾರೆ. ಇದಕ್ಕೆಲ್ಲ ಕಾರಣ ಆರ್‌ಜೆಡಿ ನಾಯಕ, ರಾಜ್ಯಸಭಾ ಸದಸ್ಯ, ತೇಜಸ್ವಿ ಯಾದವ್ ಆಪ್ತರಾದ ಸಂಜಯ್ ಯಾದವ್ ಹಾಗೂ ರಮೀಜ್ ಎಂದು ದೂರಿದ್ದಾರೆ.

ವಾಗ್ದೇವಿ ವಿದ್ಯಾವರ್ಧಕ ಟ್ರಸ್ಟ್ | ವಿಶ್ವವಾಣಿ ಪುಸ್ತಕ

ಶ್ರೀ ವಾಗ್ದೇವಿ ವಿದ್ಯಾವರ್ಧಕ ಟ್ರಸ್ಟ್ ಹಾಗೂ ವಿಶ್ವವಾಣಿ ಪುಸ್ತಕ

ವಿಶ್ವೇಶ್ವರ ಭಟ್ ಅವರ 103 ನೇ ಪುಸ್ತಕ

ಲೋಕಾರ್ಪಣೆ

ಭಾನುವಾರ, ನವೆಂಬರ್ 16 2025
ಬೆಳಗ್ಗೆ: 11 ಗಂಟೆ

ಎಫ್ ಕೆಸಿಸಿಐ ಸಭಾಂಗಣ
ಮೈಸೂರು ಬ್ಯಾಂಕ್ ಹಿಂಭಾಗ, ಬೆಂಗಳೂರು

ಪುಸ್ತಕ ಬಿಡುಗಡೆ
ಶ್ರೀ ಪ್ರಹ್ಲಾದ್ ಜೋಶಿ
ಕೇಂದ್ರ ಸಚಿವರು
ಗ್ರಾಹಕ ವ್ಯವಹಾರ, ಆಹಾರ ಮತ್ತು ಸಾರ್ವಜನಿಕ ವಿತರಣಾ ಹಾಗೂ ನವೀಕರಿಸಬಹುದಾದ ಇಂಧನ ಇಲಾಖೆ

ಮುಖ್ಯ ಅತಿಥಿಗಳು
ಶ್ರೀ ತೇಜಸ್ವಿ ಸೂರ್ಯ
ಸಂಸದರು, ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರ

ಉಪಸ್ಥಿತಿ
ಶ್ರೀ ವಿಶ್ವೇಶ್ವರ ಭಟ್
ಪ್ರಧಾನ ಸಂಪಾದಕ, ವಿಶ್ವವಾಣಿ, ವಿಶ್ವವಾಣಿ ಟಿವಿ, ಪ್ರವಾಸಿ ಪ್ರಪಂಚ

ಅಧ್ಯಕ್ಷತೆ
ಶ್ರೀ ಒರ್ಲಿ ವೆಯಿಟ್ಜ್‌ಮನ್
ಇಸ್ರೇಲಿನ ಕಾನ್ಸುಲ್ ಜನರಲ್

ನಿಮಗೆ ಹಾರ್ದಿಕ ಸ್ವಾಗತ

ಸುಷ್ಮಾ ಭಟ್
ಪ್ರಕಾಶಕಿ, ವಿಶ್ವವಾಣಿ ಪುಸ್ತಕ

ಚಿದಾನಂದ ಕಡಲಾಸ್ಕರ
ಸಿಇಒ, ವಿಶ್ವವಾಣಿ ಸಮೂಹ

ಸಮಾಚಾರ ಸಣ್ಣದಲ್ಲ

16.72ಕೋಟಿ ಮೌಲ್ಯದ ಆಸ್ತಿ ವಶ

ಬೆಂಗಳೂರು: ಬಿಡಿಎಯು ಜೆಪಿ ನಗರದಲ್ಲಿ ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸುವ ಕಾರ್ಯಾಚರಣೆಯನ್ನು ಮುಂದುವರೆಸಿದ್ದು, 16.72 ಕೋಟಿ ರು. ಮೌಲ್ಯದ ಆಸ್ತಿಯನ್ನು ವಶಪಡಿಸಿಕೊಂಡಿದೆ.

ಬೆಂಗಳೂರು ದಕ್ಷಿಣ ತಾಲೂಕು, ಉತ್ತರಹಳ್ಳಿ ಹೋಬಳಿಯ ಕೊತ್ತನೂರು ಗ್ರಾಮದಲ್ಲಿ 18000 ಚದರ ಅಡಿ ವಿಸ್ತೀರ್ಣದ ವಿವಿಧ ಅಳತೆಯ 20 ನಿವೇಶನಗಳಲ್ಲಿ ಅನಧಿಕೃತವಾಗಿ ನಿರ್ಮಾಣಗಳನ್ನು ತೆರವುಗೊಳಿಸಿ, ಸುಮಾರು 16.72 ಕೋಟಿ ರು. ಬೆಲೆ ಬಾಳುವ ಪ್ರದೇಶವನ್ನು ಪ್ರಾಧಿಕಾರವು ವಶಪಡಿಸಿಕೊಂಡಿತು. ಈ ಕಾರ್ಯಾಚರಣೆಯನ್ನು ಬಿಡಿಎಯ ಕಾರ್ಯ ನಿರತ ಪಡೆಯ ಆರಕ್ಷಕ ಅಧೀಕ್ಷಕರು, ಅಭಿಯಂತರ ಅಧಿಕಾರಿ-3, ಕಾರ್ಯಪಾಲಕ ಅಭಿಯಂತರರು, ದಕ್ಷಿಣ ಮತ್ತು ನಾಡಪ್ರಭು ಕೆಂಪೇಗೌಡ ವಿಭಾಗ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಇವರುಗಳನ್ನು ಒಳಗೊಂಡಂತೆ ಸ್ಥಳೀಯ ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ನೆರವೇರಿಸಲಾಯಿತು.

ಅಕ್ರಮ ಮದ್ಯ ಮಾರಾಟ: ಸತ್ಯಾಗ್ರಹ

ಬೆಂಗಳೂರು: ಮದ್ಯವನ್ನು ಅಕ್ರಮವಾಗಿ ಮಾರಾಟ ಮಾಡುವುದನ್ನು ತಡೆಯಬೇಕು ಎಂದು ಒತ್ತಾಯಿಸಿ ಮದ್ಯ ನಿಷೇಧ ಆಂದೋಲನ ಕರ್ನಾಟಕವು 25ರಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಸತ್ಯಾಗ್ರಹ ನಡೆಸಲಿದೆ. ಗ್ರಾಮೀಣ ಪ್ರದೇಶದ ಬೀಡಾ, ಕಿರಾಣಿ ಅಂಗಡಿಗಳಲ್ಲಿ ಮತ್ತು ಮನೆ ಗಳಲ್ಲೂ ಮದ್ಯವನ್ನು ಅಕ್ರಮವಾಗಿ ಮಾರಾಟ ಮಾಡಲಾಗುತ್ತಿದೆ. 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೂ ಮದ್ಯ ಮಾರಾಟ ಮಾಡುತ್ತಿರುವ ದೂರುಗಳಿವೆ. ಸರಕಾರ ಈ ಬಗ್ಗೆ ಗಮನಹರಿಸಬೇಕು. ಮದ್ಯ ಅಕ್ರಮ ಮಾರಾಟ ನಿಲ್ಲಿಸಬೇಕು ಎಂದು ತಿಳಿಸಿದೆ. ರಾಜ್ಯದಲ್ಲಿ ಈ ಹಿಂದೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮದ್ಯದ ಅಂಗಡಿಗೆ ಪರವಾನಗಿ ನೀಡುವ ಮೊದಲು, ಅಲ್ಲಿನ ಶೇ.20ರಷ್ಟು ಮಹಿಳೆಯರ ಒಪ್ಪಿಗೆ ಬೇಕು ಎಂಬ ನಿಯಮ ಇತ್ತು. 2016ರಲ್ಲಿ ಅದನ್ನು ತೆಗೆದು ಹಾಕಲಾಗಿದೆ. ಈಗ ಮತ್ತೆ ಆ ನಿಯಮವನ್ನು ಜಾರಿಗೆ ತರಬೇಕು. ಈ ಎರಡೂ ಬೇಡಿಕೆಗಳನ್ನು ಈಡೇರಿಸುವಂತೆ ಸರಕಾರವನ್ನು ಒತ್ತಾಯಿಸಲು ಸತ್ಯಾಗ್ರಹ ನಡೆಸಲಾಗುವುದು ಎಂದು ಹೇಳಿದೆ.

ನಂದಿನಿ ಬ್ರ್ಯಾಂಡ್‌ನ ಬಾಟಲಿಗಳಲ್ಲಿ ತುಂಬಿ ನಗರದಾದ್ಯಂತ ಮಾರಾಟ

ಕಲಬೆರಕೆ ತುಪ್ಪ ಮಾರಾಟ: ನಾಲ್ವರು ಸೆರೆ

ಬೆಂಗಳೂರು: ಹೊರರಾಜ್ಯದಲ್ಲಿ ಕಲಬೆರಕೆ ತುಪ್ಪವನ್ನು ತಯಾರಿಸಿ ನಕಲಿ ನಂದಿನಿ ಬ್ರಾಂಡ್‌ನ ಸ್ಯಾಚೆಟ್ ಮತ್ತು ಪ್ಲಾಸ್ಟಿಕ್ ಬಾಟಲಿಗಳಲ್ಲಿ ತುಂಬಿ ನಗರದಾದ್ಯಂತ ಮಾರಾಟ ಮಾಡುತ್ತಿದ್ದ ಬೃಹತ್ ಜಾಲದ ಪತ್ತೆಹಚ್ಚುವಲ್ಲಿ ಸಿಸಿಬಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಜಾಲದಲ್ಲಿದ್ದ ನಾಲ್ವರು ಆರೋಪಿಗಳನ್ನು ಬಂಧಿಸಿ 1,26,95,200 ರು. ಬೆಲೆಬಾಳುವ 8136 ಲೀಟರ್ ನಂದಿನಿ ಬ್ರಾಂಡ್ ಕಲಬೆರಕೆ ತುಪ್ಪ ಹಾಗೂ ಸರಬರಾಜು ಮಾಡುತ್ತಿದ್ದ 4 ವಾಹನಗಳು ಹಾಗೂ ಕಲಬೆರಕೆ ನಂದಿನಿ ತುಪ್ಪವನ್ನು ತಯಾರು ಮಾಡಲು ಬಳಸುತ್ತಿದ್ದ ಮೆಷಿನರಿಗಳು, ತೆಂಗು ಮತ್ತು ಪಾಮ್ ಆಯಿಲ್ ಎಣ್ಣೆಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಅವರು ತಿಳಿಸಿದ್ದಾರೆ.

ರಾಜ್ಯದಲ್ಲಿ ಬಹು ಬೇಡಿಕೆಯ ನಂದಿನಿ ತುಪ್ಪದ ಮಾರಾಟವನ್ನು ಅರಿತಿದ್ದ ಆರೋಪಿತರುಗಳು ತಮಿಳು ನಾಡು ರಾಜ್ಯದಲ್ಲಿ ಕಲಬೆರಕೆ ತುಪ್ಪವನ್ನು ಸಿದ್ದಪಡಿಸಿ ನಕಲಿ ನಂದಿನಿ ತುಪ್ಪದ ಸ್ಯಾಚೆಟ್ ಮತ್ತು ಪ್ಲಾಸ್ಟಿಕ್ ಬಾಟಲಿಗಳಿಗೆ ತುಂಬಿ, ಕೆಎಂಎಫ್ ನ ಅಧಿಕೃತ ಪರವಾನಗಿ ಪಡೆದಂತಹ ಆರೋಪಿತರುಗಳಿಗೆ ಸರಬರಾಜು ಮಾಡುತ್ತಿದ್ದರು. ಸದರಿ ಕಲಬೆರಕೆ ನಂದಿನಿ ತುಪ್ಪದ ಸ್ಯಾಚೆಟ್ ಮತ್ತು ಬಾಟಲ್‌ಗಳನ್ನು ಆರೋಪಿಗಳು ನಕಲಿ ತುಪ್ಪವನ್ನು ಅಸಲಿ ನಂದಿನಿ ತುಪ್ಪವೆಂದು ಬಿಂಬಿಸಿ, ಬೆಂಗಳೂರಿನ ವಿವಿಧ ಸಗಟು, ಚಿಲ್ಲರೆ ಮತ್ತು ನಂದಿನಿ ಪಾರ್ಲರ್‌ಗಳಿಗೆ ಮೂಲ ನಂದಿನಿ ತುಪ್ಪದ ಬೆಲೆಗೆ

ಕಲಬೆರಕೆ ತುಪ್ಪವನ್ನು ಸರಬರಾಜು ಮಾಡುತ್ತಿದ್ದ ಬಗ್ಗೆ ಸಿಸಿಬಿ ವಿಶೇಷ ವಿಚಾರಣಾ ದಳ ಮತ್ತು ಕೆಎಂಎಫ್ ಜಾಗೃತ ದಳದ ಅಧಿಕಾರಿಗಳ ಸಹಯೋಗದಲ್ಲಿ ಗುಪ್ತವಾಗಿ ಮಾಹಿತಿ ಸಂಗ್ರಹಿಸಲಾಗಿದೆ ಎಂದು ಹೇಳಿದರು.

ಕಳೆದ ನ.14 ರಂದು ಸಿಸಿಬಿ ವಿಶೇಷ ವಿಚಾರಣಾ ದಳ ಮತ್ತು ಕೆಎಂಎಫ್ ಜಾಗೃತ ದಳದ ಅಧಿಕಾರಿಗಳ ತಂಡವು ಜಂಟಿ ಕಾರ್ಯಾಚರಣೆ ನಡೆಸಿ ಚಾಮರಾಜಪೇಟೆಯ ನಂಜಾಂಬ ಅಗ್ರಹಾರದ ಕೃಷ್ಣ ಎಂಟರ್ ಪ್ರೈಸಸ್‌ನ ಮಾಲೀಕರು ಮತ್ತು ಅವರ ಕುಟುಂಬದ ಸದಸ್ಯರಿಗೆ ಸಂಬಂಧಿಸಿದ ಗೋಡಾನ್ ಮತ್ತು ಅಂಗಡಿಗಳ ಸರಕು ಸಾಗಾಣಿಕೆ ವಾಹನಗಳ ಮೇಲೆ ದಾಳಿ ಮಾಡಿರುತ್ತದೆ. ದಾಳಿಯ ವೇಳೆ ತಮಿಳುನಾಡಿನಿಂದ ಕಲಬೆರಕೆ ತುಪ್ಪವನ್ನು ನಂದಿನಿ ಬ್ರಾಂಡ್‌ನ ಸ್ಯಾಚೆಟ್‌ಗಳಿಗೆ ಮತ್ತು ಪ್ಲಾಸ್ಟಿಕ್ ಬಾಟಲಿಗಳಿಗೆ ತುಂಬಿ ಬೆಂಗಳೂರಿನ ಆರೋಪಿಗಳಿಗೆ ಮತ್ತು ಬೆಂಗಳೂರಿನ ಅಂಗಡಿಗಳಿಗೆ ಸಾಗಿಸುತ್ತಿದ್ದ ವಾಹನ ಚಾಲಕ ಮತ್ತು ಆತನು ಉಪಯೋಗಿಸುತ್ತಿದ್ದ ಸರಕು ಸಾಗಾಣಿಕೆ ವಾಹನವನ್ನು ವಶಪಡಿಸಿಕೊಳ್ಳಲಾಗಿದೆ.

ಕೋಟ್ಯಂತರ ಮೌಲ್ಯದ ಮಾಲು ವಶ

ಆರೋಪಿತರ ವಶದಿಂದ ಕೃತ್ಯಕ್ಕೆ ಬಳಸುತ್ತಿದ್ದ 5 ಮೊಬೈಲ್‌ಗಳು, 60 ಲಕ್ಷ ರು. ಮೌಲ್ಯದ 4 ಬೊಲೇರೋ ಕಂಪನಿಯ ಗೂಡ್ಸ್ ವಾಹನಗಳು, ಕೃತ್ಯದಿಂದ ಸಂಪಾದಿಸಿದ 1,19,640 ರು. ನಗದು ಹಣ, 56,95,200 ರು. ಬೆಲೆಬಾಳುವ 8136 ಲೀಟರ್ ಕಲಬೆರಕೆಯ ತುಪ್ಪ ತುಂಬಿದ ವಿವಿಧ ನಮೂನೆಯ ನಕಲಿ ನಂದಿನಿ ಬ್ರಾಂಡ್‌ನ ಸ್ಯಾಚೆಟ್ ಮತ್ತು ಬಾಟಲಿಗಳು, ತೆಂಗು ಮತ್ತು ಪಾಮ್ ಆಯಿಲ್ ತುಂಬಿದ ಕ್ಯಾನುಗಳನ್ನು ವಶಪಡಿಸಿಕೊಳ್ಳಲಾಗಿರುತ್ತದೆ. ಪ್ರಕರಣದಲ್ಲಿ ಇದುವರೆಗೂ ನಾಲ್ವರು ಆರೋಪಿತರುಗಳನ್ನು ವಶಕ್ಕೆ ಪಡೆಯಲಾಗಿದೆ. ತುಪ್ಪವನ್ನು ತಯಾರು ಮಾಡುವ ಹಾಗೂ ಇನ್ನಿತರ ವಸ್ತುಗಳನ್ನು ವಶಪಡಿಸಿಕೊಳ್ಳಗಿದೆ. ವಶಪಡಿಸಿಕೊಂಡಿರುವ ಮಾಲುಗಳ ಒಟ್ಟು ಮೌಲ್ಯ 1,26,95,200 ರು. ಆಗಿರುತ್ತದೆ. ಈ ಬಗ್ಗೆ ಸಿಸಿಬಿ ವಿಶೇಷ ವಿಚಾರಣಾ ದಳದಲ್ಲಿ ಪ್ರಕರಣವು ದಾಖಲಾಗಿದ್ದು ತನಿಖೆ ನಡೆಯಲಿದೆ.

ನಕಲಿ ಸಾಫ್ಟ್‌ವೇರ್ ಕಂಪನಿಯ ಮೇಲೆ ಸೈಬರ್ ಪೊಲೀಸ್ ದಾಳಿ

ಬೆಂಗಳೂರು: ನಕಲಿ ಸಾಫ್ಟ್‌ವೇರ್ ಕಂಪನಿ ಯೊಂದು ಮೈಕ್ರೋಸಾಫ್ಟ್ ಟೆಕ್ನಿಕಲ್ ಸಪೋರ್ಟ್ ಹೆಸರಲ್ಲಿ ಅಮೆರಿಕ ಪ್ರಜೆಗಳನ್ನು ಟಾರ್ಗೆಟ್ ಮಾಡಿ ವಂಚಿಸುತ್ತಿರುವುದು ಬೆಳಕಿಗೆ ಬಂದಿದೆ.

ಸೈಬರ್ ಕ್ರೈಮ್ ಪೊಲೀಸರು ಹಾಗೂ ಸೈಬರ್ ಕಮಾಂಡ್ ಯೂನಿಟ್ ಅಧಿಕಾರಿಗಳು ವೈಟ್‌ಫೀಲ್ಡ್ ಬಳಿಯ ವರ್ತೂರು ರಸ್ತೆಯಲ್ಲಿರುವ ಕಂಪನಿ ಮೇಲೆ ದಾಳಿ ಮಾಡಿ ಪರಿಶೀಲನೆ ಮಾಡಿದ್ದಾರೆ. ವಂಚನೆ ಸಂಬಂಧ ಸದ್ಯ ವೈಟ್‌ಫೀಲ್ಡ್ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದೇಶಿ ಪ್ರಜೆಗಳಿಗೆ ವಂಚನೆ: ನಗರದ ವೈಟ್‌ಫೀಲ್ಡ್ ಬಳಿಯ ವರ್ತೂರು ರಸ್ತೆಯಲ್ಲಿ ಆಗಸ್ಟ್‌ನಲ್ಲಿ ಮಸ್ಕ್ ಕಮ್ಯುನಿಕೇಷನ್ಸ್ ಹೆಸರಿನಲ್ಲಿ ನಕಲಿ ಐಟಿ ಕಂಪನಿ ತೆರೆಲಾಗಿತ್ತು. ಟೆಕ್ನಿಕಲ್ ಸಪೋರ್ಟ್ ಹೆಸರಲ್ಲಿ ವಿದೇಶಿ ಪ್ರಜೆಗಳಿಗೆ ವಂಚನೆ ಆರೋಪ ಕೇಳಿಬಂದಿದೆ. ಈ ಬಗ್ಗೆ ಸೈಬರ್ ಕಮಾಂಡ್ ಯೂನಿಟ್‌ಗೆ ಮಾಹಿತಿ ಹಿನ್ನೆಲೆ ಸೈಬರ್ ಕಮಾಂಡ್ ಯೂನಿಟ್ ಡಿಜಿಪಿ ಪ್ರಣಬ್ ಮೊಹಾಂತಿ ನೇತೃತ್ವದಲ್ಲಿ ಪೊಲೀಸರು ಸೇರಿ ವಿಶೇಷ ತಂಡ ರಚಿಸಿ ದಾಳಿ ಮಾಡಲಾಗಿದೆ. ಕಳೆದ ಎರಡು ದಿನ ದಾಳಿ ಮಾಡಿ ಪರಿಶೀಲನೆ ಮಾಡಲಾಗಿದೆ. ಇನ್ನು ಕಂಪನಿಯಲ್ಲಿ 21 ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ. ಸದ್ಯ ಎಲ್ಲರನ್ನು ವಶಕ್ಕೆ ಪಡೆದು ಪೊಲೀಸರು ವಿಚಾರಣೆ ಮಾಡುತ್ತಿದ್ದಾರೆ. ಇನ್ನು ಕೆಲವರು ನಾಪತ್ತೆ ಆಗಿದ್ದು, ಪೊಲೀಸರು ಶೋಧ ನಡೆಸಿದ್ದಾರೆ. ಮಹಜರು ನಡೆಸಿ ಕಂಪ್ಯೂಟರ್ ಸಿಸ್ಟಮ್, ಡಿಜಿಟಲ್ ಡಿವೈಸ್, ಮೊಬೈಲ್ ಫೋನ್ ಜಪ್ತಿ ಮಾಡಿದ್ದಾರೆ. ಮಾಹಿತಿ ತಂತ್ರಜ್ಞಾನ ಕಾಯಿದೆ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ನಡೆಸಿದ್ದಾರೆ.

ನಟ ಧನ್ವೀರ್‌ಗೆ ಮತ್ತೆ ನೋಟಿಸ್

ಬೆಂಗಳೂರು: ಪರಪ್ಪನ ಅಗ್ರಹಾರ ಜೈಲಿನಲ್ಲಿ ಕೈದಿಗಳಿಗೆ ರಾಜಾತಿಥ್ಯ ನೀಡಿದ ವಿಡಿಯೊ ವೈರಲ್ ಪ್ರಕರಣಕ್ಕೆ ಸಂಬಂಧಿಸಿದಂತೆ ನಟ ಧನ್ವೀರ್ ಅವರಿಗೆ ಪೊಲೀಸರು ಮತ್ತೊಂದು ನೋಟಿಸ್ ನೀಡಿದ್ದಾರೆ.

ನಟ ದರ್ಶನ್ ಆಪ್ತ ಧನ್ವೀರ್ ಅವರು ವಿಚಾರಣೆಗೆ ಹಾಜರಾಗದೆ ತಪ್ಪಿಸಿಕೊಳ್ಳುತ್ತಿದ್ದು, ಅವರನ್ನು ಕಡ್ಡಾಯವಾಗಿ ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿತ್ತು. ಈ ಪ್ರಕರಣದ ಕುರಿತು ಪೊಲೀಸರು ನವೆಂಬರ್ 10 ರಂದು ನಟ ಧನ್ವೀರ್ ಅವರನ್ನು ವಿಚಾರಣೆ ನಡೆಸಿ ಕಳುಹಿಸಿದ್ದರು. ಪುನಃ ವಿಚಾರಣೆಗಾಗಿ ನವೆಂಬರ್ 13 ರಂದು ಹಾಜರಾಗಲು ಪೊಲೀಸರು ಧನ್ವೀರ್ ಅವರಿಗೆ ಸೂಚನೆ ನೀಡಿದ್ದರು. ಆದರೆ, ನಟ ಧನ್ವೀರ್ ಅವರು ತಮ್ಮ ವಕೀಲರ ಮೂಲಕ ಪೊಲೀಸರಿಗೆ ಕಾಲಾವಕಾಶ ಕೋರಿದ್ದರು. ಧನ್ವೀರ್ ಸದ್ಯ ಟ್ರಿಪ್‌ನಲ್ಲಿ ಇದ್ದಾರೆ ಎಂದು ಅವರ ವಕೀಲರು ಪೊಲೀಸರಿಗೆ ಮಾಹಿತಿ ನೀಡಿದ್ದರು. ವಕೀಲರು ಕಾಲಾವಕಾಶ ಕೇಳಿದ್ದರೂ, ದರ್ಶನ್ ಆಪ್ತ ಧನ್ವೀರ್ ಅವರು ನಿಗದಿತ ದಿನಾಂಕದಂದು ವಿಚಾರಣೆಗೆ ಹಾಜರಾಗಿಲ್ಲ. ವಿಚಾರಣೆಗೆ ಹಾಜರಾಗದೆ ತಪ್ಪಿಸಿಕೊಳ್ಳುತ್ತಿರುವ ಧನ್ವೀರ್‌ಗೆ ಪೊಲೀಸರು ಇಂದು ಎರಡನೇ ಬಾರಿ ನೋಟಿಸ್ ಜಾರಿಗೊಳಿಸಿದ್ದಾರೆ. ಸೋಮವಾರದಂದು ಯಾವುದೇ ಕಾರಣ ನೀಡದೆ ಕಡ್ಡಾಯವಾಗಿ ತನಿಖಾಧಿಕಾರಿಗಳ ಮುಂದೆ ಹಾಜರಾಗಬೇಕು ಎಂದು ನೋಟಿಸ್‌ನಲ್ಲಿ ಸ್ಪಷ್ಟವಾಗಿ ಸೂಚಿಸಲಾಗಿದೆ.

ಬಿಗ್‌ಬಾಸ್ ಮಾಜಿ ಸ್ಪರ್ಧಿಗೆ ಉದ್ಯಮಿ ಲೈಂಗಿಕ ಕಿರುಕುಳ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕನ್ನಡದ ಬಿಗ್‌ಬಾಸ್ ಮಾಜಿ ಸ್ಪರ್ಧಿ ಹಾಗೂ ಕಿರುತೆರೆ ನಟಿಗೆ ಲೈಂಗಿಕ ಹಾಗೂ ಮಾನಸಿಕ ಕಿರುಕುಳ ನೀಡಿದ ಆರೋಪದ ಮೇಲೆ ರಿಯಲ್ ಎಸ್ಟೇಟ್ ಉದ್ಯಮಿ ಅರವಿಂದ ವೆಂಕಟೇಶ ರೆಡ್ಡಿ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

2021ರಲ್ಲಿ ಪರಿಚಯವಾಗಿದ್ದ ನಟಿಗೆ ಬಲವಂತವಾಗಿ ಕಿರುಕುಳ ನೀಡುತ್ತಿದ್ದ ಎನ್ನಲಾಗಿದ್ದು, ಈ ಸಂಬಂಧ ಆರ್.ಆರ್ .ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು.

ವಿಮಾನ ನಿಲ್ದಾಣದಲ್ಲಿ ಬಂಧನ: ಆರೋಪಿ ಅರವಿಂದ್ ವೆಂಕಟೇಶ್ ರೆಡ್ಡಿ ಶ್ರೀಲಂಕಾಗೆ ತೆರಳಲು ಯತ್ನಿಸುತ್ತಿದ್ದ ವೇಳೆ ಶನಿವಾರ ಬೆಳಗಿನ ಜಾವ ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಪೊಲೀಸರು ಆತನನ್ನು ಬಂಧಿಸಿದ್ದಾರೆ. ಈತನ ಬಂಧನಕ್ಕಾಗಿ ಲುಕ್‌ಔಟ್ ನೋಟಿಸ್ ಜಾರಿಗೊಳಿಸಲಾಗಿತ್ತು. ಎಸಿಪಿ ಚಂದನ್ ಮತ್ತು ಸುಬ್ರಹ್ಮಣಿ ನೇತೃತ್ವದ ವಿಶೇಷ ತಂಡ ಈ ಕಾರ್ಯಾಚರಣೆ ನಡೆಸಿದೆ. ಬಂಧಿತ ಅರವಿಂದ್ ವೆಂಕಟೇಶ ರೆಡ್ಡಿ ಎವಿಆರ್ ಗ್ರೂಪ್ ಮಾಲೀಕನಾಗಿದ್ದು, ಕನ್ನಡ ಚಿತ್ರರಂಗದಲ್ಲಿ ನಿರ್ಮಾಪಕರಾಗಿಯೂ ಗುರುತಿಸಿಕೊಂಡಿದ್ದಾನೆ.

2021ರಲ್ಲಿ ನಟಿ ಮತ್ತು ಉದ್ಯಮಿ ಅರವಿಂದ್ ರೆಡ್ಡಿ ಅವರಿಗೆ ಪರಿಚಯವಾಗಿತ್ತು. ಶ್ರೀಲಂಕಾದಲ್ಲಿ ನಡೆದ 'ಲಾರ್ಸ್ ಕ್ರಿಕೆಟ್ ಕಪ್' ಉದ್ಘಾಟನಾ ಕಾರ್ಯಕ್ರಮಕ್ಕೆ ನಟಿಯನ್ನು ಅತಿಥಿಯಾಗಿ ಆಹ್ವಾನಿಸಿದ್ದಾಗ ಇಬ್ಬರ ನಡುವೆ ಸ್ನೇಹ ಬೆಳೆದಿತ್ತು. ಆರಂಭದಲ್ಲಿ ಕಾಳಜಿ ಮತ್ತು ಪ್ರೀತಿ ತೋರಿಸುತ್ತಿದ್ದ ಅರವಿಂದ್ ರೆಡ್ಡಿ, 2022ರ ಆಗಸ್ಟ್‌ನಲ್ಲಿ ನಟಿಯ ಜತೆ ಸಂಪರ್ಕ ಕಡಿತಗೊಳಿಸಿದ್ದ. ಆನಂತರ, ಅರವಿಂದ್ ಅವರ ಮಾನಸಿಕ ಸ್ಥಿತಿ ಮತ್ತು ಕುಡಿತದ ಚಟದ ಬಗ್ಗೆ ಅರಿತ ನಟಿ ಆತನಿಂದ ದೂರವಿದ್ದರು. ಆದರೆ, ಉದ್ಯಮಿ ನಟಿಯ ಹಿಂದೆ ಬಿದ್ದು ಕಾಡಲು ಶುರು ಮಾಡಿದ್ದ. ನಟಿಯ ಲೋಕೇಷನ್ ಟ್ರ್ಯಾಕ್ ಮಾಡುವುದು, ಇನ್ಸ್ಟಾಗ್ರಾಮ್‌ನಲ್ಲಿ ಅವರ ಮಾರ್ಫ್ ಮಾಡಿದ ಫೋಟೋಗಳನ್ನು ಪೋಸ್ಟ್ ಮಾಡುವುದು ಮತ್ತು ಮನೆ ಬಳಿ ಹುಡುಗರನ್ನು ಕಳುಹಿಸಿ ನಟಿಯ ತಂದೆ-ತಾಯಿಗೆ ಬೆದರಿಕೆ ಹಾಕುವುದು ಮುಂತಾದ ಕೃತ್ಯ ಎಸಗಿದ್ದ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಆತ್ಮಹತ್ಯೆಗೆ ಯತ್ನಿಸಿದ್ದ ನಟಿ: 2024ರ ಏಪ್ರಿಲ್‌ನಲ್ಲಿ ಕಿರುಕುಳ ಹೆಚ್ಚಾದಾಗ, ಅರವಿಂದ್ ಕರೆ ಮಾಡಿ ಮನೆಗೆ ಬಾ, ನಾಳೆಯೇ ನಿನ್ನನ್ನ ಮದುವೆಯಾಗುತ್ತೀನಿ ಎಂದು ಬೆದರಿಸಿದ್ದ. ಆತನ ದೈಹಿಕ ಮತ್ತು ಮಾನಸಿಕ ಕಿರುಕುಳ ತಾಳಲಾರದೆ ನಟಿ ಮಾತ್ರೆಗಳನ್ನು ನುಂಗಿ ಆತ್ಮಹತ್ಯೆಗೆ ಯತ್ನಿಸಿದ್ದರು. ಬಳಿಕ ಒಂದು ಕೋಟಿ ಹಣಕ್ಕಾಗಿ ಬೇಡಿಕೆ ಇಟ್ಟು ಬೆದರಿಕೆ ಹಾಕಿದ್ದ . ಜೂನ್ 14, 2024 ರಂದು ನಟಿ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಿಗೆ ದೂರು ನೀಡಿದ್ದರು. ನಂತರ ಅಕ್ಟೋಬರ್ 2025ರಲ್ಲಿ ನಟಿ ವಾಸಿಸುವ ಮನೆ ಮಾಲೀಕನಿಗೆ ಪತ್ರ ಬರೆದು ಈಕೆ ಮನೆಯಲ್ಲಿ ವೇಶ್ಯಾವಾಟಿಕೆ ನಡೆಸುತ್ತಿದ್ದಾಳೆ ಎಂದು ಆರೋಪಿಸಿರುವುದು ವಿಚಾರಣೆಯಿಂದ ತಿಳಿದುಬಂದಿದೆ. ಬಂಧಿತ ಅರವಿಂದ್ ರೆಡ್ಡಿ ರಿಯಲ್ ಎಸ್ಟೇಟ್ ಉದ್ಯಮಿಯಾಗಿರುವುದರ ಜತೆಗೆ 'ಮಹಾರಾಜ ಬಳ್ಳಾರಿ ಟಸ್ಕರ್ಸ್' ಕ್ರಿಕೆಟ್ ತಂಡದ ಮಾಲೀಕರಾಗಿದ್ದಾರೆ. ಈ ಕುರಿತು ಆರ್.ಆರ್. ನಗರ ಪೊಲೀಸ್ ಠಾಣೆಯಲ್ಲಿ ದಾಖಲಾದ ಪ್ರಕರಣವನ್ನು ಗೋವಿಂದರಾಜನಗರ ಠಾಣೆಗೆ ವರ್ಗಾಯಿಸಲಾಗಿದ್ದು, ಪೊಲೀಸರು ಆರೋಪಿಯನ್ನು ಬಂಧಿಸಿ ವಿಚಾರಣೆ ನಡೆಸಿದ್ದಾರೆ.

ಉದ್ಯಮಿ ಅರವಿಂದ್ ರೆಡ್ಡಿಗೆ ಜಾಮೀನು

ಚಲನಚಿತ್ರ ನಟಿಗೆ ಲೈಂಗಿಕ ಕಿರುಕುಳ ನೀಡಿದ್ದ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಅರವಿಂದ್ ವೆಂಕಟೇಶ್ ರೆಡ್ಡಿಗೆ 46 ಎಸಿಎಂಎಂ ಕೋರ್ಟ್ ಜಾಮೀನು ಮಂಜೂರು ಮಾಡಿದೆ. ಸಂತ್ರಸ್ತ ನಟಿ ಲೈಂಗಿಕ ಕಿರುಕುಳ ನೀಡಿದ ಸಂಬಂಧ ಆರೋಪಿ ವಿರುದ್ಧ ಆರ್‌ಆರ್ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಬಳಿಕ ಈ ಪ್ರಕರಣ ಗೋವಿಂದರಾಜ ನಗರ ಪೊಲೀಸ್ ಠಾಣೆಗೆ ವರ್ಗಾವಣೆಗೊಂಡಿತ್ತು. ವಿಚಾರಣೆ ನಡೆಸಿದ ಪೊಲೀಸರು, ಆರೋಪಿಯನ್ನು 46 ಎಸಿಎಂಎಂ ಕೋರ್ಟ್ ಮುಂದೆ ಹಾಜರು ಪಡಿಸಿದ್ದರು. ವಾದ-ಪ್ರತಿವಾದ ಆಲಿಸಿದ ನ್ಯಾಯಾಲಯ ಜಾಮೀನು ಮಂಜೂರು ನೀಡಿದೆ.

ಕಬ್ಬನ್ ಪಾರ್ಕ್‌ನಲ್ಲಿ ಡಾಗ್ ಪಾರ್ಕ್ ದುರುಪಯೋಗ

ಬೆಂಗಳೂರು: ಕಬ್ಬನ್‌ಪಾರ್ಕ್‌ನಲ್ಲಿ ಸಾಕು ಪ್ರಾಣಿಗಳ ವಾಕಿಂಗ್ ಹಾಗೂ ಆಟೋಟ ಚಟುವಟಿಕೆಗಳಿಗಾಗಿ ಮೀಸಲಾಗಿರುವ ಡಾಗ್ ಪಾರ್ಕ್‌ನ ದುರುಪಯೋಗವಾಗುತ್ತಿದೆ ಎನ್ನುವ ಆರೋಪಗಳು ಕೇಳಿ ಬಂದಿವೆ.

ಡಾಗ್ ಪಾರ್ಕ್‌ನ್ನು ಹೆಚ್ಚಾಗಿ ವಾಣಿಜ್ಯ ಚಟುವಟಿಕೆಗಳಲ್ಲಿ ಬಳಸಲಾಗುತ್ತಿದ್ದು, ಸಾಕುಪ್ರಾಣಿ ಮಾಲೀಕರ ನಿರ್ಲಕ್ಷ್ಯ , ಸ್ವಚ್ಛತೆಯ ಕೊರತೆಯಿಂದ ಹಿರಿಯರು, ಮಕ್ಕಳಿಗೆ ಅಪಾಯ ಉಂಟಾಗಿದೆ. ಅದರೊಂದಿಗೆ ಸಾರ್ವಜನಿಕ ಸ್ಥಳಗಳ ಸುರಕ್ಷತೆ ಮತ್ತು ಸ್ವಚ್ಛತೆಯನ್ನು ಕಾಪಾಡಲು ಅಗತ್ಯ ಕ್ರಮ ಕೈಗೊಳ್ಳಬೇಕು. ಸಾಕು ನಾಯಿಗಳನ್ನು ಲೀಶ್ ಹಾಕದೆ ಉದ್ಯಾನವನದೆಲ್ಲೆಡೆ ಬಿಡಲಾಗುತ್ತಿದೆ. ಮಾರ್ಗಗಳು ನಾಯಿಗಳ ಮಲ ಮೂತ್ರದಿಂದ ಕೂಡಿದ್ದು, ಅದನ್ನು ಮಾಲೀಕರು ಸ್ವಚ್ಛಗೊಳಿಸಲು ಮುಂದೆ ಬರುತ್ತಿಲ್ಲ. ಈ ಕುರಿತು ಮಾಲೀಕರನ್ನು ಪ್ರಶ್ನಿಸಿದಲ್ಲಿ ಅವರು ದುರಹಂಕಾರದಿಂದ ಪ್ರತಿಕ್ರಿಯಿಸುತ್ತಾರೆಯೇ ಹೊರತು, ಸ್ವಚ್ಛತೆಗೆ ಮುಂದಾಗುವುದಿಲ್ಲ. ಪ್ರತಿಬಾರಿ ತೋಟಗಾರಿಕೆ ಸಿಬ್ಬಂದಿಯೇ ಸ್ವಚ್ಛತೆ ನಿರ್ವಹಿಸಬೇಕಾಗಿದೆ. ಈ ಸಮಸ್ಯೆಯನ್ನು ತೋಟಗಾರಿಕೆ ಇಲಾ ಖೆಯ ಅಧಿಕಾರಿಗಳಾದ ಡಿಡಿ ಕುಸುಮಾ, ಜೆಡಿ ಜಗದೀಶ್ ಹಾಗೂ ಪ್ರಧಾನ ಕಾರ್ಯದರ್ಶಿ ಶಮ್ಲಾ ಇಕ್ಬಾಲ್ ಅವರಿಗೆ ಹಲವು ಬಾರಿ ತಿಳಿಸಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಕಬ್ಬನ್‌ಪಾರ್ಕ್ ವಾಕರ್ಸ್ ಅಸೋಸಿಯೇಷನ್ ಅಧ್ಯಕ್ಷ ಉಮೇಶ್ ದೂರಿದ್ದಾರೆ.

ಕಬ್ಬನ್ ಪಾರ್ಕ್‌ನಲ್ಲಿ ವಾಣಿಜ್ಯ ಚಟುವಟಿಕೆಗಳು ಅಧಿಕೃತವಾಗಿದ್ದರೂ ಡಾಗ್ ಪಾರ್ಕ್ ಹೆಸರಿನಲ್ಲಿ ಕೆಲ ರೀತಿಯ ಚಟುವಟಿಕೆ ನಡಸಲಾಗುತ್ತಿದೆ. ಇದೇ ಮಾದರಿಯಲ್ಲಿ ಲಾಲ್‌ಬಾಗ್‌ನಲ್ಲಿಯೂ ಡಾಗ್ ಪಾರ್ಕ್ ಏಕೆ ತೆರೆಯಲಾಗುವುದಿಲ್ಲ ಎಂಬ ಪ್ರಶ್ನೆಯನ್ನೂ ಸಂಸ್ಥೆ ಎತ್ತಿದೆ. ನಾವು ಪ್ರಾಣಿ ವಿರೋಧಿಗಳು ಅಲ್ಲ. ನಾನೇ ಪ್ರತಿದಿನ 15-20 ಬೀದಿ ನಾಯಿಗಳಿಗೆ ಆಹಾರ ನೀಡುತ್ತೇನೆ ಹಾಗೂ 10 ಸಾಕು ಬೆಕ್ಕುಗಳನ್ನು ಸಾಕುತ್ತಿದ್ದೇನೆ. ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ ಉದ್ಯಾನವನದಲ್ಲಿ ಬೀದಿ ನಾಯಿಗಳಿಗೆ ಆಹಾರ ನೀಡಲು ಮೀಸಲಾದ ಪ್ರತ್ಯೇಕ ಸ್ಥಳ ಇರಬೇಕು, ಅದನ್ನು ನಾವು ಬೆಂಬಲಿಸುತ್ತೇವೆ ಎಂದು ಹೇಳಿದ್ದಾರೆ.

बैंक ऑफ़ बड़ौदा
Bank of Baroda

ಬ್ಯಾಂಕ್ ಆಫ್ ಬರೋಡ
ಹೆಚ್‌ಬಿಆರ್ ಲೇಔಟ್ ಶಾಖೆ

(ಬೆಂಗಳೂರು ಉತ್ತರ) 805, 2ನೇ ಕ್ರಾಸ್, 1ನೇ ಬ್ಲಾಕ್, ಹೆಚ್‌ಆರ್‌ಬಿಆರ್ ಲೇಔಟ್, ಕಲ್ಯಾಣ್ ನಗರ, ಬೆಂಗಳೂರು-560043. ದೂ.: 080-25428232, 080-25454238, ಇ-ಮೇಲ್: vjhbrl@bankofbaroda.com

ಲಾಕರ್ ಬ್ರೇಕ್ ಓಪನ್ ನೋಟಿಸ್

ಈ ಕೆಳಗಿನ **ಬ್ಯಾಂಕ್ ಆಫ್ ಬರೋಡಾ, ಹೆಚ್‌ಬಿಆರ್ ಲೇಔಟ್ ಶಾಖೆ, ಬೆಂಗಳೂರಿನಲ್ಲಿ** ಬಾಡಿಗೆಗೆ ಲಾಕರ್‌ಗಳನ್ನು ತೆಗೆದುಕೊಂಡಿರುವ ಮತ್ತು ಒಪ್ಪಂದದ ಉಲ್ಲಂಘನೆ ಮಾಡಿದ ನಮ್ಮ ಮೌಲ್ಯಯುತ ಗ್ರಾಹಕರ ಗಮನಕ್ಕೆ ಈ ಪ್ರಕಟಣೆ ನೀಡಲಾಗಿದೆ. ಆರ್‌ಬಿಐ/ಬ್ಯಾಂಕ್‌ನ ಮಾರ್ಗಸೂಚಿಗಳ ಪ್ರಕಾರ ಲಾಕರ್ ಬಾಡಿಗೆ ಪಡೆದಿರುವವರ ದಾಖಲಾದ ವಿಳಾಸಗಳಲ್ಲಿ ಕಳುಹಿಸಲಾದ ನೋಟೀಸ್‌ಗಳನ್ನು, ನಮೂದಿಸಿದ ವ್ಯಕ್ತಿ/ವ್ಯಕ್ತಿ/ಗಳ ವಿಳಾಸಗಳು ಕಂಡುಬಂದಿಲ್ಲ ಅಥವಾ ಕೈಬಿಡಲಾಗಿದೆ ಎಂದು ತಲುಪದೇ ಹಿಂದಿರುಗಿದೆ. ಲಾಕರ್ ಹೋಲ್ಡರ್‌ಗಳನ್ನು ಅವರು ಪ್ರಸ್ತುತ ಇರುವಲ್ಲಿ ಖುದ್ದಾಗಿ ಸಂಪರ್ಕಿಸಲು ಪ್ರಯತ್ನಿಸಿದರೂ ಸಿಕ್ಕಿರುವುದಿಲ್ಲ. ಹೀಗಾಗಿ ಯಾವುದೇ ಪರ್ಯಾಯವಿಲ್ಲದೆ, ಶಾಖೆಯನ್ನು ಸಂಪರ್ಕಿಸಲು ಮತ್ತು 15 ದಿನಗಳ ಅವಧಿಯಲ್ಲಿ ಬ್ಯಾಂಕ್‌ನ ಬಾಕಿಗಳನ್ನು ಪಾವತಿಸಲು ಕೆಳಗೆ ಹೆಸರಿಸಲಾದ ವ್ಯಕ್ತಿಗೆ ಸೂಚನೆಯನ್ನು ನೀಡಲಾಗುತ್ತಿದೆ. ವಿಫಲವಾದರೆ ಬಾಡಿಗೆ ಪಡೆದವರ ವೆಚ್ಚದಲ್ಲೇ, ಜಾಗ್ರತೆ ಮತ್ತು ಜವಾಬ್ದಾರಿಯಿಂದ ಲಾಕರ್ ಅನ್ನು ಮುರಿಯಲು ಬ್ಯಾಂಕ್ ಮುಂದುವರಿಯುತ್ತದೆ ಹಾಗೂ ಬಾಕಿ ಉಳಿದಿರುವ ಬಾಡಿಗೆ ವೆಚ್ಚ ಮತ್ತು ಇತರ ಶುಲ್ಕಗಳ ಮರುಪಡೆಯುವಿಕೆಗೆ ಬ್ಯಾಂಕ್ ತನ್ನ ಹಕ್ಕನ್ನು ಚಲಾಯಿಸುತ್ತದೆ.

ಶಾಖೆ: ಹೆಚ್‌ಬಿಆರ್ ಲೇಔಟ್ ಶಾಖೆ

ಕ್ರ. ಸಂ.	ಸಾಲಗಾರರ ಹೆಸರು	ಲಾಕರ್ ವಿಧ	ಲಾಕರ್ ಸಂಖ್ಯೆ	ದಂಡದೊಂದಿಗೆ ಬಾಕಿ ಉಳಿದಿರುವ ಮೊತ್ತ	ಬ್ರೇಕ್ ಓಪನ್ ದಿನಾಂಕ ಮತ್ತು ಸಮಯ
1	**ಶ್ರೀ ನಿತಿನ್ ಅಡ್ವಾಣಿ,** ನಂ.403, ರೆಡ್ಡೀಸ್ ಪ್ಯಾರಡೈಸ್, 4ನೇ ಕ್ರಾಸ್, ಎಕ್ಸ್ ಸರ್ವಿಸ್‌ಮ್ಯಾನ್ ಕಾಲೋನಿ, ಬಾಣಸವಾಡಿ, ಬೆಂಗಳೂರು-560043.	A	8959AX0101 (Old No.110)	ರೂ. 12,803/-	19.02.2026 ಮಧ್ಯಾಹ್ನ 3.00

ದಿನಾಂಕ: 15.11.2025
ಸ್ಥಳ: ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ
ಬ್ಯಾಂಕ್ ಆಫ್ ಬರೋಡ

1ನೇ ಅಧಿಕ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ,ತುಮಕೂರು
ಅಸಲು ದಾವಾ ಸಂಖ್ಯೆ: 546/2022
ವಾದಿ-ಶ್ರೀಮತಿ ಜಗದಾಂಬ
ವಿರುದ್ಧ
ಪ್ರತಿವಾದಿಗಳು: ಶಿವಮ್ಮ ಮತ್ತು ಇತರರು
ಪ್ರತಿವಾದಿ-9,ಪ್ರಕಾಶ ಬಿನ್ ಲೇಟ್ ಗಿರಿಜಮ್ಮ ಹಾಗೂ ಚಂದ್ರಪ್ಪ-45 ವರ್ಷ, ವಾಸ:ಮನೆ ನಂಬರ್ 998, 4ನೇ ಕ್ರಾಸ್, ರಾಜಾಜಿನಗರ, "ಡಿ" ಬ್ಲಾಕ್, ಬೆಂಗಳೂರು
ಸಾರ್ವಜನಿಕ ಪ್ರಕಟಣೆ
[illegible]
ಗೈರು ಹಾಜರಿ ಎಂದು ಪರಿಗಣಿಸಿ ನಿಮ್ಮ ಮೇಲೆ ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಈ ಮೂಲಕ ತಿಳಿಯಪಡಿಸಿರುತ್ತದೆ.
ಮೇಲ್ಕಂಡ ಈ ಘನ ನ್ಯಾಯಾಲಯದ ಆದೇಶದಂತೆ ನ್ಯಾಯಾಲಯದ ಮೊಹರಿನೊಂದಿಗೆ ಈ ದಿನ ಅಂದರೆ ದಿನಾಂಕ:14-11-2025 ರಂದು ಸಹಿ ಮಾಡಲಾಗಿದೆ.
ನ್ಯಾಯಾಲಯದ ಅಪ್ಪಣೆ ಮೇರೆಗೆ,
ಶಿರಸ್ತೆದಾರರು
1ನೇ ಅಧಿಕ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ,ತುಮಕೂರು
ವಾದಿಗಳ ಪರ ವಕೀಲರು.
ಬಿ.ಎಲ್ ನಾಗರಾಜು. ಕೊರಟಗೆರೆ.

IN THE COURT OF THE HON'BLE CITY CIVIL COURT AT BANGALORE (CCH-64)
O.S. NO/9032/2024
BETWEEN : THE STATE BANK OF INDIA
M S Building Branch, Bengaluru : 560001.
Represented by its Manger MR. Suraj R
...PLAINTIFF
AND : Mr. NIHAL V, **...DEFENDANT**
SUMMONS TO DEFENDANT BY WAY OF PAPER PUBLICATION
Mr. NIHAL V S/o.Venkatesh B R Aged about: 27 years #7, Mitra Layout, Shettihalli Main Road, Near Nitro Mini Baraz, Bengalore-560058. PH:8310625856 / 9663792915.
Whereas, the Plaintiff has filed a suit Recovery of money instituted the present suit, for sum of Rs.5,27,680/-(Rupees Five Lakh Twenty seven Thousand and Six hundred and Eighty Only) and future interest at contractual rate together with other applicable expenses, charges from the date of NPA till closure of loan. Hence you are hereby summoned to appear before court, person or through a Pleader on **3/12/2025 at 11 A.M.** to answer the same failing which suit will be disposed of ex-parte.
Given under my hand and the seal of the court this 12/11/25
By Order of the Court
Sd/- Senior Sheristedar
City Civil Court, Bangalore
Advocate for plaintiff
J. SATHISH KUMAR, B.A.L., LLM., ADVOCATE
EWS No.16/2, 1st Cross, 2nd Main, 2nd Stage, KHB (A.D. Halli), Basaveshwaranagar, Bangalore -560079. Ph: (O): 23145665, Fax: 23145665 Mobile: 94484 48238, E-mail:gsnadvocates@yahoo.com

ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 761/2025
ಅರ್ಜಿದಾರರು: 1) ಶ್ರೀ ಕೆಂಗಲ್‌ಶೆಟ್ಟಿ ಬಿನ್ ಲೇಟ್ ಗೋವಿಂದ ಶೆಟ್ಟಿ ವಯಸ್ಸು ಸುಮಾರು 53 ವರ್ಷ ವಾಸ: ಸಾತನೂರು ಗ್ರಾಮ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಹಾಲಿ ಬೆಂಗಳೂರು ದಕ್ಷಿಣ ಜಿಲ್ಲೆ. ಮತ್ತು ಇತರರು
ವಿರುದ್ಧ
ಪ್ರತಿ ಅರ್ಜಿದಾರರು: 1. ತಹಶೀಲ್ದಾರ್‌ರವರು, ಜನನ ಮತ್ತು ಮರಣ ನೊಂದಣಾಧಿಕಾರಿಗಳು, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. 2. ಗ್ರಾಮ ಲೆಕ್ಕಾಧಿಕಾರಿಗಳು, ಸಾತನೂರು ವೃತ್ತ ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಹಾಲಿ ಬೆಂಗಳೂರು ದಕ್ಷಿಣ ಜಿಲ್ಲೆ.
[illegible]

KMF Builders & Developers Ltd.
Regd. Office: - Flat No. 508, Golf Manor, NAL Wind Tunnel Road, Murgeshpalya, Bangalore-560017, Ph: -25238007, 41486142-43
CIN: L45203KA1995PLC017422 www.kmfbuilders.com kmfbuilders95@gmail.com

Extract of Statement of Standalone Unaudited financial Results for the Quarter ended 30.09.2025 (Fig in Lakhs)

		QTRLY	HALF YEARLY		YEARLY
Sl No	Particulars	Quarter Ended (30/09/2025) Unaudited	Half Year Ended (30/09/2025) Unaudited	Half year Ended (30/09/2024) Unaudited	Year Ended (31/03/2025) Audited
1	Total Income from operations	21.40	24.31	22.08	345.39
2	Net Profit/ (Loss) for the period (before Tax, Exceptional and/or Extraordinary items	-3.81	-35.66	-59.63	-51.53
3	Net Profit/ (Loss) for the period (before Tax, after Exceptional and /or Extraordinary items	-3.81	-35.66	-59.63	-51.53
4	Net Profit/ (Loss) for the period (after Tax, after Exceptional and /or Extraordinary items	-3.81	-35.66	-59.63	-51.53
5	Total Comprehensive income for the period (after tax) (attributable to owners of the company)	-3.81	-35.66	-59.63	-51.53
6	Paid up Equity Share Capital (Face Value of Rs. 5/- each)	609.10	609.10	609.10	609.10
7	Reserves (excl. Revaluation Reserve) as per audited balance sheet of previous year	0.00	0.00	0.00	0.00
8	Earnings Per Share (of Rs.5 each) (for continuing and operations)	-0.03	-0.29	-0.49	-0.42
	Basic & Diluted				

Note: -The above is an extract of the detailed format of unaudited financial results filed with the stock exchanges under regulation 33 of the SEBI (listing Obligations and Disclosure Requirements) Regulations, 2015.
The above unaudited financial results for the qtr and half year ended 30.09.2025 were reviewed by the audit committee at the meeting held on 14.11.2025 and approved by the Board of Directors and taken on record at the meeting held on 14.11.2025
The full format of the unaudited financial results is available on the stock exchanges website **www.bseindia.com** & on the company website **www.kmfbuilders.com**

Place: Delhi
Date: 14.11.2025

By order of the Board
KMF Builders & Developers ltd
sd/-
Gorve Chadha
Managing Director

ಚಾಕುವಿನಿಂದ ಇರಿದು ಚಿನ್ನ ದೋಚಿ ಪರಾರಿ

ಬೆಂಗಳೂರು: ಕೆಲಸ ಕೊಟ್ಟ ಮಾಲೀಕ ದೇವರಂತೆ ಎನ್ನುವ ಮಾತಿದೆ. ಆದರೆ ಇಲ್ಲಿ ಚಿನ್ನದಾಸೆಗೆ ಮಾಲೀಕನಿಗೆ ಚಾಕುವಿನಿಂದ ಇರಿದು ನಡುರಸ್ತೆಯಲ್ಲಿ ಚಿನ್ನದ ಚೈನ್ ದೋಚಿಕೊಂಡು ಪರಾರಿಯಾಗಿರುವ ಘಟನೆ ಕುಂಬಳಗೋಡು ಪೊಲೀಸ್ ಠಾಣೆ ವ್ಯಾಪ್ತಿಯ ಸೂಲಿಕೆರೆ ಬಳಿ ನಡೆದಿದೆ.

ಕಡಿಮೆ ಬೆಲೆಗೆ ನಿವೇಶನಗಳು ಮಾರಾಟಕ್ಕಿದ್ದು, ಅವುಗಳನ್ನು ತೋರಿಸುವುದಾಗಿ ಕಾರ್ಖಾನೆ ಮಾಲೀಕನನ್ನು ನಂಬಿಸಿ ಕರೆದುಕೊಂಡು ಹೋಗಿದ್ದ ಆರೋಪಿ ಈ ಕೃತ್ಯ ಎಸೆಗಿದ್ದಾನೆ. ಗಣೇಶ ಮೂರ್ತಿ ತಯಾರಿಸುವ ಕಾರ್ಖಾನೆ ಮಾಲೀಕ ಅಮರ್ ನಾರಾಯಣಸ್ವಾಮಿ ಗಾಯಗೊಂಡವರು. ಜಯಂತ್ (23) ಹಲ್ಲೆ ನಡೆಸಿ ಪರಾರಿಯಾದ ಆರೋಪಿ. ಅಮರ್ ಅವರಿಗೆ ಆರೋಪಿಯು ಚಾಕುವಿನಿಂದ ಕುತ್ತಿಗೆ, ಭುಜ, ಹಣೆಗೆ ಇರಿದು ಗಾಯಗೊಳಿಸಿ ಅವರ ಕೊರಳಿನಲ್ಲಿದ್ದ 100 ಗ್ರಾಂ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದಾನೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಗಾಯಾಳು ದೂರು ನೀಡಿದ್ದು, ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಗಾಯಾಳು ಕಾರ್ಖಾನೆಯಲ್ಲೇ ಕೆಲಸ ಮಾಡಿದ್ದ ಆರೋಪಿ: ಅಮರ್ ಅವರ ಕಾರ್ಖಾನೆಯಲ್ಲಿ ಕೇವಲ ಮೂರು ದಿನ ಕೆಲಸ ಮಾಡಿ ಬಿಟ್ಟು ಹೋಗಿದ್ದ ಆರೋಪಿಯು ನ.13 ರಂದು ಮಧ್ಯಾಹ್ನ ಕಾರ್ಖಾನೆಗೆ ಆಗಮಿಸಿ, ಎರಡು ಬಿಡಿಎ ಸೈಟ್‌ಗಳು ಕಡಿಮೆ ಬೆಲೆಗೆ ಮಾರಾಟಕ್ಕಿವೆ, ಅದನ್ನು ನೋಡಿಕೊಂಡು ಬರೋಣ ಎಂದು ಅಮರ್‌ಗೆ ಹೇಳಿದ್ದ. ಅದರಂತೆ ತಮ್ಮ ಕಾರಿನಲ್ಲಿ ಆರೋಪಿಯನ್ನು ಕರೆದುಕೊಂಡು ಅಮರ್ ಹೋಗಿದ್ದರು. ನಿವೇಶನ ನೋಡಿಕೊಂಡು ವಾಪಸ್ ಬರುವಾಗ ಕಾರಿನ ಹಿಂಭಾಗದ ಸೀಟ್‌ನಲ್ಲಿ ಕುಳಿತಿದ್ದ ಆರೋಪಿಯು ಅಮರ್ ಅವರ ಕುತ್ತಿಗೆಯಲ್ಲಿದ್ದ ಚಿನ್ನದ ಚೈನ್ ಕಿತ್ತುಕೊಳ್ಳಲು ಪ್ರಯತ್ನಿಸಿದ್ದ. ಇದಕ್ಕೆ ಅಮರ್ ಪ್ರತಿರೋಧ ತೋರಿದಾಗ ಚಾಕುವಿನಿಂದ ಬೆನ್ನು, ಕುತ್ತಿಗೆಗೆ ಇರಿದು ಗಾಯಗೊಳಿಸಿದ್ದಾನೆ. ಬಳಿಕ ಕಾರಿನಿಂದ ಇಳಿದ ಅಮರ್ ತಪ್ಪಿಸಿಕೊಂಡು ಓಡಿಹೋಗಿ ರಸ್ತೆಯಲ್ಲಿ ಬರುತ್ತಿದ್ದ ಟಾಟಾ ಏಸ್ ವಾಹನದ ಹಿಂಭಾಗ ಹತ್ತಿಕೊಂಡು ಹೋಗಲು ಯತ್ನಿಸಿದ್ದರು. ಈ ವೇಳೆ ಅವರನ್ನು ಹಿಂಬಾಲಿಸಿ ಚೈನ್ ಕಿತ್ತುಕೊಂಡು ಪರಾರಿಯಾಗಿದ್ದಾನೆ.

ಈ ಸಂಬಂಧ ದೂರು ನೀಡಿರುವ ಅಮರ್, ಆರೋಪಿಯು ಹಲ್ಲೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು ಜಾತಿ ನಿಂದನೆ ಮಾಡಿದ್ದಾನೆ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ ಎಂದು ನೈರುತ್ಯ ವಿಭಾಗದ ಡಿಸಿಪಿ ಅನಿತಾ ಹದ್ದಣ್ಣವರ್ ತಿಳಿಸಿದ್ದಾರೆ.

ಪ್ಲಾಸ್ಟಿಕ್ ಸುಡುತ್ತಿದ್ದವನಿಗೆ ದಂಡ

ಬೆಂಗಳೂರು: ಉತ್ತರ ನಗರ ಪಾಲಿಕೆ ವ್ಯಾಪ್ತಿಯ ಥಣಿಸಂದ್ರ ಮುಖ್ಯ ರಸ್ತೆಯಲ್ಲಿ ಪ್ಲಾಸ್ಟಿಕ್ ಸುಡುತ್ತಿದ್ದ ವ್ಯಕ್ತಿಗೆ 10 ಸಾವಿರ ರು. ದಂಡ ವಿಧಿಸಲಾಗಿದೆ ಎಂದು ಜಂಟಿ ಆಯುಕ್ತ ಮೊಹ್ಮದ್ ನಯೀಮ್ ಮೊಮಿನ್ ರವರು ತಿಳಿಸಿದ್ದಾರೆ.

ಬೆಂಗಳೂರು ಉತ್ತರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ನವೆಂಬರ್ 11 ರಂದು ರಾತ್ರಿ ಪರಿಶೀಲನೆ ನಡೆಸುವ ವೇಳೆ, ಥಣಿಸಂದ್ರ ಮುಖ್ಯ ರಸ್ತೆ ಅಶ್ವತ್ಥನಗರದಲ್ಲಿ ರಸ್ತೆ ಬದಿಯಲ್ಲಿ ಪ್ಲಾಸ್ಟಿಕ್ ಸುಡುತ್ತಿರುವುದನ್ನು ಗಮನಿಸಿ ಸ್ಥಳಕ್ಕೆ ತೆರಳಿ ಪರಿಶೀಲಿಸಿದರು. ಪ್ಲಾಸ್ಟಿಕ್ ಗೆ ಬೆಂಕಿ ಹಚ್ಚಿ ಸುಡುತ್ತಿದ್ದ ವ್ಯಕ್ತಿಯನ್ನು ಪ್ರಶ್ನಿಸಿದಾಗ, ಅವರು ಪ್ಲಾಸ್ಟಿಕ್/ತ್ಯಾಜ್ಯವನ್ನು ಸುಡುತ್ತಿರುವುದನ್ನು ಒಪ್ಪಿಕೊಂಡು ನೀರು ಹಾಕಿ ನಂದಿಸಿದರು. ಈ ರೀತಿಯಾಗಿ ತ್ಯಾಜ್ಯ ಸುಡುವುದು ಕಾನೂನು ಬಾಹಿರವಾಗಿರುವುದರಿಂದ, ಪ್ಲಾಸ್ಟಿಕ್ ಸುಟ್ಟ ವ್ಯಕ್ತಿಗೆ ದಂಡ ವಿಧಿಸಬೇಕು ಎಂದು ಉತ್ತರ ನಗರ ಪಾಲಿಕೆ ಜಂಟಿ ಆಯುಕ್ತರಿಗೆ ಮುಖ್ಯ ಆಯುಕ್ತರು ನಿರ್ದೇಶನ ನೀಡಿದರು.

ಈ ಹಿನ್ನೆಲೆ, ಥಣಿಸಂದ್ರ ವಾರ್ಡ್‌ನ ಕಿರಿಯ ಆರೋಗ್ಯ ಪರಿವೀಕ್ಷಕ ಹಾಗೂ ಮಾರ್ಷಲ್‌ಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ, ಎಳನೀರು ಮಾರಾಟ ಮಾಡುವ ಇರ್ಫಾಜ್ ಖಾನ್ ಪ್ಲಾಸ್ಟಿಕ್ ಸುಡುತ್ತಿರುವುದು ಖಚಿತವಾಗಿ ಕಂಡು ಬಂದಿದ್ದು, ಸ್ಥಳದಲ್ಲೇ 10 ಸಾವಿರ ರು. ದಂಡ ವಿಧಿಸಲಾಯಿತು. ಜತೆಗೆ ಇನ್ನು ಮುಂದೆ ಈ ರೀತಿಯಾಗಿ ಸುಡದಂತೆ ಮತ್ತು ರಸ್ತೆ ಬದಿಯಲ್ಲಿ ತ್ಯಾಜ್ಯ ಎಸೆಯದಂತೆ ಎಚ್ಚರಿಕೆ ನೀಡಲಾಯಿತು.

ತ್ಯಾಜ್ಯ ಸುಡದಂತೆ ನಾಗರಿಕರಲ್ಲಿ ಮನವಿ

ತ್ಯಾಜ್ಯ ಸುಡುವುದು ಕಾನೂನುಬಾಹಿರವಾಗಿದ್ದು, ಇದರಿಂದ ಮಾಲಿನ್ಯ ಹೆಚ್ಚುವ ಸಂಭವವಿದೆ. ಈ ಹಿನ್ನೆಲೆ ನಗರದಲ್ಲಿ ಪ್ಲಾಸ್ಟಿಕ್/ ಒಣ ತ್ಯಾಜ್ಯವನ್ನು ಸುಡದೆ, ಪಾಲಿಕೆಯಿಂದ ಬರುವ ಆಟೋ-ಟಿಪ್ಪರ್‌ಗಳಿಗೆ ಹಸ್ತಾಂತರಿಸಲು ನಾಗರಿಕರಿಗೆ ಮನವಿ ಮಾಡಲಾಗಿದೆ. ಸ್ವಚ್ಛ ಮತ್ತು ಸುರಕ್ಷಿತ ನಗರವನ್ನು ನಿರ್ಮಿಸುವುದು ನಮ್ಮ ಎಲ್ಲರ ಜವಾಬ್ದಾರಿಯಾಗಿದ್ದು, ನಿಯಮ ಉಲ್ಲಂಘಿಸುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಮುಂದುವರಿಯಲಿದೆ ಎಂದರು.

ಕೆರೆ, ಉದ್ಯಾನಗಳ ಪರಿಶೀಲನೆ

ಬೆಂಗಳೂರು: ಬೆಂಗಳೂರು ಪೂರ್ವ ನಗರ ಪಾಲಿಕೆ ಅಪರ ಆಯುಕ್ತ (ಅಭಿವೃದ್ಧಿ) ಲೋಖಂಡೆ ಸ್ನೇಹಲ್ ಸುಧಾಕರ್ ಮೆಕಾನಿಕಲ್ ಸ್ವೀಪಿಂಗ್ ಯಂತ್ರದ ಕಾರ್ಯನಿರ್ವಹಣೆ, ಕೆರೆ ಹಾಗೂ ಉದ್ಯಾನಗಳನ್ನು ಪರಿಶೀಲಿಸಿದರು.

ಮೆಕಾನಿಕಲ್ ಸ್ವೀಪಿಂಗ್ ಯಂತ್ರದ ಕಾರ್ಯಕ್ಷಮತೆಯಲ್ಲಿ ಕೆಲವು ನ್ಯೂನತೆಗಳು ಕಂಡುಬಂದಿದ್ದು, ನಿಗದಿತ ಮಾನದಂಡಗಳಂತೆ ಸರಿಯಾಗಿ ಕಾರ್ಯನಿರ್ವಹಿಸುತ್ತಿದೆ ಎಂಬುದು ಮರುಪರಿಶೀಲನೆಯ ಮೂಲಕ ಖಚಿತವಾದ ನಂತರವೇ ಯಂತ್ರವನ್ನು ನಿಯಮಿತ ಸ್ವಚ್ಛತಾ ಕಾರ್ಯಕ್ಕೆ ಬಳಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಗರುಡಚಾರಪಾಳ್ಯ ಮತ್ತು ಕುಂದಲಹಳ್ಳಿ ಕೆರೆ ಉದ್ಯಾನದಲ್ಲಿ ಸ್ವಚ್ಛತೆ, ಹಸಿರು ವಾತಾವರಣ ಹಾಗೂ ನಾಗರಿಕರ ಅನುಭವವನ್ನು ಸುಧಾರಿಸುವ ದೃಷ್ಟಿಯಿಂದ ನಿಯಮಿತ ನಿರ್ವಹಣೆಯನ್ನು ಮತ್ತಷ್ಟು ಬಲಪಡಿಸುವಂತೆ ಸೂಚಿಸಲಾಯಿತು. ಇನ್ನು ಮಹದೇವಪುರ ಕೆರೆ ಉದ್ಯಾನದಲ್ಲಿ ಸಸಿಗಳ ಆರೋಗ್ಯ ಕಾಪಾಡಲು ಹಾಗೂ ಹಸಿರು ಪ್ರದೇಶವನ್ನು ಉಳಿಸಲು ಪ್ರತಿ ದಿನ ಗಿಡಗಳಿಗೆ ನೀರು ಹಾಕಲು ಹಾಗೂ ಉದ್ಯಾನ ನಿರ್ವಹಣೆಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ನಿರ್ದೇಶಿಸಲಾಯಿತು.ಪರಿಶೀಲನೆ ವೇಳೆ ಮುಖ್ಯ ಅಭಿಯಂತರ ಲೋಕೇಶ್, ಕಾರ್ಯಪಾಲಕ ಅಭಿಯಂತರ ಉದಯ ಚೌಗಲೆ, ಹಿರಿಯ ಸಹಾಯಕ ನಿರ್ದೇಶಕಿ ವಿಜಯಲಕ್ಷ್ಮಿ ಸಂಗನಾಳ ಇದ್ದರು.

ಬೈಕ್‌ಗಳನ್ನು ಟ್ಯಾಕ್ಸಿಗಳನ್ನಾಗಿ ಪರಿಗಣಿಸಲಾಗದು

ಬೆಂಗಳೂರು: ಪ್ರಯಾಣಿಕರನ್ನು ಸಾಗಿಸಲು ಅಥವಾ ಬಾಡಿಗೆಗೆ ಅದರ ಬಳಕೆ ಮಾಡಬಹುದು ಎಂದು ಶಾಸನದಲ್ಲಿ ವ್ಯಾಖ್ಯಾನಿಸದೇ ಇರುವುದರಿಂದ ಮೋಟಾರು ಸೈಕಲ್‌ಗಳು ಸಾರಿಗೆ ವಾಹನಗಳನ್ನಾಗಿ ಪರಿಗಣಿಸಲಾಗುವುದಿಲ್ಲ ಎಂದು ರಾಜ್ಯ ಸರಕಾರ ಹೈಕೋರ್ಟ್‌ಗೆ ವಿವರಿಸಿದೆ.

ಮೋಟಾರು ವಾಹನಗಳ ಕಾಯಿದೆ 1988ರ ಅನ್ವಯ ಮಾರ್ಗಸೂಚಿ ರಚನೆ ಮಾಡುವವರೆಗೂ ಬೈಕ್‌ಗಳನ್ನು ಟ್ಯಾಕ್ಸಿಗಳನ್ನಾಗಿ ಪರಿಗಣಿಸಲಾಗದು ಎಂದು ಏಕ ಸದಸ್ಯ ಪೀಠ ನೀಡಿದ ಆದೇಶ ಪ್ರಶ್ನಿಸಿ ಉಬರ್ ಇಂಡಿಯಾ, ರ್‍ಯಾಪಿಡೊ, ಓಲಾ, ಉಬರ್ ಸೇರಿದಂತೆ ಹಲವು ಅಗ್ರಿಗೇಟರ್ ಸಂಸ್ಥೆಗಳು ಸಲ್ಲಿಸಿರುವ ಮೇಲ್ಮನವಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು ಮತ್ತು ನ್ಯಾ.ಸಿ.ಎಂ. ಜೋಶಿ ನೇತೃತ್ವದ ಪೀಠ ಸರಕಾರ ಮಾಹಿತಿ ನೀಡಿದೆ.

ವಿಚಾರಣೆ ವೇಳೆ ಸರಕಾರದ ಪರವಾಗಿ ವಾದ ಮಂಡಿಸಿದ ಅಡ್ವೋಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ, ಮೋಟಾರು ಸೈಕಲ್ ವ್ಯಾಖ್ಯಾನದಲ್ಲಿ ಅದು ಪ್ರಯಾಣಿಕರನ್ನು ಸಾಗಿಸಲು ಇರುವ ವಾಹನ ಎಂದು ಹೇಳಿಲ್ಲ. ಮೋಟಾರು ವಾಹನಗಳ ಕಾಯಿದೆ ಅಥವಾ ನಿಯಮಗಳಲ್ಲೂ ಪ್ರಯಾಣಿಕರನ್ನು ಮೋಟಾರ್ ಸೈಕಲ್ ಹೊತ್ತೊಯ್ಯಬಹುದು ಎಂದು ಹೇಳಿಲ್ಲ. ಮೋಟಾರ್ ಸೈಕಲ್, ಮೋಟಾರ್ ಕ್ಯಾಬ್ ವ್ಯಾಖ್ಯಾನದ ಅಡಿ ಬರುವುದಿಲ್ಲ ಎಂದು ಪೀಠಕ್ಕೆ ತಿಳಿಸಿದರು.

ಮೋಟಾರ್ ಸೈಕಲ್, ಪ್ರಯಾಣಿಕರನ್ನು ಹೊತ್ತೊಯ್ಯುವ ವಾಹನವಲ್ಲ, ಇದನ್ನು ಬಾಡಿಗೆ ಅಥವಾ ಹಣ ಸಂಪಾದಿಸಲು ಬಳಕೆ ಮಾಡಲಾಗದು. ಅನುಮತಿ ನೀಡುವುದು ರಾಜ್ಯ ಸರಕಾರದ ವಿಶೇಷ ಅಧಿಕಾರವಾಗಿದೆ. ಮೋಟಾರ್ ಸೈಕಲ್‌ಗಳನ್ನು ವಾಣಿಜ್ಯ ಸಾರಿಗೆಗೆ ಬಳಕೆ ಮಾಡುವುದು ಮತ್ತು ಆ ಅನುಮತಿಯನ್ನು ನಿಯಂತ್ರಣ ಮಾರ್ಗಸೂಚಿಗಳ ಗೈರಿನಲ್ಲಿ ಅಂತಹ ಸೇವೆ ಮುಂದುವರೆಸಲಾಗದು. ದೇಶದ 18 ರಾಜ್ಯಗಳಲ್ಲಿ ನಿರ್ದಿಷ್ಟವಾಗಿ ರಾಜ್ಯಗಳು ನಿಯಂತ್ರಣ ಮಾರ್ಗಸೂಚಿ ರೂಪಿಸಿದ ಮೇಲೆ ಬೈಕ್ ಟ್ಯಾಕ್ಸಿಗಳು ಸೇವೆ ನೀಡುತ್ತಿವೆ. ಈ ಸಂಸ್ಥೆಗಳು(ಅಗ್ರಿಗ್ರೇಟರ್‌ಗಳು) ಒಂದೊಂದು ರಾಜ್ಯದಲ್ಲಿ ಒಂದೊಂದು ರೀತಿಯಲ್ಲಿ ವಾದಿಸುವುದಕ್ಕೆ ಅವಕಾಶವಿಲ್ಲ ಎಂದು ಪೀಠಕ್ಕೆ ವಿವರಿಸಿದರು.

ಸಮಾಚಾರ ಸಣ್ಣದಲ್ಲ

ಒಳಮೀಸಲು ವರದಿ ವಿರೋಧಿಸಿ ಪ್ರತಿಭಟನೆ

ಬೆಂಗಳೂರು: ಕರ್ನಾಟಕ ರಾಜ್ಯ ಭೋವಿ ವಡ್ಡರ ಸಂಘದ ವತಿಯಿಂದ ನ.28 ರಂದು ಒಳಮೀಸಲು ವರದಿಯನ್ನು ವಿರೋಧಿಸಿ ವಿಧಾನಸೌಧ ಚಲೋ ಪ್ರತಿಭಟನೆ ಆಯೋಜಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಭೋವಿ ವಡ್ಡರ ಸಂಘದ ಅಧ್ಯಕ್ಷ ಗೌತಮ್ ವೆಂಕಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದ ಪರಿಶಿಷ್ಟ ಜಾತಿಯಲ್ಲಿನ ಬೋವಿ ಜನಾಂಗದ ಜನಸಂಖ್ಯೆಯ ನ್ಯೂನತೆಗಳು ನಾಗಮೋಹನ ದಾಸರ ವರದಿಯ ಪುಟ ಸಂಖ್ಯೆ 24 ರಲ್ಲಿ ತಿಳಿಸಿರುವಂತೆ ಪರಿಶಿಷ್ಟ ಜಾತಿ ಜನಸಂಖ್ಯೆ 1 ಕೋಟಿ 7 ಲಕ್ಷ ವಿದ್ದು ಅದರಲ್ಲಿ ಬೋವಿ ಜನಾಂಗದ ಜನಸಂಖ್ಯೆ 11,29.301 ಆಗಿದೆ ಎಂಬುದರ ಉಲ್ಲೇಖವಿದ್ದು, ವರದಿಯಲ್ಲಿ ತುಂಬಾನೇ ಲೋಪ ದೋಷಗಳು ಕಂಡು ಬಂದಿದೆ ಹಾಗೂ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಬೇಕೆಂದು ನ.28 ಕ್ಕೆ ಆನಂದರಾವ್ ಸರ್ಕಲ್‌ನಿಂದ ವಿಧಾನಸೌದದ ವರೆಗೆ ಕಾಲ್ನಡಿಗೆ ಮೂಲಕ ಜಾಥ ಮಾಡಲಾಗುವುದು ಎಂದರು. ಕಾರ್ಯಕ್ರಮದಲ್ಲಿ ಮಂಜುನಾಥ ಪ್ರಸಾದ್ ಹಾಗೂ ಹಲವರು ಇದ್ದರು.

ಎಲೆಕ್ಟ್ರಿಕ್ ವಾಹನ ಬಿಡುಗಡೆ

ಬೆಂಗಳೂರು: ಪ್ರಮುಖ ಎಲೆಕ್ಟ್ರಿಕ್ ವಾಹನ ಬ್ರಾಂಡ್ ಆಗಿರುವ ಕೊಮಾಕಿ ಎಲೆಕ್ಟ್ರಿಕ್ ಎಂಎಕ್ಸ್ 16 ಪ್ರೋ ಅನ್ನು ಪ್ರಾರಂಭಿಸಿದೆ. ಸವಾರಿಯಲ್ಲಿ ಶಕ್ತಿ ಮತ್ತು ಆರಾಮವನ್ನು ಒದಗಿಸುವ ಮೂಲಕ ರಸ್ತೆಯ ಮೇಲೆ ಅಸಾಧಾರಣ ಹಿಡಿತವನ್ನು ಪ್ರದರ್ಶಿಸುತ್ತದೆ. ಮಾರುಕಟ್ಟೆಯಲ್ಲಿರುವ ಇತರ ಎಲೆಕ್ಟ್ರಿಕ್ ಕ್ರೂಸರ್‌ಗಳ ಬೆಲೆಗಿಂತ ಸುಮಾರು ಅರ್ಧದಷ್ಟು ಬೆಲೆಯಲ್ಲಿ ಬರುವ ಈ ವಾಹನವು ಕಾರ್ಯಕ್ಷಮತೆ ಮತ್ತು ವೈಶಿಷ್ಟ್ಯ ಹೊಂದಿದೆ.ಬೈಕ್ 5 ಕೆಡಬ್ಲ್ಯು ಹಬ್ ಮೋಟಾರ್ ಮತ್ತು 4.5 ಕೆಡಬ್ಲ್ಯುಎಚ್ ಬ್ಯಾಟರಿಯಿಂದ ಚಾಲಿತವಾಗಿದ್ದು, ಒಂದು ಬಾರಿ ಚಾರ್ಜ್ ಮಾಡಿದರೆ 160–220 ಕಿ.ಮೀ ಮೈಲೇಜ್ ನೀಡುತ್ತದೆ ಎಂದು ಸಹ-ಸಂಸ್ಥಾಪಕ ಗುಂಜನ್ ಮಲ್ಹೋತ್ರಾ ಅವರು ತಿಳಿಸಿದ್ದಾರೆ.

ವೆಂಕಟೇಶ್ ದೊಡ್ಡೇರಿ ನೇಮಕ

ಬೆಂಗಳೂರು: ರಾಜ್ಯ ಬಿಜೆಪಿಯ ವಕ್ತಾರರಾಗಿದ್ದ ಎಚ್. ವೆಂಕಟೇಶ್ ಅವರನ್ನು ಕೇಂದ್ರ ಸರಕಾರದ ವಕೀಲರನ್ನಾಗಿ ನೇಮಿಸಿ ಆದೇಶ ಹೊರಡಿಸಲಾಗಿದೆ. ಈ ಬಗ್ಗೆ ಅಧಿಕೃತ ಆದೇಶ ಹೊರಡಿಸಿರುವ ಕೇಂದ್ರ ಸರಕಾರ, ಎಚ್. ವೆಂಕಟೇಶ್ ದೊಡ್ಡೇರಿ ಅವರನ್ನು ಕರ್ನಾಟಕದ ಹೈಕೋರ್ಟಿನ ಕೇಂದ್ರ ಸರಕಾರದ ವಕೀಲರನ್ನಾಗಿ ಕೇಂದ್ರ ಸರಕಾರ ನೇಮಕ ಮಾಡಿದೆ.

ಮನೆ ಮುಂದೆ ಕಸ, ಯೋಜನೆ ಬಿಟ್ಟ ಜಿಬಿಎ

ಬೆಂಗಳೂರು: ವ್ಯಾಪಕ ವಿರೋಧದ ಹಿನ್ನೆಲೆ ಕಂಡ ಕಂಡಲ್ಲಿ ಕಸ ಎಸೆಯುವವರನ್ನು ಪತ್ತೆ ಹಚ್ಚಿ ಅವರ ಮನೆಗಳ ಮುಂದೆ ಕಸ ಸುರಿಯುವ ಯೋಜನೆಯನ್ನು ಜಿಬಿಎ ಕೈ ಬಿಟ್ಟಿದೆ. ಸಾರ್ವಜನಿಕರ ಮನೆಗಳ ಮುಂದೆ ಕಸ ಸುರಿಯುವ ಯೋಜನೆಗೆ ವ್ಯಾಪಕವಾದ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಘನ ತ್ಯಾಜ್ಯ ನಿರ್ವಹಣಾ ಘಟಕ ಆ ಯೋಜನೆಯನ್ನು ಮುಂದುವರೆಸದಿರಲು ತೀರ್ಮಾನಿ ಸಿದ್ದು, ಜನ ತಪ್ಪು ಮಾಡುವುದು ಸಹಜವಾಗಿದ್ದು, ಸರಕಾರವೈ ಅದೇ ತಪ್ಪನ್ನು ಮಾಡುವುದು ಎಷ್ಟು ಸರಿ ಎಂದು ಸಾರ್ವಜನಿಕರು ಜಿಬಿಎ ನಿರ್ಧಾರವನ್ನು ಖಂಡಿಸಿದ್ದು, ಮನೆ ಮುಂದೆ ಕಸ ಸುರಿಯುವುದೇ ಅಲ್ಲದೆ ಅವರಿಂದ ದಂಡ ಕೂಡ ಸ್ವೀಕರಿಸುತ್ತಿರುವುದರಿಂದ ಜನರ ಮನೆಗಳ ಮುಂದೆ ಕಸ ಸುರಿಯಲು ನಿಮಗೆ ಯಾವ ನೈತಿಕತೆ ಇದೆ ಎಂದು ಕೆಲವರು ಪ್ರಶ್ನಿಸಿದ್ದರು. ಸರಿಯಾದ ಸಮಯಕ್ಕೆ ಕಸದ ವಾಹನಗಳು ಮನೆಗಳ ಮುಂದೆ ಬಂದರೆ ಜನ ಎಲ್ಲೆಂದರಲ್ಲಿ ಕಸ ಎಸೆಯುವುದನ್ನು ಕೈ ಬಿಡುತ್ತಾರೆ. ಕಂಡ ಕಂಡಲ್ಲಿ ಕಸ ಎಸೆದರೆ ಮುಲಾಜಿಲ್ಲದೆ ದಂಡ ಹಾಕಿ. ಅದನ್ನು ಬಿಟ್ಟು ರಾಶಿ ರಾಶಿ ಕಸ ತಂದು ಮನೆ ಬಾಗಿಲಿಗೆ ಸುರಿಯುವುದು ಎಷ್ಟು ಸರಿ ಎಂದು ಹಲವಾರು ತಮ್ಮ ಆಕ್ರೋಶ ಹೊರ ಹಾಕಿದ್ದರು. ಈ ಘಟನೆ ನಂತರ ಸರಕಾರ ನೀಡಿರುವ ಸೂಚನೆ ಮೇರೆಗೆ ಜಿಬಿಎ ಅಧಿಕಾರಿಗಳು ಮನೆ ಮುಂದೆ ಕಸ ಸುರಿಯುವ ಯೋಜನೆಯನ್ನು ಕೈ ಬಿಟ್ಟಿದ್ದು, ಘನತ್ಯಾಜ್ಯ ನಿರ್ವಹಣಾ ಘಟಕ ಹಮ್ಮಿಕೊಂಡಿದ್ದ ಮನೆ ಮುಂದೆ ಕಸ ಸುರಿಯುವ ಯೋಜನೆಯನ್ನು ಸ್ಥಗಿತಗೊಳಿಸಲಾಗಿದೆ. ಇನ್ನು ಮುಂದೆ ಕಂಡ ಕಂಡಲ್ಲಿ ಕಸ ಎಸೆಯುವವರನ್ನು ಪತ್ತೆ ಹಚ್ಚಿ ಅವರು ಎಸೆದ ಕಸವನ್ನು ಅವರ ಮನೆ ಬಾಗಿಲಿಗೆ ವಾಪಸ್ ಇಟ್ಟು ಅವರಿಂದ ದಂಡ ವಸೂಲಿ ಮಾಡಲಾಗುವುದು ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದ್ದಾರೆ.

ನೀರಿನ ಸೋರಿಕೆ, ಅನಧಿಕೃತ ಜಲಸಂಪರ್ಕ ತಡೆಗೆ ಎಐ ಮೊರೆ ಹೋದ ಜಲಮಂಡಳಿ | ನೀರಿನ ಪೈಪಿನಲ್ಲಿನ ಸಮಸ್ಯೆ ಬಗ್ಗೆ ಫೋಟೋ ಸಮೇತ ಮಾಹಿತಿ ನೀಡಲಿರುವ ರೊಬೊ

ಪೈಪ್ ಲೈನ್ ಸಮಸ್ಯೆ ತಡೆಗೆ ಬರಲಿವೆ ರೊಬೋಟ್

ಅಪರ್ಣಾ ಎ.ಎಸ್ ಬೆಂಗಳೂರು

ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ನೀರಿನ ಸೋರಿಕೆಯನ್ನು ತಡೆಗಟ್ಟಲು ಹಲವು ಕ್ರಮವಹಿಸಿದ್ದರೂ ಸೋರಿಕೆ ತಡೆಯುವಲ್ಲಿ ಸಾಧ್ಯವಾಗಿಲ್ಲ. ಈ ನಡುವೆ ಇದೀಗ ತಂತ್ರಜ್ಞಾನವನ್ನು ಬಳಸಿಕೊಂಡು, ನೀರಿನ ಸೋರಿಕ ಹಾಗೂ ಅನಧಿಕೃತ ಸಂಪರ್ಕಕ್ಕೆ ಬ್ರೇಕ್ ಹಾಕುವ ಮಹತ್ವದ ಯೋಜನೆಗೆ ಬೆಂಗಳೂರು ಜಲಮಂಡಳಿ ಕೈಹಾಕಿದೆ.

ಕೃತಕ ಬುದ್ಧಿಮತ್ತೆಯನ್ನು ಬಳಸಿಕೊಂಡು ಜಲಮಂಡಳಿ ನೀರಿನ ಸೋರಿಕೆಯ ಮೇಲೆ ಕಣ್ಣಾವಲು ಇಡಲು ಮುಂದಾಗಿದ್ದು, ಇದಕ್ಕಾಗಿ ಐಐಟಿ ಮದ್ರಾಸ್ ಹಾಗೂ ಕೆಲ ಸ್ಟಾರ್ಟ್ ಅಪ್‌ಗಳು ಸಿದ್ಧಪಡಿಸಿರುವ ರೋಬೋಟ್‌ಗಳನ್ನು ಬಳಸಲು ತೀರ್ಮಾನಿಸಿದೆ. ಕಾಲಕಾಲಕ್ಕೆ ಜಲಮಂಡಳಿಯ ಪ್ರಮುಖ ಪೈಪ್‌ಗಳಲ್ಲಿ ಈ ರೋಬೋಟ್‌ಗಳನ್ನು ಕಳುಹಿಸಿದಾಗ ಪೈಪಿನಲ್ಲಿ ಮಣ್ಣು ತುಂಬಿದೆಯೇ? ಕಸ ಯಾವ ಪ್ರಮಾಣದಲ್ಲಿದೆ? ನಿಗದಿತ ಪೈಪ್‌ನಿಂದ ಎಷ್ಟು ಮನೆಗಳು ಸಂಪರ್ಕ ಪಡೆದಿವೆ ಎನ್ನುವ ಬಗ್ಗೆ ರಿಯಲ್ ಟೈಮ್‌ನಲ್ಲಿ ಮಾಹಿತಿ ಸಂಗ್ರಹವಾಗಲಿದೆ. ಇದರೊಂದಿಗೆ ಅನಧಿಕೃತವಾಗಿ ನೀರಿನ ಸಂಪರ್ಕವನ್ನು ಯಾವುದಾದರೂ ಕಟ್ಟಡಕ್ಕೆ ಹೋಗಿದ್ದರೆ ನೀರಿನ ಹರಿವಿನ ಆಧಾರದಲ್ಲಿ ಎಐ ತಂತ್ರಜ್ಞಾನದ ಮೂಲಕ ಇದನ್ನು ಪತ್ತೆ ಹಚ್ಚಬಹುದು ಎಂದು ತಿಳಿದುಬಂದಿದೆ.

ಜಲಮಂಡಳಿಯ ಈ ರೊಬೋಟ್ ತಂತ್ರಜ್ಞಾನದಲ್ಲಿ ಆಟಿಕೆ ಕಾರಿನ ಗ್ರಾತದ ರೋಬೋಟ್‌ನ್ನು ಪೈಪಿನ ಒಳಕಳುಹಿಸಿ ಮೇಲಿನಿಂದ ನಿಂತು ಕಾರ್ಯನಿರ್ವಹಿಸಬಹುದಾಗಿದೆ. ಇದರಿಂದ ಕಾರ್ಮಿಕರು ಹೋಗಲು ಕಷ್ಟಕರವಾಗಿರುವ ಪೈಪಿನಲ್ಲಿಯೂ ಸರಾಗವಾಗಿ ಈ ರೋಬೋಟ್‌ನ್ನು ಕಳುಹಿಸಬಹುದು. ಈ ರೋಬೋಟ್‌ನಲ್ಲಿ ಎಚ್‌ಡಿ ವಿಡಿಯೊ ಸಂಗ್ರಹಿಸುವ ಕ್ಯಾಮೆರಾ ಇರುವುದರಿಂದ ಪೈಪಿನ ಒಳಭಾಗದ ಸ್ಪಷ್ಟ ಚಿತ್ರಣವನ್ನು ನೀಡಲಿದೆ. ಇದರೊಂದಿಗೆ ವೇಗವಾಗಿ ನೀರು ಹರಿಯುತ್ತಿದ್ದರೂ, ಸಣ್ಣ ಜಾಗದಲ್ಲಿ ತೂರುವುದಕ್ಕೆ ಸಾಧ್ಯವಿದೆ. ಈ ರೋಬೋಟ್‌ಗಳು ನೀಡುವ ಫೋಟೋ, ವಿಡಿಯೊ ಆಧರಿಸಿ ಸಿಬ್ಬಂದಿ ಕಾರ್ಯನಿರ್ವಹಿಸಬಹುದಾಗಿದೆ.ಕೀ ಮೂಲಕ ಸಮಯ ಹಾಗೂ ಹಣ ಎರಡು ಉಳಿತಾಯವಾಗಲಿದೆ ಎನ್ನುವುದು ಅಧಿಕಾರಿಗಳ ಲೆಕ್ಕಾಚಾರವಾಗಿದೆ. ನಗರದಲ್ಲಿ ನೀರಿನ ಮಿತಬಳಕೆಗೆ ಜಲಮಂಡಳಿಯು ಹೆಚ್ಚು ಒತ್ತು ಕೊಡುತ್ತಿದ್ದು, ನೀರು ಪೋಲಾಗುವುದನ್ನು ತಡೆಯಲು ಹಲವು ಕ್ರಮಗಳನ್ನು ಅನುಸರಿಸುತ್ತಿದೆ. ಜತೆಗೆ ನೀರನ್ನು ಕುಡಿಯುವ ಉದ್ದೇಶದ ಹೊರತಾಗಿ ಅನ್ಯ ಬಳಕೆ ಮಾಡುವವರು ಹಾಗೂ ಅನಧಿಕೃತ ಸಂಪರ್ಕವನ್ನು ಪಡೆದುಕೊಳ್ಳುವವರ ವಿರುದ್ಧ ಕ್ರಮವನ್ನೂ ಕೈಗೊಳ್ಳಲು ಈ ತಂತ್ರಜ್ಞಾನವನ್ನು ಬಳಸಿಕೊಳ್ಳಲಾಗುತ್ತಿದೆ.

ರೋಬೊ ನೀಡುವ ವರದಿ ಆಧರಿಸಿ ಬ್ಲೂ ಫೋರ್ಸ್ ನಿರ್ವಹಣೆ: ಜಲಮಂಡಳಿ ಪರಿಚಯಿಸುತ್ತಿರುವ ಈ ಎಐ ಆಧಾರಿತ ರೊಬೊಟ್‌ಗಳ ಮಾಹಿತಿಯನ್ನು ಆಧರಿಸಿ ಕಾರ್ಯನಿರ್ವಹಿಸಲು ಜಲಮಂಡಳಿ ಬ್ಲೂ ಫೋರ್ಸ್ ಎನ್ನುವ ತಂಡವನ್ನು ಆರಂಭಿಸಲಿದ್ದು, ಈ ತಂಡಕ್ಕೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೋಮವಾರ ಚಾಲನೆ ನೀಡಲಿದ್ದಾರೆ. ಈ ಪಡೆ ರೋಬೋಟ್ ಹಾಗೂ ಎಐಗಳು ನೀಡುವ ಚಿತ್ರ ಹಾಗೂ ಡೆಟಾ ಆಧರಿಸಿ ಕಾರ್ಯಾಚರಣೆ ನಡೆಸಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ರೊಬೋಟ್ ಚಿತ್ರ

ರೊಬೋಟ್ ಚಿತ್ರೀಕರಿಸಿರುವ ಪೈಪಿನೊಳಗಿನ ಚಿತ್ರ

ನೂರು ಕೋಟಿ ದಂಡ ಸಂಗ್ರಹ

ಅನಧಿಕೃತ ನೀರಿನ ಸಂಪರ್ಕ ಪಡೆದಿರುವ ಮನೆ ಹಾಗೂ ಅಪಾರ್ಟ್‌ಮೆಂಟ್‌ಗಳ ಮೇಲೆ ದಾಳಿ ನಡೆಸಿ ಪರಿಶೀಲಿಸಲಾಗಿತ್ತು. ಈ ಅಭಿಯಾನದಲ್ಲಿ 43ಸಾವಿರ ಆಸ್ತಿಗೆ ಸಂಬಂಧಿಸಿದ 6 ಸಾವಿರ ಅನಧಿಕೃತ ಸಂಪರ್ಕಗಳು ಪತ್ತೆಯಾಗಿತ್ತು. ಅನಧಿಕೃತವಾಗಿ ಸಂಪರ್ಕ ಪಡೆದ ಕಟ್ಟಡ, ಅಪಾರ್ಟ್‌ಮೆಂಟ್ ಹಾಗೂ ವಾಣಿಜ್ಯ ಕಟ್ಟಡಗಳಿಗೆ ನೋಟಿಸ್ ನೀಡಿ ನೂರು ಕೋಟಿ ರು. ದಂಡ ವಿಧಿಸಲಾಗಿತ್ತು.

ಐಐಟಿ ಮದ್ರಾಸ್ ಹಾಗೂ ಸ್ಟಾರ್ಟ್ ಅಪ್‌ಗಳು ಸಿದ್ಧಪಡಿಸಿರುವ ಈ ರೊಬೋಟ್ಗಳಿಂದ ನೀರಿನ ಪೈಪಿನೊಳಗಿರುವ ಸಮಸ್ಯೆಯನ್ನು ರಿಯಲ್ ಟೈಮ್‌ನಲ್ಲಿ ಅರಿಯಬಹುದು. ಆಟಿಕೆ ಕಾರಿನ ಗಾತ್ರದಲ್ಲಿರುವ ಈ ರೊಬೊಗಳು ಸುಮಾರು ಅರ್ಧ ಕಿಮೀ ದೂರದವರೆಗೆ ಕ್ರಮವಹಿಸಲಿದೆ. ಇದರ ಸಹಾಯದಿಂದ ನೀರಿನ ಸೋರಿಕೆ ಮಾತ್ರವಲ್ಲದೇ ಅನಧಿಕೃತ ಸಂಪರ್ಕದ ಮಾಹಿತಿಯೂ ಲಭಿಸಲಿದೆ.

-ರಾಮ್ ಪ್ರಸಾತ್ ಮನೋಹರ್
ಅಧ್ಯಕ್ಷರು, ಬೆಂಗಳೂರು ಜಲಮಂಡಳಿ

ಲಾಭವೇನು?

- ನಿಗದಿತ ಪರಿಶೀಲನೆಯಿಂದ ತುರ್ತು ನಿರ್ವಹಣೆಯ ಒತ್ತಡ ಬರುವುದಿಲ್ಲ
- ಸಿಬ್ಬಂದಿಗಳಿಂದ ಪರಿಶೀಲನೆ ನಡೆಸುವುದಕ್ಕಿಂತ 10ಪಟ್ಟು ವೇಗವಾಗಿ ಪರಿಶೀಲಿಬಹುದು
- ತಂತ್ರಜ್ಞಾನದ ಸಹಾಯದಿಂದ ಪರಿಶೀಲಿಸುವುದರಿಂದ ದುಂದುವೆಚ್ಚವನ್ನು ತಗ್ಗಿಸಬಹುದು
- ಗುಂಡಿ ತೋಡುವುದನ್ನು ತಗ್ಗಿಸುವ ಮೂಲಕ ಸಾರ್ವಜನಿಕರಿಗೆ ಆಗುವ ಅನಾನುಕೂಲ ತಗ್ಗಿಸಲು ಸಹಕಾರಿ
- ಸ್ಪಷ್ಟ ಡೆಟಾ ಸಿಗುವುದರಿಂದ, ಭವಿಷ್ಯದಲ್ಲಿ ನಿರ್ವಹಣೆ ಸುಲಭ

- ಐಐಟಿ ಮದ್ರಾಸ್ ಹಾಗೂ ಕೆಲ ಸ್ಟಾರ್ಟ್ ಅಪ್‌ಗಳು ಸಿದ್ಧಪಡಿಸಿರುವ ರೋಬೋಟ್
- ರೋಬೋಗಳನ್ನು ಪೈಪಿನೊಳಗೆ ಬಿಟ್ಟು, ಸ್ಪಷ್ಟ ಚಿತ್ರಗಳನ್ನು ಪಡೆಯಬಹುದು
- ರೋಬೋ ಆಪರೇಟರ್‌ಗಳಿರುವ ಜಾಗದಿಂದ 500 ಮೀಟರ್‌ವರೆಗೆ ಕಾರ್ಯಾಚರಣೆ
- ಈ ರೋಬೋಟ್‌ಗಳು ಸಂಗ್ರಹಿಸುವ ಚಿತ್ರದಿಂದ ಪೈಪಿನಲ್ಲಿ ನೀರಿನ ಹರಿವು ಹಾಗೂ ಅನಧಿಕೃತ ಸಂಪರ್ಕದ ಬಗ್ಗೆ ಸ್ಪಷ್ಟ ಮಾಹಿತಿ

ಅಹ್ಮದಾಬಾದ್ ಕರ್ನಾಟಕ ಸಂಘದಿಂದ 70ನೇ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮ

ಅಹ್ಮದಾಬಾದ್‌ನಲ್ಲಿ ಕನ್ನಡ ಸಂಘಕ್ಕೆ ನಿವೇಶನ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಅಹ್ಮದಾಬಾದ್‌ನ ಕರ್ನಾಟಕ ಸಂಘದಲ್ಲಿ ಕನ್ನಡ ಭವನ ನಿರ್ಮಾಣಕ್ಕೆ ಬೇಕಿರುವ ನಿವೇಶನ ಕೊಡಿಸುವುದಕ್ಕೆ ಗುಜರಾತ್ ಸರಕಾರದ ಜತೆ ಚರ್ಚೆ ನಡೆಸುವುದಾಗಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಭರವಸೆ ನೀಡಿದರು.

ಅಹ್ಮದಾಬಾದ್ ಕರ್ನಾಟಕ ಸಂಘವು ಆಯೋಜಿಸಿದ್ದ 70ನೇ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ, ಅಹ್ಮದಾಬಾದ್ ನಗರದಲ್ಲಿ ಸಾವಿರಾರು ಕನ್ನಡ ಕುಟುಂಬಗಳು ಅನೇಕ ದಶಕಗಳಿಂದ ನೆಲೆಸಿವೆ. ನಿಮ್ಮೆಲ್ಲರ ಕನ್ನಡಸೇವೆ ಅಪಾರವಾದದ್ದು. ಕರ್ನಾಟಕ ಸಂಘಕ್ಕೆ ಸ್ವಂತ ಭವನ ಬೇಕು ಎಂಬ ಮನವಿಯನ್ನು ಪರಿಗಣಿಸಿ, ಈ ಬಗ್ಗೆ ನಾನು ಶೀಘ್ರವಾಗಿ ಗುಜರಾತ್ ಸರಕಾರದ ಜತೆ ಮಾತುಕತೆ ನಡೆಸುತ್ತೇನೆ. ಸಂಘಕ್ಕೆ ನಿವೇಶನ ಹಾಗೂ ಕನ್ನಡ ಭವನ ನಿರ್ಮಾಣಕ್ಕೆ ನೆರವು ಸಿಗುವುದು ಎಂದು ತಿಳಿಸಿದರು.

ನೀವು ನೀಡಿದ ಭಾಷಾಭಿಮಾನಕ್ಕೆ ನಾನು ಚಿರಋಣಿ. ನಾನು ಅಹ್ಮದಾಬಾದ್‌ನಲ್ಲಿ ಇದ್ದೇನೆಯೋ ಅಥವಾ ಕರ್ನಾಟಕದಲ್ಲಿ ಇದ್ದೇನೆಯೋ ಎನ್ನುವ ಭಾವನೆ ಬರುವಷ್ಟು ಕನ್ನಡ ವಾತಾವರಣ ಇಲ್ಲಿದೆ. 'ಎಲ್ಲಾದರೂ ಇರು, ಎಂತಾದರೂ ಇರು,ಎಂದೆಂದುಗೂ ನೀ ಕನ್ನಡವಾಗಿರು..' ಎಂದು ರಾಷ್ಟ್ರಕವಿ ಕುವೆಂಪು ಅವರು ನೀಡಿರುವ ಸಂದೇಶದಂತೆ ನೀವೆಲ್ಲರೂ ಕನ್ನಡಕ್ಕೆ ದೊಡ್ಡ ಸೇವೆ ಸಲ್ಲಿಸುತ್ತಿದ್ದೀರಿ ಎಂದರು.

ಕನ್ನಡಿಗರು ಕರ್ನಾಟಕ ಬಿಟ್ಟು ಎಲ್ಲೂ ಹೋಗುವುದಿಲ್ಲ ಎನ್ನುವ ನಂಬಿಕೆ ಇಷ್ಟು ದಿನ ನನ್ನಲ್ಲಿ ಇತ್ತು. ಆದರೆ ಅಹ್ಮದಾಬಾದ್ ನಲ್ಲಿ ನಿಮ್ಮನ್ನು ನೋಡಿದ ಮೇಲೆ ನನ್ನ ಅಭಿಪ್ರಾಯ ಬದಲಾಗಿದೆ. ಕನ್ನಡಿಗರು ಅಹ್ಮದಾಬಾದ್, ಮಾತ್ರವಲ್ಲ ದೇಶ, ವಿಶ್ವದ ಎಲ್ಲೆಡೆ ನೆಲೆಸಿದ್ದಾರೆ. ಈ ಭೂಮಿಯ ಮೂಲೆ ಮೂಲೆಯಲ್ಲೂ ಕನ್ನಡಿಗರು ಬದುಕು ಅರಸಿಕೊಂಡು ಹೋಗಿ ನೆಲೆಸಿ ಕನ್ನಡದ ಸೇವೆ ಮಾಡುತ್ತಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಗುಜರಾಜ್ ಹೈಕೋರ್ಟ್ ನ್ಯಾಯಮೂರ್ತಿ ಎನ್. ಎಸ್. ಸಂಜಯ್ ಗೌಡ , ಸಂಘದ ಅಧ್ಯಕ್ಷ ಎಚ್.ವಿ. ಬೆಣ್ಣೂರ, ಪ್ರಧಾನ ಕಾರ್ಯದರ್ಶಿ ಸುಮನಲಾಲ್ ಕೊಡಿಯಾಲ್ ಬೇಲ್, ಗಾಂಧಿನಗರ ವಿಶ್ವವಿದ್ಯಾಲಯದ ಉಪ ಕುಲಪತಿ ಡಾ.ಕಮಲೇಶ ಇನ್ನಿತರರು ಉಪಸ್ಥಿತರಿದ್ದರು.

ಅಹ್ಮದಾಬಾದ್‌ನಲ್ಲಿನ ಕರ್ನಾಟಕ ಸಂಘವು ಆಯೋಜಿಸಿದ 70ನೇ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮ ಕೇಂದ್ರ ಸಚಿವರಾದ ಎಚ್.ಡಿ.ಕುಮಾರಸ್ವಾಮಿ ಉದ್ಘಾಟಿಸಿದರು.

ಮಹಿಳಾ ಕಾರ್ಮಿಕರ ಸಮಸ್ಯೆ ಬಗೆಹರಿಸಿ

ವಿಶ್ವವಾಣಿ ಸುದ್ದಿಮನೆ ಮಹದೇವಪುರ

ನಗರದ ಕನ್ನಮಂಗಲ ಪಂಚಾಯಿತಿ ವ್ಯಾಪ್ತಿಯಲ್ಲಿ ಕಸ ಸಂಗ್ರಹಣೆ ಹಾಗೂ ನಿರ್ವಹಣೆ ಮಾಡುತ್ತಿದ್ದ ಮಹಿಳಾ ಕಾರ್ಮಿಕರಿಗೆ ಕಳೆದ ಮೂರು ತಿಂಗಳಿಂದ ಸಂಬಳ ನೀಡಲಿಲ್ಲವೆಂದು ಆರೋಪಿಸಿ ಪಂಚಾಯಿತಿ ಎದುರು ಕೆಆರ್ ಎಸ್ ಪಕ್ಷದ ಸಹಯೋಗದೊಂದಿಗೆ ಮಹಿಳೆಯರು ಪ್ರತಿಭಟನೆ ನಡೆಸಿದ್ದಾರೆ ಎಂದು ಕರ್ನಾಟಕ ರಾಷ್ಟ್ರೀಯ ಪಕ್ಷದ ರಾಜ್ಯಾಧ್ಯಕ್ಷ ರವಿಕೃಷ್ಣಾ ರೆಡ್ಡಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ ಅವರು, ಗ್ರಾಪಂ ವ್ಯಾಪ್ತಿಯಲ್ಲಿ ಕಸ ಸಂಗ್ರಹಣೆ ಮತ್ತು ವಿಂಗಡಣೆ ಮಹಿಳೆಯರಿಗೆ ನೀಡುವುದರಿಂದ ಅವರಿಗೆ ಉದ್ಯೋಗ ನೀಡಿದಂತಾಗಿದೆ. ಆದರೆ, ಕಳೆದ ಮೂರು ತಿಂಗಳಿಂದ ಅವರಿಗೆ ಸಂಬಳ ನೀಡದಿರುವುದು ಸರಿಯಲ್ಲ ಯಾವುದೇ ಸಮಸ್ಯೆ ಇದ್ದರೂ ಬಗೆಹರಿಸಿ ಎಂದು ಆಗ್ರಹಿಸಿದರು.

ಕನ್ನಮಂಗಲ ಪಂಚಾಯಿತಿ ವ್ಯಾಪ್ತಿಯಲ್ಲಿ ಅಧ್ಯಕ್ಷರ ಪತಿ ಹೆಚ್ಚಾಗಿ ಆಡಳಿತದಲ್ಲಿ ತಲೆ ದೂರಿಸುತ್ತಿದ್ದಾರೆ ಎಂದು ಆರೋಪವಿದೆ. ಪಂಚಾಯಿತಿಗಳಲ್ಲಿ ಅಧ್ಯಕ್ಷರ ಪತಿ ತಲೆ ದೂರಿಸುವಂತಿಲ್ಲ ಒಂದು ವೇಳೆ ಭಾಗಿಯಾದರೆ ಅವರ ವಿರುದ್ಧ ಪ್ರಕರಣ ದಾಖಲಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಮಹದೇವಪುರ ಕ್ಷೇತ್ರದ ಕನ್ನಮಂಗಲ ಗ್ರಾಪಂ ನಲ್ಲಿ ಮಹಿಳಾ ಕಾರ್ಮಿಕರಿಗೆ ಆಗಿರುವ ಅನ್ಯಾಯ ಕೂಡಲೇ ಸರಿಪಡಿಸಬೇಕು ಎಂದು ಕೆಆರ್ ಎಸ್ ಪಕ್ಷದ ರಾಜ್ಯಾಧ್ಯಕ್ಷ ರವಿಕೃಷ್ಣಾರೆಡ್ಡಿ ನೇತೃತ್ವದಲ್ಲಿ ಪಂಚಾಯಿತಿ ಎದುರು ಪ್ರತಿಭಟನೆ ನಡೆಸಿ ಅಧಿಕಾರಿಗಳ ಮುತ್ತಿಗೆ ಹಾಕಿದರು.

ಕಳೆದ ಒಂದೂವರೆ ವರ್ಷದಿಂದ ಕನ್ನಮಂಗಲ ಗ್ರಾಪಂನಲ್ಲಿ ಅಧ್ಯಕ್ಷರ ಪತಿಯ ದರ್ಬಾರ್ ನಡೆಯುತ್ತಿದೆ, ಸದಸ್ಯರನ್ನು ಗಣನೆಗೆ ತೆಗೆದುಕೊಳ್ಳದೆ ಹಿಟ್ಲರ್ ಆಡಳಿತ ನಡೆಸುವುದಕ್ಕೆ ಹೊರಟಿದ್ದಾರೆ. ಈ ಬಗ್ಗೆ ಶಾಸಕರಾದ ಮಂಜುಳಾ ಲಿಂಬಾವಳಿ ಹಾಗೂ ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರ ಗಮನಕ್ಕೂ ಇರುವುದಿಲ್ಲ. ಆದಷ್ಟು ಬೇಗ ಶಾಸಕರು ಹಾಗೂ ಮಾಜಿ ಸಚಿವರು ಇಲ್ಲಿನ ನಿಜವಾದ ಮಾಹಿತಿ ತಿಳಿದು ಸೂಕ್ತ ಸೂಚನೆಗಳನ್ನು ಅಧ್ಯಕ್ಷರು ಹಾಗೂ ಪಂಚಾಯಿತಿಗೆ ನೀಡಬೇಕು.

-ಯಲ್ಲಪ್ಪ, ಕನ್ನಮಂಗಲ ಗ್ರಾಪಂ ಸದಸ್ಯ

ಜೆಜೆಎಂ ಗುತ್ತಿಗೆದಾರರಿಗೆ 5500 ಕೋಟಿ ರು. ಬಾಕಿ

ಬೆಂಗಳೂರು: ಜಲಜೀವನ ಮಿಷನ್ ಯೋಜನೆಯಲ್ಲಿ ಮನೆಮನೆಗೆ ಶುದ್ಧ ಕುಡಿಯುವ ನೀರಿನ ಯೋಜನೆಯಲ್ಲಿ ಕೇಂದ್ರ ಸರಕಾರ ಶೇ.50 ರಷ್ಟು ರಾಜ್ಯಸರಕಾರದ ಶೇ.50 ರಷ್ಟು ಹಣದ ಅನುಪಾತದಲ್ಲಿ ಗುತ್ತಿಗೆದಾರರು 2024–2025, 25–26ರ ವಾರ್ಷಿಕ ವರ್ಷದಲ್ಲಿ ಕೆಲಸ ಮಾಡಿದ್ದು, ಸುಮಾರು 5500 ಕೋಟಿ ರು.ಗಿಂತಲೂ ಹೆಚ್ಚು ಹಣ ಇನ್ನೂ ಬಿಡುಗಡೆ ಆಗಿಲ್ಲ ಎಂದು ಸುವರ್ಣ ಕರ್ನಾಟಕ ಕಾರ್ಯನಿರತ ಗುತ್ತಿಗೆದಾರರ ಸಂಘದ ರಾಜ್ಯಾಧ್ಯಕ್ಷ ಜೆ.ಜಯಪ್ಪ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ,ಈಗಾಗಲೇ ನಾವು ಈ ಹಿಂದೆಯೇ ಕೇಂದ್ರಸರಕಾರ ಮತ್ತು ರಾಜ್ಯಸರಕಾರಕ್ಕೆ ಮನವಿ ಮಾಡಿದರು ಯಾವುದೇ ಸ್ಪಂದನೆ ಸಿಕ್ಕಿಲ್ಲ . ಗುತ್ತಿಗೆದಾರರು ತುಂಬಾ ಸಂಕಷ್ಟದಲ್ಲಿ ಇದ್ದ ಕಾರಣ ಕೂಡಲೇ ಹಣ ಬಿಡುಗಡೆ ಮಾಡಬೇಕೆಂದು ನ.17 ರಂದು ಒಂದು ದಿನದ ಧರಣಿಯನ್ನು ಫ್ರಿಡಂ ಪಾರ್ಕನಲ್ಲಿ ಆಯೋಜಿಸಲಾಗಿದೆ ಇದರಲ್ಲಿ ಸುಮಾರು 250 ಕ್ಕೂ ಹೆಚ್ಚು ಗುತ್ತಿಗೆದಾರರು ಭಾಗಿಯಾಗಲಿದ್ದಾರೆ ಎಂದು ತಿಳಿಸಿದರು.



ಹರಿಯಾಣ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ರಾವ್ ನರೇಂದ್ರ ಸಿಂಗ್ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೆಹಲಿಯಲ್ಲಿ ಭೇಟಿಯಾಗಿ ಚರ್ಚಿಸಿದರು. ಈ ವೇಳೆ ಹರಿಯಾಣ ಉಸ್ತುವಾರಿ ಬಿ.ಕೆ.ಹರಿಪ್ರಸಾದ್ ಇದ್ದರು.

ಪೇ ಆ್ಯಂಡ್ ಪಾರ್ಕ್ ಜಾರಿಗೆ ಸೂಚನೆ

ಬೆಂಗಳೂರು: ನಗರದ ಹೊರ ವರ್ತುಲ ರಸ್ತೆಯಲ್ಲಿ ನಿರಂತರವಾಗಿ ಉಂಟಾಗುತ್ತಿರುವ ಸಂಚಾರ ದಟ್ಟಣೆ ಸಮಸ್ಯೆ ನಿವಾರಿಸಲು, ಬೆಂಗಳೂರು ಸಂಚಾರ ಪೊಲೀಸರು ಟೆಕ್‌ಪಾರ್ಕ್‌ಗಳು ಮತ್ತು ಖಾಸಗಿ ಕಂಪನಿಗಳಿಗೆ ತಮ್ಮ ಆವರಣದಲ್ಲಿ 'ಪೇ ಅಂಡ್ ಪಾರ್ಕ್' (ಶುಲ್ಕ ಪಾವತಿಸಿ ಪಾರ್ಕಿಂಗ್) ವ್ಯವಸ್ಥೆ ಜಾರಿಗೆ ತರಲು ಸೂಚಿಸಿದ್ದಾರೆ.

ಈ ಯೋಜನೆ ಕಾರ್ಯರೂಪಕ್ಕೆ ತರಲು ಶ್ರಮಿಸುತ್ತಿರುವ ಪೊಲೀಸ್ ಅಧಿಕಾರಿಗಳ ಪ್ರಕಾರ, ಉದ್ಯೋಗಿಗಳು ತಮ್ಮ ವೈಯಕ್ತಿಕ ವಾಹನಗಳನ್ನು ಬಳಸುವುದನ್ನು ನಿರುತ್ಸಾಹಗೊಳಿಸಿದರೆ, ಟೆಕ್ ಕಾರಿಡಾರ್‌ನಲ್ಲಿನ ಸಂಚಾರ ದಟ್ಟಣೆಯನ್ನು ಶೇಕಡಾ 30ರಷ್ಟು ಕಡಿಮೆ ಮಾಡಬಹುದು. ಬೆಳಗ್ಗೆಯ ಸಮಯದಲ್ಲಿ ಹೊರ ವರ್ತುಲ ರಸ್ತೆಯಲ್ಲಿ ಒಬ್ಬರೇ ಕಾರು ಚಲಾಯಿಸಿಕೊಂಡು ಹೋಗುವವರ ಸಂಖ್ಯೆ ಹೆಚ್ಚಾಗಿರುತ್ತದೆ. ಇದನ್ನು ಕಡಿಮೆ ಮಾಡಲು, ಪ್ರಾಯೋಗಿಕವಾಗಿ ಪಾರ್ಕಿಂಗ್ ಶುಲ್ಕ ವಿಧಿಸುವ ಆಲೋಚನೆಯನ್ನು ನಾವು ಮುಂದಿಟ್ಟಿದ್ದೇವೆ. ಇದರಿಂದ ಕೆಲವರಾದರೂ ಸಾರ್ವಜನಿಕ ಸಾರಿಗೆಯನ್ನು ಬಳಸಬಹುದು, ಎಂದು ಹೇಳಿದ್ದಾರೆ. ಅಲ್ಲದೆ, ಒಂದೇ ಪ್ರದೇಶದಲ್ಲಿ ವಾಸಿಸುವ ನಾಲ್ಕೈದು ಉದ್ಯೋಗಿಗಳು ಒಟ್ಟಾಗಿ 'ಕಾರ್‌ಪೂಲಿಂಗ್' ಮಾಡಿಕೊಳ್ಳಬಹುದು.

ಆದಿಪುರಾಣ ಕೇವಲ ಜೈನ ಮತೀಯರದಲ್ಲ

ಜಯನಗರದಲ್ಲಿನ ಶ್ರೀಚಕ್ರೇಶ್ವರಿ ಮಹಿಳಾ ಸಮಾಜದ ಸಭಾಂಗಣದಲ್ಲಿ ಜೈನ ಸಾಹಿತ್ಯ ಸಿರಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಬೆಂಗಳೂರು: ಆದಿಪುರಾಣ ಕೇವಲ ಜೈನ ಮತೀಯರದಲ್ಲ. ಅದು ಎಲ್ಲರಿಗೂ ಪ್ರಿಯವಾಗುವ ಕಾವ್ಯವಾಗುವಂತೆ ಆದಿಕವಿ ಪಂಪ ರಚಿಸಿದ್ದಾನೆ ಎಂದು ಬಿ.ಎಂ ಶ್ರೀ.ಪ್ರತಿಷ್ಠಾನದ ಅಧ್ಯಕ್ಷ ಡಾ. ಆರ್.ಲಕ್ಷ್ಮಿನಾರಾಯಣ ತಿಳಿಸಿದರು.

ಜಯನಗರದಲ್ಲಿನ ಶ್ರೀಚಕ್ರೇಶ್ವರಿ ಮಹಿಳಾ ಸಮಾಜದ ಸಭಾಂಗಣದಲ್ಲಿ ಆಯೋಜಿಸಿದ್ದ ಜೈನ ಸಾಹಿತ್ಯ ಸಿರಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭೋಗ ಮತ್ತು ಅಹಂಕಾರವನ್ನು ನೀಗಿಕೊಂಡು ಜೀವನವನ್ನು ಸಾರ್ಥಕ ಮಾಡಿಕೊಳ್ಳಬೇಕು ಎಂಬುದೇ ಆದಿಪುರಾಣದ ವಿಶೇಷತೆ. ಆದಿಪುರಾಣದ ಅನನ್ಯತೆ ಏನೆಂದರೆ ಭೋಗ ಕಾಲಘಟ್ಟದಲ್ಲಿರುವ ನಾವು ಇಂದು ಕೇವಲ ಸಂಪತ್ತು? ಹಣವೊಂದೇ ಜೀವನದ ಗುರಿಯಾಗಿ ಮಾಡಿಕೊಂಡು ಅದನ್ನೇ ನಂಬಿ ಬದುಕುತ್ತಿದ್ದೇವೆ. ಆದರೆ ಅದು ಶಾಶ್ವತವಲ್ಲ ಎಂಬುದನ್ನು ನೀಲಾಂಜನೆ ನರ್ತನ ಹಾಗೂ ಬಾಹುಬಲಿ ಭರತರ ಯುದ್ಧ ತಿಳಿಸಿಕೊಡುತ್ತದೆ ಅದನ್ನು ಎಲ್ಲರು ಅರಿಯಬೇಕು ಎಂದರು.

ಕಾರ್ಯಕ್ರಮದಲ್ಲಿ ವಿಲಾಸ ಪಾಸಣ್ಣನವರ್, ನಾಗಶ್ರೀ ಮುಪ್ಪಾನೆ , ಮಮತಾ ಕಾಂತರಾಜ್, ಡಾ.ಪದ್ಮಿನಿ ನಾಗರಾಜ ಉಪಸ್ಥಿತರಿದ್ದರು.

ಫ್ಲೆಕ್ಸ್, ಬ್ಯಾನರ್ ಅಳವಡಿಕೆಗೆ ಪಾಲಿಕೆ ಅನುಮತಿ ಕಡ್ಡಾಯ

ಜಾಹೀರಾತು ಪ್ರದರ್ಶನಕ್ಕೆ ಮತ್ತೆ ಅವಕಾಶ

ಬೆಂಗಳೂರು: ಹೊಸ ಜಾಹೀರಾತು ನೀತಿಯೊಂದಿಗೆ ನಗರದಲ್ಲಿ ಮತ್ತೆ ಜಾಹೀರಾತು ಪ್ರದರ್ಶನಕ್ಕೆ ಜಿಬಿಎ ಅವಕಾಶ ಮಾಡಿಕೊಟ್ಟಿದ್ದು, ಸಾರ್ವಜನಿಕ ಸ್ಥಳ, ರಸ್ತೆಗಳಲ್ಲಿ ಪ್ರದರ್ಶನಕ್ಕೆ ಅವಕಾಶ ನೀಡಲು ಮುಂದಾಗಿದೆ.

ಸತತ ಏಳು ವರ್ಷಗಳ ನಂತರ ನಗರದಲ್ಲಿ ಜಾಹೀರಾತು ಪ್ರದರ್ಶನಕ್ಕೆ ಅವಕಾಶ ಕಲ್ಪಿಸಲಾಗುತ್ತಿದ್ದು, 2018ರಲ್ಲಿ ಜಾಹೀರಾತು ಪ್ರದರ್ಶನಕ್ಕೆ ತಡೆ ಹಾಕಲಾಗಿತ್ತು. ಇದೀಗ ಜಾಹೀರಾತು ನೀತಿಯಲ್ಲಿ ಒಂದಿಷ್ಟು ಬದಲಾವಣೆಯನ್ನು ಮಾಡಿ ಅಧಿಸೂಚನೆ ಪ್ರಕಟ ಮಾಡಲಾಗಿದೆ. ಕಳೆದ 7 ವರ್ಷಗಳಿಂದ ಮಹಾನಗದಲ್ಲಿ ಜಾಹೀರಾತು ಪ್ರದರ್ಶನವನ್ನು ಸ್ಥಗಿತಗೊಳಿಸಲಾಗಿತ್ತು. ಇಷ್ಟು ದಿನ ಯಾವುದೇ ಮಾನದಂಡ ಇಲ್ಲದೆ ಜಾಹೀರಾತು ಅಳವಡಿಸಲಾಗುತ್ತಿತ್ತು. ಇದೀಗ ಒಂದಷ್ಟು ನಿಯಮಗಳ ಮೂಲಕ ಜಾಹೀರಾತು ಪ್ರದರ್ಶನಕ್ಕೆ ಅವಕಾಶ ಕಲ್ಪಿಸಿಕೊಡಲಾಗುತ್ತಿದೆ.

ಪ್ರಸ್ತುತ ಜಾರಿಗೆ ತಂದಿರುವ ಕರಡಿನಲ್ಲಿ ಜಾಹೀರಾತು ಪ್ರದರ್ಶನಕ್ಕೆ ಎಲ್ಲೆಲ್ಲಿ ಎಷ್ಟೆಷ್ಟು ದರ ಎಂದೂ ನಿಗದಿ ಮಾಡಲಾಗಿದ್ದು, ನಿಗದಿತ ಅಳತೆಯಲ್ಲೇ, ನಿಗದಿತ ಸ್ಥಳದಲ್ಲಿ ಜಾಹೀರಾತು ಅಳವಡಿಸಬೇಕು. ವಿಸ್ತೀರ್ಣದ ಆಧಾರದ ಮೇಲೆ ದರ ನಿಗದಿ ಮಾಡಲಾಗಿದೆ. ಹೊಸ ಜಾಹೀರಾತು ನೀತಿಯಂತೆ ಮೆಟ್ರೋ ಜಾಗದಲ್ಲಿ ಜಾಹೀರಾತು ಹಾಕಿದರೂ ಜಿಬಿಎಗೆ ಶುಲ್ಕ ಪಾವತಿಸುವುದನ್ನು ಕಡ್ಡಾಯ ಮಾಡಲಾಗಿದೆ. ಇಷ್ಟು ದಿನ ಮೆಟ್ರೋ ಜಾಗದಲ್ಲಿ ಆಳವಡಿಸುವ ಜಾಹೀರಾತಿಗೆ ಶುಲ್ಕ ಪಾವತಿ ಮಾಡುತ್ತಿರಲಿಲ್ಲ, ಜಿಬಿಎ ವ್ಯಾಪ್ತಿಯಲ್ಲಿ ಯಾವುದೇ ಜಾಹೀರಾತು ಅಳವಡಿಸಿದರೂ ಜಿಬಿಎಗೆ ಹಣ ಪಾವತಿಸಬೇಕಾಗುತ್ತದೆ. ನಗರದ ಕೆಲವೊಂದು ಪ್ರದೇಶಗಳಲ್ಲಿ ಜಾಹೀರಾತು ಅಳವಡಿಕೆಯನ್ನು ನಿಷೇಧಿಸಲಾಗಿದೆ. ಯಾವುದೇ ಪ್ರದೇಶದಲ್ಲಿ ಫ್ಲೆಕ್ಸ್, ಬ್ಯಾನರ್ ಅಳವಡಿಸಬೇಕಾದರೂ ಪಾಲಿಕೆ ಅನುಮತಿಯನ್ನು ಕಡ್ಡಾಯಗೊಳಿಸಲಾಗಿದೆ. ಅನುಮತಿ ಇಲ್ಲದೆ ಜಾಹೀರಾತು ಪ್ರದರ್ಶನ ಮಾಡಿದರೆ ದಂಡ ಹಾಕುವ ಎಚ್ಚರಿಕೆ ನೀಡಲಾಗಿದೆ.

ನಗರದ ವಿಂಡ್ಸರ್ ಮ್ಯಾನರ್ ಜಂಕ್ಷನ್ ಟು ಶಿವಾನಂದ ವೃತ್ತ, ಹೈಗೌಂಡ್ಸ್ ನಿಂದ ಮಿನ್ಸ್ ಚೌಕಾ, ರಾಜಭವನ ರಸ್ತೆ, ಹೈಗೌಂಡ್ಸ್ ನಿಂದ ವಿಂಡರ್ ಹಿಲ್ಡ್ ಸಿಗ್ನಲ್ ವರೆಗಿನ ಸ್ಯಾಂಕಿ ರಸ್ತೆ, ಕೆ.ಆರ್. ವೃತ್ತದಿಂದ ಇನ್ ಫೆಂಟ್ರಿ ರಸ್ತೆ ಜಂಕ್ಷನ್, ಅಂಬೇಡ್ಕರ್ ವೀದಿ ವೃತ್ತದಿಂದ ಮೈಸೂರು ಬ್ಯಾಂಕ್ ವೃತ್ತ, ಚಾಲುಕ್ಯ ಸರ್ಕಲ್ ನಿಂದ ಮಹಾರಾಣಿ ಕಾಲೇಜು ರಸ್ತೆ, ಕೆ.ಆರ್. ವೃತ್ತ ದಿಂದ ಪಾರ್ಕ್ ಮತ್ತು ಲಾಲ್ ಬಾಗ್, ಕೆ.ಆರ್.ವೃತ್ತದಿಂದ ಪೊಲೀಸ್ ಕಾರ್ನರ್ ಜಂಕ್ಷನ್ ವರೆಗಿನ ನೃಪತುಂಗ ರಸ್ತೆ, ಮೈಸೂರು ಬ್ಯಾಂಕ್ ವೃತ್ತದಿಂದ ಚಾಲುಕ್ಯ ವೃತ್ತದ ವರೆಗಿನ ಅರಮನೆ ರಸ್ತೆಗಳಲ್ಲಿ ಜಾಹೀರಾತು ಫಲಕ ಅಳವಡಿಸುವುದನ್ನು ನಿಷೇಧಿಸಲಾಗಿದೆ.

ಮೀನಾ ಬಜಾರ್ ಮಾರಾಟ, ಪ್ರದರ್ಶನ ಮೇಳ ಆರಂಭ

ಬೆಂಗಳೂರು: ಕಲೆ, ಕರಕುಶಲ, ಕೈಮಗ್ಗ, ಜೀವನ ಶೈಲಿ ವಸ್ತುಗಳ ಪ್ರದರ್ಶನ ಹಾಗೂ ಮಾರಾಟಕ್ಕೆ ಹೆಸರಾದ ಮೀನಾ ಬಜಾರ್ ಮೇಳ ಕರ್ನಾಟಕ ಚಿತ್ರಕಲಾ ಪರಿಷತ್ ಆರಂಭವಾಗಿದ್ದು, ನವೆಂಬರ್ 30ರವರೆಗೆ ನಡೆಯಲಿದೆ.

ಕಾರ್ತಿಕ ಮಾಸದ ಸಮಯದಲ್ಲಿ ಆರಂಭವಾಗಿರುವ ಈ ಪ್ರದರ್ಶನಕ್ಕೆ ವಿಡಿಯೊ ಕಂಟೆಂಟ್ ಕ್ರಿಯೇಟರ್ ಸಂತೋಷಿ ಮೇಘರಾಜ್ ಶುಕ್ರವಾರ ಚಾಲನೆ ನೀಡಿದರು. ಒಂದೇ ಸೂರಿನಡಿ ಗೃಹ ಅಲಂಕಾರ ವಸ್ತುಗಳು, ವಿವಿಧ ರಾಜ್ಯಗಳ ಸಾಂಪ್ರದಾಯಿಕ ಶೈಲಿಯ ಉಡುಗೆ – ತೊಡುಗೆಗಳು ಕಾಣಬಹುದಾಗಿದೆ. ಗೃಹ ಅಲಂಕಾರಕ್ಕೆ ಬೇಕಾದಂತಹ ವಿವಿಧ ಬಗೆಯ ವಿದ್ಯುತ್ ದೀಪ, ಕರ್ಟನ್, ಪೀಠೋಪಕರಣ, ಪುರಾತನ ವಿಗ್ರಹಗಳು, ದೇವರ ಮೂರ್ತಿಗಳು ಹೀಗೆ ಹತ್ತು ಹಲವು ವಸ್ತುಗಳು ಸಿಕ್ಕರೆ, ಇನ್ನೂ ಮನಮುಟ್ಟುವ ರಾಜಸ್ಥಾನಿ ಶೈಲಿಯ ಉಡುಗೆಗಳು, ಕಿವಿಯೋಲೆ, ಕರಕುಶಲ ವಸ್ತುಗಳು ಜನರ ಮನ ಸೆಳೆಯಲಿವೆ.

ಡಬಲ್ ಡೆಕ್ಕರ್ ಫ್ಲೈಓವರ್ 2030ಕ್ಕೆ ಪೂರ್ಣ

ಬೆಂಗಳೂರು: ಮೆಟ್ರೋ ಮಾರ್ಗದ ವಿಸ್ತರಣೆ ಜತೆಗೆ ಮೆಟ್ರೋ ಮಾರ್ಗ ದಲ್ಲಿ ಡಬಲ್ ಡೆಕ್ಕರ್ ಮೇಲ್ಸೇತುವೆ ನಿರ್ಮಾಣಕ್ಕೆ ರಾಜ್ಯ ಸರಕಾರ ಮುಂದಾಗಿದ್ದು, ಈ ಮಾರ್ಗ 2030ಕ್ಕೆ ಪೂರ್ಣಗೊಳ್ಳಲಿದೆ ಎಂದು ಮೂಲಗಳು ತಿಳಿಸಿದೆ.

ರಾಗಿಗುಡ್ಡದಿಂದ ಸಿಲ್ಕ್ ಬೋರ್ಡ್‌ವರೆಗಿನ ಅತೀ ಉದ್ದದ ಡಬಲ್ ಡೆಕ್ಕರ್ ಫ್ಲೈ ಓವರ್ ಇದಾಗಿದ್ದು, ಮೇಲ್ಸೇತುವೆಯ ಉದ್ದಕ್ಕೂ ಉದ್ದಕ್ಕೂ ಒಟ್ಟು ಐದು ಸ್ಥಳಗಳಲ್ಲಿ ಪ್ರವೇಶ ಮತ್ತು ನಿರ್ಗಮನ ಇಳಿಜಾರು ವ್ಯವಸ್ಥೆ ಹೊಂದಿರುತ್ತದೆ. ಸ್ಥಳೀಯ ಸಂಚಾರ ಅನುಕೂಲವಾಗುವಂತೆ ಯೋಜನೆ ರೂಪಿಸಲಾಗಿದ್ದು, ಒಂಬತ್ತು ಸ್ಥಳಗಳಲ್ಲಿ ಡೌನ್ ರಾಂಪ್ ಬರಲಿವೆ. ಮೆಟ್ರೋ ಮಾರ್ಗದೊಂದಿಗೆ ಬಿಎಂಆರ್ ಸಿಎಲ್ ಒಟ್ಟು 37.121 ಕಿ.ಮೀ ಉದ್ದ ನಿರ್ಮಿಸಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ನಮ್ಮ ಮೆಟ್ರೋ ಮೂರನೇ ಹಂತದಡಿ ಸದ್ಯ ಎರಡು ಕಾರಿಡಾರ್ ನಿರ್ಮಾಣವಾಗಲಿದ್ದು, ಜೆಪಿ ನಗರದ 4ನೇ ಹಂತ – ಕೆಂಪಾಪುರ ಹೊರ ವರ್ತುಲ ರಸ್ತೆಯ ಪಶ್ಚಿಮದವರೆಗೆ ಒಂದು ಮೆಟ್ರೋ ಕಾರಿಡಾರ್ ನಿರ್ಮಾಣಗೊಳ್ಳಲಿದೆ. ಡೆಲ್ಮಿಯಾ ವೃತ್ತದಿಂದ ಹೆಬ್ಬಾಳ ತನಕ 28.486 ಕಿ.ಮೀ ಡಬಲ್ ಡೆಕ್ಕರ್ ಮಾರ್ಗ ಹೊಂದಿರಲಿದ್ದು, ಬೆಂಗಳೂರಿನ ಅತಿ ಉದ್ದದ ಮೇಲ್ಸೇತುವೆ ಆಗಲಿದೆ.

ವಿವಿಧೆಡೆ ಡೌನ್ ರ್‍ಯಾಂಪ್ ನಿರ್ಮಾಣ: ಸಧ್ಯ ಇರುವ ಮೇಲ್ಸೇತುವೆಯನ್ನು ತೆಗೆದುಹಾಕಿ ಹೊಸದಾಗಿ ಪ್ರವೇಶ ಮತ್ತು ನಿರ್ಗಮನಕ್ಕಾಗಿ ಇಲ್ಲಿ 631 ಮೀಟರ್ ಡೌನ್‌ರಾಂಪ್ ನಿರ್ಮಾಣವನ್ನು ಯೋಜನೆಯಲ್ಲಿ ಉಲ್ಲೇಖಿಸಲಾಗಿದೆ. ಹೆಬ್ಬಾಳದಿಂದ ಮೇಲ್ಸೇತುವೆ ಮೂಲಕ ವಿಮಾನ ನಿಲ್ದಾಣದ ಕಡೆಗೆ ತೆರಳಲು ಅನುಕೂಲವಾಗುವಂತೆ ಡೌನ್‌ರಾಂಪ್ ನಿರ್ಮಿಸಲಾಗುತ್ತದೆ. ಇನ್ನು ಎರಡನೇ ಕಾರಿಡಾರ್ ಹೊಸಹಳ್ಳಿ– ಕಡಬಗೆರೆವರೆಗೆ ಮಾಗಡಿ ರಸ್ತೆ ಉದ್ದಕ್ಕೂ ನಿರ್ಮಿಸಲು ಯೋಜಿಸಲಾಗಿದೆ. ಇದರಲ್ಲಿ ಕೆಎಚ್‌ಬಿ ಕಾಲೋನಿಯಿಂದ ಕಡಬಗೆರೆವರೆಗಿನ 8.635 ಕಿಮೀ ಡಬಲ್–ಡೆಕ್ಕರ್ ತಲೆ ಎತ್ತಲಿದೆ. ಇಲ್ಲಿ ಬರುವ ಪ್ರಮುಖ ಪ್ರದೇಶಗಳಾದ ಕೆಎಚ್‌ಬಿ ಕಾಲೋನಿ, ಸುಂಕದಕಟ್ಟೆ ಮತ್ತು ಕಡಬಗೆರೆಗಳಲ್ಲಿ ಡೌನ್ ರಾಂಪ್ ನಿರ್ಮಿಸಲಾಗುತ್ತದೆ. ಸುಂಕದಕಟ್ಟೆಯಲ್ಲಿ, ಡಿಪೋದ ಎರಡೂ ಬದಿಗಳಲ್ಲಿ ಇಳಿಜಾರುಗಳು ವಯಾಡಕ್ಟ್ ಎತ್ತರವನ್ನು ಕಡಿಮೆ ಮಾಡಿ ಸ್ಥಳೀಯರ ಸಂಚಾರಕ್ಕೆ ಅವಕಾಶ ಒದಗಿಸುವುದು ಯೋಜನೆಯ ಮತ್ತೊಂದು ಉದ್ದೇಶವಾಗಿದೆ.

ವೇದದ ಸಾರ ತಿಳಿಸಿದವರು ಬೇಂದ್ರೆ

ಬೆಂಗಳೂರು: ವೇದಗಳಲ್ಲಿ ಅಡಗಿರುವ ಆಳವಾದ ಅರ್ಥವನ್ನು ಅತ್ಯಂತ ಸರಳವಾಗಿ, ಕನ್ನಡದಲ್ಲಿ ಕಟ್ಟಿಕೊಟ್ಟ ದ.ರಾ. ಬೇಂದ್ರೆ ವಿಶ್ವಮಟ್ಟದ ಕವಿ ಎಂದು ಕಾದಂಬರಿಕಾರ ಡಾ.ಜಿ.ಬಿ.ಹರೀಶ ತಿಳಿಸಿದರು.

ನಗರದ ವಿದ್ಯಾರಣ್ಯಪುರದ ಎಂ.ಇ.ಎಸ್. ಕಾಲೇಜಿನಲ್ಲಿ ನ.15 ರಂದು ಆಯೋಜಿಸಿದ ನಾಕುತಂತಿ ಷಷ್ಟಿಪೂರ್ತಿ 'ನಾದ–10' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ದ.ರಾ. ಬೇಂದ್ರೆಯವರಂಥವರು ಕರ್ನಾಟಕದಲ್ಲಿ ಅಷ್ಟೇ ಅಲ್ಲ, ವಿಶ್ವದಲ್ಲೇ ಸಾವಿರಾರು ವರ್ಷಗಳಿಗೊಮ್ಮೆ ಜನಿಸುವಂಥವರು. ಅತ್ಯಂತ ಚಿಕ್ಕಚಿಕ್ಕ ಸಾಲುಗಳಲ್ಲಿ ನಾಗರಿಕತೆಯ ಉಗಮದಿಂದ ಪ್ರಸ್ತುತ ಜಗತ್ತಿನವರೆಗೆ ಎಲ್ಲ ವಿಚಾರಗಳನ್ನೂ ಬೇಂದ್ರೆ ಸಾಹಿತ್ಯದ ಮೂಲದ ಹಂಚಿದ್ದಾರೆ ಎಂದರು.

ಶೃತಿಗಳಿಗೆ ಕಿವಿಗೊಡದೆ, ಮಂತ್ರಗಳಿಂದ ದೂರವಾಗುತ್ತಿರುವ ಈ ಮಹಾನ್ ನಾಗರಿಕತೆಯು ಶಾಂತಿಯ ಹುಡುಕಾಟದಲ್ಲಿದೆ ಎಂದು ಬೇಂದ್ರೆ ಬೇಸರ ವ್ಯಕ್ತಪಡಿಸಿದ್ದಾರೆ. ಕನ್ನಡದಲ್ಲಿ ಅತಿ ಹೆಚ್ಚು ಭಜನಾ ಪದ್ಯಗಳನ್ನು ಬೇಂದ್ರೆ ಬರೆದಿದ್ದಾರೆ. ಶ್ರಾವಣದಿಂದ ಚೈತ್ರದವರೆಗೆ, ಪಶ್ಚಿಮದಿಂದ ಪೂರ್ವದವರೆಗೆ, ಸೂರ್ಯನಿಂದ ಚಂದ್ರನವರೆಗೆ ಅವರ ಕಾವ್ಯಸುಧೆ ಹರಿದಿದೆ. ವೇದಗಳ ಸಾರವನ್ನು ಅತ್ಯಂತ ಸರಳವಾಗಿ ಎಲ್ಲರಿಗೂ ತಿಳಿಸಿದವರು ಅವರು ಎಂದು ತಿಳಸಿದರು.

ಇಂದು ಕಾವ್ಯ ವಾಚನವೇ ಕಡಿಮೆ ಆಗುತ್ತಿರುವ ಸಂದರ್ಭದಲ್ಲಿ ಪಿಯುಸಿ ವಿದ್ಯಾರ್ಥಿಗಳು ಬೇಂದ್ರೆಯವರ ನಾಕುತಂತಿ ಕವನಸಂಕಲನದ ಕವನಗಳನ್ನು ಅಚ್ಚುಕಟ್ಟಾಗಿ ವಾಚನ ಮಾಡಿದ್ದು ಸಂತೋಷದ ಸಂಗತಿ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಅಭಾಸಾಪ ಕರ್ನಾಟಕ ಸಹ ಖಜಾಂಚಿ ಭ.ರಾ. ವಿಜಯಕುಮಾರ್ ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಬಿಹಾರ ಫಲಿತಾಂಶ ಕಾಂಗ್ರೆಸ್‌ಗೆ ಪಾಠ

ದಾವಣಗೆರೆ: ಸಿದ್ದರಾಮಯ್ಯನವರು ಗಟ್ಟಿಯಾಗಿದ್ದಾರೆ. ಸಿಎಂ ಬದಲಾವಣೆ ಮಾತೇ ಇಲ್ಲ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದ್ದಾರೆ. ಹರಿಹರ ತಾಲೂಕಿನ ರಾಜನಹಳ್ಳಿ ವಾಲ್ಮೀಕಿ ಮಠದ ಆವರಣದಲ್ಲಿ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆಗೂ ಮುನ್ನ ಮಾತನಾಡಿದ ಅವರು, ಬಿಹಾರ ಚುನಾವಣೆ ಫಲಿತಾಂಶ ಕಾಂಗ್ರೆಸ್ ಪಕ್ಷಕ್ಕೆ ಒಂದು ದೊಡ್ಡ ಪಾಠ. ಸೋಲಿಗೆ ಎಲ್ಲೆಲ್ಲಿ ಲೋಪದೋಷ ಆಗಿದೆ ಎನ್ನುವುದರ ಬಗ್ಗೆ ನಾವು ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ. ಬಿಹಾರ ರಾಜ್ಯದಲ್ಲಿ ನಡೆದಿದೆ ಎನ್ನಲಾದ ವೋಟ್ ಚೋರಿ ಬಗ್ಗೆ ಮೊದಲಿಂದಲೂ ಆರೋಪ ಕೇಳಿ ಬರುತ್ತಿದೆ. ಅದಕ್ಕೆ ಚುನಾವಣಾ ಆಯೋಗ ಉತ್ತರ ಕೊಡಬೇಕಿದೆ ಎಂದರು. ಕಾಂಗ್ರೆಸ್‌ನವರು ಏನು ಆರೋಪ ಮಾಡಿದ್ದಾರೋ ಅದಕ್ಕೆ ಅವರು ಉತ್ತರ ಕೊಡಬೇಕಿದೆ. ಬಿಹಾರದ ಜನತೆಯ ಮನಸ್ಥಿತಿ ಇಲ್ಲಿಯ ಜನರ ಮನಸ್ಥಿತಿ ಬೇರೆ ಬೇರೆ. ಕರ್ನಾಟಕದಲ್ಲಿ ಅಹಿಂದಕ್ಕೆ ಹೆಚ್ಚು ಮಹತ್ವ ಇದೆ. ಬಿಹಾರದಲ್ಲಿ ಎಲ್ಲರನ್ನೂ ಒಗ್ಗೂಡಿಸಲು ಸಾಧ್ಯವಿಲ್ಲ. ಕರ್ನಾಟಕದಲ್ಲಿ ಎಲ್ಲ ಅಹಿಂದ ವರ್ಗವನ್ನು ಒಗ್ಗೂಡಿಸಲು ಸಾಧ್ಯವಿದೆ. ಬಿಹಾರ ಚುನಾವಣೆ ಫಲಿತಾಂಶ ಗೆದ್ದರೂ ಚರ್ಚೆಯಾಗಬೇಕು, ಸೋತರೂ ಚರ್ಚೆಯಾಗಬೇಕು ಎಂದರು. ರಾಜ್ಯದ ಎಲ್ಲ ಕಡೆ ಸಂಚಾರ ಮಾಡಲು ಹೆಲಿಕಾಪ್ಟರ್ ಬದಲಾವಣೆ ಮಾಡಲಾಗಿದೆ. ಚುನಾವಣಾ ದೃಷ್ಟಿಯಿಂದ ಹೆಲಿಕಾಪ್ಟರ್ ಬದಲಾಯಿಸಲಾಗಿದೆ. ಇದರಲ್ಲಿ ಏನೂ ವಿಶೇಷತೆ ಇಲ್ಲ ಎಂದು ತಿಳಿಸಿದರು.

ಪುಸ್ತಕಗಳಲ್ಲಿ ಕಾನೂನು ಇದ್ದರೆ ಸಾಲದು, ಪದ್ಧತಿಯ ನಿರ್ಮೂಲನೆಗೆ ಪ್ರತಿಜ್ಞೆ ಮಾಡಬೇಕಿದೆ: ನ್ಯಾ.ವಿಭು ಬಖ್ರು

ಅನಿಷ್ಟ ಪದ್ಧತಿಯ ನಿರ್ಮೂಲನೆಗೆ ಒಗ್ಗೂಡಿ

ರಾಯಚೂರು: ಸಂಘಟಿತ ಪ್ರಯತ್ನದಿಂದ ಮಾತ್ರ ದೇವದಾಸಿ ಆಚರಣೆಯಂತಹ ಅನಿಷ್ಟ ಪದ್ಧತಿಯನ್ನು ಬೇರು ಸಹಿತ ಕಿತ್ತೆಸೆಯಲು ಸಾಧ್ಯ ಎಂದು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಪ್ರಧಾನ ಪೋಷಕರೂ ಆದ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಅಭಿಪ್ರಾಯಪಟ್ಟರು.

ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ರಾಯಚೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ ಮತ್ತು ಜಿಲ್ಲಾ ವಕೀಲರ ಸಂಘದ ಆಶ್ರಯದಲ್ಲಿ ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಶನಿವಾರ ಆಯೋಜಿಸಿದ್ದ ಬೃಹತ್ ಆರೋಗ್ಯ ಶಿಬಿರ ಹಾಗೂ ಕಾನೂನು ಸಾಕ್ಷರತಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪೊಲೀಸ್ ಇಲಾಖೆ, ಸರಕಾರೇತರ ಸಾಮಾಜಿಕ ಸಂಘಟನೆಗಳು ಹಾಗೂ ಮಾಧ್ಯಮಗಳು ಅನಿಷ್ಟ ಪದ್ಧತಿಯ ನಿರ್ಮೂಲನೆಗೆ ಒಗ್ಗೂಡಿ ಕಾರ್ಯನಿರ್ವಹಿಸಬೇಕಾಗಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಈಗಾಗಲೇ ಮಾಜಿ ದೇವದಾಸಿಯರ ಸ್ಥಿತಿಗತಿ ಅರಿಯಲು ಸಮೀಕ್ಷೆ ನಡೆದಿದೆ. ಮಾನ್ವಿ, ಸಿಂಧನೂರ, ಮಸ್ಕಿ, ಸಿರವಾರ, ದೇವದುರ್ಗ, ಲಿಂಗಸುಗೂರು ಹಾಗೂ ರಾಯಚೂರು ತಾಲೂಕುಗಳಲ್ಲಿ 3433 ದೇವದಾಸಿಯರ ಕುಟುಂಬಗಳಿವೆ. ಪುಸ್ತಕಗಳಲ್ಲಿ ಕಾನೂನು ಇದ್ದರೆ ಸಾಲದು, ಪದ್ಧತಿಯ ನಿರ್ಮೂಲನೆಗೆ ಪ್ರತಿಜ್ಞೆ ಮಾಡಬೇಕಿದೆ ಎಂದು ಹೇಳಿದರು. ಹೈಕೋರ್ಟ್ ನ್ಯಾಯಮೂರ್ತಿ, ರಾಯಚೂರು ಜಿಲ್ಲೆಯ ಆಡಳಿತಾತ್ಮಕ ನ್ಯಾಯಾಧೀಶ ಎಂ.ಜಿ.ಶುಕುರೆ ಕಮಲ್ ಮಾತನಾಡಿ, ಹಿಂದಿನ ಕಾಲದಲ್ಲಿ ದೇವದಾಸಿ ಪದ್ಧತಿಯ ಉದ್ದೇಶ ಬೇರೆಯೇ ಇತ್ತು. ಮಹಿಳೆಯರು ದೇವತೆಗಳಿಗೆ ಅಲಂಕರಿಸಿ ಪೂಜೆ ಸಲ್ಲಿಸುವುದಾಗಿತ್ತು. ಕಾಲಾನಂತರದಲ್ಲಿ ಅದು ಬದಲಾಯಿತು. ಅನಿಷ್ಟ ಪದ್ಧತಿಯ ಸ್ವರೂಪ ಪಡೆಯಿತು. ಸಮಾಜಕ್ಕೆ ಕಸದಂತಾಗಿರುವ, ಅಮಾನವೀಯ ದೇವದಾಸಿ ಪದ್ಧತಿಯನ್ನು ಬೇರು ಸಹಿತ ಕಿತ್ತೊಗೆಯುವ ಸಂಕಲ್ಪದೊಂದಿಗೆ ನಾವೆಲ್ಲ ಮುನ್ನುಗ್ಗಬೇಕಿದೆ ಎಂದು ತಿಳಿಸಿದರು.

ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷರೂ ಆದ ಹೈಕೋರ್ಟ್ ನ್ಯಾಯಮೂರ್ತಿ ಅನು ಸಿವರಾಮನ್ ಮಾತನಾಡಿ, ದೇವದಾಸಿ ಪದ್ಧತಿ ನಿರ್ಮೂಲನೆಗೆ ರಾಜಕೀಯ ಇಚ್ಛಾಸಕ್ತಿಯೂ ಬೇಕು. ಸರಕಾರದಿಂದ ಪ್ರತ್ಯೇಕ ಅನುದಾನವೂ ಬೇಕು. ಕಾನೂನು ಸೇವಾ ಪ್ರಾಧಿಕಾರ ಸಾಧ್ಯವಿರುವ ಎಲ್ಲ ರೀತಿಯ ಸಹಕಾರ ಕೊಡಲಿದೆ. ಮಾಜಿ ದೇವದಾಸಿಯ ಸ್ಥಿತಿಗತಿ ಅರಿಯುವ ದಿಶೆಯಲ್ಲಿ ರಾಯಚೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಜಿಲ್ಲಾಡಳಿತ ಉತ್ತಮ ಕಾರ್ಯಕ್ರಮ ಆಯೋಜಿಸಿದೆ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಪ್ರಕಟಿಸಿದ 18 ಮಕ್ಕಳ ಹಕ್ಕುಗಳು ಕಿರು ಹೊತ್ತಿಗೆ ಹಾಗೂ ಪೊಲೀಸ್ ಇಲಾಖೆ ಪ್ರಕಟಿಸಿದ ಜಾಗೃತಿ ಕೈಪಿಡಿಯನ್ನು ಸಹ ಬಿಡುಗಡೆಗೊಳಿಸಲಾಯಿತು.

ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಕೆ.ಎಸ್.ಭರತ ಕುಮಾರ, ಜಿಲ್ಲಾಧಿಕಾರಿ ನಿತೀಶ್ ಕೆ., ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಎಚ್.ಶಶಿಧರ ಶೆಟ್ಟಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಪುಟ್ಟಮಾದಯ್ಯ, ವಕೀಲರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಮಲ್ಲಿಕಾರ್ಜುನ, ಹೆಚ್ಚುವರಿ ಜಿಲ್ಲಾಧಿಕಾರಿ ಶಿವಾನಂದ ಭಜಂತ್ರಿ, ಕೆಎಸ್‌ಎಲ್‌ಎಸ್‌ಎ ಉಪ ಕಾರ್ಯದರ್ಶಿ ಶ್ರೀಧರ ಎಂ. ಉಪಸ್ಥಿತರಿದ್ದರು.

ರಾಯಚೂರಿನಲ್ಲಿ ಆಯೋಜಿಸಿದ್ದ ಬೃಹತ್ ಆರೋಗ್ಯ ಶಿಬಿರ ಹಾಗೂ ಕಾನೂನು ಸಾಕ್ಷರತಾ ಕಾರ್ಯಕ್ರಮವನ್ನು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಹಾಗೂ ನ್ಯಾಯಮೂರ್ತಿ ಅನು ಸಿವರಾಮನ್ ಜಂಟಿಯಾಗಿ ದೀಪ ಬೆಳಗಿದರು.

> ಕರ್ನಾಟಕ, ಮಹಾರಾಷ್ಟ್ರ ಹಾಗೂ ತೆಲಂಗಾಣದಲ್ಲಿ ಇಂದಿಗೂ ದೇವದಾಸಿ ಪದ್ಧತಿ ಆಚರಣೆಯಲ್ಲಿ ರುವ ಕಾರಣ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಸಮೀಕ್ಷೆ ಆರಂಭಿಸಿದೆ. ಬಲಿಷ್ಠ ಕಾನೂನುಗಳು ಇದ್ದರೆ ಸಾಲದು, ಇದನ್ನು ಹೇಗೆ ಸಮರ್ಥ ರೀತಿಯಲ್ಲಿ ಅನುಷ್ಠಾನಗೊಳಿಸ ಲಾಗುತ್ತಿದೆ ಎನ್ನುವುದರ ಮೇಲೆ ನಿರ್ಮೂಲನೆಯ ಅವಧಿ ಅವಲಂಬಿಸಿದೆ.
> – ವಿಭು ಬಖ್ರು, ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ

> ದೇವಾಲಯಗಳಲ್ಲಿ ದೇವರ ಸೇವೆ ಮಾಡುವ ಕಾರ್ಯಕ್ಕೆ ದೇವದಾಸಿ ಪದ್ಧತಿ ಎಂದು ಕರೆದರು. ಆ ದೇವದಾಸಿಯರನ್ನು ಲೈಂಗಿಕತೆಗೆ ಬಳಸಿಕೊಳ್ಳುವ ಪರಂಪರೆ ಮುಂದುವರಿಯಿತು. ಇದು ಹಳ್ಳಿಹಳ್ಳಿಗೂ ವ್ಯಾಪಿಸಿತು. ಈ ಅನಿಷ್ಟ ಪದ್ಧತಿಯನ್ನು ತೊಲಗಿಸಲು ಸಂಘಟಿತ ಹೋರಾಟ ಮಾಡಿದ್ದೇವೆ. ನಿವಾಸ, ನಿವೇಶನ ಹಾಗೂ ಮಾಸಾಶನದ ಬೇಡಿಕೆಗಳನ್ನು ಸರಕಾರದ ಮುಂದಿಟ್ಟಿದ್ದೇವೆ.
> – ಮೋಕ್ಷಮ್ಮ, ಹೋರಾಟಗಾರ್ತಿ

ಮೃಗಾಲಯದಲ್ಲಿ 28 ಕೃಷ್ಣಮೃಗ ಸಾವು

ಬೆಳಗಾವಿ: ತಾಲೂಕಿನ ಭೂತರಾಮನಹಟ್ಟಿಯ ರಾಣಿ ಚನ್ನಮ್ಮ ಕಿರು ಮೃಗಾಲಯದಲ್ಲಿ 28 ಕೃಷ್ಣ ಮೃಗಗಳು ಮೃತಪಟ್ಟಿವೆ. ಗುರುವಾರ 8 ಕೃಷ್ಣಮೃಗ ಮೃತಪಟ್ಟಿದ್ದವು. ಶನಿವಾರ 20 ಪ್ರಾಣಿಗಳು ಮೃತಪಟ್ಟಿರುವುದು ಆತಂಕಕ್ಕೆ ಕಾರಣವಾಗಿದೆ. 'ನಮ್ಮಲ್ಲಿ 38 ಕೃಷ್ಣಮೃಗ ಇದ್ದವು. 4ರಿಂದ 6 ವರ್ಷ ವಯಸ್ಸಿನ ಪ್ರಾಣಿಗಳು ಯಾವುದೋ ಸೋಂಕಿನಿಂದ ಮೃತಪಟ್ಟಿರುವ ಶಂಕೆ ಇದ್ದು, ತನಿಖೆ ಮಾಡುತ್ತಿದ್ದೇವೆ. ಈಗಾಗಲೇ 28 ಕೃಷ್ಣ ಮೃಗಗಳ ಪೈಕಿ 25 ಕೃಷ್ಣ ಮೃಗಗಳ ಅಂತ್ಯಕ್ರಿಯೆ ಮಾಡಲಾಗಿದೆ. ಉಳಿದ 3 ಕೃಷ್ಣ ಮೃಗಗಳ ಮೃತ ದೇಹ ಪರೀಕ್ಷೆಗೆ ಪ್ರಯೋಗಾಲಯಕ್ಕೆ ಕಳಿಸಿಕೊಡಲಾಗಿದೆ ಎಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ನಾಗರಾಜ ಬಾಳೆಹೊಸೂರ ತಿಳಿಸಿದ್ದಾರೆ.

ತನಿಖೆಗೆ ಆದೇಶ: ಬೆಳಗಾವಿ ಭೂತರಾಮನಹಟ್ಟಿಯ ಕಿತ್ತೂರುರಾಣಿ ಚೆನ್ನಮ್ಮ ಕಿರು ಮೃಗಾಲಯದಲ್ಲಿ 19 ಜಿಂಕೆಗಳು ಅಸಹಜವಾಗಿ ಮೃತಪಟ್ಟಿರುವ ಬಗ್ಗೆ ತೀವ್ರ ಆತಂಕ ವ್ಯಕ್ತಪಡಿಸಿರುವ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ, ತನಿಖೆಗೆ ಆದೇಶ ನೀಡಿದ್ದಾರೆ. ಪ್ರಾಥಮಿಕ ವರದಿಗಳ ಪ್ರಕಾರ, ಈ ಜಿಂಕೆಗಳು ಸಾಂಕ್ರಾಮಿಕ ಕಾಯಿಲೆಯಿಂದ ಮೃತಪಟ್ಟಿರುವುದಾಗಿ ವರದಿಯಾಗಿದ್ದು, ಮೃಗಾಲಯದ ಬೇರೆ ಯಾವುದೇ ಪ್ರಾಣಿಗೆ ಸೋಂಕು ತಗುಲದಂತೆ ಎಲ್ಲ ಮುಂಜಾಗರೂಕತಾ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾರೆ. ಈ ಜಿಂಕೆಗಳು ಕಲುಷಿತ ನೀರು, ಆಹಾರ ಸೇವಿಸಿ ಕಾಯಿಲೆಗೆ ತುತ್ತಾಗಿ ಮೃತಪಟ್ಟಿವೆಯೇ ಅಥವಾ ಬೆಕ್ಕು ಇತ್ಯಾದಿ ಸಾಕು ಪ್ರಾಣಿಗಳಿಂದ ಈ ಕಾಯಿಲೆ ಹರಡಿದೆಯೇ ಎಂಬ ಬಗ್ಗೆ ಒಂದು ತಜ್ಞರ ಸಮಿತಿ ರಚಿಸಿ ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಿದ್ದಾರೆ. ಮೃಗಾಲಯದಲ್ಲಿರುವ ಪ್ರಾಣಿಗಳು ಈ ರೀತಿ ಸಾವಿಗೀಡಾಗುವುದು ಆತಂಕದ ವಿಚಾರವಾಗಿದ್ದು, ಇನ್ನು ಮುಂದೆ ಇಂತಹ ಘಟನೆಗಳು ಮರುಕಳಿಸದಂತೆ ಮತ್ತು ಸಿಬ್ಬಂದಿಯ ನಿರ್ಲಕ್ಷ್ಯವಿದ್ದಲ್ಲಿ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳುವಂತೆಯೂ ಈಶ್ವರ ಖಂಡ್ರೆ ಆದೇಶ ನೀಡಿದ್ದಾರೆ.

ಶ್ರೀನಗರದಲ್ಲಿ ಭೀಕರ ಸ್ಫೋಟ: ಒಂಬತ್ತು ಬಲಿ

← ಮೊದಲಪುಟದಿಂದ ಪೊಲೀಸರ

ಸ್ಪಷ್ಟನೆಯೇನು?: ಶ್ರೀನಗರ ಸ್ಫೋಟದಲ್ಲಿ ಪಾಕ್ ಉಗ್ರರ ಕೈವಾಡವಿದೆ ಎನ್ನುವುದು ಸುಳ್ಳುಸುದ್ದಿ, ಆಧಾರರಹಿತ, ಅಷ್ಟೇ ದುರುದ್ದೇಶದಿಂದ ಕೂಡಿದೆ ಎಂದು ಪೊಲೀಸರು ಹೇಳಿದ್ದಾರೆ. ಅಮೋನಿಯಂ ನೈಟ್ರೇಟ್ ಅನ್ನು ಸಂಗ್ರಹಿಸಿಡುವುದು ಸೂಕ್ಷ್ಮ, ಸಮಸ್ಯಾತ್ಮಕ ಸಂಗತಿ. ಅದನ್ನು ನೌಗಾಮ್ ಪೊಲೀಸ್ ಠಾಣೆಯ ತೆರೆದ ಪ್ರದೇಶದಲ್ಲಿ ಬಹಳ ಭದ್ರವಾಗಿ ಇಡಲಾಗಿತ್ತು. ಮಾದರಿ ಸಂಗ್ರಹ, ತಪಾಸಣೆಯನ್ನು ಬಹಳ ಎಚ್ಚರಿಕೆಯಿಂದ ಮಾಡಲಾಗುತ್ತಿತ್ತು. ದುರದೃಷ್ಟವಶಾತ್ ಆಕಸ್ಮಿಕವಾಗಿ ಸ್ಫೋಟ ಸಂಭವಿಸಿದೆ ಎಂದು ಪೊಲೀಸ್ ಅಧಿಕಾರಿ ಪ್ರಭಾತ್ ಹೇಳಿದ್ದಾರೆ.

ಬಿಹಾರ ಸೋಲಿಗೂ ಸಿಎಂ ದೆಹಲಿ ಭೇಟಿಗೂ ಸಂಬಂಧವಿಲ್ಲ

ಮಂಗಳೂರು: ಸಿಎಂ ಸಿದ್ದರಾಮಯ್ಯ ದೆಹಲಿ ಭೇಟಿ ಪೂರ್ವ ನಿಯೋಜಿತ. ಬಿಹಾರ ವಿಧಾನಸಭೆ ಚುನಾವಣೆ ಫಲಿತಾಂಶಕ್ಕೂ ಈ ಭೇಟಿಗೂ ಯಾವುದೇ ಸಂಬಂಧ ಇಲ್ಲ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಉತ್ತರ ಭಾರತ ಹಾಗೂ ದಕ್ಷಿಣ ಭಾರತದ ಚುನಾವಣೆಗಳಿಗೆ ವ್ಯತ್ಯಾಸವಿದೆ. ಉತ್ತರ ಭಾರತದಲ್ಲಿ ಬಿಜೆಪಿ ಹಿಂದುತ್ವದ ಹೆಸರಿನಲ್ಲಿ ವಿಭಜನೆ ಮಾಡಿ ಅದನ್ನು ಚುನಾವಣೆಗೆ ಬಳಸಿಕೊಳ್ಳುತ್ತದೆ. ಆದರೆ ದಕ್ಷಿಣ ಭಾರತದಲ್ಲಿ ಈ ವಿಭಜನೆ ನಡೆಯುದಿಲ್ಲ. ಕರ್ನಾಟಕದಲ್ಲೂ ಬಿಜೆಪಿಗೆ ಈ ವಿಚಾರ ಇಟ್ಟುಕೊಂಡು ಚುನಾವಣೆ ಗೆಲ್ಲಲು ಆಗಲಿಲ್ಲ. ಬಿಜೆಪಿ ಇಲ್ಲಿ ಯಾವತ್ತೂ ಗೆದ್ದಿಲ್ಲ. ಆದರೆ ಒಳ್ಳೆಯ ಫಲಿತಾಂಶ ಪಡೆದುಕೊಂಡಿದ್ದಾರೆ ಎಂದರು. ಚುನಾವಣೆ ಹತ್ತಿರವಿರುವಾಗ ದುಡ್ಡು ಕೊಟ್ಟು ನಮಗೆ ಓಟ್ ಹಾಕಿ ಅಂತಾರೆ. ಚುನಾವಣೆ ಆಯೋಗ ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಆರ್‌ಜೆಡಿ ಜನರಿಗೆ ನೀಡಿದ್ದು ಆಶ್ವಾಸನೆ. ಆದರೆ, ಎನ್‌ಡಿಎ ಆಮಿಷವೊಡ್ಡಿದೆ. ಸರಕಾರದ ದುಡ್ಡನ್ನು ಚುನಾವಣೆಗೆ ಬಳಸಿ ಜನರಿಗೆ ಆಮಿಷ ಒಡ್ಡಿದ್ದಾರೆ ಎಂದರು.

> ಉತ್ತರ ಭಾರತದಲ್ಲಿ ಬೇರೆ ಬೇರೆ ವಿಷಯಗಳ ಮೂಲಕ ಜನರ ದಾರಿ ತಪ್ಪಿಸಿದ ಕಾರಣ ಯಶಸ್ಸು ಸಿಕ್ಕಿರಬಹುದು. ಚುನಾವಣೆ ಸಮೀಪವಿರುವಾಗ ಮಹಿಳೆಯರ ಖಾತೆಗೆ 10 ಸಾವಿರ ರು. ಹಾಕಿದ್ದಾರೆ. ಈ ಬಗ್ಗೆ ಚುನಾವಣಾ ಆಯೋಗ ಕ್ರಮ ಕೈಗೊಳ್ಳದೆ ಹೋದರೆ ಮುಂದೆ ಎಲ್ಲ ಸರಕಾರಗಳು ಇದನ್ನು ಅನುಸರಿಸುತ್ತವೆ.
> – ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

ತಣಿಯದ ಸಂಪುಟ ಕುತೂಹಲ

← ಮೊದಲಪುಟದಿಂದ

ಆದರೆ ಸೋಮವಾರ ಮತ್ತೆ ದೆಹಲಿಗೆ ತೆರಳಲಿರುವ ಸಿದ್ದರಾಮಯ್ಯ ಅವರು ಪ್ರಧಾನಿ ನರೇಂದ್ರ ಮೋದಿ ಅವರ ಭೇಟಿಯ ಬಳಿಕ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಲಿದ್ದಾರೆ. ಈ ಭೇಟಿಯ ವೇಳೆ ರಾಜ್ಯ ಕಾಂಗ್ರೆಸ್‌ನಲ್ಲಿರುವ ಹಲವು ಗೊಂದಲಗಳಿಗೆ ಉತ್ತರ ಸಿಗುವ ನಿರೀಕ್ಷೆಯಿದೆ.

ಆಪ್ತರೊಂದಿಗೆ ಸಿಎಂ ಸಭೆ: ಈ ನಡುವೆ ರಾಹುಲ್ ಗಾಂಧಿ ಅವರನ್ನು ಭೇಟಿಯಾಗುವ ಮೊದಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಆಪ್ತರೊಂದಿಗೆ ದೆಹಲಿಯಲ್ಲಿಯೇ ಸಭೆ ನಡೆಸಿದ್ದು ಭಾರೀ ಕುತೂಹಲಕ್ಕೆ ಕಾರಣವಾಗಿದೆ. ಈ ಸಭೆಯಲ್ಲಿ ಹಿರಿಯ ಸಚಿವರಾದ ಕೆ.ಜೆ.ಜಾರ್ಜ್, ಎಚ್.ಸಿ.ಮಹದೇವಪ್ಪ, ಜಮೀರ್ ಅಹ್ಮದ್ ಸೇರಿದಂತೆ ಅಶೋಕ್ ಪಟ್ಟಣ್, ಪೊನ್ನಣ್ಣ ಸೇರಿದಂತೆ ಹಲವರು ಭಾಗವಹಿಸಿದ್ದರು. ಸಭೆಯಲ್ಲಿ ಮುಂದಿನ ರಾಜಕೀಯ ಹೆಜ್ಜೆಗೆ ಸಂಬಂಧಿಸಿದಂತೆ ಚರ್ಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಹತ್ಯೆ: ನಾಲ್ವರ ಬಂಧನ

ಯಾದಗಿರಿ: ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಅಂಜಲಿ ಮೇಲೆ ದಾಳಿ ನಡೆಸಿ ಹತ್ಯೆಗೈದ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರು ಸುಪಾರಿ ಹಂತಕರನ್ನು ಪೊಲೀಸರು ಬಂಧಿಸಿದ್ದಾರೆ.

ಯಲ್ಲಪ್ಪ, ಕಾಶಿನಾಥ, ದತ್ತಾತ್ರೇಯ ಮತ್ತು ಜಗದೀಶ್ ಬಂಧಿತರು. ಸ್ವಿಫ್ಟ್ ಕಾರಿನಲ್ಲಿ ಬಂದು ದಾಳಿ ನಡೆಸಿ ಮಹಾರಾಷ್ಟ್ರದ ಕಡೆಗೆ ಪರಾರಿಯಾಗುತ್ತಿದ್ದ ವೇಳೆ ಇವರನ್ನು ಯಾದಗಿರಿ ನಗರ ಪೊಲೀಸರು ವಿಜಯಪುರದಲ್ಲಿ ವಶಕ್ಕೆ ಪಡೆದುಕೊಂಡಿದ್ದಾರೆ. ಶಹಾಬಾದ್ ಮೂಲದ ವಿಜಯ್ ಹಾಗೂ ಶಂಕರ್ ಅವರು ಅಂಜಲಿ ಕೊಲೆಗೆ ಸುಪಾರಿ ನೀಡಿದ್ದಾರೆಂದು ಆರೋಪಿಗಳು ತನಿಖೆಯ ವೇಳೆ ಬಾಯಿಬಿಟ್ಟಿದ್ದಾರೆ. ಸುಪಾರಿ ನೀಡಿದ ಪ್ರಮುಖ ಆರೋಪಿಗಳಾದ ವಿಜಯ್ ಮತ್ತು ಶಂಕರ್ ಪರಾರಿಯಾಗಿದ್ದು, ಅವರ ಪತ್ತೆಗೆ ಪೊಲೀಸರು ಶೋಧ ಆರಂಭಿಸಿದ್ದಾರೆ.

ಸುಪಾರಿ ನೀಡಲು ಕಾರಣವೇನು?: 4 ವರ್ಷಗಳ ಹಿಂದೆ ಅಂಜಲಿಯ ಪತಿ ಗಿರೀಶ್ ಅವರನ್ನು ಸಹ ದುಷ್ಕರ್ಮಿಗಳಾದ ವಿಜಯ್ ಮತ್ತು ಶಂಕರ್ ಭೀಕರವಾಗಿ ಹತ್ಯೆಗೈದಿದ್ದರು. ಇದೇ ದ್ವೇಷದಿಂದ ಅಂಜಲಿ ಅವರು ಕಳೆದ ಸೆಪ್ಟೆಂಬರ್‌ನಲ್ಲಿ ಶಂಕರ್ ಮೇಲೆ ಹಲ್ಲೆ ನಡೆಸಿದ್ದಾರೆ ಎಂಬ ಶಂಕೆಯಿಂದ ಪ್ರತೀಕಾರವಾಗಿ ಸುಪಾರಿ ನೀಡಿ ಹತ್ಯೆಗೆ ಸಂಚು ರೂಪಿಸಲಾಗಿತ್ತು. ನ.12ರಂದು ಅಂಜಲಿ ಕಚೇರಿಗೆ ತೆರಳುತ್ತಿದ ವೇಳೆ ದುಷ್ಕರ್ಮಿಗಳು ಮಾರಾಕಾಸ್ತ್ರಗಳಿಂದ ದಾಳಿ ಮಾಡಿದ್ದಾರೆ.

ಆಡಳಿತ ವೈದ್ಯಾಧಿಕಾರಿಗಳ ಕಛೇರಿ, ಸಾರ್ವಜನಿಕ ಆಸ್ಪತ್ರೆ ಶಿಡ್ಲಘಟ್ಟ, ಚಿಕ್ಕಬಳ್ಳಾಪುರ ಜಿಲ್ಲೆ

Mail ID: ghsdl105@gmail.com, Phone & Fax: 08158-256277

ಸಂಖ್ಯೆ: ಸಾ.ಆ.ಶಿ/ಸರಬ/02/2025–26 ದಿನಾಂಕ: 11.11.2025

ಟೆಂಡರ್ ಪ್ರಕಟಣೆ

ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಶಿಡ್ಲಘಟ್ಟ, ಚಿಕ್ಕಬಳ್ಳಾಪುರ ಜಿಲ್ಲೆ. ಇಲ್ಲಿಗೆ 2025–26 ನೇ ಸಾಲಿಗೆ **ನಿರ್ದೇಶನಾಲಯದ ಅನುದಾನದಡಿ** ಈ ಆಸ್ಪತ್ರೆಗೆ ಅಗತ್ಯವಾಗಿ ಬೇಕಾಗಿರುವ ವೈದ್ಯಕೀಯ ಉಪಕರಣಗಳು ಮತ್ತು ಇತರೆ ಸಾಮಗ್ರಿಗಳನ್ನು ಸರಬರಾಜು ಪಡೆಯಲು ಅರ್ಹ ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಗಳಲ್ಲಿ ಪಾರದರ್ಶಕ ಅಧಿನಿಯಮ **(KTPP)** 1999 ನಿಯಮಗಳು–2000 ರಪ್ರಕಾರ ಇ–ಸಂಗ್ರಹಣಾ ವೇದಿಕೆ **(https://kppp.karnataka.gov.in)** ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು ಸದರಿ ಪೋರ್ಟಲ್ ಮೂಲಕ ಅರ್ಹ ಸಂಸ್ಥೆಗಳು **ದಿ: 11.11.2025 ರ ಬೆಳಿಗ್ಗೆ 10.30 ಗಂಟೆಯಿಂದ ಅರ್ಜಿ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 26.11.2025 ಸಂಜೆ 4.30 ಗಂಟೆಗೆ. ತಾಂತ್ರಿಕ ಲಕೋಟಿ ತೆರೆಯುವ ದಿನಾಂಕ: 01.12.2025ರ ಬೆಳಿಗ್ಗೆ 11.30 ಗಂಟೆಗೆ ಮತ್ತು ಆರ್ಥಿಕ ಲಕೋಟೆ ತೆರೆಯುವ ದಿನಾಂಕ: 02.12.2025ರ ಬೆಳಿಗ್ಗೆ 11.30 ಗಂಟೆಯ ನಂತರ.** ಹೆಚ್ಚಿನ ವಿವರಗಳನ್ನು ವೆಬ್‌ಸೈಟ್: **https://kppp.karnataka.gov.in** ರ ಮೂಲಕ ಅಥವಾ ಆಸ್ಪತ್ರೆಯ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಆಡಳಿತ ವೈದ್ಯಾಧಿಕಾರಿಗಳು, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ ಜಿಲ್ಲೆ.

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:261/ಕೆಎಸ್‌ಎಂಸಿಎ/2025–26

ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್.ರಸ್ತೆ. ತುಮಕೂರು–572 103,

ಸಂಖ್ಯೆ:ತುವಿ:ಅ.ವಿ:ಉ.ನೇ:2025–26/2411 ದಿನಾಂಕ: 11.11.2025

ಅಧಿಸೂಚನೆ

ತುಮಕೂರು ವಿಶ್ವವಿದ್ಯಾನಿಲಯದಲ್ಲಿ 2025–26 ನೇ ಶೈಕ್ಷಣಿಕ ಸಾಲಿಗೆ ವಿಶ್ವವಿದ್ಯಾನಿಲಯದ ಸ್ನಾತಕ/ಸ್ನಾತಕೋತ್ತರ ಪದವಿ ತರಗತಿಗಳ ಕೆಳಕಂಡ ವಿಷಯಗಳಿಗೆ ಬೋಧನೆ ಮಾಡಲು ಅತಿಥಿ ಉಪನ್ಯಾಸಕರನ್ನು ನೇಮಕ ಮಾಡುವ ಸಂಬಂಧ ಯು.ಜಿ.ಸಿ. ನಿಯಮಾನುಸಾರ ಸಂಬಂಧಿಸಿದ ವಿಷಯದಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಶೇ. 55 ಅಂಕಗಳು (ಸಾಮಾನ್ಯ ಮತ್ತು ಇತರೆ ವರ್ಗದ ಅಭ್ಯರ್ಥಿಗಳು) ಹಾಗೂ ಶೇ. 50 ಅಂಕಗಳೊಂದಿಗೆ (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು) NET/KSET/Ph.D ವಿದ್ಯಾರ್ಹತೆ ಹೊಂದಿರುವ ಅರ್ಹ ಅಭ್ಯರ್ಥಿಗಳಿಗೆ ದಿನಾಂಕ: 21.11.2025 ರ ಶುಕ್ರವಾರದಂದು ಮಧ್ಯಾಹ್ನ 02.00 ಗಂಟೆಗೆ ಮಾನ್ಯ ಕುಲಪತಿಗಳ ಕಾರ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯ, ಬಿ.ಹೆಚ್. ರಸ್ತೆ, ತುಮಕೂರು ಇಲ್ಲಿ ನೇರ ಸಂದರ್ಶನ (Walk-in Interview) ಏರ್ಪಡಿಸಲಾಗಿದೆ.

1. ಸ್ನಾತಕ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ–01 ಹುದ್ದೆ. 2. ಸ್ನಾತಕೋತ್ತರ ಗಣಿತಶಾಸ್ತ್ರ ವಿಭಾಗ –01 ಹುದ್ದೆ. (ಶಿರಾ ಸ್ನಾತಕೋತ್ತರ ಕೇಂದ್ರ, ಶಿರಾ) 3. ಸ್ನಾತಕೋತ್ತರ ಮನೋವಿಜ್ಞಾನ ವಿಭಾಗ–03 ಹುದ್ದೆ. ಯು.ಜಿ.ಸಿ. ನಿಯಮಾನುಸಾರ ಅರ್ಹರಿರುವ ಅಭ್ಯರ್ಥಿಗಳು ತಮ್ಮ ಮೂಲ ದಾಖಲೆಗಳೊಂದಿಗೆ (ಒಂದು ಸೆಟ್ ಜೆರಾಕ್ಸ್ ಪ್ರತಿಯೊಂದಿಗೆ) ದಿನಾಂಕ: 21.11.2025 ರಂದು ಬೆಳಿಗ್ಗೆ 10.00 ಗಂಟೆಗೆ ಸಂದರ್ಶನಕ್ಕೆ ಹಾಜರಾಗತಕ್ಕದ್ದು.

ಸಹಿ/–ಉಪ ಕುಲಸಚಿವರು, (ಅಭಿವೃದ್ಧಿ ವಿಭಾಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

ನಗರಸಭಾ ಕಾರ್ಯಾಲಯ ದೊಡ್ಡಬಳ್ಳಾಪುರ

ನಗರ ಸಭಾ, ದೊಡ್ಡಬಳ್ಳಾಪುರ ಬೆಂಗಳೂರು ಗ್ರಾಮಾಂತರ ಜಿಲ್ಲೆ–561203

ಇ–ಮೇಲ್: itstaff_ulb_doddaballapur@yahoo.com

ವೆಬ್‌ಸೈಟ್: www.doddaballapurcity.mrc.gov.in

ನಸದೊ/ತಾಂ.ವಿ/ತಿ.ಎನ್.ನಂ.15/2025–26 ದಿನಾಂಕ: 12.11.2025

"ಟೆಂಡರ್ ಪ್ರಕಟಣೆ"

(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆರವರು 2025–26ನೇ ಸಾಲಿನ ನಗರಸಭಾ ನಿಧಿಯಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕೆ.ಟಿ.ಪಿ.ಪಿ ನಿಯಮಗಳನ್ವಯ ಟೆಂಡರ್‌ಗಳನ್ನು ಆಹ್ವಾನಿಸಿದೆ.

(1) DMA/2025-26/OW/WORK_INDENT48545/CALL-2, (2) DMA/2024-25/E4855/CALL-4, (3) DMA/2025-26/SE6569, (4) DMA/2025-26/SE6568 (5) DMA/2025-26/WS/WORK_INDENT51583, (6) DMA/2025-26/OW/WORK_INDENT51627 (7) DMA/2025-26/OW/WORK_INDENT51580, (8) DMA/2025-26/OW/WORK_INDENT51295

ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(kppp.karnataka.gov.in)** ಮುಖಾಂತರ ಮೇಲ್ಕಂಡ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 27.11.2025ರ 17.00ಗಂಟೆ ಯವರೆಗೆ,** ಟೆಂಡರ್ ತೆರೆಯುವ **ದಿನಾಂಕ: 28.11.2025ರ 17.15 ಗಂಟೆಗೆ.** ಹೆಚ್ಚಿನ ವಿವರಗಳಿಗೆ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಿ ಪಡೆದು ತಿಳಿದುಕೊಳ್ಳುವುದು ಮತ್ತು ಯಾವುದೇ ತಿದ್ದುಪಡಿ ಮತ್ತು ಬದಲಾವಣೆಯಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ತಿಳಿಸಲಾಗುವುದು.

ಸಹಿ/–	ಸಹಿ/–	ಸಹಿ/–	ಸಹಿ/–
ಅಧ್ಯಕ್ಷರು, ನಗರಸಭೆ, ದೊಡ್ಡಬಳ್ಳಾಪುರ	ಉಪಾಧ್ಯಕ್ಷರು ನಗರಸಭೆ, ದೊಡ್ಡಬಳ್ಳಾಪುರ	ಸ್ಥಾಯಿ ಸಮಿತಿ ಅಧ್ಯಕ್ಷರು ನಗರಸಭೆ, ದೊಡ್ಡಬಳ್ಳಾಪುರ	ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ

ವಾ.ಸಾ.ಸಂ.ಇ/ವಾಪ್ರ/3832/ಎಸ್‌ಎಸ್‌ಸಿ/2025–26

ಅತ್ತಿಬೆಲೆ ಪುರಸಭೆ ಕಾರ್ಯಾಲಯ

ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–562107.

ದೂರವಾಣಿ ಸಂಖ್ಯೆ: 080–27821501, ಇ–ಮೇಲ್: itstaff_ulb_attibele@yahoo.com

ವೆಬ್‌ಸೈಟ್: www.attibeletown.mrc.gov.in

ಸಂಖ್ಯೆ:ಅಪುಸ/ಪ.ಅ/ಸಿ.ಆರ್/200/2025–26 ದಿನಾಂಕ: 14.11.2025

ಪ್ರಕಟಣೆ

ಅತ್ತಿಬೆಲೆ ಪುರಸಭೆ ವ್ಯಾಪ್ತಿಯಲ್ಲಿನ ಖಾಸಗಿ ಹಾಗೂ ಸರ್ಕಾರಿ ಶಿಕ್ಷಣ ಸಂಸ್ಥೆಗಳು ಖಾಸಗಿ ಹಾಗೂ ಸರ್ಕಾರಿ ಆಸ್ಪತ್ರೆಗಳು, ಕ್ರೀಡಾ ಸಂಕೀರ್ಣಗಳು, ಬಸ್ ನಿಲ್ದಾಣಗಳು, ರೈಲ್ವೆ ನಿಲ್ದಾಣಗಳ ಮುಖ್ಯಸ್ಥರಿಗೆ ಈ ಮೂಲಕ ತಿಳಿಸುವುದೇನೆಂದರೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸ್ವಯಂ ಪೇರಿತ ರಿಟ್ ಅರ್ಜಿ ಸಂಖ್ಯೆ 5/2025 ರಲ್ಲಿ ನೀಡಿರುವ ನಿರ್ದೇಶನದಂತೆ ತಮ್ಮ ಸಂಸ್ಥೆಯ ಆವರಣದಲ್ಲಿ ಯಾವುದೇ ಬೀದಿ ನಾಯಿಗಳು ವಾಸವಿದ್ದಲ್ಲಿ ಅದನ್ನು ಪರಿಶೀಲಿಸಿ ಕೂಡಲೇ ಅದರ ಸಂಖ್ಯೆಯನ್ನು ಲೆಕ್ಕ ಮಾಡಿ ಮುಖ್ಯಾಧಿಕಾರಿ ಅತ್ತಿಬೆಲೆ ಪುರಸಭೆಗೆ ತಿಳಿಸುವುದು. (1) ತಮ್ಮ ಸಂಸ್ಥೆಯ ಆವರಣದಲ್ಲಿ ಬೀದಿ ನಾಯಿಗಳ ಉಪಟಳ ತಡೆಯಲು ಹಾಗೂ ಅವುಗಳ ಪ್ರದೇಶ ನಿಯಂತ್ರಿಸಲು ಕ್ರಮ ವಹಿಸುವುದು (2) ಪುರಸಭೆ ವ್ಯಾಪ್ತಿಯಿಂದ ಬೀದಿ ನಾಯಿಗಳನ್ನು ಸ್ಥಳಾಂತರಿಸಲು ಸಹಕರಿಸಲು ಹಾಗೂ ಅವುಗಳ ಪ್ರವೇಶ ನಿರ್ಭಂದಿಸುವದನ್ನು ಮೇಲ್ವಿಚಾರಣೆ ಮಾಡಲು ತಮ್ಮ ಸಂಸ್ಥೆ ವತಿಯಿಂದ ಒಬ್ಬ ಜವಾಬ್ದಾರಿಯುತ ನೌಕರರನ್ನು ನೋಡಲು ಅಧಿಕಾರಿಯಾಗಿ ನೇಮಕ ಮಾಡುವುದು (3) ಮಾನ್ಯ ಸರ್ವೋಚ್ಚ ನ್ಯಾಯಲಯದ ನಿರ್ದೇಶನದಂತೆ ತಮ್ಮ ಸಂಸ್ಥೆಯ ವ್ಯಾಪ್ತಿಯಲ್ಲಿ ಪುನಃ ನಾಯಿಗಳು ವಾಸ ಮಾಡಲು ಅವಕಾಶ ಕೊಟ್ಟಲ್ಲಿ ಅವನ್ನು ಸ್ಥಳಾಂತರಿಸುವ ವೆಚ್ಚವನ್ನು ತಮ್ಮ ಸಂಸ್ಥೆಯಿಂದ ವಸೂಲಿ ಮಾಡಲಾಗುವುದು (4) ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ಉಲ್ಲಂಘನೆ ಮಾಡಿದ್ದಲ್ಲಿ ನ್ಯಾಯಾಲಯದ ಆದೇಶದಂತೆ ತಮ್ಮ ವಿರುದ್ಧ ಕಾನೂನು ಕ್ರಮ ವಹಿಸಲಾಗುವುದು.

ಸಹಿ/– ಮುಖ್ಯಾಧಿಕಾರಿ, ಪುರಸಭೆ, ಅತ್ತಿಬೆಲೆ

ವಾಸಾಸಂಇ/ವಾ.ಪ್ರ/3833/ಎಸ್‌ಎಸ್‌ಸಿ/2025–26

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.

ದೂರವಾಣಿ ಸಂ: ಕಛೇರಿ: 08192–232008, ಫ್ಯಾಕ್ಸ್: 252899

ನಂ:ದಾಮಪಾ:ಕಾಅ3:ಇ.ಟೆಂಡರ್:13:2025–26

ದಿನಾಂಕ:13.11.2025

ಟೆಂಡರ್ ಪ್ರಕಟಣೆ

(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)"

2025–26ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ– 01 ಸಂಖ್ಯೆಯ ಪೂರ್ಣಾವಧಿ ಸೇವಾ ಟೆಂಡರ್ ಮತ್ತು 03 ಸಂಖ್ಯೆಯ ಅಲ್ಪಾವಧಿ ವಿದ್ಯುತ್ ಟೆಂಡರ್, ರಾಜನಹಳ್ಳಿ ಪಂಪ್ ಹೌಸ್ ನಲ್ಲಿರುವ ಯಂತ್ರೋಪಕರಣಗಳಿಗೆ ಮತ್ತು ಇಂದಿರಾ ಕ್ಯಾಂಟೀನ್ ಮಾಸ್ಟರ್ ಕಿಚನ್ ದುರಸ್ತಿ ಮಾಡಲು ಅಗತ್ಯವಿರುವ ಯಂತ್ರೋಪಕರಣಗಳು, ನಮ್ಮ ಕ್ಲಿನಿಕ್ ಮತ್ತು ನಗರ ಆರೋಗ್ಯ ಕೇಂದ್ರಗಳಿಗೆ ಅವಶ್ಯವಿರುವ ಬ್ರಾಂಡಿಂಗ್ ಮಾಡಿಸುವುದು, ಅವಶ್ಯ ವಸ್ತುಗಳ ಖರೀದಿ ಮತ್ತು ವೈದ್ಯಕೀಯ ಉಪಕರಣಗಳ ಖರೀದಿ ರಿಜಿಸ್ಟರ್‌ಗಳನ್ನು ಪ್ರಿಂಟ್ ಮಾಡಿಸುವ ಮತ್ತು ಹೈಮಾಸ್ಟ್ ದುರಸ್ಥಿಪಡಿಸಲು ಸಿ ಎಸ್ ಆರ್ ದರಗಳು ಲಭ್ಯವಿಲ್ಲದ ಕಾರಣ ಮಾರುಕಟ್ಟೆಯ ಸ್ಪರ್ಧಾತ್ಮಕ ದರಪಟ್ಟಿ ಆಹ್ವಾನಿಸಲು ಟೆಂಡರ್‌ಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ಸಿಂಗಲ್/ಡಬಲ್ ಕವರ್ ಪದ್ಧತಿಯಲ್ಲಿ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು (ವಿದ್ಯುತ್/ ನೀರುಸರಬರಾಜು) ರವರು ಅಲ್ಪಾವಧಿ ಟೆಂಡರ್ ಆಹ್ವಾನಿಸಿದ್ದು, ಅರ್ಹ ಗುತ್ತಿಗೆದಾರರು/ ಏಜನ್ಸಿದಾರರು/ ಸರಬರಾಜುದಾರರು ಕೆಪಿಪಿಪಿ ಪೋರ್ಟಲ್ ವೆಬ್ ಸೈಟ್ kppp.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಕಛೇರಿ ಸಮಯದಲ್ಲಿ ಮಹಾನಗರ ಪಾಲಿಕೆಯ ಕಛೇರಿಯ ವಿದ್ಯುತ್ ಶಾಖೆಗೆ ಭೇಟಿ ನೀಡಿ ಪಡೆಯಬಹುದಾಗಿದೆ. ಮಹಾನಗರ ಪಾಲಿಕೆಯ ಸಹಾಯಕ ದೂರವಾಣಿ ಸಂಖ್ಯೆ: 08192 234444 ರಿಂದ ಮಾಹಿತಿ ಪಡೆಯಬಹುದು.ಸೂಚನೆ : 1) ಈ ಮೇಲ್ಕಂಡ ಕಾಮಗಾರಿಯ ಮುಂದೆ ನಮೂದಿಸಿದ ಅಂದಾಜು ಮೊತ್ತ ಹಾಗೂ ಟೆಂಡರ್‌ಗಿಟ್ಟ ಮೊತ್ತ ದಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಟೆಂಡರ್ ದಾಖಲೆಯಲ್ಲಿ ನಮೂದಿಸಿದ ಟೆಂಡರ್‌ಗಿಟ್ಟ ಮೊತ್ತವು ಅಂತಿಮವಾಗಿರುತ್ತದೆ. 2) ಈ ಕೆಳಕಂಡ ದಿನಾಂಕಗಳಲ್ಲಿ ಯಾವುದೇ ಬದಲಾವಣೆ ಅದಲ್ಲಿ ಆ ದಿನಾಂಕಗಳನ್ನು ಕೆಪಿಪಿಪಿ ಪೋರ್ಟಲ್‌ನಲ್ಲಿ ಗಮನಿಸುವುದು ಹಾಗೂ ಯಾವುದೇ ಪ್ರತ್ಯೇಕ ಪ್ರಕಟಣೆಗಳನ್ನು ಹೊರಡಿಸಲಾಗುವುದಿಲ್ಲ.

ಪೂರ್ಣಾವಧಿ ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ ಮತ್ತು ವೇಳೆ : 01.12.2025 ಸಮಯ: 17.00 ಪೂರ್ಣಾವಧಿ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 02.12.2025 ಸಮಯ 17.30 ಫ್ರೀ ಬಿಡ್ ಮೀಟಿಂಗ್(>100 ಲಕ್ಷ) ದಿನಾಂಕ: : 25.11.2025 ಸಮಯ : 11.00 ನಂತರ ಪೂರ್ಣಾವಧಿ ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ : 04.12.2025 ಸಮಯ : 11.00 ನಂತರ

ಅಲ್ಪಾವಧಿ ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ ಮತ್ತು ವೇಳೆ : 24.11.2025 ಸಮಯ: 17.00 ಅಲ್ಪಾವಧಿ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 25.11.2025 ಸಮಯ 17.30 ಅಲ್ಪಾವಧಿ ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ : 27.11.2025 ಸಮಯ : 11.00 ನಂತರ

ವಾಸಾಇ/ದಾವಣಗೆರೆ/474/ಕೆಎಸ್‌ಎಂಸಿಎ/2025–26

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ದಾವಣಗೆರೆ

ದಿ ಮೈಸೂರ್ ಪೇಪರ್ ಮಿಲ್ಸ್ ಲಿಮಿಟೆಡ್

ಮಾನವ ಸಂಪನ್ಮೂಲ ಅಭಿವೃದ್ಧಿ ವಿಭಾಗ

ಭದ್ರಾವತಿ–577302 ಕರ್ನಾಟಕ

ಇ–ಟೆಂಡರ್ ಪ್ರಕಟಣೆ

ಕೆಳಕಂಡ ಕಾಮಗಾರಿಗೆ ಅರ್ಹ ಏಜೆನ್ಸಿಗಳಿಂದ ಏಕ ಲಕೋಟೆ ಪದ್ಧತಿಯಲ್ಲಿ (ಭಾಗ–1 ತಾಂತ್ರಿಕ ಬಿಡ್) ಮತ್ತು (ಭಾಗ–2 ಹಣಕಾಸಿನ ಬಿಡ್) ಆನ್ ಲೈನ್ ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ದಸ್ತಾವೇಜುಗಳ (ಭಾಗ–1) ಪೂರ್ವಾರ್ಹತೆ ನಿಯಮಗಳಲ್ಲಿ ತಿಳಿಸಿರುವಂತೆ ನಿಯಮಗಳನ್ನು ಈಡೇರಿಸುವ ಏಜೆನ್ಸಿಗಳು ಟೆಂಡರ್ ಸಲ್ಲಿಸಲು ಅರ್ಹರಾಗಿರುವರು.

ಟೆಂಡರ್ ಸಂಖ್ಯೆ ಎಂಪಿಎಂಎಲ್/2025–26/ಎಸ್‌ಇ0045 ದಿನಾಂಕ: 10.11.2025 **ವಿವರ** ಎಂಪಿಎಂ, ಭದ್ರಾವತಿ ಇಲ್ಲಿನ ಭದ್ರತಾ ಇಲಾಖೆಗೆ ಮಾನವ ಸಂಪನ್ಮೂಲ, 01 ಸಂಖ್ಯೆ ಮಹೇಂದ್ರ ಬೊಲೆರೊ ಜೀಪ್ ಮತ್ತು 02 ಸಂಖ್ಯೆಗಳ ಬೈಕ್ ಹಾಗೂ ಕಾರ್ಪೊರೇಟ್ ಕಚೇರಿ, ಬೆಂಗಳೂರು ಇಲ್ಲಿಗೆ ಮಾನವ ಸಂಪನ್ಮೂಲವನ್ನು 12 ತಿಂಗಳ ಅವಧಿಗೆ (24 x 7 x 365 ದಿನಗಳು) ಒದಗಿಸುವುದು. ಇಎಂಡಿ: ರೂ. 7.50 ಲಕ್ಷ. **ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ** 08.12.2025 ರಂದು 17 ಗಂಟೆಗೆ. ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ 11.11.2025 ರಿಂದ ನೋಡಬಹುದು ಮತ್ತು ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ ಅಪ್‌ಲೋಡ್ ಮಾಡತಕ್ಕದ್ದು. ಸ್ಪಷ್ಟನೆಗಳಿಗಾಗಿ ಏಜೆನ್ಸಿಗಳು ಮೊಬೈಲ್ ಸಂ: 8762828374 / 9844045594 ಸಂಪರ್ಕಿಸಬಹುದು.

ಸಹಿ/– ಮುಖ್ಯ ಹಣಕಾಸು ಅಧಿಕಾರಿ

ವಾ.ಸಾ.ಸಂ.ಇ/ಕೆ.ಎಸ್.ಎಂ.ಸಿ.ಎ/ಶಿ/25–26/63/11/1239

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ

ವಿಶ್ವೇಶ್ವರಯ್ಯ ನಾಲಾ ವಿಭಾಗ, ಮಂಡ್ಯ

ದೂ : 08232–225046, ಇ–ಮೇಲ್ : vcdnmndya@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ :11/2025–26 ದಿ:06.11.2025

ದ್ವಿ–ಲಕೋಟೆ ಪದ್ಧತಿ

ಈ ಕಛೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ:11/2025–26 ದಿನಾಂಕ: 06.11.2025 ರಲ್ಲಿ ಒಟ್ಟು 03 ಕಾಮಗಾರಿಗಳಿಗೆ (ಕನಿಷ್ಠ ಮೊತ್ತ 495.00 ಲಕ್ಷ ರೂಪಾಯಿಗಳು ಮತ್ತು ಗರಿಷ್ಠ ಮೊತ್ತ ರೂ.499.00 ಲಕ್ಷ ರೂಪಾಯಿ) ಗಳಿಗೆ ಅರ್ಹ ಕೆಪಿಡಬ್ಲೂಡಿ 2ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ದರದ ಟೆಂಡರ್ ಅನ್ನು ಆಹ್ವಾನಿಸಲಾಗಿದ್ದು, ಟೆಂಡರ್ ಕ್ವಾರೀಸ್/ಕ್ಲಾರಿಫಿಕೇಷನ್‌ಗಾಗಿ as per e-portal ಇ.ಎಂ.ಡಿ ಮೊತ್ತವನ್ನು e-payment ಮೂಲಕ ಸಂದಾಯ ಮಾಡುವುದು. ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ as per e-portal ಟೆಂಡರ್‌ಗಳನ್ನು ತೆರೆಯುವ ದಿನಾಂಕ as per e-portal ಹೆಚ್ಚಿನ ವಿವರಗಳಿಗೆ http://kppp.karnataka.gov.in ನಲ್ಲಿ ಹಾಗೂ ಈ ಕಛೇರಿಯ ದೂರವಾಣಿ ಸಂಖ್ಯೆ:08232–225046 ನಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಕಾವೇರಿ ನೀರಾವರಿ ನಿಗಮ(ನಿ), ವಿ.ಸಿ.ವಿಭಾಗ, ಮಂಡ್ಯ

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/572/2025–26

NATIONAL HEALTH MISSION

District Health & F.W.Society Office, Near KC Park Haliyal Road, Dharwad.

DHARWAD – 580 008, OFFICE PHONE NO. 0836-2441484

E-mail : dpmodharwad1@gmail.com

Ref:NHM/NPCB&VI/93.4&94.4/SPECTACLES/2025-26

Date:15/11/2025

ಪತ್ರಿಕಾ ಪ್ರಕಟಣೆ

2025–26 ನೇ ಸಾಲಿಗೆ ರಾಷ್ಟ್ರೀಯ ಆರೋಗ್ಯ ಅಭಿಯಾನ, ರಾಷ್ಟ್ರೀಯ ಅಂಧತ್ವ ನಿಯಂತ್ರಣಾ ಕಾರ್ಯಕ್ರಮದಡಿಯಲ್ಲಿ ಶಾಲಾಮಕ್ಕಳ ಹಾಗೂ ವಯೋವೃದ್ಧರ ಕನ್ನಡಕಗಳ ಪೂರೈಕೆಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೊತ್ತ ರೂ.77.00 ಲಕ್ಷಗಳು ಹಾಗೂ **ಇ.ಎಂ.ಡಿ. ಮೊತ್ತ ರೂ.1,54,000=00,** ಇ–ಟೆಂಡರ್ ಸಲ್ಲಿಸಲು **ಪ್ರಾರಂಭದ ದಿನಾಂಕ: 15–11–2025** ಮತ್ತು ಇ–ಟೆಂಡರ್ ಸಲ್ಲಿಸಲು **ಕೊನೆಯ ದಿನಾಂಕ: 12–12–2025**ರ ಸಂಜೆ **5:30** ಗಂಟೆಯವರೆಗೆ, ಮಾದರಿ ಕನ್ನಡಕಗಳನ್ನು ಸಲ್ಲಿಸುವ **ದಿನಾಂಕ: 11–12–2025** ಸಂಜೆ **5:30** ರೊಳಗಾಗಿ ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ಮೂಲಕ ಇ–ಟೆಂಡರ್ ಸಂಖ್ಯೆ: **/DHFWS/2024-25/IND1935 DT:15/11/2025** ಬಳಸಿಕೊಂಡು ಪರಿಶೀಲಿಸಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ **ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ, ಧಾರವಾಡ** ಇಲ್ಲಿ ಕೆಲಸದ ಅವಧಿಯಲ್ಲಿ ಅಥವಾ ಇ–ಮೇಲ್ ಮುಖಾಂತರ **dhodharwad@gmail.com** ಸಂಪರ್ಕಿಸಬಹುದಾಗಿರುತ್ತದೆ.

ಸಹಿ/– ಉಪಾಧ್ಯಕ್ಷರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಧಾರವಾಡ.

ಡಿಐಪಿಆರ್/ಧಾರವಾಡ/876/ಮಣಿಪಾಲ್/2025–26

ಸಮಾಚಾರ ಸಣ್ಣದಲ್ಲ

ಟ್ರ್ಯಾಕ್ಟರ್‌ಗಳಿಗೆ ಬೆಂಕಿ ಮಾಲೀಕರ ಸಂಚು



ರಾಯಚೂರು: ಮುಧೋಳ ತಾಲೂಕಿನ ಸಕ್ಕರೆ ಕಾರ್ಖಾನೆ ಬಳಿ 60ಕ್ಕೂ ಅಧಿಕ ಕಬ್ಬು ತುಂಬಿದ ಟ್ರ್ಯಾಕ್ಟರ್‌ಗಳಿಗೆ ಬೆಂಕಿ ಹಚ್ಚಿರುವುದಕ್ಕೆ ಸರಕಾರದ ಗೊಂದಲ ಹಾಗೂ ಕಾರ್ಖಾನೆ ಮಾಲೀಕರ ಸಂಚು ಕಾರಣ ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಗೌರವಾಧ್ಯಕ್ಷ ಚಾಮರಸ ಮಾಲೀಪಾಟೀಲ ಆರೋಪಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಬ್ಬು ಬೆಳೆಗಾರರು ಶಾಂತರೀತಿಯಲ್ಲಿ ಹೋರಾಟ ಮಾಡುತ್ತಿದ್ದರೂ ಪ್ರತಿಭಟನೆ ವೇಳೆ ಟ್ರ್ಯಾಕ್ಟರ್‌ಗಳಿಗೆ ಬೆಂಕಿ ಹಚ್ಚಲಾಗಿದೆ. ಈ ಕೃತ್ಯ ಯಾರೇ ಮಾಡಿದ್ದರೂ ರೈತ ಸಂಘ ಅದನ್ನು ಖಂಡಿಸುತ್ತದೆ. ಕಾರ್ಖಾನೆಯಲ್ಲಿ ಗೂಂಡಾಗಳನ್ನು ಇರಿಸಿಕೊಂಡು ಸಂಚು ರೂಪಿಸಲಾಗಿದೆ. ಸರಕಾರ ಉನ್ನತ ಮಟ್ಟದ ತನಿಖೆ ನಡೆಸಬೇಕು. ಘಟನೆಗೆ ಕಾರಣರಾದವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ನಷ್ಟ ಉಂಟಾದ ರೈತರಿಗೆ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ಸಿದ್ದು ಸರಕಾರದಲ್ಲೂ ಭ್ರಷ್ಟಾಚಾರ ಇದೆ

ಮಂಡ್ಯ: ಬಿಜೆಪಿ, ಜೆಡಿಎಸ್ ಸರಕಾರದಲ್ಲಿ ಇದ್ದಂತೆ ಸಿದ್ದರಾಮಯ್ಯ ಸರಕಾರದಲ್ಲೂ ಭ್ರಷ್ಟಾಚಾರ ಇದೆ. ಬಿಹಾರ ಚುನಾವಣೆಯಲ್ಲಿ ಸೋಲ್ತೀವಿ ಅಂತ ಮೊದಲೇ ಕಾಂಗ್ರೆಸ್‌ನವರಿಗೆ ಗೊತ್ತಿತ್ತು. ಅದಕ್ಕೆ ವೋಟ್ ಚೋರಿ ವಿಚಾರ ಶುರು ಮಾಡಿದ್ರು ಎಂದು ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ವೋಟ್ ಚೋರಿ ಅಷ್ಟು ಸುಲಭವಿಲ್ಲ. ವಿಚಾರಣೆ ಮಾಡಲು ಸಾಧ್ಯವಿಲ್ಲ ಅಂತ ಕೋರ್ಟ್ ಹೇಳಿದೆ. ಬಾಯಿಗೆ ಬಂದಾಗೆ ಹೇಳ್ತಾರೆ. ಸೋತಿದ್ದಕ್ಕೆ ಕಾರಣ ಕೊಡುತ್ತಾರಷ್ಟೆ ಎಂದು ಹೇಳಿದರು. ಭ್ರಷ್ಟಾಚಾರ ನಿರ್ಮೂಲನೆ ಮಾಡೋಕೆ ಸಾಧ್ಯವೇ ಇಲ್ಲ. ಪುರಾಣದಲ್ಲೂ ಭ್ರಷ್ಟಾಚಾರದ ಬಗ್ಗೆ ಪ್ರಸ್ತಾಪವಿದೆ. ಹಣ ಕೊಟ್ಟು ಹುದ್ದೆಗೆ ಹೋದವರಿಗೆ ಹಣ ಮಾಡೋದೇ ಕೆಲಸವಾಗಿದೆ. ಶೇ.40ರಷ್ಟು ಕಮಿಷನ್ ಕೊಟ್ಟರೆ ಉಳಿದ ಹಣದಲ್ಲಿ ರಸ್ತೆ ಗುಂಡಿ ಮುಚ್ಚೋದು ಹೇಗೆ? ದೇಶದಲ್ಲಿ ಅನೇಕ ಸಮಸ್ಯೆಗಳಿದ್ದರೂ ಸೌಲಭ್ಯ ನೀಡಲು ಸರಕಾರದ ಬಳಿ ಹಣವಿಲ್ಲ. ದೇಶದ ಆರ್ಥಿಕ ಪರಿಸ್ಥಿತಿ ಉತ್ತಮವಾಗಿಲ್ಲ ಎಂದು ದೂರಿದರು.

17ರಿಂದ 2 ದಿನ ಸಾಧಾರಣ ಮಳೆ

ಬೆಂಗಳೂರು: ರಾಜ್ಯದ ಎಲ್ಲ ಜಿಲ್ಲೆಗಳಲ್ಲಿಯೂ ಒಣ ಹವೆಯ ವಾತಾವರಣ ಮುಂದುವರಿಯಲಿದ್ದು, ನ.17ರಿಂದ ಎರಡು ದಿನ ಸಾಧಾರಣ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ನವೆಂಬರ್ 17ರಿಂದ ಎರಡು ದಿನಗಳ ಕಾಲ ದಕ್ಷಿಣ ಒಳನಾಡು ಹಾಗೂ ಕರಾವಳಿಯಲ್ಲಿ ಸಾಧಾರಣ ಮಳೆಯಾಗಲಿದ್ದು, ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಕಂಡುಬರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ದಕ್ಷಿಣ ಒಳನಾಡು ಜಿಲ್ಲೆಗಳಾದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ಮಂಡ್ಯ, ಮೈಸೂರು, ಚಾಮರಾಜನಗರ, ಕೊಡಗು, ತುಮಕೂರು, ಹಾಸನ, ಚಿತ್ರದುರ್ಗ, ದಾವಣಗೆರೆ, ಚಿಕ್ಕಮಗಳೂರು ಮತ್ತು ಶಿವಮೊಗ್ಗದಲ್ಲಿ ಮಳೆ ಸಾಧ್ಯತೆ ತೀರಾ ವಿರಳವಾಗಿರಲಿದೆ. ಕರಾವಳಿಯಲ್ಲೂ ಸದ್ಯಕ್ಕೆ ವರುಣಾರ್ಭಟ ನಿಂತಿದ್ದು, ಮಳೆಯ ಸಾಧ್ಯತೆ ಕಡಿಮೆಯಿದೆ. ಉಡುಪಿ, ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿಯೂ ಉಳಿದ ಭಾಗಗಳಂತೆ ಒಣ ಹವೆ ಇರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಉತ್ತರ ಒಳನಾಡು ಭಾಗದ ಜಿಲ್ಲೆಗಳಾದ ಬೆಳಗಾವಿ, ಬೀದರ್, ವಿಜಯಪುರ, ಬಾಗಲಕೋಟೆ, ಹಾವೇರಿ, ಗದಗ, ಧಾರವಾಡ, ಕಲಬುರಗಿ, ಕೊಪ್ಪಳ, ಬಳ್ಳಾರಿ, ರಾಯಚೂರು, ಯಾದಗಿರಿ ಮತ್ತು ವಿಜಯನಗರದಲ್ಲಿ ಸಂಪೂರ್ಣವಾಗಿ ಒಣಹವೆ ಇರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಬೆಂಗಳೂರಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಗರಿಷ್ಠ ತಾಪಮಾನ 28ಕೆಸಿ ಮತ್ತು ಕನಿಷ್ಠ ತಾಪಮಾನ 18ಕೆಸಿ ಇರಲಿದೆ. ಗಾಳಿಯ ವೇಗ ಗಂಟೆಗೆ 10ಕಿ.ಮೀ. ಇರಲಿದೆ. ರಾಜ್ಯದಲ್ಲಿ ಒಣಹವೆ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ಹೇಳಿದೆ.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- ಸ್ಥಳ : ಜಾನುಕೊಂಡ, ಚಿತ್ರದುರ್ಗ

ಸಮಸ್ಯೆಯೇನು..?

- ರಸ್ತೆಯಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚುವ ಕುರಿತು.
- ಪರಿಹಾರ: ಚಿತ್ರದುರ್ಗದಿಂದ ಸುಮಾರು 10 ಹಳ್ಳಿಗಳಿಗೆ ಸಂಪರ್ಕ ಕಲ್ಪಿಸುವ ಜಾನುಕೊಂಡದಿಂದ ಗೊಡಬನಾಳ್ ವರೆಗೆ ರಸ್ತೆಯಲ್ಲಿ ಗುಂಡಿಗಳು ಬಿದ್ದಿವೆ. ಇದರಿಂದ ಸುಗಮ ಸಂಚಾರಕ್ಕೆ ಅಡಚಣೆ ಉಂಟಾಗಿದ್ದು, ಅಪಘಾತಗಳು ಹೆಚ್ಚಾಗಿವೆ ಎಂದು ಸ್ಥಳೀಯರೊಬ್ಬರು ದೂರು ಸಲ್ಲಿಸಿದ್ದರು. ಮುಖ್ಯ ಅಭಿಯಂತರರು ಲೋಕೋಪಯೋಗಿ ಇಲಾಖೆ ಶಿವಮೊಗ್ಗ. ಇವರು ಸ್ಥಳ ಪರಿಶೀಲನೆ ನಡೆಸಿದ್ದು, ಡಾಂಬರೀಕರಣ ಮಾಡಿಸಲು ಕ್ರಮ ಕೈಗೊಂಡಿದ್ದಾರೆ.

ಬಾಕಿ ಇರುವ ರಾಜ್ಯಗಳ ಬಿಜೆಪಿ ಅಧ್ಯಕ್ಷರ ನೇಮಕಾತಿಗೆ ಶೀಘ್ರದಲ್ಲೇ ಚಾಲನೆ | ಅದಕ್ಕೂ ಮೊದಲು ರಾಷ್ಟ್ರೀಯ ಅಧ್ಯಕ್ಷರ ನೇಮಕ

ಬಿಜೆಪಿ ರಾಜ್ಯಾಧ್ಯಕ್ಷರಾಗಿ ಬಿವೈವಿ ಮುಂದುವರಿಕೆ?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ ಅಭೂತಪೂರ್ವ ಗೆಲುವು ಸಾಧಿಸಿ ಅಧಿಕಾರ ಹಿಡಿದಿರುವ ಬೆನ್ನಲ್ಲೇ, ಬಾಕಿ ಇರುವ ರಾಜ್ಯಗಳ ಬಿಜೆಪಿ ಅಧ್ಯಕ್ಷರ ನೇಮಕಾತಿಗೆ ಚಾಲನೆ ಸಿಗಲಿದೆ. ಈ ನಡುವೆ ಬಿಜೆಪಿ ರಾಜ್ಯಾಧ್ಯಕ್ಷರಾಗಿ ಬಿ.ವೈ. ವಿಜಯೇಂದ್ರ ಎರಡನೇ ವರ್ಷ ಪೂರೈಸಿದ್ದು, ಅದೇ ಸ್ಥಾನದಲ್ಲಿ ಮುಂದುವರಿಯುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಬಿಹಾರದಲ್ಲಿ ಸರಕಾರ ರಚನೆಯಾಗಿ ಸಚಿವ ಸಂಪುಟ ಪ್ರಕ್ರಿಯೆಯಾಗುತ್ತಿದ್ದಂತೆ ಕೇಂದ್ರ ಬಿಜೆಪಿ ವರಿಷ್ಠರು ಬಾಕಿ ಇರುವ ರಾಜ್ಯಗಳ ಅಧ್ಯಕ್ಷರ ನೇಮಕಾತಿಗೆ ಚಾಲನೆ ನೀಡಲಿದ್ದಾರೆ. ಆದರೆ,ಅದಕ್ಕೂ ಮೊದಲು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರ ನೇಮಕಾತಿ ಪ್ರಕ್ರಿಯೆ ಮುಗಿದ ತಕ್ಷಣವೇ ಕರ್ನಾಟಕ ಮತ್ತು ಉ.ಪ್ರದೇಶ ರಾಜ್ಯಗಳ ಬಿಜೆಪಿ ಅಧ್ಯಕ್ಷರ ನೇಮಕಾತಿ ಆಗಲಿದೆ. ಇದೇ ವೇಳೆ ರಾಜ್ಯ ಬಿಜೆಪಿ ಅಧ್ಯಕ್ಷರಾಗಿ ವಿಜಯೇಂದ್ರ ಅವರೇ ಮುಂದುವರಿಯಲಿದ್ದಾರೆ ಎನ್ನಲಾಗಿದ್ದರೂ, ಆಕಾಂಕ್ಷಿಗಳ ಪಟ್ಟಿ ದೊಡ್ಡದಿದೆ.

ಬಿಜೆಪಿಯ ಹಾಲಿ ರಾಷ್ಟ್ರೀಯ ಅಧ್ಯಕ್ಷ ಮತ್ತು ಕೇಂದ್ರ ಸಚಿವ ಜೆ.ಪಿ.ನಡ್ಡಾ ಅವರ ಅವಧಿ ಮುಗಿದು ಹಲವು ತಿಂಗಳು ಕಳೆದಿವೆ. ಕರ್ನಾಟಕದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅಧ್ಯಕ್ಷರಾಗಿ ಎರಡು ವರ್ಷ ಪೂರ್ಣಗೊಳಿಸಿದ್ದಾರೆ. ಈ ಹಿಂದೆ ಅವರೇ ಮುಂದಿನ ಮೂರು ವರ್ಷಗಳ ಅವಧಿಗೆ ಮುಂದುವರಿಯಲಿದ್ದಾರೆ ಎಂಬ ಮಾತುಗಳು ಕೇಳಿ ಬಂದಿದ್ದವು. ಇದಕ್ಕೆ ಪಕ್ಷದಲ್ಲಿ ಪರ-ವಿರೋಧ ಅಭಿಪ್ರಾಯಗಳು ವ್ಯಕ್ತವಾಗಿದ್ದರಿಂದ ವರಿಷ್ಠರು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ನಂತರ ನೇಮಕಾತಿ ಮಾಡಲು ಒಲವು ತೋರಿದರು. ಹೀಗಾಗಿ ವಿಳಂಬವಾಗಿದೆ.

ಬಿ.ವೈ.ವಿಜಯೇಂದ್ರ ಅವರು ಬಿಜೆಪಿ ರಾಜ್ಯಾಧ್ಯಕ್ಷರಾಗಿ ಎರಡು ವರ್ಷ ಪೂರೈಸಿ 3ನೇ ವರ್ಷಕ್ಕೆ ಪಾದಾರ್ಪಣೆ ಮಾಡಿರುವ ಹಿನ್ನೆಲೆಯಲ್ಲಿ ಜಗನ್ನಾಥ ಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ಸಂಸದ ಬಸವರಾಜ ಬೊಮ್ಮಾಯಿ, ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ, ಸಂಸದ ಗೋವಿಂದ ಕಾರಜೋಳ, ಕೋರ್ ಕಮಿಟಿ ಸದಸ್ಯ ಬಿ.ಶ್ರೀರಾಮುಲು, ವಿಧಾನಸಭೆಯ ಮುಖ್ಯ ಸಚೇತಕ ದೊಡ್ಡನಗೌಡ ಎಚ್. ಪಾಟೀಲ್ ಸೇರಿದಂತೆ ಪಕ್ಷದ ಪ್ರಮುಖರು ಅಧ್ಯಕ್ಷರನ್ನು ಸನ್ಮಾನಿಸಿ, ಶುಭ ಹಾರೈಸಿದರು.

ಮುಂದುವರೆಯುತ್ತೇನೆ: ವಿಜಯೇಂದ್ರ

ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನ ಗೊಂದಲದ ಬಗ್ಗೆ ಹೈಕಮಾಂಡ್‌ನಿಂದ ಸ್ಪಷ್ಟತೆ ಸಿಗುವ ವಿಶ್ವಾಸ ವ್ಯಕ್ತಪಡಿಸಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಅಧ್ಯಕ್ಷ ಸ್ಥಾನದ ಬಗ್ಗೆ ನನಗಂತೂ ಸ್ಪಷ್ಟತೆ ಸಿಕ್ಕಿದೆ. ಈ ಬಗ್ಗೆ ನನಗೂ ವಿಶ್ವಾಸವಿದ್ದು, ಹೈಕಮಾಂಡ್‌ನಿಂದ ಸ್ಪಷ್ಟತೆ ಸಿಗುತ್ತೆ ಎಂಬ ವಿಶ್ವಾಸವಿದೆ. ರಾಜ್ಯಾಧ್ಯಕ್ಷ ಆಗಿ ನಾನು ಕೆಲಸ ಮಾಡುತ್ತಿದ್ದೇನೆ ಎಂದು ಪರೋಕ್ಷವಾಗಿ ತಾವೇ ಮುಂದುವರಿಯುವ ಬಗ್ಗೆ ಸುಳಿವು ನೀಡಿದ್ದಾರೆ.

ಪಕ್ಷದ ಕಚೇರಿಯಲ್ಲಿ ಸಂಭ್ರಮಾಚರಣೆ

ಬಿ.ವೈ.ವಿಜಯೇಂದ್ರ ಕರ್ನಾಟಕ ರಾಜ್ಯದ ಭಾರತೀಯ ಜನತಾ ಪಾರ್ಟಿಯ ಅಧ್ಯಕ್ಷರಾಗಿ ಶನಿವಾರಕ್ಕೆ ಎರಡು ವರ್ಷ ಯಶಸ್ವಿಯಾಗಿ ಪೂರೈಸಿದ ಹಿನ್ನೆಲೆ ಪಕ್ಷದ ಕಚೇರಿಯಲ್ಲಿ ನಡೆದ ಸರಳ ಸಮಾರಂಭದಲ್ಲಿ ಪಕ್ಷದ ಹಿರಿಯರ ಸಮ್ಮುಖದಲ್ಲಿ ಗೌರವಿಸಿ ಶುಭ ಕೋರಲಾಯಿತು. ಬಿ.ವೈ.ವಿಜಯೇಂದ್ರ ತಮ್ಮ ಅಧ್ಯಕ್ಷತೆಯ ಜವಾಬ್ದಾರಿಯನ್ನು ಬೂತ್ ಅಧ್ಯಕ್ಷರ ಮನೆಗೆ ಭೇಟಿ ಪ್ರಾರಂಭಿಸಿದ್ದರು. ರಾಜ್ಯಾದ್ಯಂತ ಪ್ರವಾಸ ಕೈಗೊಂಡು ತಳಮಟ್ಟದಲ್ಲಿ ಪಕ್ಷದ ಸಂಘಟನೆ ಬಲಪಡಿಸಲು ಕಳೆದ 2 ವರ್ಷದಲ್ಲಿ ರಾಜ್ಯದ ಎಲ್ಲ ವಿಧಾನಸಭಾ ಕ್ಷೇತ್ರಗಳಿಗೆ ಈಗಾಗಲೇ ಭೇಟಿ ನೀಡಿದ್ದಾರೆ. ಅವರ ನೇತೃತ್ವದಲ್ಲಿ ಕೈಗೊಂಡ ಮೈಸೂರು ಮುಡಾ ಹಗರಣದ ಪಾದಯಾತ್ರೆ, ವಾಲ್ಮೀಕಿ ಹಗರಣ ಕುರಿತಾದ ಹೋರಾಟ, ಬೆಲೆ ಏರಿಕೆ ಖಂಡಿಸಿ ನಡೆಸಿದ ಅಹೋರಾತ್ರಿ ಧರಣಿ, ಬೆಲೆ ಏರಿಕೆ ವಿರುದ್ಧ ರಾಜ್ಯಾದ್ಯಂತ ಕೈಗೊಂಡ ಜನಾಕ್ರೋಶ ಯಾತ್ರೆ, ಕಬ್ಬು ಬೆಳೆಗಾರರ ಹೋರಾಟ, ರಾಜ್ಯ ಸರಕಾರದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅನುದಾನದ ದುರ್ಬಳಕೆಯ ವಿರುದ್ಧ ಹೋರಾಟ, ರಾಜ್ಯ ಸರಕಾರದ ಶೂನ್ಯ ಅಭಿವೃದ್ಧಿಯ ವಿರುದ್ಧ ನಡೆಸಿದ ಹೋರಾಟಗಳ ಮೂಲಕ ಜನಸಾಮಾನ್ಯರ ದೈನಂದಿನ ಸಮಸ್ಯೆಗಳ ಕುರಿತು ಸರಕಾರದ ಗಮನಸೆಳೆದು ಕಾಂಗ್ರೆಸ್ ಸರಕಾರದ ಜನವಿರೋಧಿ ಆಡಳಿತದ ವಿರುದ್ಧ ಹೋರಾಟ ರೂಪಿಸುವಲ್ಲಿ ನೇತೃತ್ವ ವಹಿಸಿದ್ದಾರೆ. ಅಧ್ಯಕ್ಷರ ಯಶಸ್ವಿ ನೇತೃತ್ವದಿಂದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೆಚ್ಚಿನ ಮನ್ ಕೀ ಬಾತ್ ಕಾರ್ಯಕ್ರಮದ ಅನುಷ್ಠಾನದಲ್ಲಿ ಕರ್ನಾಟಕ 3ನೇ ಸ್ಥಾನದಲ್ಲಿರುವುದು ನಮ್ಮೆಲ್ಲರಿಗೆ ಹೆಮ್ಮೆ ತಂದಿದೆ ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.

ಚುನಾವಣೆಗಳ ಹಿನ್ನೆಲೆಯಲ್ಲಿ ಮುಂದೂಡಲ್ಪಡುತ್ತಿದ್ದ ಹಲವು ರಾಜ್ಯಗಳ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆಗೆ ಸದ್ಯದಲ್ಲೇ ಚಾಲನೆ ಸಿಗಲಿದ್ದು, ರಾಜ್ಯದಲ್ಲಿ ವಿಜಯೇಂದ್ರ ಬಣ, ವಿಜಯೇಂದ್ರ ವಿರೋಧಿ ಬಣ ಮತ್ತು ತಟಸ್ಥ ಬಣ ಎಂದು ಮೂರು ಬಣಗಳಾಗಿ ಸಂವಹನದ ಕೊರತೆ ಇತ್ತಾದರೂ, ಸಮರ್ಥ ಪ್ರತಿಪಕ್ಷವಾಗಿ ಬಿಜೆಪಿ ಕಾರ್ಯ ನಿರ್ವಹಿಸುತ್ತಿಲ್ಲ ಎನ್ನುವ ಆಪಾದನೆಯೂ ಕಾರ್ಯಕರ್ತರ ವಲಯದಲ್ಲೂ ಇದೆ. ಕರ್ನಾಟಕದಿಂದ ಹಲವು ವರದಿ ತರಿಸಿಕೊಂಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ, ಕೆಲವು ದಿನಗಳ ಹಿಂದೆ ಹಾಲಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರ ಹುಟ್ಟುಹಬ್ಬಕ್ಕೆ ದೂರವಾಣಿ ಮೂಲಕ ಶುಭ ಕೋರಿದ್ದರು. ಆ ವೇಳೆ, ಕಬ್ಬು ಬೆಳೆಗಾರರ ಅಹೋರಾತ್ರಿ ಹೋರಾಟದಲ್ಲಿ ರೈತರ ಜತೆಗಿದ್ದೇನೆ ಎಂದು ವಿಜಯೇಂದ್ರ, ಅಮಿತ್ ಶಾ ಅವರಿಗೆ ತಿಳಿಸಿದ್ದರು.

ರಾಜ್ಯ ಬಿಜೆಪಿಗೆ ಪೂರ್ಣ ಪ್ರಮಾಣದ ಅಧ್ಯಕ್ಷರನ್ನಾಗಿ ವಿಜಯೇಂದ್ರ ಅವರನ್ನು ಆಯ್ಕೆ ಮಾಡುವುದಕ್ಕೆ ಅಪಸ್ವರವೆತ್ತಿರುವ ಪಕ್ಷದ ತಟಸ್ಥ ಬಣ ಮತ್ತು ಅಸಮಾಧಾನಿತ ಬಣದವರನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ಹೊಸ ಅಧ್ಯಕ್ಷರ ಹೆಸರನ್ನು ಘೋಷಣೆ ಮಾಡಬೇಕೆನ್ನುವ ಧೋರಣೆ ಪಕ್ಷದ ವರಿಷ್ಠರು ಬಯಸಿದ್ದಾರೆ ಎನ್ನಲಾಗಿದ್ದು, ಕೇಂದ್ರ ಸಚಿವ ವಿ.ಸೋಮಣ್ಣ ರಾಜ್ಯ ಬಿಜೆಪಿ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿದ್ದಾರೆ. ಅಧ್ಯಕ್ಷ ಸ್ಥಾನ ನೀಡುವುದಾದರೆ ಕೇಂದ್ರ ಸಚಿವ ಸ್ಥಾನ ಸಹ ಬಿಟ್ಟು ಬರಲು ಸಿದ್ಧವೆನ್ನುವ ಸಂದೇಶ ನೀಡಿದ್ದಾರೆ ಎನ್ನಲಾಗಿದೆ. ಇದರೊಂದಿಗೆ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ಪಕ್ಷ ಅವಕಾಶ ನೀಡಿದರೆ ರಾಜ್ಯ ಬಿಜೆಪಿ ಅಧ್ಯಕ್ಷ ಗಾದಿಗೇರಲು ಒಲವು ಹೊಂದಿದ್ದಾರೆ ಎನ್ನಲಾಗಿದೆ.

ಕೇಂದ್ರ ಸಚಿವ ಜೋಶಿಯಿಂದ ಬದುಕುಳಿದವರು ಕಂಡಂತೆ! ಲೋಕಾರ್ಪಣೆ

ಇಂದು ಭಟ್ಟರ 103ನೇ ಪುಸ್ತಕ ಬಿಡುಗಡೆ

ಬೆಂಗಳೂರು: ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರು ಅನುವಾದಿಸಿರುವ 'ಬದುಕುಳಿದವರು ಕಂಡಂತೆ!' ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮ ಬೆಂಗಳೂರಿನ ಎಫ್‌ಕೆಸಿಸಿಐ ಸಭಾಂಗಣದಲ್ಲಿ ಭಾನುವಾರ ನಡೆಯಲಿದೆ.

2023ರಲ್ಲಿ ಇಸ್ರೇಲ್ ಮೇಲೆ ಹಮಾಸ್ ನಡೆಸಿದ ಅಮಾನವೀಯ ದಾಳಿಯಲ್ಲಿ ಬದುಕಿದವರ ನೋವಿನ ಕಥಾನಕ ಹಾಗೂ ಆನಂತರ ಇಸ್ರೇಲಿಗರು ಎದುರಿಸಿದ ಕಠಿಣ ಸವಾಲುಗಳ ರೋಚಕ ಕಥೆಗಳನ್ನು ಈ ಪುಸ್ತಕ ಒಳಗೊಂಡಿದೆ. ಇಸ್ರೇಲ್‌ನ ಯೇರ್ ಅಗಮೋನ್ ಹಾಗೂ ಓರಿಯಾ ಮೇವೊರೊಚ್ ಅವರು ಇಂಗ್ಲಿಷ್‌ನಲ್ಲಿ ರಚಿಸಿದ ಕೃತಿಯನ್ನು ವಿಶ್ವೇಶ್ವರ ಭಟ್ ಅವರು ಕನ್ನಡಕ್ಕೆ ಕನ್ನಡಕ್ಕೆ ಅನುವಾದಿಸಿದ್ದಾರೆ. ನೈಜ ಸಂಗತಿಗಳನ್ನು ಒಳಗೊಂಡಿರುವ ಈ ಪುಸ್ತಕವನ್ನು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಅವರು ಲೋಕಾರ್ಪಣೆಗೊಳಿಸಲಿದ್ದಾರೆ. ಇಸ್ರೇಲ್ ರಾಯ ಭಾರ ಕಚೇರಿಯ ಹಲವು ಅಧಿಕಾರಿಗಳು ಉಪಸ್ಥಿತರಿರ ಲಿದ್ದಾರೆ.



'ಬದುಕುಳಿದವರು ಕಂಡಂತೆ!' ಪುಸ್ತಕ 2023ರ ಅ.7ರ ಮುಂಜಾನೆ ಹಮಾಸ್ ಉಗ್ರರು ಇಸ್ರೇಲಿನ ಮೇಲೆ ನಡೆಸಿದ ಹತ್ಯಾಕಾಂಡದ ಡಾರ್ಕ್ ಡೈರಿ. ಊರಿಗೆ ಊರೇ ಹೆಣಗಳ ರಾಶಿ. ಇಂತಹ ಕರಾಳ ಲೋಕದಲ್ಲಿ ಮಾನವೀಯತೆ ಸತ್ತೇ ಹೋಯಿತು ಎಂದು ಎಲ್ಲರೂ ಕೈಚೆಲ್ಲಿ ಕೂತಾಗ, ಬದುಕುಳಿದವರು ಎದೆಯಲ್ಲಿ ಧಾವಾಗ್ನಿ ತುಂಬಿಕೊಂಡು ಹೋರಾಟಕ್ಕೆ ಅಣಿಯಾದರು. ಈ ಪುಸ್ತಕದಲ್ಲಿ ಜೀವಗಳು ಸಾವಿನ ಕದ ಬಡಿದು, ಮರಳಿ ಬಂದು ಹೇಳಿದ ರೋಚಕ ಕಥೆಗಳಿವೆ. ಪುಸ್ತಕದಲ್ಲಿ ಮರೆಯಲಾಗದ, ಊಹಿಸಲಾಗದ ಕಥೆಗಳಿವೆ. ಜತೆಗೆ ಕೇವಲ ನೋವಿನ ಕಥೆಗಳಾಗಿರದೇ, ಕಠಿಣ ಸವಾಲನ್ನು ಎದುರಿಸಿ ನಿಂತ ಮಾನವ ಚೇತನದ ಸ್ಫೂರ್ತಿಯ ಸೆಲೆಯಾಗಿದೆ.

ಈ ಕಥಾನಕಗಳನ್ನು ವಿಶ್ವೇಶ್ವರ ಭಟ್ಟರು ಕೇವಲ ಅನುವಾದಿಸದೇ, ನೆತ್ತರು ಹರಿದ ನೆಲದಲ್ಲಿ ನಿಂತು ಅಲ್ಲಿನ ನೋವು, ಸಂಕಟ ಮತ್ತು ಬಿಸಿಯುಸಿರನ್ನು ಅನುಭವಿಸಿಯೇ ಬರೆದಿದ್ದಾರೆ.

ಕಬ್ಬಿನ ದರ ನಿಗದಿಗೆ ಆಗ್ರಹಿಸಿ ಉರುಳು ಸೇವೆ

ಬೀದರ್: ಟನ್ ಕಬ್ಬಿಗೆ 3200 ರು. ದರ ನಿಗದಿಪಡಿಸಬೇಕು ಎಂದು ಆಗ್ರಹಿಸಿ ಬೀದರ್‌ನಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ನೇತೃತ್ವದಲ್ಲಿ ರೈತರಿಂದ ಉರುಳು ಸೇವೆ ಮಾಡುವ ಮೂಲಕ ಪ್ರತಿಭಟನೆ ನಡೆಯಿತು.

ರೈತ ಸಂಘದ ಜಿಲ್ಲಾ ಉಪಾಧ್ಯಕ್ಷ ಕರಬಸಪ್ಪಾ ಹುಡಗಿ ಅವರು ನಗರದ ಅಂಬೇಡ್ಕರ್ ವೃತ್ತದಿಂದ ಉರುಳು ಸೇವೆ ಆರಂಭಿಸಿ ಶಿವಾಜಿ ವೃತ್ತದ ಬಳಿ ಇರುವ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರ ಕಚೇರಿವರೆಗೆ ಮಾಡಿದರು. ಕಬ್ಬಿನ ಬೆಲೆ ನಿಗದಿ ಕುರಿತು ನಮ್ಮ ಬೇಡಿಕೆಯನ್ನು ಸರಕಾರ ಹಾಗೂ ಜಿಲ್ಲಾಡಳಿತ ತಕ್ಷಣ ಈಡೇರಿಸಬೇಕು. ಬೇಡಿಕೆ ಈಡೇರಿಸದಿದ್ದರೆ ಮುಂದಿನ ದಿನಗಳಲ್ಲಿ ಇನ್ನಷ್ಟು ತೀವ್ರ ಹಾಗೂ ವಿನೂತನ ಪ್ರತಿಭಟನೆಗಳನ್ನು ನಡೆಸಲಾಗುವುದು. ದರ ನಿಗದಿ ಪಡಿಸುವವರೆಗೆ ಹೋರಾಟ ಮುಂದುವರಿಯಲಿದೆ ಎಂದು ಎಚ್ಚರಿಸಿದರು.

ಬೀದರ್‌ಗೆ ಪ್ರತ್ಯೇಕ ದರವೇಕೆ?: ಕಲಬುರಗಿ ಮಾದರಿಯಲ್ಲಿ ಬೀದರ್ ಜಿಲ್ಲೆಯಲ್ಲಿ ದರ ನಿಗದಿಪಡಿಸಬೇಕು. ಕಲಬುರಗಿ ಜಿಲ್ಲೆಯಲ್ಲಿ 3.172 ರು. ಕಾರ್ಖಾನೆಗಳು ನೀಡಲು ಮುಂದಾಗಿರುವಾಗ ಇಲ್ಲಿ ಏಕೆ ಸಾಧ್ಯವಿಲ್ಲ? ಹೀಗಾಗಿ ಕಲಬುರಗಿ ಹಾಗೂ ಬೀದರ್‌ಗೆ ಪ್ರತ್ಯೇಕ ದರವೇಕೆ? ಎಂದು ಪ್ರಶ್ನಿಸಿದರು. ಜಿಲ್ಲೆಯ ಸಕ್ಕರೆ ಕಾರ್ಖಾನೆಗಳಲ್ಲಿ ರಿಕವರಿ ಚೋರಿ ನಡೆಯುತ್ತಿದೆ. ಈ ಬಗ್ಗೆ ಸಮಗ್ರ ತನಿಖೆ ನಡೆಸಬೇಕು. ಟನ್ ಕಬ್ಬಿಗೆ 3200 ದರ ನಿಗದಿಪಡಿಸಬೇಕು ಎಂದರು.

ಬೀದರ್ ಜಿಲ್ಲೆಯಲ್ಲಿ ಕಬ್ಬಿನ ದರ ನಿಗದಿಪಡಿಸಬೇಕು ಎಂದು ಆಗ್ರಹಿಸಿ ರೈತರಿಂದ ಉರುಳು ಸೇವೆ ಜರುಗಿತು.

26ರಂದು ಬೆಂಗಳೂರು ಚಲೋ

ಶಿವಮೊಗ್ಗ: ರಾಜ್ಯದಲ್ಲಿ ಕಬ್ಬಿನ ಬೆಲೆಯಲ್ಲಿ ಆಗು ತ್ತಿರುವ ಅನ್ಯಾಯವನ್ನು ತಡೆಯಲು ರಾಜ್ಯ ಬೆಲೆ ನಿಗದಿ ನೀತಿಯನ್ನು ರೂಪಿಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಘಟಕದ ಅಧ್ಯಕ್ಷ ಎಚ್.ಆರ್.ಬಸವರಾಜಪ್ಪ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪಂಪ್ಡ್ ಸ್ಟೋರೇಜ್ ಯೋಜನೆ ಕೈಬಿಡಬೇಕು, ಸರಕಾರ ಬಲವಂತದ ಭೂಸ್ವಾಧೀನಗಳನ್ನು ಕೈಬಿಡಬೇಕು. ಬಗರ್‌ಹುಕುಂ ಭೂಮಿಗಳನ್ನು ಒನ್‌ಟೈಮ್ ಸೆಟಲ್ಮೆಂಟ್ ಆಧಾರದಲ್ಲಿ ಹಂಚುವ ಗಟ್ಟಿ ತೀರ್ಮಾನ ವನ್ನು ಸರಕಾರ ಕೈಗೊಳ್ಳಬೇಕು. ಮೈಕ್ರೋ ಫೈನಾನ್ಸ್ ಹಾವಳಿಯಿಂದ ಜನಸಾಮಾನ್ಯರಿಗೆ ಆಗುತ್ತಿರುವ ಸಾಮಾಜಿಕ ಅವಮಾನ ಕ್ರಿಯೆಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು. ಎಲ್ಲ ಕಿರು ಹಣಕಾಸು ಸಂಸ್ಥೆಗಳನ್ನು ಆರ್‌ಬಿಐ ನಿಯಂತ್ರಣದಡಿ ತರಬೇಕು. ಸಣ್ಣ ರೈತರು ಮಾಡಿರುವ ಸಾಲ ಮನ್ನಾಕ್ಕೆ ರಾಜ್ಯ ಸರಕಾರ ಮುಂದಾಗಬೇಕು ಎಂದು ಒತ್ತಾಯಿಸಿದರು.

ಪ್ರತ್ಯೇಕ ಅಪಘಾತ: 7 ಸಾವು

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ಮತ್ತು ಮಂಗಳೂರು ತಾಲೂಕಿನ ಪಣಂಬೂರು ಮತ್ತು ಸುರಪುರ ತಾಲೂಕಿನ ಮಂಗಳೂರು ಗ್ರಾಮದಲ್ಲಿ ಸಂಭವಿಸಿದ ಪ್ರತ್ಯೇಕ ಅಪಘಾತಗಳಲ್ಲಿ ಒಟ್ಟು 7 ಮಂದಿ ಸಾವನ್ನಪ್ಪಿದ್ದಾರೆ.

ಮಂಗಳೂರು-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಬೆಂಗಳೂರು ಕಡೆಯಿಂದ ಉಡುಪಿ ಕಡೆಗೆ ತೆರಳುತ್ತಿದ್ದ ಇನ್ನೋವಾ ಕಾರು, ಚಾಲಕನ ನಿಯಂತ್ರಣ ತಪ್ಪಿ ಬಂಟ್ವಾಳ ಬಿ.ಸಿ. ರೋಡ್ ಬಳಿ, ನಾರಾಯಣ ಗುರು ವೃತ್ತಕ್ಕೆ ಶನಿವಾರ ಡಿಕ್ಕಿಯಾಗಿ ಮೂವರು ಮೃತಪಟ್ಟಿದ್ದಾರೆ. ಬೆಂಗಳೂರು ನಿವಾಸಿಗಳಾದ ರವಿ (64), ನಂಜಮ್ಮ (75), ರಮ್ಯಾ (23) ಮೃತರು. ಕಾರಿನಲ್ಲಿ 9 ಮಂದಿ ಪ್ರಯಾಣಿಸುತ್ತಿದ್ದರು. ಅವರಲ್ಲಿ, ಸುಶೀಲಾ, ಕೀರ್ತಿ ಕುಮಾರ್, ಕಿರಣ್, ಬಿಂದು, ಪ್ರಶಾಂತ್ ಹಾಗೂ ಚಾಲಕ ಸುಬ್ರಹ್ಮಣ್ಯ ಸೇರಿದಂತೆ ಉಳಿದ 6 ಮಂದಿ ಗಾಯಗೊಂಡಿದ್ದು, ಗಾಯಾಳುಗಳನ್ನು ಚಿಕಿತ್ಸೆಗಾಗಿ ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ವಾಹನದಲ್ಲಿ ಪ್ರಯಾಣಿಸುತ್ತಿದ್ದವರು ಸಂಬಂಧಿಕರು. ಈ ಅಪಘಾತದ ಬಗ್ಗೆ ಬಂಟ್ವಾಳ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಅಪಘಾತ: ಪಣಂಬೂರು ಜಂಕ್ಷನ್‌ನಲ್ಲಿ ಸಂಭವಿಸಿದ ಅಪಘಾತದಲ್ಲಿ ಮೂವರು ಸಾವನ್ನಪ್ಪಿದ್ದಾರೆ. ಮುಹಮ್ಮದ್ ಕುಂಞಿ (25), ಅಬೂಬಕ್ಕರ್ (65) ಮತ್ತು ಇಬ್ರಾಹಿಂ (68) ಮೃತಪಟ್ಟವರು. ಇವರು ಮಂಗಳೂರಿನ

ಕೊಣಾಜೆ ಬಳಿಯ ಮೊಂಟೆಪದವು ನಿವಾಸಿಗಳು. ದನವೊಂದು ರಸ್ತೆ ದಾಟುತ್ತಿರುವುದನ್ನು ನೋಡಿ ಮುಲ್ಕಿ ಕಡೆಯಿಂದ ಮಂಗಳೂರು ಕಡೆಗೆ ಬರುತ್ತಿದ್ದ ಗ್ಯಾಸ್ ಟ್ಯಾಂಕರ್ ಚಾಲಕ ತಕ್ಷಣ ನಿಲ್ಲಿಸಿದ್ದಾನೆ. ಆಗ ಅದರ ಹಿಂದೆ ಬರುತ್ತಿದ್ದ ಆಟೋ ರಿಕ್ಷಾವನ್ನೂ ನಿಲ್ಲಿಸಿದ್ದು, ಇದರಿಂದ ಹಿಂಬದಿಯಲ್ಲಿದ್ದ ಇನ್ನೋವಾ ಕಾರನ್ನು ಕೂಡ ಚಾಲಕ ನಿಲ್ಲಿಸಿದ್ದಾನೆ. ಆದರೆ ಇದೇ ಸಂದರ್ಭದಲ್ಲಿ ಹಿಂದುಗಡೆಯಿಂದ ಬರುತ್ತಿದ್ದ ಇನ್ನೊಂದು ಟ್ಯಾಂಕರ್ ವಾಹನ ರಭಸವಾಗಿ ಬಂದು ಇನ್ನೋವಾ ಕಾರಿಗೆ ಡಿಕ್ಕಿ ಹೊಡೆದ ಪರಿಣಾಮ ಕಾರು ಎಡಭಾಗಕ್ಕೆ ಹೋಗಿದೆ. ಈ ಸಮಯದಲ್ಲಿ ಆಟೋ ರಿಕ್ಷಾ ಎರಡೂ ಟ್ಯಾಂಕರ್ ವಾಹನಗಳ ಮಧ್ಯೆ ಸಿಲುಕಿಕೊಂಡು ಅಪ್ಪಚ್ಚಿಯಾಗಿದೆ. ಪರಿಣಾಮ ಆಟೋ ರಿಕ್ಷಾ ಚಾಲಕ ಹಾಗೂ ಇಬ್ಬರು ಪ್ರಯಾಣಿಕರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಬಸ್ ಹರಿದು 2 ವರ್ಷದ ಬಾಲಕಿ ಸಾವು

ಯಾದಗಿರಿ: ಕೆಕೆಆರ್‌ಟಿಸಿ ಬಸ್ ಹರಿದು ಎರಡು ವರ್ಷದ ಬಾಲಕಿ ಸಾವಿಗೀಡಾದ ಘಟನೆ ಸುರಪುರ ತಾಲೂಕಿನ ಮಂಗಳೂರು ಗ್ರಾಮದಲ್ಲಿ ಶನಿವಾರ ಜರುಗಿದೆ. ಕೂಡಲಗಿ ಗ್ರಾಮ ದಿಂದ ಸುರಪುರ ಕಡೆಗೆ ಸಾಗುತ್ತಿದ್ದ ಕೆಕೆಆರ್‌ಟಿಸಿ ಬಸ್, ಗ್ರಾಮದ ರಸ್ತೆಯಲ್ಲಿ ಹೋಗುತ್ತಿದ್ದಾಗ, ಮಗು ತನ್ನ ಮನೆಯಂಗಳದ ಸಮೀಪ ಆಟವಾಡುತ್ತಾ ಇದ್ದಕ್ಕಿದ್ದಂತೆ ರಸ್ತೆಯ ಕಡೆಗೆ ಬಂದಿದೆ. ಈ ಅನಿರೀಕ್ಷಿತ ಕ್ಷಣದಲ್ಲಿ ಬಸ್ ಚಾಲಕನಿಗೆ ನಿಯಂತ್ರಣ ಸಾಧಿಸಲು ಸಾಧ್ಯವಾಗದೇ ಅವಘಡ ಸಂಭವಿಸಿದೆ ಎನ್ನಲಾಗಿದೆ. ಬಸ್‌ನ ಎರಡು ಚಕ್ರಗಳು ಬಾಲಕಿಯ ಮೇಲೆ ಹರಿದ ಪರಿಣಾಮ, ಮಗುವಿನ ದೇಹವು ಸಂಪೂರ್ಣ ಛಿದ್ರವಾಗಿದ್ದು, ಕುಟುಂಬಸ್ಥರ ಆಕ್ರಂದನ ಮುಗಿಲುಮುಟ್ಟಿತ್ತು. ಈ ಘಟನೆ ಯಿಂದಾಗಿ ಮಂಗಳೂರು ಗ್ರಾಮದಲ್ಲಿ ಶೋಕ ಮಡುಗಟ್ಟಿದೆ.

ಕಾಂಗ್ರೆಸ್ ನಾಯಕರ ಮತಗಳ್ಳತನ ಆರೋಪಕ್ಕೆ ಬೆಲೆ ಇಲ್ಲ

ಮೈಸೂರು: ಮತಕಳ್ಳತನ ಮಾಡಲಾಗುತ್ತಿದೆ ಎಂಬ ಕಾಂಗ್ರೆಸ್ ನಾಯಕರ ಆರೋಪ ಹಾಗೂ ನಿರೂಪಣೆಗೆ ಬೆಲೆ ಇಲ್ಲವೆಂಬುದು ಬಿಹಾರ ವಿಧಾನಸಭಾ ಚುನಾವಣೆಯಿಂದ ಸಾಬೀತಾಗಿದೆ ಎಂದು ಬಿಜೆಪಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಮತ ಕಳ್ಳತನಕ್ಕೆ ಸಂಬಂಧಿಸಿದಂತೆ ಸಾಕ್ಷಿ ಇದ್ದರೆ ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸು ವಂತೆ ಹೇಳುತ್ತಲೇ ಬಂದಿದ್ದೇವೆ. ಆದರೆ, ಅವರು ಈವರೆಗೂ ದೂರು ಕೊಟ್ಟಿಲ್ಲ. ಆ ವಿಷಯವನ್ನು ಚುನಾವಣಾ ತಂತ್ರವನ್ನಾಗಿ ಬಳಸಿಕೊಂಡರಷ್ಟೆ. ಜನರ ದಿಕ್ಕು ತಪ್ಪಿಸುವುದು, ಅರ್ಧ ಸತ್ಯ ಹೇಳು ವುದು ಹಾಗೂ ಅಪಪ್ರಚಾರ ಮಾಡುವುದೇ ಕಾಂಗ್ರೆಸ್‌ನವರ ತಂತ್ರ. ಈ ನಿಟ್ಟಿನಲ್ಲಿ ಅವರು ಆತ್ಮಾವಲೋಕನ ಮಾಡಿಕೊಳ್ಳಲಿ ಎಂದರು.

ಉಜಿರೆಯಲ್ಲಿ ನರ್ಸಿಂಗ್ ಕಾಲೇಜು, ಕೃಷಿ ಕಾಲೇಜು ಪ್ರಾರಂಭ: ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಘೋಷಣೆ

ಧರ್ಮಸ್ಥಳ ಲಕ್ಷದೀಪೋತ್ಸವ: ಸಾವಿರಾರು ಭಕ್ತರಿಂದ ಪಾದಯಾತ್ರೆ

ಉಜಿರೆ: ಧರ್ಮಸ್ಥಳದ ವತಿಯಿಂದ ಉಜಿರೆಯಲ್ಲಿ ಈ ವರ್ಷ ನರ್ಸಿಂಗ್ ಕಾಲೇಜು ಪ್ರಾರಂಭಿಸಲಾಗುವುದು. ನೂರು ಎಕರೆ ಪ್ರದೇಶದಲ್ಲಿ ಕೃಷಿ ಕಾಲೇಜು ಆರಂಭಿಸಲು ಉದ್ದೇಶಿಸಲಾಗಿದೆ. ಕೃಷಿ ಕಾಲೇಜಿಗಾಗಿ ನೂರು ಎಕರೆ ಪ್ರದೇಶ ದೊರಕಿದಲ್ಲಿ ತಕ್ಷಣ ಕಾಲೇಜು ಸ್ಥಾಪನೆಯ ಪ್ರಕ್ರಿಯೆ ಪ್ರಾರಂಭಿಸಲಾಗುವುದು ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆಯವರು ಪ್ರಕಟಿಸಿದರು.

ಲಕ್ಷದೀಪೋತ್ಸವ ಪ್ರಾರಂಭದ ದಿನವಾದ ಶನಿವಾರ ಉಜಿರೆಯಿಂದ ಧರ್ಮಸ್ಥಳಕ್ಕೆ ಬಂದ ಸಾವಿರಾರು ಪಾದಯಾತ್ರಿಗಳನ್ನು ಅಮೃತವರ್ಷಿಣಿ ಸಭಾ ಭವನದಲ್ಲಿ ಉದ್ದೇಶಿಸಿ ಮಾತನಾಡಿದ ಅವರು, ತನ್ನ ಬಗ್ಗೆ ಹಾಗೂ ಧರ್ಮಸ್ಥಳ ಕ್ಷೇತ್ರದ ಬಗ್ಗೆ ಭಕ್ತರು, ಅಭಿಮಾನಿಗಳು ಹಾಗೂ ಸಾರ್ವಜನಿಕರು ತೋರುವ ಪ್ರೀತಿ, ವಿಶ್ವಾಸ, ಭಕ್ತಿ, ಶ್ರದ್ಧೆ ಮತ್ತು ಗೌರವ ಹಾಗೂ ನಾವೆಲ್ಲರೂ ಸದಾ ನಿಮ್ಮ ಜತೆ ಇದ್ದೇವೆ ಎಂದು ನೀಡುವ ಭರವಸೆ ತನಗೆ ಹೆಚ್ಚಿನ ಸೇವಾ ಕಾರ್ಯ ಮಾಡಲು ಉತ್ಸಾಹ, ಪ್ರೇರಣೆ ಮತ್ತು ನವ ಚೈತನ್ಯ ನೀಡುತ್ತದೆ ಎಂದು ಹೇಳಿದರು.

ಪಾದಯಾತ್ರೆಯು ಲಕ್ಷದೀಪೋತ್ಸವದ ಸಂಪ್ರದಾಯವಾಗಿ ಬೆಳೆದುಬಂದಿರುವುದು ಆಶಾದಾಯಕ ಬೆಳವಣಿಗೆಯಾಗಿದೆ ಎಂದು ಅವರು ಸಂತಸ ವ್ಯಕ್ತಪಡಿಸಿದರು. ಎಲ್ಲರಿಗೂ ಸನ್ಮಂಗಳವಾಗಿ ಲೋಕಕಲ್ಯಾಣವಾಗಲಿ ಎಂದು ಹೆಗ್ಗಡೆಯವರು ಹಾರೈಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ವಿಧಾನ ಪರಿಷತ್ ಸದಸ್ಯ ಕೆ.ಪ್ರತಾಪಸಿಂಹ ನಾಯಕ್, ಬದಲಾದ ಇಂದಿನ ಭಾರತದಲ್ಲಿ ನಮ್ಮತನವನ್ನು ಗುರುತಿಸಿ ಉಳಿಸಿಕೊಳ್ಳಲು ಸಾಮೂಹಿಕವಾಗಿ ಭಜನೆ, ಭೋಜನ, ಮಾತೃಭಾಷೆಯ ಬಳಕೆ, ಸಾತ್ವಿಕ ಉಡುಪುಗಳನ್ನು ಧರಿಸುವುದು, ತೀರ್ಥಯಾತ್ರೆ, ಪಾದಯಾತ್ರೆಯಂತಹ ಸತ್ಸಂಪ್ರದಾಯ ಬೆಳೆಸಿಕೊಂಡಾಗ ಸುಸಂಸ್ಕೃತ ಸಮಾಜ ನಿರ್ಮಾಣವಾಗುತ್ತದೆ. ಈ ದಿಸೆಯಲ್ಲಿ ಹೆಗ್ಗಡೆಯವರೇ ಸೂಕ್ತ ಸ್ಫೂರ್ತಿ ಹಾಗೂ ಪ್ರೇರಣೆ ನೀಡುವ ಆದರ್ಶ ಮಾರ್ಗದರ್ಶಕರು ಎಂದು ಅಭಿಪ್ರಾಯಪಟ್ಟರು.

ಶಾಸಕ ಹರೀಶ್ ಪೂಂಜ ಮಾತನಾಡಿ, ತಾನು ಪ್ರತಿವರ್ಷ ಉತ್ಸಾಹದಿಂದ ಪಾದಯಾತ್ರೆಯಲ್ಲಿ ಭಾಗವಹಿಸುತ್ತಿರುವುದಾಗಿ ಸಂತೋಷ ವ್ಯಕ್ತಪಡಿಸಿದರು. ವರ್ಷದಿಂದ ವರ್ಷಕ್ಕೆ ಪಾದಯಾತ್ರಿಗಳ ಸಂಖ್ಯೆ ಹೆಚ್ಚಾಗುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ ಎಂದರು. ಡಿ.ಹರ್ಷೇಂದ್ರ ಕುಮಾರ್, ಹೆಗ್ಗಡೆಯವರ ಕುಟುಂಬ ವರ್ಗದವರು, ಸೋನಿಯಾ ಯಶೋವರ್ಮ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಿಇಒ ಅನಿಲ್ ಕುಮಾರ್ ಮತ್ತು ದ.ಕ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಪಿ.ಶ್ರೀನಾಥ್ ಉಪಸ್ಥಿತರಿದ್ದರು.

ಉಜಿರೆಯ ರಬ್ಬರ್ ಸೊಸೈಟಿಯ ಉಪಾಧ್ಯಕ್ಷ ಅನಂತ ಭಟ್ ಮಚ್ಚಿಮಲೆ ಸ್ವಾಗತಿಸಿದರು. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಪ್ರಾದೇಶಿಕ ನಿರ್ದೇಶಕ ಆನಂದ ಸುವರ್ಣ ಧನ್ಯವಾದವಿತ್ತರು. ಶ್ರೀನಿವಾಸ್ ರಾವ್ ಧರ್ಮಸ್ಥಳ ಕಾರ್ಯಕ್ರಮ ನಿರ್ವಹಿಸಿದರು.

1 ಪಾದಯಾತ್ರಿಗಳು ಧರ್ಮಸ್ಥಳಕ್ಕೆ ಆಗಮಿಸಿದರು.

2 ಶಾಸಕ ಹರೀಶ್ ಪೂಂಜ ರಾಜ್ಯಮಟ್ಟದ ವಸ್ತುಪ್ರದರ್ಶನವನ್ನು ಉದ್ಘಾಟಿಸಿದರು.

> ಪ್ರಸ್ತುತ ಜನರಲ್ಲಿ ಅನೇಕ ಸಂದೇಹಗಳು, ಸಂಶಯಗಳು ಮೂಡಿಬಂದು ಅನಾವಶ್ಯಕ ಅಪಾದನೆಗಳು ಕೇಳಿ ಬರುತ್ತಿವೆ. ಆದರೆ, ಶ್ರೀ ಮಂಜುನಾಥ ಸ್ವಾಮಿಯ ಅನುಗ್ರಹದಿಂದ ಹಾಗೂ ಎಲ್ಲ ಭಕ್ತರ ಪ್ರೀತಿ, ವಿಶ್ವಾಸದಿಂದ ಸರ್ವ ಆಪಾದನೆಗಳೂ ನಿವಾರಣೆಯಾಗಿ ತಾನು ಸಂತೋಷ ಮತ್ತು ತೃಪ್ತಿಯಿಂದ ಇದ್ದೇನೆ.
>
> - ಡಿ.ವೀರೇಂದ್ರ ಹೆಗ್ಗಡೆ, ಧರ್ಮಸ್ಥಳದ ಧರ್ಮಾಧಿಕಾರಿ

ಕಿಬೂತ್: ಇಸ್ರೇಲಿನ ಮರುಭೂಮಿಯಲ್ಲಿ ಹುಟ್ಟಿದ ಸಮಾಜದ ಮಾದರಿ

ಕಿಬೂತ್‌ನ ಸದಸ್ಯರೆಲ್ಲರೂ ಸಮಾನತೆಯ ತತ್ವದಲ್ಲಿ ಒಟ್ಟಿಗೆ ವಾಸಿಸುತ್ತಾರೆ ಮತ್ತು ಕೆಲಸ ಮಾಡುತ್ತಾರೆ. ಸದಸ್ಯರ ಅಗತ್ಯತೆಗಳು ಏನೇ ಇರಲಿ, ಅವರಿಗೆ ಸಮಾನವಾದ ಪಾಲನ್ನು ನೀಡಲಾಗುತ್ತದೆ. ಎಲ್ಲರಿಗೂ ಉಚಿತ ವಸತಿ, ಶಿಕ್ಷಣ, ಆರೋಗ್ಯ ರಕ್ಷಣೆ ಮತ್ತು ಅಗತ್ಯ ಸೇವೆಗಳನ್ನು ಒದಗಿಸಲಾಗುತ್ತದೆ. ಒಂದು ಅನನ್ಯ ಸಾಮೂಹಿಕ ಸಮುದಾಯದ ನೆಲೆಯಾಗಿರುವ ಕಿಬೂತ್‌ನಲ್ಲಿ ಸಾಮಾನ್ಯವಾಗಿ, ಸದಸ್ಯರು ಒಟ್ಟಿಗೆ ಒಂದು ದೊಡ್ಡ ಊಟದ ಕೋಣೆಯಲ್ಲಿ ಊಟ ಮಾಡುತ್ತಾರೆ. ಇದನ್ನು ಚದರ್ ಓಖೆಲ್ ಎಂದು ಕರೆಯಲಾಗುತ್ತದೆ. ಇದು ಇಡೀ ಸಮುದಾಯವು ಒಟ್ಟಿಗೆ ಊಟ ಮಾಡುವ ಕೇಂದ್ರಬಿಂದು.

ಇದೇ ಅಂತರಂಗ ಸುದ್ದಿ

ವಿಶ್ವೇಶ್ವರ ಭಟ್
vbhat@me.com

ಇಸ್ರೇಲಿನ ಸಮಾಜ ಜೀವನದ ಬೆನ್ನೆಲುಬು ಅಂದ್ರೆ ಕಿಬೂತ್ ಅಥವಾ ಕಿಬುಟ್ಜ್ (Kibbutz). ಹೀಬ್ರೂ ಭಾಷೆಯಲ್ಲಿ ಕಿಬೂತ್ ಅಂದ್ರೆ 'ಒಟ್ಟಿಗೆ ಸೇರುವುದು' ಎಂದರ್ಥ. ಇದು ಇಸ್ರೇಲ್‌ನ ಒಂದು ವಿಶಿಷ್ಟ ಮತ್ತು ಐತಿಹಾಸಿಕವಾದ ಸಮುದಾಯ ವಸಾಹತು (Communal Settlement) ಎನ್ನಬಹುದು. ಇದು ಸಾಮೂಹಿಕ ಜೀವನ, ಸಮಾನತೆ ಮತ್ತು ಸಮುದಾಯದ ಸಹಕಾರದ ತತ್ವಗಳ ಮೇಲೆ ರೂಪುಗೊಂಡಿರುವ ಒಂದು ಸಾಂಘಿಕ ವ್ಯವಸ್ಥೆ. ಕಿಬೂತ್ ಒಂದು ರೀತಿಯ ಸಾಮಾಜಿಕ-ಆರ್ಥಿಕ ಪ್ರಯೋಗವಾಗಿದ್ದು, ಅದು ಸಾಮೂಹಿಕ ಮಾಲೀಕತ್ವ (Collective Ownership) ದ ಬುನಾದಿಯ ಮೇಲೆ ನಿಂತಿದೆ. ಕಿಬೂತ್‌ನ ಎಲ್ಲ ಆಸ್ತಿಗಳು, ಭೂಮಿ, ಕಾರ್ಖಾನೆಗಳು, ಉಪಕರಣಗಳು ಮತ್ತು ಕೃಷಿ ಸಂಪನ್ಮೂಲಗಳು ಸಮುದಾಯಕ್ಕೆ ಸಾಮೂಹಿಕವಾಗಿ ಸೇರಿರುತ್ತವೆ. ಯಾರೊಬ್ಬರೂ ವೈಯಕ್ತಿಕವಾಗಿ ಆಸ್ತಿಯನ್ನು ಹೊಂದಿರುವುದಿಲ್ಲ.

ಕಿಬೂತ್‌ನ ಸದಸ್ಯರೆಲ್ಲರೂ ಸಮಾನತೆಯ ತತ್ವದಲ್ಲಿ ಒಟ್ಟಿಗೆ ವಾಸಿಸುತ್ತಾರೆ ಮತ್ತು ಕೆಲಸ ಮಾಡುತ್ತಾರೆ. ಸದಸ್ಯರ ಅಗತ್ಯತೆಗಳು ಏನೇ ಇರಲಿ, ಅವರಿಗೆ ಸಮಾನವಾದ ಪಾಲನ್ನು ನೀಡಲಾಗುತ್ತದೆ. ಎಲ್ಲರಿಗೂ ಉಚಿತ ವಸತಿ, ಶಿಕ್ಷಣ, ಆರೋಗ್ಯ ರಕ್ಷಣೆ ಮತ್ತು ಅಗತ್ಯ ಸೇವೆಗಳನ್ನು ಒದಗಿಸಲಾಗುತ್ತದೆ.

ಒಂದು ಅನನ್ಯ ಸಾಮೂಹಿಕ ಸಮುದಾಯದ ನೆಲೆಯಾಗಿರುವ ಕಿಬೂತ್‌ನಲ್ಲಿ ಸಾಮಾನ್ಯವಾಗಿ, ಸದಸ್ಯರು ಒಟ್ಟಿಗೆ ಒಂದು ದೊಡ್ಡ ಊಟದ ಕೋಣೆಯಲ್ಲಿ (Dining Hall) ಊಟ ಮಾಡುತ್ತಾರೆ. ಇದನ್ನು ಚದರ್ ಓಖೆಲ್ ಎಂದು ಕರೆಯಲಾಗುತ್ತದೆ. ಇದು ಇಡೀ ಸಮುದಾಯವು ಒಟ್ಟಿಗೆ ಊಟ ಮಾಡುವ ಕೇಂದ್ರಬಿಂದು. ಸುಮಾರು ಮೂವತ್ತು-ನಲವತ್ತು ವರ್ಷಗಳ ಹಿಂದಿನ ತನಕ, ಎಲ್ಲರ ಬಟ್ಟೆಗಳನ್ನು ಒಟ್ಟಿಗೆ ಒಂದೇ ದೊಡ್ಡ ಲಾಂಡ್ರಿಯಲ್ಲಿ ತೊಳೆದು, ಇಸ್ತ್ರಿ ಮಾಡಿ, ವಿತರಿಸುವ ಒಂದು ಕೇಂದ್ರೀಕೃತ ವ್ಯವಸ್ಥೆ ಇತ್ತು. ಸದಸ್ಯರು ಕೃಷಿ, ಕೈಗಾರಿಕೆ, ಶಾಲೆಗಳು ಮತ್ತು ಅಡುಗೆ ಮನೆಯಂತಹ ಸೇವೆಗಳಲ್ಲಿ ಸರದಿಯಂತೆ ಸಮುದಾಯದ ನಿರ್ವಹಣೆಗೆ ಅಗತ್ಯವಾದ ಯಾವುದೇ ಕೆಲಸವನ್ನು ಮಾಡಬೇಕಾಗಿತ್ತು.

ಸಾಮಾಜಿಕ ಸಮಾನತೆ ಮತ್ತು ಪರಸ್ಪರ ಸಹಕಾರದ ತತ್ವಗಳ ಮೇಲೆ ಕೆಲಸ ಮಾಡುವ ಸಾಂಪ್ರದಾಯಿಕ ಕಿಬೂತ್‌ನಲ್ಲಿ, ಸಮುದಾಯದ ಎಲ್ಲ ಆಸ್ತಿಗಳು ಸಾಮೂಹಿಕ ಒಡೆತನದಲ್ಲಿರುತ್ತವೆ ಮತ್ತು ಸದಸ್ಯರ ಎಲ್ಲ ಅಗತ್ಯಗಳನ್ನು (ವಸತಿ, ಆಹಾರ, ಶಿಕ್ಷಣ, ಆರೋಗ್ಯ ರಕ್ಷಣೆ) ಸಮುದಾಯವೇ ನೋಡಿಕೊಳ್ಳುತ್ತದೆ. ಇಸ್ರೇಲ್‌ನ ಸಮಾಜ ಮತ್ತು ಇತಿಹಾಸದಲ್ಲಿ ಪ್ರಮುಖ ಪಾತ್ರ ವಹಿಸಿದ ಕಿಬೂತ್‌ಗಳು, ಆರಂಭದಲ್ಲಿ ಕೃಷಿಯನ್ನು ಅವಲಂಬಿಸಿದ್ದರೂ, ಹೆಚ್ಚಿನ ಆಧುನಿಕ ಕಿಬೂತ್‌ಗಳು ಈಗ ಕೈಗಾರಿಕೆಗಳನ್ನು ಮತ್ತು ಹೈಟೆಕ್ ಉದ್ಯಮಗಳನ್ನು ಹೊಂದಿವೆ. 'ಇತ್ತೀಚಿನ ದಶಕಗಳಲ್ಲಿ, ಮೂಲ ಸಾಮೂಹಿಕ ನಿಯಮಗಳಲ್ಲಿ ಅನೇಕ ಬದಲಾವಣೆಗಳನ್ನು (ಖಾಸಗೀಕರಣ) ಅಳವಡಿಸಿಕೊಂಡಿದ್ದರೂ, ಇವು ಇಸ್ರೇಲಿನ ಸಮಾಜದ ಅಂತಃಶಕ್ತಿ ಎಂಬುದು ಗಮನಾರ್ಹ.

ಯಹೂದಿಗಳಿಗೆ ತಮ್ಮದೇ ಆದ ಒಂದು ಪ್ರತ್ಯೇಕ ನೆಲೆ ಎಂಬುದು ಇರಲಿಲ್ಲ, ಅವರು ಜಗತ್ತಿನ ಹಲವು ದೇಶಗಳಲ್ಲಿ ಹರಿದು ಹಂಚಿ ಹೋಗಿದ್ದರು. ಆಗಿನ್ನೂ ಇಸ್ರೇಲ್ ಎಂಬ ಪ್ರತ್ಯೇಕ ದೇಶ ಅಸ್ತಿತ್ವಕ್ಕೆ ಬಂದಿರಲಿಲ್ಲ. ಸಮಾನ ಚಿಂತನೆ ಹೊಂದಿದ ಹತ್ತಾರು ಯುವಕರು ಸೇರಿ, ಒಂದು ಸಂಘವನ್ನು ಸ್ಥಾಪಿಸಿಕೊಂಡು, ಆ ಮೂಲಕ ಸಾಂಘಿಕ ಚಟುವಟಿಕೆ ಮಾಡಲು ನಿರ್ಧರಿಸಿದ ಫಲವೇ ಕಿಬೂತ್. ನಮ್ಮ ಸಹಕಾರ ತತ್ವವೇ ಕಿಬೂತ್ ಚಿಂತನೆಯ ತಳಹದಿ ಎನ್ನಬಹುದು. ಆದರೆ ಕಿಬೂತ್ ಆಚರಣೆಯಲ್ಲಿ ಇನ್ನಷ್ಟು ಬಲವಾದ ಭಾವನಾತ್ಮಕ ನೆಲೆಗಟ್ಟನ್ನು ಹೊಂದಿರುವುದು ಗಮನಾರ್ಹ. ಮೊದಲ ಕಿಬೂತ್ ಅನ್ನು 1910ರಲ್ಲಿ, ಗ್ಯಾಲಿಲೀ ಸಮುದ್ರದ ಬಳಿ ಡೆಗಾನಿಯಾ ಎಂಬ ಹೆಸರಿನಲ್ಲಿ ಸ್ಥಾಪಿಸಲಾಯಿತು. ಮೊದಲಿಗೆ ಇವು ಕೃಷಿಯ ಮೇಲೆ ಹೆಚ್ಚು ಅವಲಂಬಿತವಾಗಿದ್ದವು ಮತ್ತು ಸಮಾಜವಾದಿ/ಜಿಯೋನಿಸ್ಟ್ ತತ್ವಗಳ ಪ್ರಬಲ ಪ್ರಭಾವವನ್ನು ಹೊಂದಿದ್ದವು.

ಒಂದು ಕಿಬೂತ್‌ನಲ್ಲಿ ನೂರು-ಇನ್ನೂರು ಜನರು ನಿರ್ದಿಷ್ಟ ಪ್ರದೇಶದಲ್ಲಿ ಸೇರಿ ಕೃಷಿ ಚಟುವಟಿಕೆಯನ್ನು ಆರಂಭಿಸುವುದು ಮತ್ತು ಬಂದ ಫಸಲನ್ನು ಮಾರಾಟ ಮಾಡಿ ಎಲ್ಲರೂ ಸಮಾನವಾಗಿ ಹಂಚಿಕೊಂಡು ಸಹಜೀವನ ನಡೆಸುವುದು ಆಶಯವಾಗಿತ್ತು. 1960 ಮತ್ತು 1970ರ ದಶಕದಲ್ಲಿ ಕಿಬೂತ್ ಸುವರ್ಣ ಯುಗವನ್ನು ಕಂಡಿತು. ಅಲ್ಲಿ ಅವುಗಳು ಇಸ್ರೇಲ್‌ನ ರಾಜಕೀಯ ಮತ್ತು ಆರ್ಥಿಕತೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದವು.

ಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದ ಕಿಬೂತ್ ಸದಸ್ಯರು, ಬಿಡುವಿನ ವೇಳೆಯಲ್ಲಿ ಪರಸ್ಪರರಿಗೆ ನೆರವಾಗುತ್ತಿದ್ದರು, ಕೌಟುಂಬಿಕ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಿದ್ದರು. ಇದು ಪರಸ್ಪರರ ಸಂಬಂಧವನ್ನು ಬಿಗಿಯಾಗಿ ಬೆಸೆಯಲು ಸಹಕಾರಿಯಾಯಿತು. ಇದು ನಿಧಾನವಾಗಿ ಗುಡಿ ಕೈಗಾರಿಕೆಗಳ ಬೆಳವಣಿಗೆಗೂ ನಾಂದಿಯಾಯಿತು. ಕಾಲಕ್ರಮೇಣ, ಅನೇಕ ಕಿಬೂತ್‌ಗಳು ತಮ್ಮ ಸಂಪೂರ್ಣ ಕೃಷಿ ಆರ್ಥಿಕತೆಯಿಂದ ಕೈಗಾರಿಕೆ ಮತ್ತು ಉನ್ನತ ತಂತ್ರಜ್ಞಾನದ (Hi-tech) ಉದ್ಯಮಗಳಿಗೆ ಬದಲಾದವು. ಕಿಬೂತ್‌ಗಳು ಹೆಚ್ಚು ವೈಯಕ್ತಿಕ ಮಾಲೀಕತ್ವ ಮತ್ತು ವೇತನ ವಿಭಜನೆಯನ್ನು ಅಳವಡಿಸಿಕೊಂಡು ಸುಧಾರಣೆಗಳಿಗೆ ಒಳಗಾದವು.

ಐತಿಹಾಸಿಕವಾಗಿ, ಕಿಬೂತ್‌ನಲ್ಲಿ ಮಕ್ಕಳು ತಮ್ಮ ಸಮಯವನ್ನು ಹೆತ್ತವರೊಂದಿಗೆ ಕಳೆಯುವ ಬದಲು, ದಿನದ ಬಹುಪಾಲು ವೇಳೆಯನ್ನು ಬೇರೆ ಮನೆಯಲ್ಲಿ, ಸಮುದಾಯದ ಆರೈಕೆದಾರರೊಂದಿಗೆ ಕಳೆಯುತ್ತಿದ್ದರು. ಇದನ್ನು 'ಸಾಮೂಹಿಕ ಮಕ್ಕಳ ಮನೆಗಳು' ಎಂದು ಕರೆಯಲಾಗುತ್ತಿತ್ತು. ಇದು ತಾಯಂದಿರಿಗೆ ಕೆಲಸ ಮಾಡಲು, ಹೆಚ್ಚಿನ ಸಮಯವನ್ನು ನೀಡಲು ಮತ್ತು ಸಮಾನತೆಯ ತತ್ವವನ್ನು ಬಲಪಡಿಸುವ ಉದ್ದೇಶ ಹೊಂದಿತ್ತು. ಇತ್ತೀಚಿನ ದಿನಗಳಲ್ಲಿ ಇದರ ರೂಪರೇಷೆ ಬದಲಾಗಿದ್ದರೂ, ನೂರಾರು ವರ್ಷಗಳವರೆಗೆ ಈ ಪರಂಪರೆಯೇ ಮುಂದುವರಿದುಕೊಂಡು ಬಂದಿತು.

ಇಸ್ರೇಲ್ ಸ್ಥಾಪನೆಯಾದ 1948ರಲ್ಲಿ ಕಿಬೂತ್‌ಗಳು ದೇಶದ ಶೇ.ಎಂಟರಷ್ಟು ಜನಸಂಖ್ಯೆಯನ್ನು ಹೊಂದಿದ್ದವು. ಆದರೆ ಅವುಗಳ ಪ್ರಭಾವ ಅಪಾರ. ಕಿಬೂತ್‌ನಲ್ಲಿ ಆಸ್ತಿ ಖಾಸಗಿಯಲ್ಲ- ಎಲ್ಲವೂ ಸಾಮೂಹಿಕ. ಒಬ್ಬರು ಕೆಲಸ ಮಾಡಿದರೆ, ಎಲ್ಲರಿಗೂ ಲಾಭ. ಮಕ್ಕಳನ್ನು ತಾಯಂದಿರಿಂದ ಪ್ರತ್ಯೇಕವಾಗಿ ಸಾಮೂಹಿಕ ಮನೆಗಳಲ್ಲಿ ಬೆಳೆಸುತ್ತಿದ್ದರು. ಆದರೆ ಈಗ ಇದು ಬದಲಾಗಿದೆ. ಇದು ಕಮ್ಯೂನಿಸಂನ ಒಂದು ರೂಪವೇ? ಹೌದು, ಆದರೆ ಯಹೂದಿ ಸಂಸ್ಕೃತಿಯೊಂದಿಗೆ ಮಿಶ್ರಿತ. ಕಾರ್ಲ್ ಮಾರ್ಕ್ಸ್ ಮತ್ತು ಮೋಶೆಯ ಧರ್ಮಗ್ರಂಥಗಳ ಸಂಗಮ ಎನ್ನಬಹುದು!

ಆರಂಭಿಕ ಕಿಬೂತ್ ಮಾದರಿಯಲ್ಲಿ, ಸದಸ್ಯರಿಗೆ ವೇತನ ಸಿಗುತ್ತಿರಲಿಲ್ಲ. ಬದಲಾಗಿ, ಸಮುದಾಯವು ಪ್ರತಿಯೊಬ್ಬ ಸದಸ್ಯನಿಗೆ ಅಗತ್ಯವಿರುವ ಎಲ್ಲವನ್ನೂ- ಬಟ್ಟೆ, ದಿನಸಿ, ಶೂ, ಶೌಚಾಲಯ ವಸ್ತುಗಳು, ವೈದ್ಯಕೀಯ ಆರೈಕೆ ಮತ್ತು ಕನಿಷ್ಠ ವಾರ್ಷಿಕ ಭತ್ಯೆ, ಪಾಕೆಟ್ ಮನಿ.. ಹೀಗೆ ಎಲ್ಲವನ್ನೂ ಸದಸ್ಯರಿಗೆ ಒದಗಿಸುತ್ತಿತ್ತು. ಪ್ರತಿಯೊಬ್ಬ ಸದಸ್ಯನು 'ತನ್ನ ಸಾಮರ್ಥ್ಯಕ್ಕೆ ಅನುಗುಣವಾಗಿ ಕೊಡುಗೆ ನೀಡಬೇಕು ಮತ್ತು ಅವನ ಅಗತ್ಯಕ್ಕೆ ಅನುಗುಣವಾಗಿ ಸ್ವೀಕರಿಸಬೇಕು' ಎಂಬ ತತ್ವವನ್ನು ಅನುಸರಿಸುತ್ತಿದ್ದರು. ಒಬ್ಬರ ಮನೆಯ ಮಕ್ಕಳನ್ನು ಎಲ್ಲರೂ ತಮ್ಮ ಮನೆಯ ಮಕ್ಕಳಂತೆ ನೋಡಿಕೊಳ್ಳುತ್ತಿದ್ದರು. ಹಾಗೆಯೇ ವೃದ್ಧರ ಯೋಗಕ್ಷೇಮ ಎಲ್ಲರ ಹೊಣೆಗಾರಿಕೆಯಾಗಿತ್ತು. ಒಬ್ಬರ ಮನೆಯಲ್ಲಿ ಮದುವೆಯಾದರೆ ಎಲ್ಲರೂ ತಮ್ಮದೇ ಮನೆಯ ಕಾರ್ಯಕ್ರಮವೇನೋ ಎಂಬ ರೀತಿಯಲ್ಲಿ ಪಾಲ್ಗೊಳ್ಳುವುದು ಅಲ್ಲಿನ ರೀತಿ-ರಿವಾಜು.

ಇಸ್ರೇಲ್‌ನ ಸ್ಥಾಪನೆಯ ಮೊದಲ ದಶಕಗಳಲ್ಲಿ, ಕಿಬೂತ್‌ಗಳು ಗಡಿ ಪ್ರದೇಶಗಳಲ್ಲಿ ಇದ್ದು, ದೇಶದ ರಕ್ಷಣೆಗೆ ಒಂದು ಪ್ರಮುಖ ಅಂಗವಾಗಿ ಕಾರ್ಯನಿರ್ವಹಿಸುತ್ತಿದ್ದವು. ಇಸ್ರೇಲಿನ ಸೇನೆ ಕಿಬೂತ್ ನೆರವನ್ನು ಅಪೇಕ್ಷಿಸಿದ ಸಾಕಷ್ಟು ನಿದರ್ಶನಗಳಿವೆ. ಇಸ್ರೇಲ್‌ನ ಅನೇಕ ಉನ್ನತ ಮಿಲಿಟರಿ ನಾಯಕರು ಮತ್ತು ಪ್ರಧಾನ ಮಂತ್ರಿಗಳು (ಉದಾಹರಣೆಗೆ, ಡೇವಿಡ್ ಬೆನ್-ಗುರಿಯನ್ ಸ್ವತಃ ನಿವೃತ್ತಿಯ ನಂತರ ಕಿಬೂತ್‌ನಲ್ಲಿ ವಾಸವಾಗಿದ್ದರು) ಕಿಬೂತ್ ಹಿನ್ನೆಲೆಯಿಂದ ಬಂದವರು. ಕಿಬೂತ್‌ನಲ್ಲಿ ಜನಿಸಿದ ಯಹೂದ್ ಬರಾಕ್ ಕೂಡ ಇಸ್ರೇಲಿನ ಪ್ರಧಾನಿಯಾಗಿದ್ದರು.

1950-70ರ ದಶಕಗಳಲ್ಲಿ ಕಿಬೂತ್‌ಗಳು ಇಸ್ರೇಲ್‌ನ ಕೃಷಿ ಉತ್ಪಾದನೆಯ ಶೇ.40ರಷ್ಟು ಕೊಡುಗೆಯನ್ನು ನೀಡುತ್ತಿದ್ದವು. ಡ್ರಿಪ್ ಇರಿಗೇಷನ್ (ಹನಿ ನೀರಾವರಿ) ತಂತ್ರವನ್ನು ಸಿಮ್ಚಾ ಬ್ಲಾಸ್ ಎಂಬ ಕಿಬೂತ್ ಸದಸ್ಯ ಕಂಡುಹಿಡಿದ. ಇದು ಇಂದು ವಿಶ್ವದಾದ್ಯಂತ ಬರಡು ಭೂಮಿಯನ್ನು ಹಸಿರಾಗಿಸುತ್ತಿದೆ. ಕಿಬೂತ್‌ಗಳು ಕೇವಲ ಆಹಾರ ಉತ್ಪಾದಿಸಲಿಲ್ಲ- ನೆಟಾಫಿಮ್ ಎಂಬ ಕಂಪನಿಯ ಮೂಲಕ ತಾಂತ್ರಿಕ ಕ್ರಾಂತಿಯನ್ನೂ ತಂದವು. ಇಂದು 'ನೆಟಾಫೆಮ್' ನೂರಾರು ದೇಶಗಳಿಗೆ ಹನಿ ನೀರಾವರಿ ಉಪಕರಣಗಳನ್ನು ಪೂರೈಸುವ ಜಾಗತಿಕ ಸಂಸ್ಥೆಯಾಗಿ ಬೆಳೆದಿದೆ.

ಕಿಬೂತ್‌ನಲ್ಲಿ ಸ್ತ್ರೀ-ಪುರುಷ ಸಮಾನರು. 1990ರ ದಶಕದಲ್ಲೇ ಮಹಿಳೆಯರು ಟ್ರ್ಯಾಕ್ಟರ್ ಓಡಿಸುತ್ತಿದ್ದರು, ಆಯುಧ ಹಿಡಿದು ದೇಶವನ್ನು ರಕ್ಷಿಸುತ್ತಿದ್ದರು. ಇಂದಿಗೂ ಇಸ್ರೇಲ್ ಸೈನ್ಯದಲ್ಲಿ ಮಹಿಳಾ ಸೈನಿಕರ ಸಂಖ್ಯೆ ಹೆಚ್ಚಿರುವುದಕ್ಕೆ ಕಿಬೂತ್ ಸಂಸ್ಕೃತಿಯೇ ಕಾರಣ. ಇಸ್ರೇಲ್‌ನ ಮೊದಲ ಮಹಿಳಾ ಪ್ರಧಾನಿ, ಗೋಲ್ಡಾ ಮೇಯಿರ್ ಕೂಡ ಕಿಬೂತ್‌ನಲ್ಲಿ ಬೆಳೆದವಳು. ಅವರು ಹೇಳಿದ್ದು- ''ಕಿಬೂತ್ ನನ್ನನ್ನು ರಾಜಕಾರಣಿಯನ್ನಾಗಿ ಮಾಡಿತು, ಏಕೆಂದರೆ ಅಲ್ಲಿ ನಾಯಕತ್ವ ಲಿಂಗಕ್ಕೆ ಸಂಬಂಧಿಸಿದ್ದಲ್ಲ''. 1948ರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕಿಬೂತ್‌ಗಳು ಮುಂಚೂಣಿಯಲ್ಲಿದ್ದವು. ಪಾಮಾಚ್ (ಕಿಬೂತ್ ಸೈನಿಕ ದಳ) ಇಸ್ರೇಲ್ ರಕ್ಷಣಾ ಪಡೆಯ (ಐಡಿಎಫ್) ಮೂಲವಾಯಿತು. ಇಂದಿಗೂ ಐಡಿಎಫ್ ಅತ್ಯುನ್ನತ ಅಧಿಕಾರಿಗಳಲ್ಲಿ ಅನೇಕರು ಕಿಬೂತ್ ಹಿನ್ನೆಲೆಯವರು.

ಕಿಬೂತ್‌ಗಳಲ್ಲಿ ಹುಟ್ಟಿದ ಹಬೀಮಾ ಥಿಯೇಟರ್, ಇಸ್ರೇಲ್‌ನ ರಾಷ್ಟ್ರೀಯ ನಾಟಕ ಕಂಪನಿ. ಹೀಬ್ರೂ ಭಾಷೆಯ ಪುನರುಜ್ಜೀವನಕ್ಕೆ ಕಿಬೂತ್ ಶಾಲೆಗಳು ಮಹತ್ವದ ಪಾತ್ರ ವಹಿಸಿದವು. ಕಿಬೂತ್‌ಗಳು ಮರುಭೂಮಿಯನ್ನು ಅರಣ್ಯವನ್ನಾಗಿ ಮಾಡಿದವು. ಯತಿರ್ ಫಾರೆಸ್ಟ್ ಎಂಬ ಮೂವತ್ತು ಲಕ್ಷ ಮರಗಳ ಅರಣ್ಯವನ್ನು ಕಿಬೂತ್ ಸದಸ್ಯರು ನೆಟ್ಟರು. ವೈಜ್‌ಮನ್ ಇನ್ಸ್ಟಿಟ್ಯೂಟ್‌ನ ಸಂಶೋಧಕರಲ್ಲಿ ಅನೇಕರು ಕಿಬೂತ್‌ನಿಂದ ಬಂದವರು. ಕ್ಯಾನ್ಸರ್ ಸಂಶೋಧನೆಯಲ್ಲಿ ಇವರ ಕೊಡುಗೆ ಅಪಾರ.

ಸಾಮೂಹಿಕ ಮಾದರಿಯಾಗಿದ್ದರೂ, ಅನೇಕ ಕಿಬೂತ್‌ಗಳು ಕೇವಲ ಕೃಷಿಯಲ್ಲದೇ, ಕೈಗಾರಿಕೆ ಮತ್ತು ತಂತ್ರಜ್ಞಾನದಲ್ಲಿ (ಉದಾಹರಣೆಗೆ, ಪ್ಲಾಸ್ಟಿಕ್, ಆಹಾರ ಸಂಸ್ಕರಣೆ ಮತ್ತು ನೀರಾವರಿ ತಂತ್ರಜ್ಞಾನ) ಅಪಾರ ಯಶಸ್ಸನ್ನು ಕಂಡಿವೆ. ಇಸ್ರೇಲ್‌ನ ಒಟ್ಟು ರಫ್ತಿನಲ್ಲಿ ಕಿಬೂತ್‌ಗಳು ಮಹತ್ವದ ಪಾತ್ರವನ್ನು ವಹಿಸುತ್ತಿವೆ.

ಅನೇಕ ಕಿಬೂತ್‌ಗಳು ನೀರಾವರಿ ತಂತ್ರಜ್ಞಾನ, ಪ್ಲಾಸ್ಟಿಕ್ ಉತ್ಪಾದನೆ ಮತ್ತು ರಕ್ಷಣಾ ಉದ್ಯಮದಂಥ ಯಶಸ್ವಿ ಹೈಟೆಕ್ ಕೈಗಾರಿಕೆಗಳನ್ನು ಸ್ಥಾಪಿಸಿವೆ. ಪ್ರಪಂಚದಾದ್ಯಂತ ಜನಪ್ರಿಯವಾಗಿರುವ ಅನೇಕ ಇಸ್ರೇಲಿ ಉತ್ಪನ್ನಗಳು (ಉದಾಹರಣೆಗೆ, ಟೊಮೆಟೊ ಸಾಸ್, ಡ್ರಿಪ್ ಇರಿಗೇಷನ್ ಸಿಸ್ಟಮ್‌ಗಳು) ಕಿಬೂತ್ ಕಾರ್ಖಾನೆಗಳಲ್ಲಿ ಉತ್ಪಾದನೆಯಾಗುತ್ತವೆ.

ಈಗಲೂ ಕಿಬೂತ್‌ನ ಎಲ್ಲ ಪ್ರಮುಖ ನಿರ್ಧಾರಗಳನ್ನು ಸಾಮಾನ್ಯವಾಗಿ, ವಾರಕ್ಕೊಮ್ಮೆ ನಡೆಯುವ ಸದಸ್ಯರ ಸಾಮಾನ್ಯ ಸಭೆಯಲ್ಲಿ ಬಹುಮತದ ಮೂಲಕ ತೆಗೆದುಕೊಳ್ಳಲಾಗುತ್ತದೆ.

ಜಾಗತೀಕರಣ ಮತ್ತು ಆಧುನೀಕರಣದ ಹೊಡೆತಕ್ಕೆ ಸಿಕ್ಕು ಇತ್ತೀಚಿನ ದಶಕಗಳಲ್ಲಿ, ಸುಮಾರು ಶೇ. 80ರಷ್ಟು ಕಿಬೂತ್‌ಗಳು ಭಾಗಶಃ ಖಾಸಗೀಕರಣಗೊಂಡಿವೆ. ಇದರರ್ಥ ಸದಸ್ಯರು ಈಗ ವೇತನವನ್ನು ಪಡೆಯುತ್ತಾರೆ ಹಾಗೂ ತಮ್ಮ ಊಟ ಮತ್ತು ಇತರ ಸೇವೆಗಳಿಗೆ ಪಾವತಿಸಬೇಕಾಗುತ್ತದೆ. ಇಸ್ರೇಲ್‌ನ ಒಟ್ಟು ಜನಸಂಖ್ಯೆಯಲ್ಲಿ ಕಿಬೂತ್‌ನ ಸದಸ್ಯರು ಕೇವಲ ಶೇ.3 ರಷ್ಟಿದ್ದರೂ, ದೇಶದ ಇತಿಹಾಸ, ಆರ್ಥಿಕತೆ ಮತ್ತು ಸಂಸ್ಕೃತಿಯ ಮೇಲೆ ಅವರ ಪ್ರಭಾವವು ಅತಿ ದೊಡ್ಡದಾಗಿದೆ.

ಇತ್ತೀಚಿನ ಅಂದಾಜಿನ ಪ್ರಕಾರ, ಇಸ್ರೇಲ್‌ನಲ್ಲಿ ಸುಮಾರು 250ರಿಂದ 270 ಕಿಬೂತ್‌ಗಳಿವೆ. ಈ ಸಮುದಾಯಗಳಲ್ಲಿ ಒಟ್ಟಾಗಿ ಸುಮಾರು ಒಂದೂವರೆ ಲಕ್ಷ ಜನರು ವಾಸಿಸುತ್ತಿದ್ದಾರೆ. ಇತ್ತೀಚಿನ ದಶಕಗಳಲ್ಲಿ ಅವುಗಳ ಸ್ವರೂಪ ಬದಲಾಗಿದ್ದರೂ (ಸಾಮೂಹಿಕ ಜೀವನಶೈಲಿಯಿಂದ ಖಾಸಗೀಕರಣದತ್ತ), ಅವು ಇಸ್ರೇಲ್‌ನ ಸಮಾಜ ಮತ್ತು ಆರ್ಥಿಕತೆಯಲ್ಲಿ ಇಂದಿಗೂ ಪ್ರಮುಖ ಪಾತ್ರ ವಹಿಸುತ್ತಿವೆ.

1980ರ ಆರ್ಥಿಕ ಬಿಕ್ಕಟ್ಟಿನ ನಂತರ ಕಿಬೂತ್‌ಗಳು ಖಾಸಗೀಕರಣಕ್ಕೆ ಒಳಗಾಗಿದ್ದು ನಿಜ. ಈಗ ಬಹುತೇಕ ಕಿಬೂತ್‌ಗಳಲ್ಲಿ ಸದಸ್ಯರು ಸಂಬಳಕ್ಕಾಗಿ ಕೆಲಸ ಮಾಡುತ್ತಾರೆ, ಖಾಸಗಿ ಮನೆಗಳನ್ನು ಹೊಂದಿದ್ದಾರೆ. ಆದರೆ ಮೂಲ ತತ್ವಗಳು- ಪರಸ್ಪರ ಸಹಾಯ, ಶಿಕ್ಷಣ, ಸಮುದಾಯ- ಹಾಗೇ ಉಳಿದಿವೆ. ಉದಾಹರಣೆಗೆ ಕಿಬೂತ್ ಸ್ಡೆ ಎಲಿಯಾಹು- ಇದು ಪ್ಲಾಸ್ಟಿಕ್ ಉದ್ಯಮದಲ್ಲಿ ವಿಶ್ವದರ್ಜೆಯ ಕಂಪನಿಯನ್ನು ನಡೆಸುತ್ತದೆ. ಕಿಬೂತ್ ಗನ್ ಶಮುಯೆಲ್ ತನ್ನ ಜ್ಯೂಸ್ ಬ್ರಾಂಡ್‌ನೊಂದಿಗೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿದೆ. ಆದರೆ ಲಾಭದ ಜತೆಗೆ ಸಮಾಜಸೇವೆಯೂ ಮುಂದುವರಿದಿದೆ. ಅನೇಕ ಕಿಬೂತ್‌ಗಳು ಸ್ವಯಂಸೇವಕರಿಗೆ ತೆರೆದಿವೆ, ವಿದೇಶಿ ಪ್ರವಾಸಿಗರನ್ನು ಸ್ವಾಗತಿಸುತ್ತವೆ.

ಇಂದು ಕಿಬೂತ್‌ಗಳ ಸಂಖ್ಯೆ ಹೆಚ್ಚು-ಕಮ್ಮಿ ಸ್ಥಿರವಾಗಿದೆ. ಗಮನಾರ್ಹ ಸಂಗತಿ ಅಂದ್ರೆ, ಅವುಗಳ ಸಂಖ್ಯೆ ಹೆಚ್ಚಾಗುತ್ತಿಲ್ಲ. ಯುವ ಜನರು ನಗರಗಳತ್ತ ಒಲವು ತೋರುತ್ತಾರೆ. ಆದರೆ ಕೋವಿಡ್ ಸಮಯದಲ್ಲಿ ಕಿಬೂತ್‌ಗಳು ಸಾಮೂಹಿಕ ಪರೀಕ್ಷೆ, ಆಹಾರ ವಿತರಣೆ, ವೃದ್ಧರ ಆರೈಕೆಗೆ ಮಾದರಿಯಾದವು. ಇದು ಕಿಬೂತ್ ಮಾದರಿ ಇನ್ನೂ ಪ್ರಸ್ತುತ ಎಂಬುದನ್ನು ತೋರಿಸುತ್ತದೆ.

ಭವಿಷ್ಯದಲ್ಲಿ ಕಿಬೂತ್‌ಗಳು 'ಎಕೋ-ವಿಲೇಜ್'ಗಳಾಗಿ ಬದಲಾಗಬಹುದು ಎನ್ನಲಾಗುತ್ತಿದೆ. ಕಿಬೂತ್ ಕೇಟುರಾ ಈಗಾಗಲೇ ಸೌರಶಕ್ತಿ ಮತ್ತು ಪರಿಸರ ಸಂರಕ್ಷಣೆಯಲ್ಲಿ ಮುಂಚೂಣಿಯಲ್ಲಿದೆ. ಅರಬ್-ಯಹೂದಿ ಸಹಬಾಳ್ವೆಯ ಪ್ರಯೋಗಗಳೂ ನಡೆಯುತ್ತಿವೆ. ಕಿಬೂತ್ ಇಸ್ರೇಲ್‌ನ ಸಮಾಜ ವ್ಯವಸ್ಥೆಯಲ್ಲಿ ಕೇವಲ ಒಂದು ಭಾಗವಲ್ಲ. ಅದು ನಿಸ್ಸಂದೇಹವಾಗಿ ಆ ದೇಶದ ಆತ್ಮ. ಇದು ಯಹೂದಿ ಜನತೆಯ ಸಹನಶೀಲತೆ, ಸೃಜನಶೀಲತೆ ಮತ್ತು ಸಾಮೂಹಿಕತೆಯ ಸಂಕೇತ. ಒಬ್ಬ ಕಿಬೂತ್ ಸದಸ್ಯ ಹೇಳಿದಂತೆ, 'ನಾವು ಒಟ್ಟಿಗೆ ಕೆಲಸ ಮಾಡುತ್ತೇವೆ, ಏಕೆಂದರೆ ಒಟ್ಟಿಗೆ ಬದುಕುವುದೇ ನಮ್ಮ ಧರ್ಮ'.

ಇಸ್ರೇಲಿನ ಅಂತಃಶಕ್ತಿಯಿರುವುದು ಕಿಬೂತ್‌ನಲ್ಲಿ ಎಂಬುದು ಹಮಾಸ್ ಉಗ್ರರಿಗೂ ಗೊತ್ತಿತ್ತು. ಹೀಗಾಗಿ ಅವರು ಎರಡು ವರ್ಷಗಳ ಹಿಂದೆ (2023 ರ ಅಕ್ಟೋಬರ್ ಏಳರಂದು) ನಾಲ್ಕೈದು ಕಿಬೂತ್ ಮೇಲೆ ಏಕಾಏಕಿ ಆಕ್ರಮಣ ಮಾಡಿದ್ದು. ಒಂದು ಕಿಬೂತ್ ಮೇಲೆ ದಾಳಿ ಮಾಡಿದರೆ ಅದು ದೇಶದೆಲ್ಲೆಡೆ ಇರುವ ಕಿಬೂತ್ ಮೇಲೆ ಪರಿಣಾಮ ಬೀರುತ್ತದೆ ಮತ್ತು ಆ ಮೂಲಕ ಅದು ದೇಶದ ಆತ್ಮ ಎಂದು ಕರೆಯಿಸಿಕೊಂಡ ಎಲ್ಲ ಕಿಬೂತ್‌ಗಳ ಮೇಲೆ ವ್ಯತಿರಿಕ್ತ ಪ್ರಭಾವ ಬೀರುತ್ತದೆ ಎಂದು ಭಾವಿಸಿಯೇ ಆ ಕ್ರಮಕ್ಕೆ ಮುಂದಾಗಿದ್ದು.

ಇಸ್ರೇಲ್‌ಗೆ ಹೋದಾಗ ನೀವು ಒಂದು ತೋಟಕ್ಕೆ ಹೋದರೆ, ಅಲ್ಲಿ ನಿಮಗೆ ಕಾಣುವುದು ಬರೀ ಕೃಷಿ ಚಟುವಟಿಕೆಯಷ್ಟೇ ಅಲ್ಲ. ಅಲ್ಲಿ ನಿಜವಾಗಿ ಅರಳುವುದು ಸಮಾನತೆ ಮತ್ತು ಸಹಜೀವನ.

ರಾ.ಹ.ದೇಶಪಾಂಡೆಯವರ ಕ್ಷಮೆ ಕೋರಿ ಸಿರಿಗನ್ನಡಂ ಬೇಗಲ್‌ಗೆ!

ಬೇಗಲ್ ಎಂಬುದು ಅಮೆರಿಕದಲ್ಲಿ ಸಾಮಾನ್ಯವಾಗಿ ಬೆಳಗಿನ ಒಂದು ತಿಂಡಿ ಪದಾರ್ಥ. ನಮ್ಮ ದೇಶದಲ್ಲಿ ಇಡ್ಲಿ ಇದ್ದಂತೆ ಎಂದು ಹೇಳಬಹುದು. ಇಡ್ಲಿಗಿಂತಲೂ ವಡೆ ಇದ್ದಂತೆ ಎಂದರೆ ಮತ್ತೂ ಸಮಂಜಸ. ಏಕೆಂದರೆ ಬೇಗಲ್ ಕೂಡ ಉದ್ದಿನ ವಡೆಯದೇ ಆಕಾರ. ನಡುವೆ ತೂತು ಸಹ ವಡೆಯಂತೆಯೇ. ಗಾತ್ರದಲ್ಲಿ ಬೇಗಲ್ ಉದ್ದಿನ ವಡೆಗಿಂತ ತುಸು ದೊಡ್ಡದು. ವಡೆಯನ್ನು ನಾವು ಎಣ್ಣೆಯಲ್ಲಿ ಕರಿದು ಮಾಡುತ್ತೇವಾದರೆ ಬೇಗಲ್ ತಯಾರಿಕೆಯ ವಿಧಾನ ಕೊಂಚ ಭಿನ್ನ.

ತಿಳಿರು ತೋರಣ

ಶ್ರೀವತ್ಸ ಜೋಶಿ
srivathsajoshi@yahoo.com

ಅಮೆರಿಕದಲ್ಲೂ ಈಗ ಕನ್ನಡ ಮಾಸಾಚರಣೆಯ ಭರಾಟೆ. ಈ ಸಲ ನವೆಂಬರ್ 1ನೆಯ ತಾರೀಕು ವಾರಾಂತ್ಯದಲ್ಲಿಯೇ ಬಂದಿದ್ದರಿಂದ ಇಲ್ಲಿನ ಕೆಲವು ಕನ್ನಡ ಸಂಘಗಳು ನವೆಂಬರ್ 1ರಂದೇ ಯಥಾಯೋಗ್ಯವಾಗಿ ಕನ್ನಡ ನುಡಿಹಬ್ಬ ಆಚರಿಸುವುದು ಸಾಧ್ಯವಾಯಿತು. ಹೀಗೇಕೆ ಹೇಳಿದೆನೆಂದರೆ ಇಲ್ಲಿ ಸಾಮಾನ್ಯವಾಗಿ ಯಾವುದೇ ಹಬ್ಬ/ಉತ್ಸವದ ಆಚರಣೆಗಾದರೂ ಸ್ವಲ್ಪ ಡೇಟ್ ಅಡ್ಜಸ್ಟ್‌ಮೆಂಟ್ ಮಾಡಬೇಕಾಗಿ ಬರುತ್ತದೆ. ಸ್ವಂತ ಕಟ್ಟಡ, ಸಭಾಂಗಣ ಇತ್ಯಾದಿ ಯಾವ ಕನ್ನಡ ಸಂಘದ ಬಳಿಯೂ ಇಲ್ಲವಾದ್ದರಿಂದ 400-500 ಜನ ಕುಳಿತುಕೊಳ್ಳಲಿಕ್ಕೆ ಆಗುವಷ್ಟು ದೊಡ್ಡ ಸಭಾಂಗಣ ನಗರದ ಯಾವ ಮಿಡ್ಲ್ ಸ್ಕೂಲ್/ಹೈಸ್ಕೂಲ್‌ನಲ್ಲಿ ಯಾವ ವಾರಾಂತ್ಯದಂದು ಬಾಡಿಗೆಗೆ ಲಭ್ಯವಿರುತ್ತದೆಯೋ (ಅದನ್ನೂ 2-3 ತಿಂಗಳ ಮೊದಲೇ ಕಾಯ್ದಿರಿಸಬೇಕು) ಆವತ್ತೇ ಆಚರಣೆ; ಸಾಂಸ್ಕೃತಿಕ ಕಾರ್ಯಕ್ರಮಗಳು, ಪುಷ್ಕಳವಾಗಿ ಹಬ್ಬದೂಟ ಇತ್ಯಾದಿ. ಕೆಲವೊಮ್ಮೆ ಕರ್ನಾಟಕದಿಂದ ಪ್ರವಾಸದಲ್ಲಿ ಬಂದ ಕಲಾವಿದರಿದ್ದರೆ ಅವರ ಲಭ್ಯತೆಯನ್ನನುಸರಿಸಿ ದಿನಾಂಕ ನಿಗದಿ ಆಗುವುದೂ ಇದೆ. ಹಾಗೆ ನಮ್ಮ ವಾಷಿಂಗ್ಟನ್ ಡಿಸಿ ಪ್ರದೇಶದ ಕಾವೇರಿ ಕನ್ನಡ ಸಂಘದಲ್ಲಿ ಮೊನ್ನೆ ನವೆಂಬರ್ 8ರಂದು ಆಚರಿಸಿದೆವು, ರಾಜ್ಯೋತ್ಸವ ಮತ್ತು ದೀಪಾವಳಿ ಒಟ್ಟು ಸೇರಿಸಿ. ಕೆನಡಾದ ಟೊರೊಂಟೊದಿಂದ ಯಕ್ಷಮಿತ್ರ ತಂಡದವರು ಬಂದು 'ವಾಲಿವಧೆ' ಯಕ್ಷಗಾನ ಪ್ರದರ್ಶನ ಮಾಡಿದರು. ಮತ್ತೆ ಇಲ್ಲಿನ ಮಕ್ಕಳಿಂದ, ಪುರುಷರಿಂದ ಸಮೂಹ ನೃತ್ಯಗಳು, ಯುವತಿಯರಿಂದ ಫ್ಯಾಷನ್ ಶೋ, ಕ್ರೀಡಾಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ ಇತ್ಯಾದಿ ಕಾರ್ಯಕ್ರಮಗಳು ಇದ್ದವು. ಅಧ್ಯಕ್ಷೆ ಡಾ.ರೋಹಿಣಿ ಬಾಣಾವರ ಕನ್ನಡಪರ ನಾಲ್ಕಾರು ಸಿಹಿಮಾತುಗಳನ್ನಾಡಿದರು. ಆಮೇಲೆ ಜೋಳದರೊಟ್ಟಿ-ಎಣಗಾಯಿ ಪಲ್ಯ, ಪಲಾವ್, ಪಾಯಸ, ಐಸ್‌ಕ್ರೀಮ್ ಇತ್ಯಾದಿ ವಿಶೇಷದ ರುಚಿಕರ ಊಟವಿತ್ತು. ಒಂದಿಷ್ಟು ಹರಟೆ, ಕಾಲಕ್ಷೇಪ ಮುಗಿಸಿ ನಾವೆಲ್ಲ ಮನೆಗಳಿಗೆ ತೆರಳಿದೆವು.

ಮಾರನೇ ದಿನವೋ ಏನೋ ಒಮ್ಮೆ ಹೀಗೇ ಯೋಚಿಸುತ್ತಿದ್ದಾಗ ನನಗನಿಸಿತು ಕನ್ನಡದ ಬಗ್ಗೆ ಭೀಷಣ ಭಾಷಣಗಳೇನೂ ಇಲ್ಲದೆಯೇ, ಏರುದನಿಯಲ್ಲಿ ಒಂದೆರಡು ಸರ್ತಿಯಾದರೂ ''ಸಿರಿಗನ್ನಡಂ ಗೆಲ್ಗೆ! ಸಿರಿಗನ್ನಡಂ ಬಾಳ್ಗೆ!'' ಘೋಷಣೆಗಳೂ ಇಲ್ಲದೆಯೇ ರಾಜ್ಯೋತ್ಸವ ಆಚರಿಸಿದೆವಲ್ಲ, ಅದರಿಂದ ಭುವನೇಶ್ವರಿ ತಾಯಿ ಬೇಸರ ಮಾಡಿಕೊಂಡಿರಲಾರಳೇ? 1893ರಷ್ಟು ಹಿಂದೆಯೇ ''ಸಿರಿಗನ್ನಡಂ ಗೆಲ್ಗೆ! ಸಿರಿಗನ್ನಡಂ ಬಾಳ್ಗೆ!'' ಘೋಷವಾಕ್ಯಗಳನ್ನು ಹುಟ್ಟುಹಾಕಿದ, ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿದ ಕನ್ನಡಭಕ್ತ ರಾಮಚಂದ್ರ ಹಣಮಂತರಾವ ದೇಶಪಾಂಡೆಯವರ ಆತ್ಮಕ್ಕೆ, ಆ ಘೋಷವಾಕ್ಯಗಳನ್ನು ನಾಡಿನೆಲ್ಲೆಡೆ ಪ್ರಚುರಪಡಿಸಿದ ಕನ್ನಡದ ಕಣ್ವ ಬಿಎಂಶ್ರೀಯವರ ಆತ್ಮಕ್ಕೆ ನಮ್ಮ ಸಿರಿಗನ್ನಡಂ ಗೆಲ್ಗೆ ಘೋಷಣೆರಹಿತ ರಾಜ್ಯೋತ್ಸವ ಆಚರಣೆಯಿಂದ ಬೇಸರವಾಗಿರಲಿಕ್ಕಿಲ್ಲವೇ? ಅಥವಾ, ''ಅಬ್ಬಾ ಆ ಕಿವಿಗಡಚಿಕ್ಕುವ ಅಬ್ಬರಕ್ಕಿಂತ ಇದೇ ವಾಸಿ!'' ಅಂತ ಅವರೆಲ್ಲ ಖುಷಿಪಟ್ಟಿರಬಹುದೇ? ನನ್ನ ಅನುಮಾನಕ್ಕೆ ಕಾರಣವೇನೆಂದರೆ ಕನ್ನಡಿಗರೆಲ್ಲ ಒಂದೇಕಡೆ ಸೇರಿ ಕನ್ನಡಹಬ್ಬದ ಆಚರಣೆ ಅಂದಮೇಲೆ ಅಲ್ಲಿ ''ಸಿರಿಗನ್ನಡಂ ಗೆಲ್ಗೆ!'' ಬಾರದಿದ್ದರೆ ಹೇಗೆ!? ಆಮೇಲೆ ನಾನೇ ಸಮಾಧಾನ ಮಾಡಿಕೊಂಡೆ ''ಸಿರಿಗನ್ನಡಂ ಗೆಲ್ಗೆ!'' ಅಂತ ಘೋಷಣೆ ಕೂಗೋದೊಂದೇ ಕನ್ನಡಪ್ರೀತಿಯ ಅಭಿವ್ಯಕ್ತಿ ಅಲ್ಲ, ನಾವು ಅಮೆರಿಕನ್ನಡಿಗರು ''ಸಿರಿಗನ್ನಡಂ ಬೇಗಲ್‌ಗೆ!'' ಎಂದು ಹೇಳಿದರೂ ತಾಯಿ ಭುವನೇಶ್ವರಿ ಸಂಪ್ರೀತಳಾಗುತ್ತಾಳೆ, ನಸುನಕ್ಕು ನಮ್ಮನ್ನು ಹರಸುತ್ತಾಳೆ, ಪಶ್ಚಾತ್ತಾಪ ಪಡುವಂಥದ್ದೇನಿಲ್ಲ ಅದರಲ್ಲಿ ಎಂದು.

ಕ್ಷಮಿಸಿ. ಇದನ್ನು ಅಷ್ಟೇನೂ ಸೀರಿಯಸ್ಸಾಗಿ ತಗೋಬೇಡಿ. ತಮಾಷೆಗೆ ಹಾಗಂದೆ ಅಷ್ಟೇ. ಆದರೂ ಒಮ್ಮೆ ತಮಾಷೆಗಂತಲೇ ನಾವೊಂದಿಷ್ಟು ಮಂದಿ ಆ ರೀತಿಯದೊಂದು ಘೋಷಣೆಯನ್ನು ಕಲ್ಪಿಸಿಕೊಂಡಿದ್ದು ನಿಜ. ಅದೇನಾಯ್ತೆಂದರೆ, ಕೆಲ ವರ್ಷಗಳ ಹಿಂದೆ ಇಲ್ಲಿ ನಡೆದಿದ್ದ ಒಂದು ವಿಶ್ವಕನ್ನಡ ಸಮ್ಮೇಳನದಲ್ಲಿ ಒಂದು ದಿನ ಬೆಳಗಿನ ತಿಂಡಿಗೆ ಏರ್ಪಾಡಾಗಿದ್ದ ಇಡ್ಲಿ-ವಡೆ ಎಲ್ಲ ಬೇಗ ಬೇಗ ಖಾಲಿಯಾಯ್ತು. ಕೊನೆಕೊನೆಗೆ ಬಂದವರಿಗೆ ಇಡ್ಲಿಯೂ ಇಲ್ಲ ವಡೆಯೂ ಇಲ್ಲ ಎಂದಾಯ್ತು. ಚಟ್ನಿಯಂತೂ ಮೊದಲೇ ಮುಗಿದಿತ್ತು. ಸಂಘಟಕರು ಸಮಯಸ್ಫೂರ್ತಿಯಿಂದ ತುರ್ತಾಗಿ ಒಂದಿಷ್ಟು ಬೇಗಲ್ ತರಿಸಿ ಪರಿಸ್ಥಿತಿಯನ್ನು ನಿಭಾಯಿಸಿದರು. ಕನ್ನಡ ಸಮ್ಮೇಳನದಲ್ಲೂ ಬಿಸಿಬಿಸಿ ಇಡ್ಲಿ-ವಡೆ, ಉಪ್ಪಿಟ್ಟು-ಕೇಸರಿಭಾತ್ ಚಪ್ಪರಿಸಲಾಗದೆ ಒಣಕಲು ಬೇಗಲ್ ತಿನ್ನಬೇಕಾಗಿ ಬಂದ ನಾವುಗಳು ಬೇರೆ ಉಪಾಯವಿಲ್ಲದೆ ''ಸಿರಿಗನ್ನಡಂ ಬೇಗಲ್ಗೆ!'' ಎಂದು ಮನಸ್ಸಿಲ್ಲದ ಮನಸ್ಸಿನಿಂದ ಸಂಭ್ರಮಿಸಿದ್ದೆವು. ಆವತ್ತಿಂದ ನನಗೆ ಸಿರಿಗನ್ನಡಂ ಗೆಲ್ಗೆ ಎಂದುಕೊಂಡಾಗಲೆಲ್ಲ ನೆನಪಾಗುವುದು ಸಿರಿಗನ್ನಡಂ ಬೇಗಲ್‌ಗೆ ಘೋಷಣೆಯೇ. ಹಾಗಾಗಿ ಇಂದಿನ ಅಂಕಣದಲ್ಲೂ ಇನ್ನುಮುಂದೆ ಬೇಗಲ್ ಬಗೆಗೇ ಬರೆಯುತ್ತೇನೆ.

ಬೇಗಲ್ ಇಲ್ಲಿ ಅಮೆರಿಕದಲ್ಲಿ ಸಾಮಾನ್ಯವಾಗಿ ಬೆಳಗಿನ ಒಂದು ತಿಂಡಿ ಪದಾರ್ಥ. ನಮ್ಮ ದೇಶದಲ್ಲಿ ಇಡ್ಲಿ ಇದ್ದಂತೆ ಎಂದು ಹೇಳಬಹುದು. ಇಡ್ಲಿಗಿಂತಲೂ ವಡೆ ಇದ್ದಂತೆ ಎಂದರೆ ಮತ್ತೂ ಸಮಂಜಸ. ಏಕೆಂದರೆ ಬೇಗಲ್ ಕೂಡ ಉದ್ದಿನ ವಡೆಯದೇ ಆಕಾರ. ನಡುವೆ ತೂತು ಸಹ ವಡೆಯಂತೆಯೇ (ಇಲ್ಲೊಂದು ಸಾಮಾನ್ಯ ಜ್ಞಾನದ ಅಂಶ: ಟೆನ್ನಿಕಾಯ್ಟ್ ರಿಂಗ್, ಸ್ವಿಮ್ಮಿಂಗ್ ರಿಂಗ್, ಉದ್ದಿನ ವಡೆ, ಬೇಗಲ್ ಮುಂತಾದ ವಸ್ತುಗಳ ಆ ವಿಶಿಷ್ಟ ಆಕಾರಕ್ಕೆ ರೇಖಾಗಣಿತದಲ್ಲಿ Torus ಎಂದು ಹೆಸರು. ಗಣಿತದ ವಿಚಾರ ಇಷ್ಟು ಸಾಕು. ಇಲ್ಲವಾದರೆ ಗಣಿತದ್ವೇಷಿಗಳು ನನಗೆ ಹಿಡಿಶಾಪ ಹಾಕುವರು). ಗಾತ್ರದಲ್ಲಿ ಬೇಗಲ್ ಉದ್ದಿನ ವಡೆಗಿಂತ ತುಸು ದೊಡ್ಡದು (ಹಾಂ... ಅಮೆರಿಕದಲ್ಲಿ ಎಲ್ಲವೂ ಬಿಗ್ ಸೈಜ್ ತಾನೆ? ಸ್ಟಾರ್‌ಬಕ್ಸ್ ಕಾಫಿಶಾಪ್‌ನಲ್ಲಿ ಲಾರ್ಜ್-ಮೀಡಿಯಂ-ಸ್ಮಾಲ್ ಪೈಕಿ ಸ್ಮಾಲ್ ಕಪ್ ಕಾಫಿ ತಗೊಂಡರೂ ಅದು ಬೆಂಗಳೂರಿನ ಕಾಫಿ ಕಪ್‌ನ ಹತ್ತು ಪಟ್ಟು ಇರುತ್ತದೆ). ವಡೆಯನ್ನು ನಾವು ಎಣ್ಣೆಯಲ್ಲಿ ಕರಿದು ಮಾಡುತ್ತೇವಾದರೆ ಬೇಗಲ್ ತಯಾರಿಕೆಯ ವಿಧಾನ ಭಿನ್ನ. ಬ್ರೆಡ್ ಹಿಟ್ಟನ್ನು ವಡೆ ಆಕಾರಕ್ಕೆ ತಂದು ಕೊತಕೊತ ಕುದಿಯುವ ನೀರಿನಲ್ಲಿ ಅದ್ದಿತೆಗೆದು ಆಮೇಲೆ ಬೇಯಿಸುವುದು. ಸಾಮಾನ್ಯವಾಗಿ ಮನೆಗಳಲ್ಲಿ ಯಾರೂ ಬೇಗಲ್ ತಯಾರಿಸುವುದಿಲ್ಲ, ಬೇಕರಿಗಳಲ್ಲಿ ಮಾಡಿದ್ದನ್ನು ಬೇಗಲ್ ಸ್ಟೋರ್‌ಗಳಿಂದ ಅಥವಾ ಸೂಪರ್ ಮಾರ್ಕೆಟ್‌ಗಳಿಂದ ತರುತ್ತಾರೆ. ಸುಮಾರು 400 ವರ್ಷಗಳ ಹಿಂದೆ ಯುರೋಪ್‌ನ ಪೋಲಂಡ್ ದೇಶದಲ್ಲಿ ಹುಟ್ಟಿಕೊಂಡ ಈ ಬ್ರೆಡ್ ಮಾದರಿಯು ಯಹೂದ್ಯ ವಲಸೆಗಾರರ ಜತೆಗೆ ಉತ್ತರ ಅಮೆರಿಕ ಖಂಡಕ್ಕೆ ಬಂದದ್ದು. ಈಗಲೂ ಯಹೂದ್ಯರ ಸಂಖ್ಯೆ ಸಾಂದ್ರವಾಗಿರುವ ನ್ಯೂಯಾರ್ಕ್, ಶಿಕಾಗೊ, ಕೆನಡಾದ ಮಾಂಟ್ರಿಯಲ್ ಮುಂತಾದ ದೊಡ್ಡದೊಡ್ಡ ನಗರಗಳಲ್ಲಿ ಬೇಗಲ್ ಉತ್ಪಾದನೆ ಮತ್ತು ಬಳಕೆ ಅತಿ ಹೆಚ್ಚು. ಕಳೆದ ಕೆಲ ದಶಕಗಳಿಂದೀಚೆಗೆ ದೇಶವ್ಯಾಪಿಯಾಗಿ ಎಲ್ಲರ ಅಚ್ಚುಮೆಚ್ಚು.

ಬೇಗಲ್ ಅನ್ನು ಹಾಗೆಯೇ ತಿನ್ನಬಹುದು, ಟೋಸ್ಟರ್‌ನಲ್ಲಿ ಬಿಸಿಮಾಡಿ ಎರಡು ಹೋಳುಗಳಾಗಿಸಿ ಬೆಣ್ಣೆ ಅಥವಾ ಕ್ರೀಮ್ ಚೀಸ್ ಹಚ್ಚಿಕೊಂಡೂ ತಿನ್ನಬಹುದು. ಪುರಂದರದಾಸರು 'ವಿಠಲನಾಮ ತುಪ್ಪವ ಬೆರೆಸಿ ಬಾಯ ಚಪ್ಪರಿಸಿರೋ...' ಎಂದು ಹಾಡಿರುವಂತೆ ನನ್ನೊಬ್ಬ ಅಮೆರಿಕನ್ನಡಿಗ ಸ್ನೇಹಿತ ಕ್ಯಾಲಿಫೋರ್ನಿಯಾದಲ್ಲಿರುವ ಮಧುಕಾಂತ ಕೃಷ್ಣಮೂರ್ತಿ ಬೇಗಲ್ ಕುರಿತು ಒಂದು ಪದ್ಯ ಹೊಸೆದಿದ್ದಾರೆ: ''ಕೆಂಪಗೆ ಕಾಯಿಸಿ ಬೆಣ್ಣೆಯ ಲೇಪಿಸಿ। ಮಸಾಲೆದೋಸೆ ಎಂದೇ ಭಾವಿಸಿ। ಟೋಸ್ಟರ್ ಎಂಬ ಕಾವಲಿಯಿಂದ। ಬೇಗಲ್ ಎಂಬ ಒಣಕಲು ಬನ್ನನು। ಬೇಗನೆ ತೆಗೆದು ಮರೆಯಲಿ ಕುಳಿತು। ಬಾಯ ಚಪ್ಪರಿಸಿರೋ ಮಂಕುದಿಣ್ಣೆಗಳೇ...'' ಎಂದು. ಅವರೊಂದು ವೇಳೆ ಕನಕದಾಸರನ್ನು ಅನುಕರಿಸಿ ಪದ್ಯ ಕಟ್ಟಿದ್ದಿದ್ದರೆ ಅದು ''ಬಾಗಿಲನು ತೆರೆದು ಬೇಗಲನು ಕೊಡೊ ಹರಿಯೇ...'' ಎಂದಿರುತ್ತಿತ್ತೋ ಏನೋ. ಅಂದಹಾಗೆ ಭಾರತದಲ್ಲಿ ಅಥವಾ ಇಲ್ಲಿಯ ಭಾರತೀಯ ರೆಸ್ಟೋ

ರೆಂಟ್‌ಗಳಲ್ಲಿ ಸಾದಾದೋಸೆ, ಈರುಳ್ಳಿದೋಸೆ, ಮಸಾಲೆದೋಸೆ ಮುಂತಾಗಿ ದೋಸೆಯ ವಿಧಗಳು ಇರುವಂತೆ ಬೇಗಲ್‌ನಲ್ಲೂ ನಾನಾ ನಮೂನೆಗಳಿರುತ್ತವೆ. ಪ್ಲೈನ್(ಸಾದಾ) ಬೇಗಲ್, ಆನಿಯನ್(ಈರುಳ್ಳಿ) ಬೇಗಲ್, ಸಿನ್ನಮನ್(ದಾಲ್ಚೀನಿ) ಬೇಗಲ್, ಸೆಸಮೆ(ಎಳ್ಳು) ಬೇಗಲ್, ಬ್ಲೂಬೆರ್ರಿ ಬೇಗಲ್ ಇತ್ಯಾದಿ. ಮತ್ತೊಂದು 'ಎವೆರಿಥಿಂಗ್' ಬೇಗಲ್ ಕೂಡ ಇದೆ, ಹೆಸರೇ ಸೂಚಿಸುವಂತೆ ಅದರಲ್ಲಿ ಎಲ್ಲವೂ ಇರುತ್ತದೆ.

ಬೇಗಲ್‌ನ ಬಗ್ಗೆ ಮತ್ತೊಂದಿಷ್ಟು ಸ್ವಾರಸ್ಯಕರ ಸಂಗತಿಗಳನ್ನು ಸೇರಿಸುವುದಾದರೆ- ಬೇಗಲ್‌ನ ಆಕಾರ ಮತ್ತು ಹೆಚ್ಚೂಕಡಿಮೆ ಗಾತ್ರ ಸಹ ಒಂದೇ ರೀತಿ ಇರಬೇಕು, ಏನೇನೋ ಪ್ರಯೋಗಗಳನ್ನು ಮಾಡಿ ಚೌಕ ಬೇಗಲ್ ತಯಾರಿಸುತ್ತೇನೆ ಅಂತೆಲ್ಲ ಹೊರಟರೆ ಆಗದು. ಬೇಗಲ್‌ನ ಆಕಾರ ಇರದಿದ್ದರೆ ಅದು ಬೇಗಲ್ಲೇ ಅಲ್ಲ. ಸ್ವಾದಗಳನ್ನು ಬದಲಾಯಿಸಲಿಕ್ಕೆ ಅಡ್ಡಿಯಿಲ್ಲ. ಬೇಗಲ್ ಮತ್ತು ಕಾಫಿ ಪ್ರತ್ಯೇಕ ಸೇವನೆ ಬೇಡವೆನಿಸುವವರಿಗೆ ಕಾಫಿ ಸ್ವಾದದ ಮತ್ತು ಕೆಫೀನ್ ಇರುವ ಬೇಗಲ್‌ಗಳೇ ಸಿಗುತ್ತವೆ. 2008ರಲ್ಲಿ ಗಗನಯಾತ್ರಿ ಗ್ರೆಗ್ ಚೆಮಿಟಾಫ್ 14 ದಿನಗಳ ಬಾಹ್ಯಾಕಾಶ ಯಾತ್ರೆಗೆ ಹೋಗುವಾಗ ತನ್ನ ಜತೆ ಒಂದೂವರೆ ಡಜನ್‌ನಷ್ಟು ಬೇಗಲ್‌ಗಳನ್ನೂ ಒಯ್ದಿದ್ದನು. ಗಿನ್ನೆಸ್ ದಾಖಲೆ ಪುಸ್ತಕದ ಪ್ರಕಾರ ಇದುವರೆಗಿನ ಅತಿದೊಡ್ಡ ಬೇಗಲ್ 2004ರ ಆಗಸ್ಟ್‌ನಲ್ಲಿ ಬ್ರೂಯ್ಗರ್ಸ್ ಬೇಗಲ್ಸ್ ಕಂಪನಿ ತಯಾರಿಸಿದ್ದು 868 ಪೌಂಡ್ ತೂಕವಿತ್ತು. ಸುಮಾರು 1100 ಪೌಂಡ್ ಹಿಟ್ಟು, 900 ಗ್ಯಾಲನ್ ನೀರು ಬಳಕೆಯಾಗಿ ಅದನ್ನು ಪೂರ್ತಿ ಬೇಯಿಸಲಿಕ್ಕೆ 10 ಗಂಟೆಗಳು ಹಿಡಿದವಂತೆ. ಅಮೆರಿಕದಲ್ಲಿ ಪ್ರತಿವರ್ಷ ಜನವರಿ 15ರಂದು ನ್ಯಾಷನಲ್ ಬೇಗಲ್ಸ್ ಡೇ ಎಂದು ಆಚರಿಸಲಾಗುತ್ತದೆ. ಕೆಲವು ಬೇಕರಿಗಳು ಆವತ್ತು ತಿಂಡಿಪೋತ ಗ್ರಾಹಕರಿಗೆ ಉಚಿತವಾಗಿ ಬೇಗಲ್‌ಗಳನ್ನು ಹಂಚುತ್ತವೆ.

ಬೇಗಲ್ ಪುರಾಣವನ್ನು ಮುಂದುವರಿಸುವ ಮುನ್ನ ಈಗ ಉಪಕಥೆಯಾಗಿ ಸ್ವಲ್ಪ ಗಸಗಸೆ ಉದುರಿಸುತ್ತೇನೆ. ಬೇಗಲ್ ಎಂದರೇನಂತ ಗೊತ್ತಿಲ್ಲದವರಿಗೂ ಗಸಗಸೆ ಖಂಡಿತ ಗೊತ್ತಿರುತ್ತದೆ. ಅಕ್ಕಿಹಿಟ್ಟು ಬೆಲ್ಲದಪಾಕ ಸೇರಿಸಿ ಚಪ್ಪಟೆಯಾಗಿ ತಟ್ಟಿ ತುಪ್ಪದಲ್ಲಿ ಕರಿದು 'ಅತಿರಸ' ಮಾಡುವಾಗ ಒಂದಿಷ್ಟು ಗಸಗಸೆ ಉದುರಿಸುವುದಿದೆ. ಅದು ಅತಿರಸದ ರುಚಿಯನ್ನೂ, ಮೆರುಗನ್ನೂ ಹೆಚ್ಚಿಸುತ್ತದೆಯಂತೆ. ಗಸಗಸೆಯದ್ದೇ ಕಡಬು ಮತ್ತು ಹಲ್ವಾ ಸಹ ಮಾಡುತ್ತಾರೆಂದು ಕೇಳಿದ್ದೇನೆ, ನಾನಿದುವರೆಗೆ ಅವೆರಡನ್ನೂ ತಿಂದಿಲ್ಲ. ಗಸಗಸೆ ಪಾಯಸವಂತೂ ನಿಮಗೆ ಗೊತ್ತೇ ಇರುತ್ತದೆ. ಇಲ್ಲವಾದರೂ ಕವಿ ಕೆ.ಎಸ್. ನರಸಿಂಹಸ್ವಾಮಿ ಅದನ್ನು ನೆನಪಿಸುತ್ತಾರೆ ''ಬೆಳ್ಳಿಯ ಬಟ್ಟಲ ಗಸಗಸೆ ಪಾಯಸ ರಾಯರ ಕರೆದಿತ್ತು ಭೂಮಿಗೆ ಸ್ವರ್ಗವೇ ಇಳಿದಿತ್ತು!'' ಎಂದು. ಮಾವನ ಮನೆಗೆ ಬಂದ ರಾಯರಿಗೆ ಆವತ್ತು ರಾತ್ರಿ ಘಮಘಮಿಸುವ ಮೃಷ್ಟಾನ್ನ ಭೋಜನದಲ್ಲಿ ಗಸಗಸೆ ಪಾಯಸವೂ ಇತ್ತಂತೆ. ಹೇಗೂ ಪದುಮಳು ಒಳಗಿರಲಿಲ್ಲ, ಅವಳ ಬಳೆಗಳ ದನಿಯಿರಲಿಲ್ಲ. ರಾಯರು ಗಸಗಸೆ ಪಾಯಸ ತಿಂದು ಗಡದ್ದಾಗಿ ನಿದ್ದೆ ಮಾಡಲಿ ಎಂದು ಬೇಕೆಂದೇ ಹಾಗೆ ಏರ್ಪಾಡಾಗಿತ್ತೋ ಏನೋ ಆ ಅತ್ತೆ-ಮಾವನಿಗೇ ಗೊತ್ತು. ಗಸಗಸೆ ಪಾಯಸ ನಿದ್ದೆ ತರಿಸುವುದಂತೂ ಹೌದು. ನಿದ್ದೆ ಬರಲಿಕ್ಕೆ ತೊಳಲಾಡುವವರಿಗೆ ಗಸಗಸೆ ಪಾಯಸ ಕುಡಿಸಿದರೆ ಅದೇ ದಿವ್ಯೌಷಧ. ಇದನ್ನು 'ವಸಂತಸೇನೆ' ನಾಟಕ/ಸಿನಿಮಾದಲ್ಲಿ ಶಕಾರನ ಬಾಯಿಯಿಂದ ಕೇಳಬೇಕು. 'ಸ' ಅಕ್ಷರವನ್ನು 'ಶ' ಎನ್ನುವ ಆತ ''ಬಿಶಿಬಿಶಿ ಗಶಗಶೆ ಪಾಯಶ ಶೇವಿಶಿದರೆ ಶೊಗಶಾಗಿ ನಿದ್ರೆ ಬರುತ್ತೆ...'' ಎನ್ನುತ್ತಾನೆ!

ಗಸಗಸೆ ಉಪಕಥೆಯನ್ನು ನಾನಿಲ್ಲಿ ಸೇರಿಸಿದ್ದೇಕೆಂದರೆ ಗಸಗಸೆ ಬೇಗಲ್ (Poppy seeds bagel) ಅಂತನೂ ಒಂದು ವಿಧವಿದೆ, ಮತ್ತು ಅದರದ್ದೇ ಕೆಲವು ಸ್ವಾರಸ್ಯಕರ ಸಂಗತಿಗಳಿವೆ. ಅದನ್ನೂ ತಿಳಿದುಕೊಳ್ಳುವಂಥವರಾಗಿ ಈಗ.

ಮಾದಕ ಪದಾರ್ಥಗಳ ಬಳಕೆಯನ್ನು ಪತ್ತೆ ಹಿಡಿಯಲು ಡ್ರಗ್ ಟೆಸ್ಟ್ ಮಾಡುತ್ತಾರಷ್ಟೆ? ಕ್ರಿಮಿನಲ್‌ಗಳು, ವ್ಯಭಿಚಾರಿಗಳು, ಅಷ್ಟೇಅಲ್ಲದೆ ಕ್ರೀಡಾಳುಗಳನ್ನು ಕೂಡ ಉದ್ದೀಪನ ಪರೀಕ್ಷೆಗೆ ಒಳಪಡಿಸುತ್ತಾರೆ. ಎಷ್ಟೋ ಸಂದರ್ಭಗಳಲ್ಲಿ ಅವರು ಉದ್ದೀಪನ ದ್ರವ್ಯ ಸೇವಿಸಿರುವುದು ಪತ್ತೆಯೂ ಆಗುತ್ತದೆ. ಈಗೀಗ ದೊಡ್ಡ ಕಂಪನಿಗಳಲ್ಲಿ ಉದ್ಯೋಗಕ್ಕೆ ಸೇರುವ ಮುನ್ನ, ಉದ್ಯೋಗಿಗಳಾದವರಿಗೆ ಅನಂತರವೂ ಕಾಲಾನುಕಾಲಕ್ಕೆ ಡ್ರಗ್ ಟೆಸ್ಟ್ ಮಾಡಿಸುತ್ತಾರೆ. ವಿಶ್ವಾಸ, ನಿಷ್ಠೆ, ನಂಬಿಕೆಗಳೆಲ್ಲ ನಲುಗಿಹೋಗಿರುವ ಇಂದಿನ ಕಮರ್ಷಿಯಲ್ ಜಗತ್ತಿನಲ್ಲಿ ಯಾರು ಯಾವ ಮುಖವಾಡ ಧರಿಸಿ ಸುಭಗತನ ತೋರಿಸುತ್ತ ಒಳಗೆ ಎಷ್ಟು ಕೆಟ್ಟವರಾಗಿರುತ್ತಾರೋ ಬಲ್ಲವರಾರು? ಅದಕ್ಕಾಗಿ ಎಷ್ಟೆಲ್ಲ ಪರೀಕ್ಷೆಗಳು, ತಪಾಸಣೆಗಳು! ಒಬ್ಬ ವ್ಯಕ್ತಿ ಮಾದಕದ್ರವ್ಯ ಸೇವಿಸಿದ್ದಾನೆಯೇ ಇಲ್ಲವೇ ಎಂದು ಆತನ ಮೂತ್ರಪರೀಕ್ಷೆ ಅಥವಾ ರಕ್ತಪರೀಕ್ಷೆಯ ಮೂಲಕ ಕಂಡುಕೊಳ್ಳಲಾಗುತ್ತದೆ. ಈ ಪರೀಕ್ಷೆಗಳು ಬಹುತೇಕವಾಗಿ ನಿಖರ ಮಾಹಿತಿ ಕೊಡುತ್ತವೆಯಾದರೂ ಕೆಲವೊಮ್ಮೆ ಮುಜುಗರ ತರುವಂಥ ಫಲಿತಾಂಶಗಳು, ಎಡವಟ್ಟುಗಳು ಆಗುವುದಿದೆ. ಗಸಗಸೆ ಉದುರಿಸಿದ ಬೇಗಲ್ ತಿಂದು ಮಾರನೆಯ ದಿನ ರಕ್ತಪರೀಕ್ಷೆ/ ಮೂತ್ರಪರೀಕ್ಷೆ ಮಾಡಿಸಿದರೆ ಅಮಲಿನ ಅಂಶ ಕಂಡುಬಂದು ಟೆಸ್ಟ್ ಪಾಸಿಟಿವ್ ಎನಿಸಿಕೊಳ್ಳುವುದು ಅಂಥ ಎಡವಟ್ಟುಗಳಲ್ಲೊಂದು! ಅತಿಯಾಗಿ ಸೇವಿಸಿದರೆ ಗಸಗಸೆ ನಿಜವಾಗಿಯೂ ಒಂದು ಮಾದಕ ಪದಾರ್ಥವೇ. ಗಸಗಸೆ ಬೀಜದಲ್ಲಿರುವ ಮೊರ್ಫಿನ್ ಮತ್ತು ಕೊಡೈನ್ ಅಂಶಗಳು (ಇವುಗಳನ್ನು Opiates ಎನ್ನುತ್ತಾರೆ) ಮೂತ್ರದಲ್ಲಿ ಕರಗಿರುತ್ತವೆ. ಗಸಗಸೆ ಹಾಕಿರುವ ಒಂದು ಬೇಗಲ್ ತಿಂದರೂ ಸಾಕು, ಮುಂದಿನ 48 ಗಂಟೆಗಳೊಳಗೆ ಮೂತ್ರಪರೀಕ್ಷೆಗೊಳಗಾದರೆ ವ್ಯತಿರಿಕ್ತ ಫಲಿತಾಂಶವನ್ನು ತೋರಿಸಬಹುದು.

ಈಗ್ಗೆ ಹತ್ತಿಪ್ಪತ್ತು ವರ್ಷಗಳ ಹಿಂದೆ ಅಮೆರಿಕದ ಸೈಂಟ್ ಲೂಯಿಸ್ ನಗರದಲ್ಲಿ ಒಬ್ಬ ಪೊಲೀಸ್ ಆಫೀಸರ್‌ಗೆ ಹಾಗೇ ಆಯ್ತಂತೆ. ಯಾವೊಂದು ಕೆಟ್ಟ ಚಟಗಳಿಲ್ಲದೆ ಸೀದಾಸಾದಾ ಮನುಷ್ಯನಾಗಿದ್ದ ಆತ ಇಲಾಖೆಯ ಸರ್‌ಪ್ರೈಸ್ ಡ್ರಗ್‌ಟೆಸ್ಟ್‌ಗೆ ಒಳಗಾದ. ಅವನ ದುರದೃಷ್ಟವೋ ಎಂಬಂತೆ ಟೆಸ್ಟ್‌ಗೆ ಹಿಂದಿನ ದಿನವಷ್ಟೇ ಆತ ಮೂರ್ನಾಲ್ಕು ಗಸಗಸೆ ಬೇಗಲ್‌ಗಳನ್ನು ಚಪ್ಪರಿಸಿದ್ದನಂತೆ. ಮೂತ್ರಪರೀಕ್ಷೆಯಾದಾಗ ಮೊರ್ಫಿನ್ ಅಂಶ ಕಂಡುಬಂದುದರಿಂದ ಮಿಸ್ಟರ್ ಕ್ಲೀನ್ ಇಮೇಜ್‌ನ ಆ ಆಫೀಸರನನ್ನು ಕೆಲಸದಿಂದ ತೆಗೆದುಹಾಕಲಾಯಿತು. ಆಮೇಲೆ ಆತ ಸರಕಾರದ ಕ್ರಮದ ವಿರುದ್ಧ ವ್ಯಾಜ್ಯ ಹೂಡಿದನು. ಮೂತ್ರದಲ್ಲಿನ ಮೊರ್ಫಿನ್ ಅಂಶಕ್ಕೆ ಬೇಗಲ್‌ನಲ್ಲಿದ್ದ ಗಸಗಸೆ ಕಾರಣವೇ ಹೊರತು ಬೇರೆ ಮಾದಕದ್ರವ್ಯವನ್ನು ತಾನು ಸೇವಿಸಿರಲಿಲ್ಲವೆಂದು ಸಾಬೀತುಪಡಿಸಿದನು. ಕೊನೆಗೂ ಆ ಕೇಸನ್ನು ಗೆದ್ದನು! ಕೆಲಸದಿಂದ ತೆಗೆದುಹಾಕಿದ್ದ ಅವಧಿಯ ಸಂಬಳವನ್ನೂ ಕೊಟ್ಟು ಮತ್ತೆ ಅವನನ್ನು ಕೆಲಸಕ್ಕೆ ಸೇರಿಸಿಕೊಳ್ಳಲಾಯಿತು. ಗಸಗಸೆಯಿದ್ದ ಬೇಗಲ್ಲೇ ಈ ಎಡವಟ್ಟಿಗೆ ಕಾರಣ ಎಂದು ಸಾಬೀತುಪಡಿಸಿದ್ದು ಇನ್ನೊಬ್ಬ ಆರೋಗ್ಯವಂತ ಪೊಲೀಸ್ ಆಫೀಸರನಿಗೆ ಅಂಥದೇ ಬೇಗಲ್ ತಿನ್ನಿಸಿ ಮಾರನೆಯ ದಿನ ಅವನ ಮೂತ್ರಪರೀಕ್ಷೆ ಮಾಡಿ ಮೊರ್ಫಿನ್ ಅಂಶ ಕಂಡುಕೊಳ್ಳುವುದರ ಮೂಲಕ. ಆಮೇಲೆ ನ್ಯೂಜೆರ್ಸಿ, ಫ್ಲೋರಿಡಾ ಮುಂತಾಗಿ ಬೇರೆಡೆಗಳಲ್ಲೂ ಇದೇ ರೀತಿಯ ಎಡವಟ್ಟು ಸಂಭವಿಸಿದ್ದು ಲಕ್ಷಗಟ್ಟಲೆ ಡಾಲರ್‌ಗಳ ಕೇಸುಗಳನ್ನು ಜಯಿಸಿಕೊಂಡಿದ್ದಾರೆ ಬೇಗಲ್ ಭಕ್ಷಕ ಆರಕ್ಷಕರು!

ಗಸಗಸೆ ಬೇಗಲ್‌ನ ಈ ಅವಾಂತರದ ನಂತರ ಈಗ ಅಮೆರಿಕದಲ್ಲಿ ಹೆಚ್ಚಿನ ಸಂಸ್ಥಾನಗಳಲ್ಲೆಲ್ಲ ಜೈಲುನಿಯಮಗಳಿಗೆ ತಿದ್ದುಪಡಿಗಳನ್ನು ತರಲಾಗಿದೆ. ಅದರ ಪ್ರಕಾರ ಜೈಲಿನಲ್ಲಿರುವ ಯಾವುದೇ ಕೈದಿಯು ಗಸಗಸೆಯಿರುವ ಆಹಾರಪದಾರ್ಥವನ್ನು ಸೇವಿಸುವಂತಿಲ್ಲ. ಏಕೆಂದರೆ ಆ ನಿಯಮವಿಲ್ಲದಿದ್ದರೆ, ನಿಜವಾಗಿ ಅಫೀಮು ಸೇವಿಸಿ ಮಜಾ ಉಡಾಯಿಸಿದವರೂ ಮೂತ್ರಪರೀಕ್ಷೆಯಲ್ಲಿ ಸಿಕ್ಕಿಬಿದ್ದಾಗ, ''ಇಲ್ಲಪ್ಪ ನಾನು ನಿನ್ನೆ ಒಂದೆರಡು ಬೇಗಲ್ಸ್ ತಿಂದಿದ್ದೆ, ಹಾಗಾಗಿ ಟೆಸ್ಟ್ ಪಾಸಿಟಿವ್ ಆಗಿರಬಹುದು'' ಎನ್ನುವ ಸಂಭವವಿರುತ್ತದೆಯಲ್ಲ! ಜೈಲಿನ ಆವರಣದಲ್ಲಿ Poppy seeds prohibited ಎಂದಮೇಲೆ ಮುಗಿಯಿತು.

ಹಾಗಾಗಿ, ಅಮೆರಿಕದಲ್ಲಿ 'ಮಾವನ ಮನೆ'ಗೆ ರಾಯರು ಬಂದರೆ ಅವರಿಗೆ ಬೆಳ್ಳಿಯ ಬಟ್ಟಲ ಗಸಗಸೆ ಪಾಯಸದ ಆತಿಥ್ಯ ಸಿಗುವುದಿಲ್ಲ; ಬಾಗಿಲನು ತೆರೆದು ಬೇಗಲನು ಕೊಡು ಎಂದು ಜೈಲರ್‌ನಲ್ಲಿ ಮೊರೆಯಿಟ್ಟರೆ ಅದೂ ಸಿಗುವುದಿಲ್ಲ! ಪರಂತು ನಾವು ಶ್ರೀಸಾಮಾನ್ಯ ಅಮೆರಿಕನ್ನಡಿಗರು ಈ ಕನ್ನಡಮಾಸದಲ್ಲಿ ಬೇಗಲ್ ಅಂಗಡಿಗೆ ಹೋಗಿ 'ಸಿರಿಗನ್ನಡಂ ಬೇಗಲ್‌ಗೆ!' ಎಂದು ನಗುಮೊಗದಿಂದ ಹೇಳಿದರೆ (ಘೋಷಣೆ ಕೂಗಿದರೆ ಅಲ್ಲ) ಬೇಗಲ್ ಸಿಗಲೂಬಹುದು, ಅಂಗಡಿಯಾತ ಒಮ್ಮೆ ಆಪಾದಮಸ್ತಕ ನಮ್ಮನ್ನು ನೋಡಿದ ಮೇಲೆ!

ಅಹಂಕಾರಜನ್ಯ ವ್ಯಾಧಿಗಳಿಗೆ ಭಿಕ್ಷಾನ್ನವೇ ಪರಮೌಷಧ

ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vinayakbhat1669@gmail.com

ನಾವೆಲ್ಲ ಚಿಕ್ಕವರಿದ್ದಾಗ, ಮನೆಮುಂದೆ ಭಿಕ್ಷುಕರು ಜೋಳಿಗೆ ಹಿಡಿದು ಬರುತ್ತಿದ್ದುದುಂಟು, ಸನ್ಯಾಸಿಗಳ ದಿರಿಸಿನಲ್ಲಿರುವ ಬಾವಾಜಿಗಳು, ಏಕತಾರಿ ತಂಬೂರಿಯ ಜತೆಗೆ ದಾಸರ ಪದಗಳನ್ನು ಹಾಡುವವರು ಅಥವಾ ಕಣಿಹೇಳುವವರುಗಳನ್ನು ಸಾಮಾನ್ಯವಾಗಿ ನಾವು ನೋಡಬಹುದಾಗಿತ್ತು. ಅವರುಗಳಿಗೆ ಸಿದ್ಧ ಆಹಾರ ಅಥವಾ ಮುಷ್ಟಿಗಾತ್ರದ ಅಕ್ಕಿಯನ್ನು ನೀಡುವುದು ವಾಡಿಕೆ. ಇನ್ನು, ಬೇಡುವವರೂ, ಹಾವಾಡಿಗರೂ ಬರುತ್ತಿದ್ದರು, ಅವರದ್ದು ಬೇರೆ ಕ್ರಮ; 'ಅಮ್ಮಾ, ತಾಯಿ' ಎಂದು ಕೂಗುಹಾಕಿ, ದುಡ್ಡು, ತಿಂಡಿ ಮುಂತಾಗಿ, ಕೊಟ್ಟಿದ್ದನ್ನು ತೆಗೆದುಕೊಂಡು ಹೋಗುವ ಜನರವರು. ಭಿಕ್ಷುಕರಿಗೂ ಬೇಡುವವರಿಗೂ ಇರುವ ಅಂತರವನ್ನು ಗಮನಿಸಬಹುದು. ಈಗ ಭಿಕ್ಷುಕರು ಮನೆಬಾಗಿಲಿಗೆ ಬರುತ್ತಿಲ್ಲ, ಬೇಡುವವರನ್ನು 'ಟ್ರಾಫಿಕ್ ಸಿಗ್ನಲ್'ಗಳಲ್ಲಷ್ಟೇ ನೋಡಬಹುದಾಗಿದೆ. ಅಷ್ಟೇ ಅಲ್ಲದೇ, ಭಿಕ್ಷಾಟನೆ ನಿಷೇಧ ಕಾಯಿದೆಯ ಅಡಿಯಲ್ಲಿ ಭಿಕ್ಷಾಟನೆಯನ್ನು ಅಪರಾಧವೆಂದು ಪರಿಗಣಿಸಲಾಗುತ್ತದೆ. ಈ ಕಾಯಿದೆಯಲ್ಲಿ ಹೇಳುವ ಭಿಕ್ಷೆಯ ವ್ಯಾಖ್ಯಾನ ಬೇರೆ, ನಾನು ಹೇಳಹೊರಟಿರುವ ಭಿಕ್ಷೆಯೇ ಬೇರೆ.

ಸಾಮಾನ್ಯವಾಗಿ ಇಂಗ್ಲಿಷಿನ 'Begging' ಎನ್ನುವ ಶಬ್ದಕ್ಕೆ ಅನ್ವರ್ಥವಾಗಿ ಭಿಕ್ಷೆ ಎನ್ನುವ ಶಬ್ದವನ್ನು ಬಳಸಲಾಗುತ್ತದೆ. ವಾಸ್ತವಿಕವಾಗಿ, ಭಿಕ್ಷಾಟನೆಗೂ ಬೇಡುವುದಕ್ಕೂ ಅಜಗಜಾಂತರ ಫರಕ್ಕಿದೆ. ಬೇಡುವುದೆಂದರೆ, ಅದು ಏನನ್ನಾದರೂ, ಎಲ್ಲಾದರೂ, ಹಣ, ವಸ್ತು, ಸಹಾಯ ಹೀಗೆ ಬೇಕಾದ್ದನ್ನೆಲ್ಲ ಯಾಚಿಸುವುದು. ಆದರೆ ಭಿಕ್ಷೆ ಹಾಗಲ್ಲ, ಅದು ಆಹಾರವೇ ಆಗಬೇಕು ಅಥವಾ ಆಹಾರ ತಯಾರಿಸಲು ಬೇಕಾಗುವ ದವಸ ಧಾನ್ಯಗಳಾಗಬೇಕು. 'ದೇಶ ಸುಭಿಕ್ಷವಾಗಿದೆ' ಎನ್ನುವಾಗ, ದೇಶದಲ್ಲಿ ಆಹಾರದ ಸಮೃದ್ಧಿಯಿದೆ ಎಂತಲೇ ಅರ್ಥವಾಗುತ್ತದೆ. ಭಿಕ್ಷ ಎನ್ನುವ ಶಬ್ದ, ಭಕ್ಷಕ್ಕೇ ಅಂದರೆ ಆಹಾರಕ್ಕೆ ಸಂಬಂಧಿಸಿದ್ದಾಗಿದೆ. 'ಭಿಕ್ಷೆ' ಎಂಬ ಪದವು 'ದೈನ್ಯತೆಯಿಂದ ಯಾಚಿಸಿ ಪಡೆವ ಆಹಾರ' ಎನ್ನುವ ಅರ್ಥವನ್ನು ಹೇಳುತ್ತದೆ. ಭಿಕ್ಷವೆಂದರೆ ಒಂದು ಬಾರಿ ಭಕ್ಷಣೆ ಮಾಡುವಷ್ಟು ಆಹಾರ, ಒಂದು ತುತ್ತು ಅಥವಾ ಒಂದು ಹಿಡಿ ಎಂದು ಅರ್ಥೈಸಬಹುದಾಗಿದೆ. ಇಲ್ಲಿ ಸಂಗ್ರಹಕ್ಕೆ ಆಸ್ಪದವಿರುವುದಿಲ್ಲ, ಪ್ರತಿನಿತ್ಯವೂ ಭಿಕ್ಷಾಟನೆ ಮಾಡಿಯೇ ಉದರಂಭರಣವಾಗಬೇಕು. ಹಾಗಾಗಿ ಈ ವೃತ್ತಿ, ಧರ್ಮನಿಷ್ಠ ನಿಸ್ಪೃಹತೆಯನ್ನು ಸೂಚಿಸುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ, ಭಿಕ್ಷೆಗೆ ಅಥವಾ ಭಿಕ್ಷಾಟನೆಗೆ ಅತ್ಯಂತ ಮಹತ್ವವಿದೆ. ಹಿಂದೂ, ಜೈನ ಹಾಗೂ ಬೌದ್ಧ ಧರ್ಮಗಳಲ್ಲಿ ಭಿಕ್ಷೆಗೆ ಪವಿತ್ರವಾದ ದಾನದ ಸ್ಥಾನವನ್ನು ನೀಡಲಾಗಿದೆ.

ಯತಿಗಳು, ಪರಿವ್ರಾಜಕರ ಲಕ್ಷಣವನ್ನು ಹೇಳುವಾಗ, 'ಕರತಲ ಭಿಕ್ಷಃ, ತರುತಲ ವಾಸಃ' ಮುಂತಾಗಿ ಹೇಳುತ್ತಾರೆ, ಈ ಕರತಲ ಭಿಕ್ಷವೆನ್ನುವುದು ಜೈನ ಮುನಿಗಳಲ್ಲೂ ರೂಢಿಯಲ್ಲಿದೆ. ಅಂದರೆ, ಯಾಚಕನ ಅಂಜಲಿಯಲ್ಲಿ ದಾನಿಯು ನೀಡುವ ಎಂಟು ತುತ್ತು ಆಹಾರ ಮಾತ್ರ ಆತನಿಗೆ ಗ್ರಾಹ್ಯವೆಂದರ್ಥ. ತಟ್ಟೆ ಬಟ್ಟಲು ಮುಂತಾದ ಯಾವ ಸಾಧನವನ್ನೂ ಈ ಮುನಿಗಳು ಭೋಜನಕ್ಕೆ ಬಳಸುವಂತಿಲ್ಲ, ಅಂಜಲಿಯೇ ಅವರಿಗೆ ತಟ್ಟೆ ಬಟ್ಟಲು ಎಲ್ಲ ('ಗ್ರಾಸಮಾತ್ರಾ ಭವೇದ್ಭಿಕ್ಷಾಃ', 'ಅಷ್ಟೌಗ್ರಾಸಾ ಮುನೇರ್ಗ್ರಾಹ್ಯಾಃ'). ಇನ್ನು, ಸಾಧನ ಪಂಚಕದಲ್ಲಿ ಶ್ರೀ ಶಂಕರಾಚಾರ್ಯರು ಭಿಕ್ಷಾನ್ನವನ್ನು ಔಷಧಕ್ಕೆ ಹೋಲಿಸುತ್ತಾರೆ (ಭಿಕ್ಷೌಷಧಂ ಭುಜ್ಯತಾಂ). ಈ ಮಾತಿಗೆ, ಅಹಂಕಾರ ಜನ್ಯವಾದ ವ್ಯಾಧಿಗಳಿಗೆ ಭಿಕ್ಷಾನ್ನ ಎನ್ನುವುದು ಪರಮ ಔಷಧವಾಗುತ್ತದೆ ಎನ್ನುವುದು ಒಂದು ವಿವರಣೆಯಾದರೆ, ಸಾಧನಾ ಮಾರ್ಗದಲ್ಲಿರುವವರು ಭಿಕ್ಷಾಹಾರವನ್ನು ಔಷಧದ ಪ್ರಮಾಣದಲ್ಲಿ ಮಾತ್ರ ಸ್ವೀಕರಿಸಬೇಕು ಎನ್ನುವುದೂ ಆಗುತ್ತದೆ. 'ಭಿಕ್ಷಾನ್ನಮಾತ್ರೇಣ ಚ ತುಷ್ಟಿಮಂತಃ, ಭಿಕ್ಷಾಶನಾ ದಿಕ್ಷು ಪರಿಭ್ರಮಂತಃ ಕೌಪೀನವಂತಃ ಖಲು ಭಾಗ್ಯವಂತಃ'– ಕೇವಲ ಭಿಕ್ಷಾನ್ನದಿಂದಲೇ ತೃಪ್ತಿಪಟ್ಟುಗೊಂಡು ಜೀವ ಧಾರಣೆಮಾಡುತ್ತಾ ಧರ್ಮರಕ್ಷಣೆಗೋಸ್ಕರ ದೇಶ ಸಂಚಾರಮಾಡುತ್ತಿರುವ ಕೌಪೀನಧಾರಿಗಳೇ ನಿಜವಾಗಿಯೂ ಧನ್ಯರು ಎಂದು ಯತಿ ಪಂಚಕ ಸ್ತೋತ್ರಮಾಲೆಯೂ ಹೇಳುತ್ತದೆ.

ಮೊದಲು ಗುರುಕುಲಗಳಲ್ಲಿ, ಬ್ರಹ್ಮಚಾರಿಗಳಿಗೆ/ವಿದ್ಯಾರ್ಥಿಗಳಿಗೆ ಭಿಕ್ಷಾನ್ನವೇ ಆಹಾರವಾಗಿತ್ತು. ವಿದ್ಯಾರ್ಥಿಗಳು ನಿತ್ಯವೂ ತಮ್ಮ ಗುರುಗಳಿಗೂ ಸೇರಿ ಭಿಕ್ಷ ಸಂಗ್ರಹಿಸಿ ತರಬೇಕು ಎನ್ನುವುದು ನಿಯಮ. ಸ್ವಲ್ಪ ಕಾಲದ ನಂತರ, ವಿದ್ಯಾರ್ಥಿಗಳು ಪ್ರತಿದಿನ ಒಬ್ಬರ ಮನೆಗೆ ತೆರಳಿ ಭಿಕ್ಷಯಾಚಿಸುವ 'ವಾರಾನ್ನ' ಪದ್ಧತಿಯೂ ಇತ್ತು. ಹಾಗಾದಾಗ ಮಾತ್ರ, ಅಭಿಮಾನ ಸಂಕೋಚವಾಗಿ, ನಿಜ ವಿದ್ಯಾರ್ಜನೆಗೆ ದಾರಿಯಾಗುತ್ತದೆ ಎಂದು ಭಾವಿಸಲಾಗಿತ್ತು. ಮಧುಕರಿ ಎನ್ನುವ ಹೆಸರಿನಿಂದಲೂ ಭಿಕ್ಷವನ್ನು ಕೆಲವು ಕಡೆ ಕರೆಯಲಾಗುತ್ತದೆ. ಮಧುಕರಿ ವೃತ್ತಿ, ದತ್ತ ಕ್ಷೇತ್ರ ಗಾಣಗಾಪುರದಲ್ಲಿ ಆಚರಿಸುವ ಒಂದು ಸಂಪ್ರದಾಯ, ಅಲ್ಲಿ, ಭಕ್ತರು ಕನಿಷ್ಠ ಐದು ಮನೆಗಳಿಂದ ಭಿಕ್ಷೆಯನ್ನು ಸ್ವೀಕರಿಸಬೇಕಾಗುತ್ತದೆ. ಶ್ರೀ ದತ್ತಾತ್ರೇಯರು ಗಾಣಗಾಪುರದಲ್ಲಿ ಮಧ್ಯಾಹ್ನದ ಸಮಯದಲ್ಲಿ ಮನೆಮನೆಗೆ ತೆರಳಿ ಭಿಕ್ಷೆ ಸ್ವೀಕರಿಸುತ್ತಾರೆ ಎನ್ನುವ ನಂಬಿಕೆಯೂ ಇದೆ.

ಒಂದು ನೆಲ್ಲಿಕಾಯಿ ಭಿಕ್ಷಕ್ಕೆ ಪ್ರತಿಯಾಗಿ, ಶ್ರೀ ಲಕ್ಷ್ಮೀ ದೇವಿಯ ಸ್ತೋತ್ರ ರಚಿಸಿ, ಬಂಗಾರದ ನೆಲ್ಲಿಕಾಯಿಗಳ ಮಳೆಯನ್ನೇ ಶ್ರೀ ಶಂಕರಾಚಾರ್ಯರು ಸುರಿಸಿದ್ದ ಕಥೆಯನ್ನು ನಾವು ಕೇಳುತ್ತೇವೆ. ಹಾಗೆ ರಚಿಸಿದ ಸ್ತೋತ್ರ 'ಕನಕಧಾರಾ ಸ್ತೋತ್ರ' ಎಂದು ಪ್ರಸಿದ್ಧವಾಗಿದೆ. ಶ್ರೀ ಶಂಕರಭಗವತ್ಪಾದರು ತಮ್ಮ ಸಂಚಾರ ಕಾಲದಲ್ಲಿ ಕೇರಳದ ಕುಗ್ರಾಮವೊಂದಕ್ಕೆ ಬರುತ್ತಾರೆ. ಒಬ್ಬ ಬಡ ಬ್ರಾಹ್ಮಣನ ಮನೆಯ ಮುಂದೆನಿಂತು, ಭವತಿ ಭಿಕ್ಷಾಂದೇಹಿ ಎಂದು ಭಿಕ್ಷೆಯನ್ನು ಬೇಡುತ್ತಾರೆ. ಆ ಬ್ರಾಹ್ಮಣನಾದರೋ ಕಡು ಬಡವ. ಮನೆ ಮಂದಿಗೆ ಊಟಕ್ಕಿಲ್ಲದ ಪರಿಸ್ಥಿತಿ. ಏನಾದರೂ ಇದ್ದರೆ ಯತಿಗಳಿಗೆ ನೀಡಲು ಆ ಬ್ರಾಹ್ಮಣ ತನ್ನ ಸಾಧ್ವಿ ಹೆಂಡತಿಗೆ ಹೇಳುತ್ತಾನೆ. ಕೊಡಲು ಮನೆಯಲ್ಲಿ ಏನೂ ಇಲ್ಲ, ಮನೆಗೆ ಬಂದ ಅತಿಥಿ ರೂಪದ ದೇವರನ್ನು ಬರಿಗೈಯಲ್ಲಿ ಕಳುಹಿಸಲೂ ಆಗುವುದಿಲ್ಲ. ಏನು ಮಾಡುವುದೆಂದು ತೋಚದೇ, "ಸ್ವಾಮಿ, ನಾವು ಕಡುಬಡವರು, ಮಹಾತ್ಮರಾದ ತಮ್ಮನ್ನು ಉಪಚರಿಸಲು ಮನೆಯಲ್ಲಿ ಏನು ಇಲ್ಲ. ಇದ್ದ ಒಂದು ನೆಲ್ಲಿಕಾಯಿಯನ್ನೇ ತಮಗೆ ಭಕ್ತಿಯಿಂದ ಅರ್ಪಿಸುತ್ತಿದ್ದೇನೆ, ದಯಮಾಡಿ ಸ್ವೀಕರಿಸಿ ಅನುಗ್ರಹಿಸಬೇಕು" ಎಂದು ಕಾಲಿಗೆರಗುತ್ತಾಳೆ. ಶ್ರೀ ಶಂಕರರು ಆ ಬಡ ಹೆಂಗಸಿನ ತ್ಯಾಗ ಬುದ್ಧಿಯನ್ನೂ, ಭಕ್ತಿಯನ್ನೂ ಮನಗಂಡು, ಆ ಕುಟುಂಬದ ಬಡತನವನ್ನು ಹೋಗಲಾಡಿಸಬೇಕೆಂದು ಸಂಕಲ್ಪಮಾಡಿ, ಆಕ್ಷಣವೇ ಶ್ರೀ ಮಹಾಲಕ್ಷ್ಮಿಯನ್ನು ಕುರಿತು ಸ್ತೋತ್ರವೊಂದನ್ನು ರಚಿಸಿ ಪ್ರಾರ್ಥಿಸುತ್ತಾರೆ. ಆಗ ಆ ಬ್ರಾಹ್ಮಣನ ಮನೆಯ ಮುಂದೆ ಬಂಗಾರದ ನೆಲ್ಲಿಕಾಯಿಗಳ ಮಳೆಯೇ ಸುರಿಯುತ್ತದೆ. ಭಿಕ್ಷದಾನಕ್ಕಿರುವ ಶಕ್ತಿ ಇದು.

ಹಾಗಾಗಿ, ಯಾರಾದರೂ ಭಿಕ್ಷ ಕೇಳಿದರೆ ನಾಸ್ತಿ ಎನ್ನಬಾರದು, ಮುಂದೆ ಹೋಗಿ ಎನ್ನಬಾರದು ಎನ್ನುವ ವಾಡಿಕೆಯಿದೆ. ಭಿಕ್ಷ ನೀಡುವುದರಿಂದ, ಅದರಲ್ಲೂ ಯತ್ಯಾಶ್ರಮಿಗಳಿಗೆ ನೀಡುವುದರಿಂದ ದೊರೆಯುವ ಫಲಗಳ ಬಗ್ಗೆಯೂ ಹೇಳುತ್ತಾರೆ. ಯತಿಗಳ ಅಂಜಲಿಯಲ್ಲಿ ನೀಡುವ ಒಂದು ಕುಡುತೆ ನೀರು, ಒಂದು ತುತ್ತು ಅನ್ನ, ಮಹತ್ತಾದ ಫಲವನ್ನು ನೀಡುತ್ತದೆ ಎನ್ನುವ ನಂಬಿಕೆಯಿದೆ. 'ಯತಿ ಹಸ್ತೇ ಜಲಂ ದದ್ಯಾತ್ ಭೈಕ್ಷ್ಯಂ ದದ್ಯಾತ್ ಜಲೋಪರಿ, ತದನ್ನಂ ಮೇರು ತುಲ್ಯಂಸ್ಯಾತ್ ತಜ್ಜಲಂ ಸಾಗರೋಪಮ್'– ಸಂಸಾರಿಯಾದವನು ಯತಿಗಳಿಗೆ ಭಿಕ್ಷಾನ್ನವನ್ನು ನೀಡಿದರೆ ಅಥವಾ ತೃಷೆಗೆ ನೀರು ನೀಡಿದರೆ ಅದು ಮಹತ್ತಾದ ಫಲವನ್ನು ನೀಡುತ್ತದೆ ಎನ್ನುವ ನಂಬಿಕೆಯಿದೆ.

ಭಿಕ್ಷ ಎನ್ನುವುದು ಸಂಸ್ಕೃತದ ಪದ, ಕವಳ ಎನ್ನುವುದು ಭಿಕ್ಷಕ್ಕೆ ಸಮಾನವಾದ ಕನ್ನಡ ಪದ. ಕವಳ ಎನ್ನುವ ಪದ ಈಗ ಅಷ್ಟು ಬಳಕೆಯಲ್ಲಿಲ್ಲದಿದ್ದರೂ, ಈ ಶಬ್ದಕ್ಕೆ ವಿಸ್ತೃತವಾದ ಪವಿತ್ರವಾದ ಅರ್ಥ ನಿರೂಪಣೆಯಿದೆ. ವಿದ್ಯಾಪ್ರಸನ್ನ ತೀರ್ಥರು ರಚಿಸಿದ 'ಕವಳತಾಯಿ ಕವಳ ಅಮ್ಮ' ಪದ ಬಹಳ ಪ್ರಖ್ಯಾತವಾಗಿದೆ. ಶ್ರೀ ಶಂಕರರು ಮಹಾಲಕ್ಷ್ಮಿಯನ್ನು ಸ್ತುತಿಸಿ ಸುವರ್ಣವೃಷ್ಟಿ ಸುರಿಸಿದರೆ, ವಿದ್ಯಾಪ್ರಸನ್ನ ತೀರ್ಥರು ಶ್ರೀಮಂತಳಾದ ಮಹಾಲಕ್ಷ್ಮಿಯಲ್ಲೇ ಭಿಕ್ಷಯಾಚಿಸುವ ಜಾಣ್ಮೆತೋರುತ್ತಾರೆ: 'ಕವಳ ತಾಯಿ ಕವಳ ಅಮ್ಮ, ಪಾಪಿ ಪರದೇಶಿಯ ಮರೆಯಬೇಡಿರಮ್ಮ, ಸಂಜೆಯ ಕವಳಕ್ಕೆ ಸಾವಿರ ಆಪತ್ತು, ಅಂಜಿ ಓಡುವುದೆಂದು ಕೇಳಿಲ್ಲವೇನಮ್ಮ, ಭುಂಜಿಸಿ ನಿಮ್ಮಯ ಪತಿಯ ಪ್ರಸಾದದ, ಎಂಜಲು ಎನಗಿಷ್ಟು ಜೋಳಿಗೆಗಿಕ್ಕವ್ವ'– ಈ ಪರದೇಸಿಯನ್ನು ಮರಿಬೇಡಮ್ಮಾ, ರಾತ್ರಿ ಭಿಕ್ಷಾನ್ನ ನೀಡಿದರೆ ಕಷ್ಟ ಪರಂಪರೆಗಳೆಲ್ಲಾ ಓಡಿಹೋಗುತ್ತೆ ಎನ್ನುವುದು ನಿನಗೆ ತಿಳಿದಿಲ್ಲವೇನಮ್ಮಾ, ಹಾಗಾಗಿ, ನಿನ್ನ ಯಜಮಾನ, ಅಂದರೆ ಶ್ರೀ ವಿಷ್ಣು ಉಂಡಾದ ಮೇಲೆ ನೀನೂ ಉಂಡು ಉಳಿಯುವ ಎಂಜಲನ್ನವನ್ನು ನನ್ನ ಜೋಳಿಗೆಗೆ ಸ್ವಲ್ಪ ಹಾಕಮ್ಮಾ ಎನ್ನುತ್ತಾರೆ ವಿದ್ಯಾಪ್ರಸನ್ನ ತೀರ್ಥರು. ಹಳೇಕಾಲದಲ್ಲಿ, ಗಂಡ ಉಂಡ ಬಾಳೆಯಲ್ಲೇ ಹೆಂಡತಿಯಾದವಳೂ ಉಣ್ಣುವ ಪದ್ಧತಿ ಇತ್ತು, ಅದು ಸರಿಯೋ ತಪ್ಪೋ ಎನ್ನುವುದು ಬೇರೆ ಮಾತು. ವಿದ್ಯಾಪ್ರಸನ್ನ ತೀರ್ಥರ ಭಿಕ್ಷದ ಪದ್ಯದ ಮುಂದಿನ ಸಾಲುಗಳ ಸಾರ ಹೀಗಿದೆ: ನನ್ನದು ಬಹಳ ದೊಡ್ಡ ಸಂಸಾರವೇನೋ ಇದೆ, ಆದರೆ ಇಲ್ಲಿ ಎಲ್ಲರೂ ಉಣ್ಣುವವರೇ ಹೊರತು ದುಡಿಯುವವರೊಬ್ಬರೂ ಇಲ್ಲ. ಕಮಲವ್ವ, ನಿನ್ನ ಅಮೃತ ಹಸ್ತಗಳಿಂದ ಭಿಕ್ಷವೇನಾದರೂ ದೊರೆತಿದ್ದೇ ಆದರೆ, ಅದು ನನ್ನ ಸಂಸಾರಕ್ಕೆ ಅಮೃತಸಮಾನವಾಗುತ್ತದೆ. ಹಾಗಾಗಿ ಕವಳಾ ಕೊಡವ್ವಾ. ಮಿತಿಯೇ ಇಲ್ಲದಷ್ಟು ಐಶ್ವರ್ಯ ನೀವು ಗಂಡ ಹೆಂಡಿರಿಗಿಬ್ಬರಿಗೂ ಇದೆ ಎಂದು ತಿಳಿದವರು ಮಾತಾಡುತ್ತಾರೆ. ಎಷ್ಟು ನೀಡಿದರೂ ಖರ್ಚಂತೂ ಆಗುವುದಲ್ಲ. ಹಾಗಾಗಿ, ನಿನ್ನ ಪತಿಯ ಅತುಲ್ಯವಾದ ಮಹಿಮಾ ಸಂಪತ್ತಿನಲ್ಲಿ ಸ್ವಲ್ಪವನ್ನಾದರೂ ನನಗೆ ಭಿಕ್ಷವಾಗಿ ನೀಡಮ್ಮಾ. ಕವಳ ಕೇಳಿದರೆ ಹೀಗೆ, ಇಂಥವರಲ್ಲಿ ಕೇಳಬೇಕು, ಯಾರ ಯಾರ ಮುಂದೋ ಕೈಯೊಡ್ಡುವುದಲ್ಲ ಎನ್ನುವುದನ್ನು ವಿದ್ಯಾಪ್ರಸನ್ನ ತೀರ್ಥರು ಹೇಳಿಕೊಟ್ಟಿದ್ದಾರೆ.

ಕವಳದ ಕುರಿತು ಇದೇ ಅರ್ಥವನ್ನು ಸಾರುವ 'ಕವಳ ಕೊಡಿ ತಾಯಿ, ಕರುಣೆಯ ಅಮ್ಮ ತಾಯಿ' ಎನ್ನುವ ಇನ್ನೊಂದು ಕನ್ನಡದ ಹಾಡಿದೆ. ಇದು ಯಾರ ರಚನೆಯೋ ಗೊತ್ತಿಲ್ಲ, ಭಾವ ಮಾತ್ರ ಮನೋವೇದ್ಯವಾಗಿದೆ. ಈ ಲೋಕದಲ್ಲಿ ಅನ್ನವೊಂದೇ ತಂದೆ-ತಾಯಿ, ಅನ್ನವೇ ಸರ್ವಸ್ವ. ಹಸಿವಾದಾಗ ಮನಸ್ಸಿನಲ್ಲಿ ಹಣದ ಆಸೆಯಿರುವುದಿಲ್ಲ, ಬಿಸಿಲು ಚಳಿಯ ಭಯವೂ ಇರುವುದಿಲ್ಲ. ಹಸಿವಿನ ಮುಂದೆ ಉಳಿದೆಲ್ಲವೂ ನಗಣ್ಯ ಎನ್ನುತ್ತಾನೆ ಕವಿ. ಅನ್ನವಿಟ್ಟ ಕೈ ತಾಯಿಗೆ ಸಮಾನ, ಅಂಥವಳ ಮನಸ್ಸು ಹೂವಿನಷ್ಟು ಮೃದುಮಧುರ. ಹಸಿದವರಿಗೆ, ಅನ್ನವಿಟ್ಟವರಿಗಿಂತ ದೊಡ್ಡ ದೇವರಿರುವುದಿಲ್ಲ. ಹಾಗಾಗಿ, ಅನ್ನ ನೀಡುವವರಿಗೆ ಚಿನ್ನವನ್ನು ತರಲಿ, ಅವರ ಮನೆ ನಂದನವನವಾಗಲಿ, ನಮಗೆ ತುತ್ತು ದಿನವೂ ಸಿಗಲಿ, ಅನ್ನ ಕೊಟ್ಟವರ ಹೊಟ್ಟೆ ಸದಾ ತುಂಬಿರಲಿ ಎಂದು ಆಶೀರ್ವಚನದ ಮಾತನ್ನಾಡಿ, ಕೊಡುವ ಕರಗಳಿಗೆ ಮಂಗಳಾಶಾಸನ ಮಾಡುತ್ತಾನೆ ಕವಿ. ಬ್ರಹ್ಮ ಕಪಾಲವನ್ನು ಹಿಡಿದು ಭಿಕ್ಷಾಟನೆ ಮಾಡಿದ ಪರಶಿವನ ಕಥೆಯನ್ನು ಹಾಗೂ ಆ ಕುರಿತು ಇರುವ 'ಶಿವನು ಭಿಕ್ಷಕ್ಕೆ ಬಂದ ನೋಡುಬಾರೆ', ಪುರಂದರ ದಾಸರ 'ರಾಗೀ ತಂದೀರಾ ಭಿಕ್ಷಕೆ ರಾಗೀ ತಂದೀರಾ' ಮುಂತಾದ ಕನ್ನಡ ಪದ್ಯಗಳನ್ನೂ ನಾವು ಕೇಳುತ್ತೇವೆ.

ಯಾಚನೆ ಎನ್ನುವಂಥದ್ದು ಬಹಳ ಕಷ್ಟದ ಕೆಲಸ, ಅಹಂಕಾರ ಅಭಿಮಾನಗಳನ್ನು ತೊರೆದು ನಡುಬಗ್ಗಿಸಿ ಕೈ ಚಾಚುವುದಿದೆಯಲ್ಲಾ ಅದು ಎಲ್ಲರಿಗೂ ಸಾಧ್ಯವಾಗುವ ವಿಷಯವಲ್ಲ. ಆದರೆ, ದೇಹಾಭಿಮಾನವೆನ್ನುವುದು ಸಾಧನೆಗೆ ಅಡ್ಡಬಾರದಿರಲಿ ಎನ್ನುವ ಕಾರಣಕ್ಕೋ ಏನೋ, ಸಾಧಕಜನರಿಗೆ ಭಿಕ್ಷಾನ್ನವನ್ನೇ ವಿಧಿಸಲಾಗಿದೆ. ಹಾಗೆ ನೋಡಿದರೆ, ನಾವೂ ಒಂದಲ್ಲಾ ಒಂದು ರೀತಿಯಿಂದ ಯಾಚಕರೇ ಆಗಿದ್ದೇವೆ. ಅಹಂಕಾರ ಅಭಿಮಾನಗಳನ್ನು ತೊರೆದು ಭಿಕ್ಷುಗಳಾಗುವ ಬದಲು, ನಾಚಿಕೆ, ಮಾನ, ಮರ್ಯಾದೆಗಳನ್ನು ತೊರೆದು, ಯಾರ್‍ಯಾರಿಂದಲೋ, ಏನೇನನ್ನೋ ಬೇಡುತ್ತ ನಿರ್ಲಜ್ಜವಾದ ಜೀವನ ಸಾಗಿಸುತ್ತಿರುವುದರಿಂದ, ಬೇಡುವವರಾಗಿದ್ದೇವೆ ಅಷ್ಟೆ.

ಕಮ್ಯುನಿಸ್ಟ್ ಪ್ರೇರಿತ ಸಮಾಸನಪ್ರೀತ ವಿರಕ್ತರ ಮುಜುಗರ ಸಂಕೀರ್ಣತೆ..!

ಬಸವ ಮಂಟಪ
ರವಿ ಹಂಜ್
vveditoped@gmail.com

ಶ್ರೀ ಸ್ವಾಮಿಗಳು ಗುರುತಿಸಿದಂತೆ ಇದೇ ಪಾಠಾಂತರವು ಜ್ಯೋತಿರ್ನಾಥನ ಶೈವ ರತ್ನಾಕರದಲ್ಲಿ ಕಂಡುಬರುತ್ತದೆ. ಅಲ್ಲಿ ಅದರ ಆಕರವನ್ನು ಲಿಂಗಪುರಾಣವೆಂದು ಹೇಳಿದೆ. ಅದೇ ಜ್ಯೋತಿರ್ನಾಥನು ಅದೇ ಗ್ರಂಥದಲ್ಲಿ ಇನ್ನೊಂದೆಡೆ ಅದೇ ಶ್ಲೋಕವನ್ನು ವಾತುಲಾಗಮದ್ದು ಎಂದು ಗುರುತಿಸಿದ್ದಾನೆ ಎಂದು ಶ್ರೀ ಸ್ವಾಮಿಗಳೇ ಹೇಳಿದ್ದಾರೆ. ಅದೇ ಶ್ಲೋಕ ಇನ್ನೂ ಅನೇಕ ಕಡೆ ಬಂದಿದ್ದರೂ ಅದನ್ನು ಸಿದ್ಧಾಂತ ಶಿಖಾಮಣಿಯದ್ದೆಂದು ಯಾರೂ ಗುರುತಿಸಿಲ್ಲ ಎಂಬುದು ಒಂದು ಅಂಶವಾದರೂ, ಕೆಲವರು ವಾತುಲಾಗಮದ್ದೆಂದೂ, ಮತ್ತೆ ಕೆಲವರು ಶಿವಪುರಾಣದ್ದೆಂದೂ, ಮಿಕ್ಕ ಕೆಲವರು ಕಾಮಿಕಾಗಮದ್ದೆಂದೂ, ಸ್ಕಾಂದಪುರಾಣದ್ದೆಂದೂ, ಸುಪ್ರಭೇದಾಗಮದ್ದೆಂದೂ ಅದರ ಆಕರವನ್ನು ವಿವಿಧ ರೀತಿಯಲ್ಲಿ ಹೇಳಿರುವುದು ಇನ್ನೊಂದು ಗಣನೀಯ ಅಂಶ. ಇದರಿಂದ ಶ್ಲೋಕವನ್ನು ಬಳಸಿಕೊಂಡಿರುವವರು ಮೂಲವನ್ನು ನೋಡಿ ಉದಾಹರಿಸಿರುವರೋ ಅಥವಾ ಒಬ್ಬರು ಮಾಡಿರುವ ಉಲ್ಲೇಖವನ್ನು ನೋಡಿ ಮತ್ತೊಬ್ಬರು ತೆಗೆದುಕೊಂಡಿರುವರೋ ಎಂಬ ಸಂದೇಹ ಬರುತ್ತದೆ. ಶ್ರೀ ಸ್ವಾಮಿಗಳು ಇವೆಲ್ಲ ಆಕರಗಳಲ್ಲಿ ಒಂದನ್ನು ಅಂದರೆ ವಾಯವೀಯ ಸಂಹಿತೆಯನ್ನು ಆಯ್ದು ಅದರಿಂದಲೇ ಈ ಶ್ಲೋಕವನ್ನು ತೆಗೆದುಕೊಂಡಿದ್ದಾರೆ ಎಂದು ಹೇಳುತ್ತಾರೆ. ಅದಕ್ಕೆ ಅವರು ಕೊಡುವ ಕಾರಣವೆಂದರೆ ಬಸವಣ್ಣನವರು ಕೆಲವು ವಚನಗಳಲ್ಲಿ ಶಿವಪುರಾಣ ಮತ್ತು ತದಂತರ್ಗತ ವಾಯವೀಯ ಸಂಹಿತೆಯಿಂದ ಶ್ಲೋಕಗಳನ್ನು ಉಲ್ಲೇಖಿಸಿದ್ದಾರೆ ಎಂಬುದು. ಪ್ರಸ್ತುತ ಸಂದರ್ಭದಲ್ಲಂತೂ ಬಸವಣ್ಣನವರು ಆಕರವನ್ನು ಹೇಳಿಲ್ಲ. ಕೆಲವು ಕಡೆ ಶಿವಪುರಾಣದ ವಾಯವೀಯ ಸಂಹಿತೆಯಿಂದ ಉಲ್ಲೇಖಿಸಿದ್ದಾರೆ ಎಂಬ ಕಾರಣದಿಂದ ಎಲ್ಲಿ ಆಕರವನ್ನು ಹೇಳಿಲ್ಲವೋ ಅಲ್ಲಿಯೂ ವಾಯವೀಯ ಸಂಹಿತೆಯೇ ಆಕರವೆಂದು ಹೇಳಲು ಸಾಧ್ಯವೆ? ತಮ್ಮ ವಚನಗಳಲ್ಲಿ ಬಸವಣ್ಣನವರು ಬಹುಮಟ್ಟಿನ ಶ್ಲೋಕಗಳ ಆಕರಗಳನ್ನು ಹೇಳಿಲ್ಲ. ಪ್ರಸ್ತುತ ಶ್ಲೋಕವನ್ನು ಅವರು ಸಿದ್ಧಾಂತ ಶಿಖಾಮಣಿಯಿಂದ ತೆಗೆದುಕೊಂಡಿಲ್ಲ ಎಂದು ಖಚಿತವಾಗಿ ಹೇಗೆ ಹೇಳುವುದು?'' ಎಂದು ತಾರ್ಕಿಕವಾಗಿ ಇಮ್ಮಡಿಯವರ ವಾದವನ್ನು ನೂರ್ಮಡಿ ದೂರಕ್ಕೆಸೆಯುತ್ತಾರೆ.

ಹಾಗೆಯೇ ತಮ್ಮ ತರ್ಕಬದ್ಧ ವಾದವನ್ನು, ''... ಶ್ರೀ ಸಿದ್ಧಾಂತ ಶಿಖಾಮಣಿಯ ಕಾಲದ ಬಗ್ಗೆ ಚರ್ಚೆಯಲ್ಲಿ ಅದೊಂದೇ ಶ್ಲೋಕವನ್ನು ಆಧಾರವಾಗಿ ಕೆಲವರು ಇಟ್ಟುಕೊಂಡಿರಬಹುದು. ಆದರೆ ನಾನು ಸಿದ್ಧಾಂತ ಶಿಖಾಮಣಿಯ ಇನ್ನೂ ಕೆಲವು ಶ್ಲೋಕಗಳನ್ನು ಚನ್ನಬಸವಣ್ಣನವರ ವಚನಗಳಲ್ಲಿ ಗುರುತಿಸಿದ್ದೇನೆ. ಈ ಮೂರೂ ಶ್ಲೋಕಗಳು ಒಂದಾದ ಮೇಲೆ ಒಂದರಂತೆ ಚನ್ನಬಸವಣ್ಣನವರ ಒಂದು ವಚನದ ಆರಂಭದಲ್ಲಿ ಬಂದಿವೆ. ಶ್ರೀ ಸ್ವಾಮಿಗಳು ಈ ಮೂರೂ ಶ್ಲೋಕಗಳಿಗೆ ಶಿವತತ್ವರತ್ನಾಕರ ಎಂದು ಆಧಾರಗ್ರಂಥವನ್ನೂ, ಮೂಲವೆಂದು ಪುರಾಣಗಳು, ಶೈವಸಿದ್ಧಾಂತದೀಪಿಕೆಗಳನ್ನು ಗುರುತಿಸಿದ್ದಾರೆ. ಶಿವತತ್ವ ರತ್ನಾಕರದಲ್ಲಿ ಅವು 9ನೇ ಕಲ್ಲೋಲ, 8ನೇ ತರಂಗದ 87, 88 ಮತ್ತು 89ನೇ ಶ್ಲೋಕಗಳಾಗಿ ಬಂದಿವೆ. ಅವುಗಳ ಮೂಲ ಆಕರವನ್ನು ಶ್ರೀ ಸ್ವಾಮಿಗಳು ಪುರಾಣಗಳು, ಶೈವಸಿದ್ಧಾಂತದೀಪಿಕೆಯೆಂದು ಯಾವ ಆಧಾರದ ಮೇಲೆ ಗುರುತಿಸಿದರೋ ತಿಳಿಯದು. ಏನೇ ಇರಲಿ ಈ ಮೂರು ಶ್ಲೋಕಗಳು ಶ್ರೀ ಸಿದ್ಧಾಂತ ಶಿಖಾಮಣಿಯ ಮಹೇಶ್ವರಸ್ಥಲಾಂತರ್ಗತ ಆಹ್ವಾನನಿರಸನಸ್ಥಲಕ್ಕೆ ಸಂಬಂಧಿಸಿದವುಗಳು. ಚನ್ನಬಸವಣ್ಣನವರ ವಚನದಲ್ಲಿಯೂ ಇದೇ ಸಂದರ್ಭದಲ್ಲಿ ಬಂದಿವೆಯೆಂಬುದು ವಚನದ ಅಂತಿಮಭಾಗದಿಂದ ಸ್ಪಷ್ಟ...

ಶ್ರುತಿಸಿದ್ಧವಾದ ಈ ವೀರಶೈವಶಾಸ್ತ್ರವು ಷಟ್ಸ್ಥಲ-ಅಷ್ಟಾವರಣ-ಪಂಚಾಚಾರಗಳ ವ್ಯಾಪ್ತಿಯನ್ನೊಳಗೊಂಡಂತೆ ಪರಿಪೂರ್ಣವಾಗಿ ಶೈವಾಗಮಗಳ ಉತ್ತರ ಭಾಗಗಳಲ್ಲಿ ನಿರೂಪಿತವಾಗಿ, ಜೇಡರ ದಾಸಿಮಯ್ಯ ಮುಂತಾದವರ ವಚನಗಳ ಮೂಲಕ ಸಮಗ್ರ ಸ್ವರೂಪವನ್ನು ತಾಳಿ, ಬಸವಾದಿ ಶರಣರಿಗೆ ಬಳುವಳಿಯಾಗಿ ಬಂದಿತ್ತು. ಅದನ್ನು ಅನುಭವಕ್ಕೆ ತಂದುಕೊಂಡು ತಮ್ಮ ವಚನಗಳ ಮೂಲಕ ಸುಲಭವಾಗಿ ತಿಳಿಯುವಂತೆ ಬೋಧಿಸಿದ ಕೀರ್ತಿ ಬಸವಾದಿ ಶರಣರಿಗೆ ಸಲ್ಲಬೇಕು. ಅವರಿಂದ ಏಕೋತ್ತರಶತಸ್ಥಲ ಸಿದ್ಧಾಂತ 'ಉದಿತ'ವಾಯಿತು ಎಂದು ಹೇಳಿರುವುದು ಅವರಿಂದಲೇ ಹುಟ್ಟಿತು ಎಂಬರ್ಥದಲ್ಲಲ್ಲ, ಪ್ರಚಾರಕ್ಕೆ ಬಂತು, ಪ್ರವರ್ಧಮಾನಕ್ಕೆ ಬಂತು ಎಂಬ ಅರ್ಥದಲ್ಲಿ ಹೇಳಲಾಗಿದೆ. ಅಲ್ಲಮಪ್ರಭು, ಬಸವಣ್ಣ ಮತ್ತು ಚನ್ನಬಸವಣ್ಣನವರನ್ನು ಜಂಗಮ-ಗುರು-ಲಿಂಗ ಸ್ವರೂಪರೆಂದು ಗೌರವಿಸಿರುವುದು ಅವರ ಆಧ್ಯಾತ್ಮಿಕ ಸಾಧನೆಗಾಗಿ, ಅವರು ಮಾಡಿದ ಸಮಾಜೋ-ಧಾರ್ಮಿಕ ಸುಧಾರಣೆಗಳಿಗಾಗಿ ಮತ್ತು ವೀರಶೈವ ಮತಕ್ಕೆ ಪ್ರಚಾರ ಮತ್ತು ವಿಸ್ತಾರಗಳನ್ನು ತಂದುಕೊಟ್ಟಿದ್ದಕ್ಕಾಗಿ. ಚನ್ನಬಸವಣ್ಣನವರನ್ನು ಕುರಿತು ಬಸವಣ್ಣನವರು ಹೇಳಿದ ಈ ಮಾತನ್ನು ಗಮನಿಸಿ: 'ಗುರುವಿಂಗೆ ನೀನೇ ಕರ್ತ, ಲಿಂಗಕ್ಕೆ ನೀನೇ ಕರ್ತ, ಜಂಗಮಕ್ಕೆ ನೀನೇ ಕರ್ತ, ಪ್ರಸಾದಕ್ಕೆ ನೀನೇ ಕರ್ತ, ಉಪದೇಶಕ್ಕೆ ನೀನೇ ಕರ್ತ, ಕೂಡಲಸಂಗಮದೇವರು ಸಾಕ್ಷಿಯಾಗಿ ಎನಗೆಯೂ ನೀನೇ ಕರ್ತನಾದ ಕಾರಣ, ನಾನು ಬೇಕೆನಲಮ್ಮೆ, ಬೇಡೆನಲಮ್ಮೆ, ಕಾಣಾ ಚನ್ನಬಸವಣ್ಣಾ'.

ಹೀಗೆಯೇ ಬಸವಣ್ಣನವರು ಪ್ರಭುದೇವರ ಬಗ್ಗೆಯೂ ಹೇಳಿದ್ದಾರೆ. ಬಸವಣ್ಣನವರ ಬಗೆಗಂತೂ ಎಲ್ಲಾ ವಚನಕಾರರೂ ಇದೇ ರೀತಿಯಲ್ಲಿ ಗೌರವದಿಂದ ಹೇಳಿದ್ದಾರೆ. ಅದೇ ರೀತಿ ಅಂದಿನ ಕಾಲದಲ್ಲಿ ಅಂಥ ಹಾರ್ದಿಕ ಗೌರವ ಪ್ರದರ್ಶನ ಬಸವಾದಿ ಶರಣರಿಗೆ ಸಲ್ಲುತ್ತಾ ಬಂದಿತ್ತು. ಈಗಲೂ ಸಲ್ಲುತ್ತಾ ಬರುತ್ತಿದೆ. ಜಕ್ಕಣಾರ್ಯನೂ ಅದನ್ನೇ ಮಾಡಿದ್ದಾನೆ. ಅದೆಲ್ಲವನ್ನೂ ಶಬ್ದಶಃ ಅರ್ಥದಲ್ಲಿ ತೆಗೆದುಕೊಳ್ಳುವಂತಿಲ್ಲ (ಈಗ ಯಾರಾದರೂ ಗೌರವಾಭಿಮಾನದಿಂದ ಯಾರನ್ನಾದರೂ 'ಅಪ್ಪಾಜಿ, ಅಣ್ಣಾ, ಅಮ್ಮಾ, ಅಕ್ಕ' ಎಂದು ಸಂಬೋಧಿಸುವುದನ್ನು ಯಥಾರ್ಥವಾಗಿ ಪರಿಗ್ರಹಿಸಿ ಇವರು ಇವನ ತಂದೆ, ಅಣ್ಣ, ತಾಯಿ, ಸೋದರಿ ಆಗಿದ್ದರು ಎನ್ನಲಾಗುವುದೇ?).

ಭಾಗ-2

ಅವೆಲ್ಲಾ ಅರ್ಥವಾದಗಳು, ಗುರು-ಲಿಂಗ-ಜಂಗಮ ಮುಂತಾದವುಗಳಿಗೆ ಅವರು ಹೇಗೆ ಕರ್ತೃಗಳಲ್ಲವೋ ಹಾಗೆಯೇ ಏಕೋತ್ತರಶತಸ್ಥಲಗಳಿಗೆ ಅವರು ಕರ್ತೃಗಳಲ್ಲ. ಆದ್ದರಿಂದ ಶೈವಾಗಮಗಳು, ಶೈವಪುರಾಣಗಳು, ಉಪನಿಷತ್ತುಗಳ ಮೂಲದಿಂದ ವೀರಶೈವ ಪರವಾದ ವಿಷಯಗಳನ್ನು ಸಂಗ್ರಹಿಸಿ ಅದಕ್ಕೆ ನೂರೊಂದು ಸ್ಥಲಗಳ ವ್ಯವಸ್ಥೆಯನ್ನು ಕೊಟ್ಟು ಮೊಟ್ಟಮೊದಲಿಗೆ ವಿವರಿಸಿದ ಕೀರ್ತಿ ಶಿವಯೋಗಿ ಶಿವಾಚಾರ್ಯರಿಗೆ ಸಲ್ಲಬೇಕು. ಮುಂದೆ ನೂರೊಂದು ಸ್ಥಲಗಳ ಬಗ್ಗೆ ಹೇಳಿರುವರೆಲ್ಲರೂ, ಹೆಸರಿಸಲಿ, ಹೆಸರಿಸದಿರಲಿ, ಶ್ರೀ ಸಿದ್ಧಾಂತ ಶಿಖಾಮಣಿಗೇ ಋಣಿ. ಯಾರೂ ಸಿದ್ಧಾಂತ ಶಿಖಾಮಣಿಯ ಹೆಸರೆತ್ತುವುದಿಲ್ಲ ಎಂಬುದು ಶ್ರೀ ಸ್ವಾಮಿಗಳು ಮತ್ತೆ ಮತ್ತೆ ಒತ್ತಿ ಹೇಳುವ ಮಾತು, ತತ್ಪೂರ್ವದಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿಯೆಂಬ ಗ್ರಂಥವೇ ಇರಲಿಲ್ಲ ಎಂಬ ಮಾತಿಗೆ ಆಧಾರವಲ್ಲ. ಉಲ್ಲೇಖ ಮಾಡುವವರು ಹೆಸರೆತ್ತಿ ಉಲ್ಲೇಖಿಸುವುದಕ್ಕಿಂತ ಹೆಸರೆತ್ತದೆ ಉಲ್ಲೇಖಿಸುವ ಸಂದರ್ಭಗಳೇ ಹೆಚ್ಚು. ನಿಜಗುಣ ಶಿವಯೋಗಿಗಳು ಶರಣರ್‍ಯಾರನ್ನೂ ಸ್ಮರಿಸುವುದಿಲ್ಲ ಎಂದ ಮಾತ್ರಕ್ಕೆ ಶರಣರು ಯಾರೂ ಇರಲಿಲ್ಲವೇ? ಇದೇ ರೀತಿಯ ಪ್ರಶ್ನೆಯನ್ನು ಶ್ರೀ ಸಿದ್ಧಾಂತ ಶಿಖಾಮಣಿಯ ಬಗ್ಗೆಯೂ ಕೇಳಬೇಕಾಗುತ್ತದೆ'' ಎಂದು ತರ್ಕಬದ್ಧವಾಗಿ ಮಂಡಿಸುತ್ತಾರೆ.

ಶ್ರೀ ಸಿದ್ಧಾಂತ ಶಿಖಾಮಣಿಯು ಶೈವಾಗಮಗಳಲ್ಲಿ ಮತ್ತು ಶೈವಪುರಾಣಗಳಲ್ಲಿ ಬಂದ ವೀರಶೈವ ಪರವಾದ ಭಾಗಗಳ ಸಾರಸಂಗ್ರಹ. ಅದನ್ನು ಗ್ರಂಥಕರ್ತೃಗಳಾದ ಶಿವಯೋಗಿ ಶಿವಾಚಾರ್ಯರು ಮುಚ್ಚಿಟ್ಟುಕೊಳ್ಳದೆ ಸ್ಪಷ್ಟವಾಗಿ ಹೇಳಿಕೊಂಡಿದ್ದಾರೆ ಎನ್ನುತ್ತಾ, ''ಕಾಮಿಕದಿಂದ ವಾತುಲಾಗಮದವರೆಗೂ ಇರುವ (ಇಪ್ಪತ್ತೆಂಟು) ಶೈವತಂತ್ರಗಳನ್ನು ಮತ್ತು ಎಲ್ಲಾ ಶೈವಪುರಾಣಗಳನ್ನು ಆದರಪೂರ್ವಕವಾಗಿ ಪರಿಶೀಲಿಸಿ.... ಆ ಎಲ್ಲಾ ಆಗಮಗಳಲ್ಲಿ ಮತ್ತು ಪುರಾಣಗಳಲ್ಲಿ ಹಿಂದೆ ಪರಮಾತ್ಮನು ಪಾರ್ವತಿಗೆ ಮತ್ತು ಷಣ್ಮುಖನಿಗೆ ಹೇಳಿದ, ಆ ಸಂಪ್ರದಾಯದಲ್ಲಿ ನಿಷ್ಣಾತನಾಗಿದ್ದ ಮಹಾತ್ಮಾ ರೇಣುಕ ಗಣೇಶ್ವರನಿಂದ ಮತ್ತೆ ಭೂಮಿಯಲ್ಲಿ ಅಗಸ್ತ್ಯನಿಗೆ ಬೋಧಿಸಲ್ಪಟ್ಟ, ನೂರೊಂದು ಸ್ಥಲಗಳಿಂದ ಕೂಡಿದ ವೀರಶೈವ ಮಹಾತಂತ್ರವನ್ನು ಜ್ಞಾನಿಗಳಲ್ಲಿ ಶ್ರೇಷ್ಠರಾದ ಶಿವಯೋಗಿ ಶಿವಾಚಾರ್ಯರು ಲೋಕದ ಜನರ ಅನುಗ್ರಹಕ್ಕಾಗಿ ಹೇಳಿದರು'' ಎಂಬರ್ಥದ ಸಿದ್ಧಾಂತ ಶಿಖಾಮಣಿಯ ಮೂಲ ಸಂಸ್ಕೃತ ಶ್ಲೋಕವನ್ನು ಉಲ್ಲೇಖಿಸುತ್ತ, ''ಹೀಗೆ ಗ್ರಂಥಕರ್ತೃಗಳೇ ಹೇಳಿಕೊಂಡಿರುವುದರಿಂದ, ಶೈವಾಗಮಗಳಿಂದ ಮತ್ತು ಶೈವಪುರಾಣಗಳಿಂದ ಎಷ್ಟೋ ಶ್ಲೋಕಗಳು ಯಥಾವತ್ತಾಗಿ ಬಂದಿವೆ. ಕೆಲವು ಸ್ವಲ್ಪ ಪಾಠಾಂತರದೊಂದಿಗೆ ಬಂದಿವೆ. ಇನ್ನೂ ಅನೇಕ ಶ್ಲೋಕಗಳ ಭಾವಾನುವಾದಗಳು ಬಂದಿವೆ. ಶ್ರೀ ಸ್ವಾಮಿಗಳು ಸುಮಾರು 356 ಸಿದ್ಧಾಂತ ಶಿಖಾಮಣಿ ಶ್ಲೋಕಗಳಿಗೆ ಆಕರಗಳನ್ನು ಗುರುತಿಸಿದ್ದೇವೆಂದು ಹೇಳಿದ್ದಾರೆ. ಅವರ ಗ್ರಂಥದ 'ಅನುಬಂಧ-1' ಅನ್ನು (ಪು. 145-166) ನೋಡಿದರೆ ಅದರಲ್ಲಿ ಅವರು ಗುರುತಿಸಿರುವುದರ ವಿವರ ಗೊತ್ತಾಗುತ್ತದೆ. ಶರಣರ ಕಾಲಕ್ಕಿಂತ ಅರ್ವಾಚೀನವಾದ ಶಿವತತ್ವ ರತ್ನಾಕರ, ವೀರಶೈವ ಸದಾಚಾರ ಸಂಗ್ರಹ, ಅನಾದಿ ವೀರಶೈವ ಸಂಗ್ರಹ, ಕ್ರಿಯಾಸಾರ, ವೀರಶೈವ ಆಚಾರಕೌಸ್ತುಭ, ಲಿಂಗಧಾರಣ ಚಂದ್ರಿಕಾ, ವೀರಶೈವ ಚಿಂತಾಮಣಿ ಮುಂತಾದವುಗಳಲ್ಲಿನ ಉಲ್ಲೇಖಗಳ ಆಧಾರದ ಮೇಲೆ, ಅವುಗಳ ಮೂಲವನ್ನು ಯಾವುದೋ ಆಗಮದ್ದೆಂದು, ಯಾವುದೋ ಪುರಾಣದ್ದೆಂದು ಗುರುತಿಸಿದ್ದಾರೆ. ಎಷ್ಟೋ ಮೂಲ ಆಗಮಗಳು, ಪುರಾಣ ಭಾಗಗಳು ಈಗ ದೊರೆಯದಿರುವುದರಿಂದ ಅವರು ಇಷ್ಟು ಮಾಡಿರುವುದು ಪ್ರಶಂಸನೀಯವೇ ಆದರೂ ಉಲ್ಲೇಖಿಸಿರುವವರು ಎಷ್ಟರಮಟ್ಟಿಗೆ ಸರಿಯಾದ ಮೂಲವನ್ನು ಗುರುತಿಸಿದ್ದಾರೋ, ಒಬ್ಬರನ್ನು ಅನುಸರಿಸಿ ಇನ್ನೊಬ್ಬರು ಉಲ್ಲೇಖಿಸುವುದರಲ್ಲಿ ಎಷ್ಟು ವ್ಯತ್ಯಾಸಗಳಾಗಿವೆಯೋ, ತಪ್ಪುಗಳಾಗಿವೆಯೋ ಎಂಬ ಸಂದೇಹವಂತೂ ಇದ್ದೇ ಇದೆ'' ಎನ್ನುತ್ತಾರೆ. ಶ್ರೀ ಸಿದ್ಧಾಂತ ಶಿಖಾಮಣಿ ಶರಣರ ಕಾಲಕ್ಕಿಂತ ನಂತರದ್ದು ಎಂದು ಸಾಧಿಸಲು ವ್ಯಾಖ್ಯಾನಕಾರರು ಹರಿಯಬಿಟ್ಟ ಕಲ್ಪನೆಯೊಂದನ್ನು ಆಧರಿಸಿದ್ದಾರೆ. ಗ್ರಂಥಕಾರರಾದ ಶಿವಯೋಗಿ ಶಿವಾಚಾರ್ಯರು ಸಿದ್ಧರಾಮೇಶ್ವರರ ವಂಶದವರು ಎಂದು ಗ್ರಂಥಕ್ಕೆ ಕನ್ನಡ ವ್ಯಾಖ್ಯಾನವೊಂದನ್ನು ರಚಿಸಿದ ಸೋಸಲೆ ರೇವಣಾರಾಧ್ಯರು ಮತ್ತು ಅವರನ್ನು ಅನುಸರಿಸಿ ಸಂಸ್ಕೃತ ವ್ಯಾಖ್ಯಾನಕಾರರಾದ ಮರಿತೋಂಟದಾರ್ಯರು ಹೇಳಿದ್ದಾರೆ. ಗ್ರಂಥಕಾರರು ಸಿದ್ಧರಾಮೇಶ್ವರ ವಂಶಸ್ಥರಲ್ಲ ಎಂದು ಸಾಧಿಸಲು, ಶ್ರೀ ಸ್ವಾಮಿಗಳು ಹೇಳಿದಂತೆ, ನಾವೆಲ್ಲಾ ನಾನಾರೀತಿಯ ಯಾವ ವಿವರಣೆಯನ್ನೂ ಕೊಟ್ಟಿಲ್ಲ. ಕೇವಲ ಅಸಂಬದ್ಧವೆಂದು ಕಂಡುಬಂದ ವ್ಯಾಖ್ಯಾನಕಾರರ ಕಲ್ಪನೆಗಳನ್ನು ನಿವಾರಿಸಿ ಸತ್ಯವಾದ ಚಿತ್ರವನ್ನು ಮುಂದಿಟ್ಟಿದ್ದೇವೆ. ಶಿವಯೋಗಿ ಶಿವಾಚಾರ್ಯರ ವಂಶಾವಳಿ ಶ್ರೀ ಸಿದ್ಧಾಂತ ಶಿಖಾಮಣಿಯ ಈ ಶ್ಲೋಕಗಳಲ್ಲಿದೆ:

ಕಶ್ಚಿದಾಚಾರಸಿದ್ಧಾನಾಮ್ ಅಗ್ರಣೀಃ ಶಿವಯೋಗಿನಾಮ್ ।
ಶಿವಯೋಗೀತಿ ವಿಖ್ಯಾತಃ ಶಿವಜ್ಞಾನಮಹೋದಧಿಃ ।
ತಸ್ಯ ವಂಶೇ ಸಮುತ್ಪನ್ನೋ ಮುಕ್ತಾಮಣಿರಿವಾಮಲಃ ।
ಮುದ್ದದೇವಾಭಿಧಾಚಾರ್ಯೋ ಮೂರ್ಧನ್ಯಃ
ಶಿವಯೋಗಿನಾಮ್ ॥
ತಸ್ಯಾಸೀನ್ನಂದನಃ ಶಾಂತಃ ಸಿದ್ದನಾಥಾಭಿಧಃ ಶುಚಿಃ ।
ಶಿವಸಿದ್ಧಾಂತನಿರ್ಣೇತಾ ಶಿವಾಚಾರ್ಯಃ ಶಿವಾತ್ಮಕಃ ॥
ತಸ್ಯ ವೀರಶಿವಾಚಾರ್ಯಶಿಖಾರತ್ನಸ್ಯ ನಂದನಃ ।
ಅಭವಚ್ಛಿವಯೋಗೀತಿ ಸಿಂಧೋರಿನ ಸುಧಾಕರಃ ॥

ಅರ್ಥಾತ್, ''ಆಚಾರದಲ್ಲಿ ನಿಷ್ಣಾತರಾದ ಶಿವಯೋಗಿಗಳಲ್ಲಿ ಅಗ್ರೇಸರನಾದ ಮತ್ತು ಶಿವಜ್ಞಾನದ ಸಮುದ್ರವೇ ಆದ ಒಬ್ಬನು ಶಿವಯೋಗಿಯೆಂದು ಪ್ರಸಿದ್ಧನಾಗಿದ್ದನು. ಅವನ ವಂಶದಲ್ಲಿ ಪರಿಶುದ್ಧ ಮುತ್ತಿನಂತೆ ಉತ್ಪನ್ನನಾದ, ಶಿವಯೋಗಿಗಳಲ್ಲಿ ಶ್ರೇಷ್ಠನಾದ, ಮುದ್ದದೇವನೆಂಬ ಹೆಸರಿನ ಆಚಾರ್ಯನು ಇದ್ದನು. ಅವನ ಮಗನೇ ಶಾಂತನಾದ, ಪರಿಶುದ್ಧನಾದ ಸಿದ್ದನಾಥನೆಂಬ ಹೆಸರಿನ ಶಿವಸ್ವರೂಪಿಯಾದ ಮತ್ತು ಶಿವಸಿದ್ಧಾಂತದ ನಿರ್ಣೇತೃವಾದ ಶಿವಾಚಾರ್ಯನು. ಸಮುದ್ರಕ್ಕೆ ಚಂದ್ರನಿದ್ದಂತೆ ವೀರಶೈವ ಶಿರೋಮಣಿಯಾದ ಆತನಿಗೆ ಶಿವಯೋಗಿಯೆಂಬ ಮಗನಿದ್ದನು''.

ಇಲ್ಲಿರುವ ಪರಂಪರೆ ಹೀಗಿದೆ: ಶಿವಯೋಗಿ-ಮುದ್ದದೇವ-ಸಿದ್ದನಾದ-ಶಿವಯೋಗಿ. ಇವರಲ್ಲಿ ನಾಲ್ಕನೆಯವರಾದ ಶಿವಯೋಗಿಯೇ ಶ್ರೀ ಸಿದ್ಧಾಂತ ಶಿಖಾಮಣಿಯ ಕರ್ತೃ. ಮೊದಲನೆಯ ಶಿವಯೋಗಿಯನ್ನೇ ವ್ಯಾಖ್ಯಾನಕಾರರು 'ರೇವಣಸಿದ್ದೇಶ್ವರ ದೃಷ್ಟಿಗರ್ಭಸಂಜಾತರಾದ ಸಿದ್ದರಾಮೇಶ್ವರರು' ಎಂದು ಗುರುತಿಸಿದ್ದಾರೆ. ಹೀಗೆ ಮೊದಲನೆಯ ಶಿವಯೋಗಿಯನ್ನು ಸಿದ್ಧರಾಮೇಶ್ವರರೆಂದು ಗುರುತಿಸಿದ ಅವರು ಪರಂಪರೆಯಲ್ಲಿ ಮೂರನೆಯವರಾದ ಸಿದ್ದನಾಥರನ್ನು ಕುರಿತು 'ಸಿದ್ದನಾಥಾಭಿಧಃ' ಎಂಬ ಶಬ್ದಕ್ಕೆ 'ಸಿದ್ದರಾಮರ ಹೆಸರನ್ನು ಹೊತ್ತ ಸಿದ್ದನಾಥರು' ಎಂದು ಅರ್ಥಮಾಡಿದ್ದಾರೆ.

ನಾನು ಇಲ್ಲಿ ಪ್ರಶ್ನೆಯೆತ್ತಿರುವುದು ಮೊದಲನೆಯ ಶಿವಯೋಗಿಯನ್ನು ಸಿದ್ಧರಾಮೇಶ್ವರ ಎಂದು ಕರೆದಿರುವುದರ ಬಗ್ಗೆ. ಶಿವಯೋಗಿ ಎಂದರೆ ಸಿದ್ಧರಾಮೇಶ್ವರ ಎಂದು ತೆಗೆದುಕೊಳ್ಳಲು ಆಧಾರವೇನು? ಅವರು ನಿಜವಾಗಿ ಸಿದ್ಧರಾಮರೇ ಆಗಿದ್ದಿದ್ದರೆ ಗ್ರಂಥಕಾರರು 'ಶಿವಯೋಗೀತಿ ವಿಖ್ಯಾತಃ ಶಿವಜ್ಞಾನಮಹೋದಧಿಃ' ಎಂದು ಹೇಳುವುದಕ್ಕೆ ಬದಲಾಗಿ 'ಸಿದ್ಧರಾಮ ಇತಿ ಖ್ಯಾತಃ ಶಿವಜ್ಞಾನಮಹೋದಧಿ?' ಎಂದು ಹೇಳಲು ಭಾಷೆಯಾಗಲಿ ಛಂದಸ್ಸಾಗಲಿ ಅಡ್ಡಬರುತ್ತಿರಲಿಲ್ಲ ಎಂದು ನನ್ನ 'ಸಿದ್ಧಾಂತ ಶಿಖಾಮಣಿ: ಮೂರು ಉಪನ್ಯಾಸಗಳು' (ಪು. 3) ಎಂಬ ಪುಸ್ತಕದಲ್ಲಿ ಹೇಳಿದ್ದೇನೆ. ಶ್ರೀ ಸ್ವಾಮಿಗಳು ಭಾವಿಸಿದಂತೆ ನಾನು 'ಸಿದ್ದನಾಥ ಎಂಬ ಪದಕ್ಕೆ ಬದಲಾಗಿ ಸಿದ್ಧರಾಮ ಎನ್ನಲು ಯಾವ ಅಡ್ಡಿಯೂ ಇರಲಿಲ್ಲ' ಎಂದು ಹೇಳಿಲ್ಲ. 'ಸಿದ್ಧರಾಮ ನೈಷ್ಠಿಕ ಬ್ರಹ್ಮಚಾರಿಯಾಗಿದ್ದರಲ್ಲ' ಎಂಬ ವಿದ್ವಾಂಸರೊಬ್ಬರ ಮಾತಿಗೆ ಉತ್ತರವಾಗಿ ಶ್ರೀ ಸ್ವಾಮಿಗಳು ಹೇಳುವ ಈ ಮಾತು ಗಮನಾರ್ಹ: ''ಶಿವಯೋಗಿಯು ಶರಣ ಸಿದ್ಧರಾಮನ ಔರಸಪುತ್ರನೇ ಆಗಬೇಕೆಂದೇನೂ ಇಲ್ಲ. 'ವಂಶ'ವೆಂದರೆ ಅವರ ಸೋದರ ವರ್ಗವು ಸೇರುವುದಿಲ್ಲವೆ! ಸಿದ್ಧರಾಮನಿಗೆ 'ಬೊಮ್ಮಣ್ಣ'ನೆಂಬ ಅಣ್ಣನಿದ್ದನೆಂದು ತಿಳಿದು ಬರುತ್ತದೆ. ಈ ಬೊಮ್ಮಣ್ಣನ ವಂಶದಲ್ಲಿಯೇ ಶಿವಯೋಗಿಗಳು ಏಕೆ ಜನಿಸಿರಬಾರದು?''. ಇದೊಂದು ಕಲ್ಪನೆಯ ಸರಪಣಿ ಎನ್ನದೆ ಗತಿಯಿಲ್ಲ. ಕಡೆಗೆ ಶ್ರೀ ಸ್ವಾಮಿಗಳು ''ಈ ವಿಷಯದಲ್ಲಿ 'ಇದಮಿತ್ಥಂ' ಎಂದು ಹೇಳುವಂತಿಲ್ಲ'' ಎಂದು ಹೇಳುತ್ತಾರೆ. ಹೋಗಲಿ ಬಿಡಿ. ಮೊದಲ ಶಿವಯೋಗಿಯು ಸಿದ್ಧರಾಮೇಶ್ವರರೂ ಅಲ್ಲ, ಗ್ರಂಥಕರ್ತೃ ಶಿವಯೋಗಿಯು ಸಿದ್ಧರಾಮೇಶ್ವರ ಸಂಪ್ರದಾಯದವರೂ ಅಲ್ಲ.

ಸಂಸ್ಕೃತದಲ್ಲಿ 'ವಂಶ' ಶಬ್ದಕ್ಕೆ ಪುತ್ರಪರಂಪರೆಯೆಂದೇ ಅರ್ಥ ಎಂದು ಶಾಸ್ತ್ರವಾಕ್ಯಗಳನ್ನು ಉದಾಹರಿಸಿ ಸಮರ್ಥಿಸಲು ಪ್ರಯತ್ನಿಸಿರುವ ಶ್ರೀ ಸ್ವಾಮಿಗಳಿಗೆ 'ಸಂಖ್ಯಾ ವಂಶೇನ' ಎಂಬ ಪಾಣಿನಿ ಸೂತ್ರದ ಮೇಲಿನ ಭಟ್ಟೋಜಿ ದೀಕ್ಷಿತರ ವೃತ್ತಿಯಲ್ಲಿ 'ವಂಶೋ ದ್ವಿಧಾ ವಿದ್ಯಯಾ ಜನ್ಮನಾ ಚ' ಎಂದು ಹೇಳಿರುವುದಕ್ಕೆ 'ಬಾಲಮನೋರಮಾ' ವ್ಯಾಖ್ಯಾನದಲ್ಲಿ ''ತತ್ರ ಜನ್ಮನಾ ವಂಶಃ ಪುತ್ರಾದಿಪರಂಪರೇತಿ ಪ್ರಸಿದ್ಧಮೇವ, ವಿದ್ಯಯಾ ತು ವಂಶಃ ಗುರುಪರಂಪರಾ'' (ಇಲ್ಲಿ ಜನ್ಮದಿಂದ ವಂಶವೆಂದರೆ ಪುತ್ರ ಪರಂಪರೆಯೆಂದು ಪ್ರಸಿದ್ಧ, ವಿದ್ಯೆಯಿಂದ ವಂಶವೆಂದರೆ ಗುರುಪರಂಪರೆ) ಎಂದು ಹೇಳಿರುವುದನ್ನು ಜ್ಞಾಪಿಸಿಕೊಡಬೇಕಾಗುತ್ತದೆ. ಗುರುಪರಂಪರೆಯನ್ನು ತೆಗೆದುಕೊಂಡರೆ 'ನಂದನಃ', 'ಪುತ್ರ' ಎಂದರೆ 'ಕರಸಂಜಾತಃ' ಎಂದೇ ಅರ್ಥ. ಹಾಗಾಗಿ ಎಲ್ಲಾ ಸ್ವಾಮಿಗಳು ಹಿಂದಿನ ಸ್ವಾಮಿಗಳ 'ಕರಸಂಜಾತರೇ' ಆಗಿದ್ದಾರೆ ಎಂದು ಇಮ್ಮಡಿ ಶಿವಬಸವ ಸ್ವಾಮಿಗಳ ನಿಲುವನ್ನು ಈರ್ಷ್ಯೆಯ ಒಲವೆಂದು ಸಾಬೀತು ಮಾಡಿದ್ದಾರೆ. ಶ್ರೀ ಎಂ. ಶಿವಕುಮಾರ ಸ್ವಾಮಿಗಳ ರೀತಿಯಲ್ಲಿಯೇ ಹಿಪ್ಪರಗಿ ಹಿರೇಮಠ ಹಾಗೂ ಎಡೂರು ಕಾಡಸಿದ್ದೇಶ್ವರ ಮಠದ ಪಟ್ಟಾಧ್ಯಕ್ಷರಾದ ಶ್ರೀ ಷ.ಬ್ರ. ಡಾ. ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು, 'ಸಿದ್ಧಾಂತ ಶಿಖಾಮಣಿ ಹಾಗೂ ಶ್ರೀಕರ ಭಾಷ್ಯ: ನಿಜದ ನಿಲುವು ಗ್ರಂಥದ ತಪ್ಪು ಹೆಜ್ಜೆಗಳು' ಎಂಬ ವಿದ್ವತ್‌ಪೂರ್ಣ ಲೇಖನದಲ್ಲಿ ಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳು ನಿಜದ ನಿಲುವು ಬರೆಯುವಾಗ ಎಷ್ಟು ಕಡೆ ತಪ್ಪು ಹೆಜ್ಜೆಗಳನ್ನು ಇಟ್ಟಿದ್ದಾರೆಂಬುದನ್ನು ಪಟ್ಟಿ ಮಾಡಿದ್ದಾರೆ. ಒಟ್ಟಾರೆ, ಪಂಚಪೀಠಾಧೀಶರ ಅರ್ಧ ಅಡಿ ಎತ್ತರದ ಪೀಠವು ಕೆಲವು ಕಮ್ಯುನಿಸ್ಟ್ ಪ್ರೇರಿತ ಸಮಾಸನಪ್ರೀತ ವಿರಕ್ತರಲ್ಲಿ ಪರಿತ್ಯಕ್ತ ಚುರುಕರಿವಿನ ಮುಜುಗರ ಸಂಕೀರ್ಣತೆಯನ್ನು ಹುಟ್ಟುಹಾಕಿ ಬೆಳೆಸಲಾರಂಭಿಸಿತು.

(ಲೇಖಕರು ಶಿಕಾಗೊ ನಿವಾಸಿ ಮತ್ತು ಸಾಹಿತಿ)

Founded ಮತ್ತು Found dead

ನೆಟ್‌ಪಿಕ್ಸ್

ತುಂಟರಗಾಳಿ
ಹರಿ ಪರಾಕ್
vveditoped@gmail.com

ಖೇಮು ತನ್ನ ಮನೆಗೆ ಗಿಳಿಗಳನ್ನು ತರಬೇಕು ಅಂತ ಹೊರಟ. ಸರಿ, ಮಾರ್ಕೆಟ್‌ಗೆ ಹೋಗಿ ಎರಡು ಒಳ್ಳೆ ಹೆಣ್ಣು ಗಿಳಿಗಳನ್ನು ಆರಿಸಿ ತಗೊಂಡ್ ಬಂದ. ಖೇಮುಶ್ರೀ, ಮರಿಖೇಮು ಗಿಳಿಗಳನ್ನು ನೋಡಿ ಖುಷಿಪಟ್ಟರು. ಮರಿಖೇಮು "ಈ ಗಿಳಿಗಳು ಮಾತಾಡ್ತಾವಾ ಅಪ್ಪ ?" ಅಂತ ಕೇಳಿದ. ಅದಕ್ಕೆ ಖೇಮು, "ಗೊತ್ತಿಲ್ಲ, ಮಾತಾಡಿಸಿ ನೋಡು" ಅಂದ. ಮರಿಖೇಮು "ಹಾಯ್, ಹೇಗಿದೀರ? ಹ್ಯಾವಿಂಗ್ ಫನ್?" ಅಂತ ಗಿಳಿಗಳನ್ನ ಕೇಳಿದ. ಅದಕ್ಕೆ ಅವೆರಡೂ ಹೆಣ್ಣು ಗಿಳಿಗಳು ಹೇಳಿದವು, "ನಿನ್ನಜ್ಜಿ, ಇಲ್ಲಿ ಬಾಯ್ ಫ್ರೆಂಡ್ ಇಲ್ದೆ ಬರಗೆಟ್ಟಿದೀವಿ ನಾವು. ಹ್ಯಾವಿಂಗ್ ಫನ್ ಅಂತೆ! ನಿನ್ ಮುಖಾ ಮುಚ್ಕಾ" ಅಂದವು. ಎಲ್ಲರಿಗೂ ಗಾಬರಿ ಆಯ್ತು. ಏನಪ್ಪಾ ಇದು ಈ ಗಿಳಿಗಳು ಹಿಂಗೆ ಮಾತಾಡ್ತಾವೆ ಅಂತ ಯೋಚನೆ ಮಾಡತೊಡಗಿದರು. ಒಂದೆರಡು ದಿನ ಹೀಗೇ ಆಯ್ತು. ಮನೆಗೆ ಯಾರೇ ಬಂದ್ರೂ, ಯಾರೇ ಮಾತಾಡಿಸಿದ್ರೂ ಗಿಳಿಗಳು ಬಾಯ್ ಫ್ರೆಂಡ್ ಇಲ್ಲ ಅನ್ನೋ ಸಿಟ್ಟಲ್ಲಿ ಕೆಟ್ಟ ಕೆಟ್ಟ ಮಾತಾಡ್ತಾ ಇದ್ದು. ಇದಕ್ಕೇನಾದರೂ ಉಪಾಯ ಮಾಡಬೇಕು ಅಂತ ಖೇಮು ಒಬ್ಬ ಸ್ವಾಮೀಜಿಗಳ ಬಳಿ ಹೋದ. ಅವರು ಖೇಮು ಹೇಳಿದ್ದನ್ನೆಲ್ಲಾ ಕೇಳಿಸಿಕೊಂಡು ಹೇಳಿದರು, "ಇಲ್ಲಾ ಮಗು, ಅದು ಸಹವಾಸ ದೋಷ. ಅದೇ ನಮ್ಮ ಆಶ್ರಮದ ಪಂಜರದಲ್ಲಿರೋ ಎರಡು ಗಂಡು ಗಿಳಿಗಳನ್ನು ನೋಡು; ಅವುಗಳಿಗೆ ಇಂಥದ್ದೇನೂ ಗೊತ್ತಿಲ್ಲ, 24 ಗಂಟೆ ಜಪಮಾಲೆ ಹಿಡ್ಕೊಂಡು ದೇವರ ಧ್ಯಾನ ಮಾಡ್ತಿರ್ತಾವೆ" ಅಂತ ಹೇಳಿ ಕರ್ಕೊಂಡು ಹೋಗಿ ತೋರಿಸಿದರು. ಎರಡೂ ಗಿಳಿಗಳ ಕೈಯಲ್ಲಿ ರುದ್ರಾಕ್ಷಿ ಮಾಲೆ ಇತ್ತು. ಎರಡೂ ಧ್ಯಾನದಲ್ಲಿ ಮಗ್ನವಾಗಿದ್ದವು. ಅದನ್ನು ತೋರಿಸಿ ಸ್ವಾಮೀಜಿ, "ಒಂದು ಕೆಲಸ ಮಾಡು. ನಿನ್ನ ಗಿಳಿಗಳನ್ನ ಕರೆದುಕೊಂಡು ಬಂದು ಈ ಗಿಳಿಗಳ ಜತೆ ಒಂದೆರಡು ದಿನ ಬಿಡು. ಅವು ತಾವಾಗೇ ಸರಿ ಹೋಗ್ತವೆ" ಅಂದ್ರು. ಸರಿ ಅಂತ ಖೇಮು ಮರುದಿನ ತನ್ನ ಎರಡೂ ಗಿಳಿಗಳನ್ನು ತಂದು ಆಶ್ರಮದ ಗಿಳಿಗಳ ಪಂಜರದೊಳಕ್ಕೆ ಬಿಟ್ಟ. ಈ ಎರಡೂ ಹೆಣ್ಣು ಗಿಳಿಗಳು ಒಳಕ್ಕೆ ಹೋದೊಡನೆ "ನಮಗಿಲ್ಲಿ ಬಾಯ್ ಫ್ರೆಂಡ್ ಇಲ್ಲಾ ಅಂತ ಸಾಯ್ತಾ ಇದ್ರೆ, ಈ ನನ್ ಮಕ್ಕು ಜಪ ಮಾಡ್ತಾ ಕುಂತವ್ರೆ" ಅಂತ ತಮ್ಮ ಎಂದಿನ ಶೈಲಿಯಲ್ಲಿ ಮಾತನಾಡಿದವು. ಅದನ್ನು ಕೇಳಿದ ಆಶ್ರಮದ ಆ ಎರಡು ಗಂಡು ಗಿಳಿಗಳಲ್ಲಿ ಒಂದು, ತನ್ನ ಕೈಯಲ್ಲಿದ್ದ ಜಪಮಾಲೆಯನ್ನು ಪಕ್ಕಕ್ಕಿಡುತ್ತಾ ಇನ್ನೊಂದು ಗಿಳಿಗೆ ಹೇಳಿತು "ಬ್ರದರ್, ಕೊನೆಗೂ ಆ ದೇವರು ನಮ್ಮ ಪ್ರಾರ್ಥನೆಗೆ ಪ್ರತಿಫಲ ಕೊಟ್ಟ".

ಲೂಸ್ ಟಾಕ್ ▸▸ ರಾಹುಲ್ ಗಾಂಧಿ

- **ಏನ್ ಸರ್, ಬಿಹಾರದ ಜನ ಕಾಂಗ್ರೆಸ್‌ಗೆ ಗುಟ್ಕಾ ಹಾಕ್ಕೊಂಡು ಉಗಿದು ಹಾಕಿಬಿಟ್ರಲ್ಲ?**

– ಬರೀ ಉಗಿದು ಹಾಕಿಲ್ಲ, ಕಾಂಗ್ರೆಸ್‌ನ ಅಗಿದು ಹುಗಿದು ಹಾಕಿಬಿಟ್ರು, ಮಣ್ಣಲ್ಲಿ ಹುದುಗಿರೋ ನಮ್ಮ ಪಕ್ಷನಾ ಈಗ ನಾವೇ ಹುಡುಕಬೇಕಿದೆ.

- **ಮತ್ತೆ, ಈಗ ಅದೇ ಹಳೇ ಡೈಲಾಗಾ- 'ಮತದಾರನ ಆಯ್ಕೆಯನ್ನ ಗೌರವಿಸ್ತೀವಿ, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚು ಸ್ಟ್ರಾಂಗ್ ಆಗಿ ವಾಪಸ್ ಬರ್ತೀವಿ...'**

– ಅರೇ, ನಿಮಗೆ ಹೇಗೆ ಗೊತ್ತು?

- **ಅಯ್ಯೋ, ನಂಗೇನು ನಿಮ್ ಬಗ್ಗೆ ಎಲ್ಲರಿಗೂ ಗೊತ್ತು. ಹೋಗ್ಲಿ ಬಿಹಾರದ ಜನರ ಬಗ್ಗೆ ಏನ್ ಹೇಳ್ತೀರಿ?**

– ಅಯ್ಯೋ, ಅವ್ರ ಬಿಡಿ; ಅಲ್ಲಿರೋರ ಜೀವನ ಹಾಳಾಗ್ ಹೋಗ್ಲಿ ಅಂತ ಅವ್ರ ಊರಲ್ಲಿ ಬಿಜೆಪಿನ ಗೆಲ್ಲಿಸಿ, ಅವ್ರ ಮಾತ್ರ ಬೆಂಗಳೂರಿಗೆ ಹೋಗಿ ಆರಾಮಾಗಿ ಜೀವನ ಮಾಡ್ತಾರೆ.

- **ಅದೂ ಸರೀನೇ. ಆದ್ರೆ, ನೀವು ಬಿಜೆಪಿ ಮೇಲೆ ಮಾಡಿದ ಮತಗಳ್ಳತನದ ಆರೋಪ ಅವರ ಮೇಲೆ ಯಾವುದೇ ಪರಿಣಾಮ ಬೀರಲಿಲ್ಲವಲ್ಲ?**

– ಅಯ್ಯೋ, ಬಿಹಾರದ ಜನ ಅವ್ರು. ಹೆಂಗಸರು, ಮಕ್ಕಳನ್ನ ಕದ್ಕೊಂಡು ಹೋದಾಗ್ಲೇ ಕೇರ್ ಮಾಡಲ್ಲ, ಇನ್ನು ಮತ ಕದೀತಾರೆ ಅಂದಕೂಡ್ಲೇ ಬಿಜೆಪಿನ ಸೋಲಿಸಿಬಿಡ್ತಾರಾ?

- **ಸರಿ ಬಿಡಿ, ನಿಮ್ಮ ಮುಂದಿನ ಪ್ಲ್ಯಾನ್ ಏನು ?**

– ಏನಿಲ್ಲ, ಎಲ್ಲೆಲ್ಲಿ ಎಲೆಕ್ಷನ್ ಇರುತ್ತೋ ಅಲ್ಲೆಲ್ಲಾ ಹೋಗಿ ಯಾತ್ರೆ ಮಾಡ್ಕೊಂಡು ಬರೋದು; ಹೆಂಗಿದ್ರೂ ಜನ ವೋಟ್ ಹಾಕಲ್ಲ ಅಂತ ಗೊತ್ತು, ಟೈಮ್ ಪಾಸ್‌ಗೆ ಟೂರ್ ಮಾಡಿದ ಹಾಗಾದ್ರೂ ಆಗುತ್ತೆ.

(ಕಾಲ್ಪನಿಕ ಸಂದರ್ಶನ)

ಲೈನ್‌ಮ್ಯಾನ್

- **ಖೇಮು: ಗುರೂ, ಇವತ್ತು ಟಿವಿ ನ್ಯೂಸ್‌ನಲ್ಲಿ 'ಎ ಗ್ರೂಪ್ ಆಫ್ ಟೆರರಿಸ್ಟ್ ವಾಸ್** Founded by Indian police' **ಅಂತ ಹೇಳಿದ್ರು. ನಮ್ಮ ಇಂಡಿಯಾದ ಪೊಲೀಸ್‌ನವರೂ ಟೆರರಿಸ್ಟ್ ಆಗ್ತಿದಾರಾ?**
– ಸೋಮು: ಲೋ ಖೇಮು, ಅದು Founded ಅಲ್ಲ ಕಣೋ, Found dead
- **ಇಂಗ್ಲಿಷ್‌ನಲ್ಲಿ ರೋಡ್ ಮೂವೀಸ್ ಅಂತಲೇ ಫೇಮಸ್ ಆಗಿರೋ, ರೋಡ್‌ನಲ್ಲಿ ನಡೆಯುವ ಕಥೆ ಇರೋ ಚಿತ್ರಗಳಿಗೆ ಕನ್ನಡ ಚಿತ್ರರಂಗ ಕೊಟ್ಟ ಹೊಸ ಹೆಸರು**
– 'ರೋಡಿಸಂ' ಚಿತ್ರಗಳು
- **ಲೈಫಲ್ಲಿ ಜಾಸ್ತಿ ಜನ ಹುಡುಗೀರನ್ನ ಲವ್ ಮಾಡೋದರ ಅಪಾಯ**
– ಮುಂದೆ ಮದುವೆ ಆದಮೇಲೆ ಸ್ಯಾಡ್ ಸಾಂಗ್ ಕೇಳುವಾಗ ಯಾವ ಗರ್ಲ್‌ಫ್ರೆಂಡ್‌ನ ನೆನಪಿಸ್ಕೊಬೇಕು ಅಂತ ಕನ್‌ಫ್ಯೂಸ್ ಆಗುತ್ತೆ.
- **ಎಲ್ಲರೂ ಆಗಾಗ ಇವತ್ತಿಂದ ಬಿಡ್ತೀನಿ, ಬಿಟ್ಟೇ ಬಿಡ್ತೀನಿ ಅನ್ನೋದು, ಆದ್ರೆ ಬಿಡದೇ ಇರೋದು**
– ಸಿಗರೇಟು, ಗುಂಡು ಮತ್ತು ಫೇಸ್‌ಬುಕ್
- **ಇವತ್ತಿಂದ ಶುರು ಮಾಡ್ತೀನಿ, ಮಾಡೇ ಮಾಡ್ತೀನಿ ಅನ್ನೋದು, ಆದ್ರೆ ಮಾಡದೇ ಇರೋದು**
– ಬೆಳಗ್ಗೆ ಮುಂಚೆ ಎದ್ದು ಜಿಮ್‌ಗೆ, ಜಾಗಿಂಗ್‌ಗೆ ಹೋಗೋದು
- **ಬಿಡ್ಬೇಕು ಅಂತ ಆಸೆ ಇದ್ರೂ ಎಲ್ಲೂ ಹೇಳಿಕೊಳ್ಳೋಕೆ ಆಗದೇ ಇರೋದು**
– ಹೆಂಡತಿ
- **ನೆಚ್ಚಿನ ನಾಯಕ ಅನಾರೋಗ್ಯದಿಂದ ಆಸ್ಪತ್ರೆ ಸೇರಿದಾಗ ಅಭಿಮಾನಿಗಳಿಗೆ ಆಗುವ ಭಯ**
– ಫ್ಯಾನಿಕ್
- **ಕಾಬೂಲ್‌ನಿಂದ ಯಾರಾದ್ರೂ ಖರ್ಜೂರ ತಂದುಕೊಟ್ರೆ ಏನು ಹೇಳಬೇಕು?**
– ಕಬೂಲ್ ಹೈ
- **ಕಾಫಿ ಕುಡಿಯೋನು ಪರೀಕ್ಷೆಯಲ್ಲಿ ಕಾಪಿ ಹೊಡೀತಾನೆ ಅಂತಾದ್ರೆ, ಟೀ ಕುಡಿಯೋನು?**
– ಅವನೂ ಕಾಪಿ ಹೊಡೀತಾನೆ. ಟೀ ಕುಡಿಯೋರು ಕಾಪಿ ಹೊಡೆಯಲ್ಲ ಅಂತ ಯಾರ್ ಹೇಳಿದ್ರು?
- **ಅಶ್ಲೀಲ ವಿಷಯಗಳಿರೋ, ಹಿಂದಿ ಭಾಷೆಯಲ್ಲಿರೋ ಒಂದು ಇ-ಮೇಲ್ ಬಂದ್ರೆ, ಅದನ್ನು ಏನಂತಾರೆ?**
– ಮೈಲೀ
- **ಪುಟಗಟ್ಟಲೇ ಉದ್ದ ಇರುವ ಮೇಲ್ ಅನ್ನು ಏನಂತಾರೆ?**
– ಮೈಲು
- **ಮುಖದಲ್ಲಿ ಎದು ಕಾಣುವಂಥ ಮೂಗು ಇರುವ ಹುಡುಗಿಯನ್ನು ಏನಂತಾರೆ?**
– ಮೂಗಿ
- **ಕ್ರಿಕೆಟ್ ಕಾಮೆಂಟರಿ:** Bowlers are not giving room.
– ಖೇಮು: ಅವ್ರೇನ್ ಓಯೋ ಓನರ್ರಾ?
- **ಕಪ್ಪು ಹಣ ಕೂಡಿಟ್ಟವನು ಸತ್ತರೆ**
– ಅದು ಬ್ಲ್ಯಾಕ್ 'ಟಿಕೆಟ್'

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:305

ಸಮಾಚಾರ ಸಣ್ಣದಲ್ಲ

ಮಾಜಿ ಸಚಿವ ಸಿಂಗ್ ಅಮಾನತು: ಬಿಜೆಪಿ

ಪಟನಾ: ಬಿಹಾರದಲ್ಲಿ ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟ ಸರಕಾರದ ವಿರುದ್ಧವೇ ವಾಗ್ದಾಳಿ ನಡೆಸಿದ್ದ ಕೇಂದ್ರದ ಮಾಜಿ ಸಚಿವ ರಾಜ ಕುಮಾರ್ ಸಿಂಗ್ ಅವರನ್ನು ಪಕ್ಷ ವಿರೋಧಿ ಚಟುವಟಿಕೆ ಆರೋಪದಡಿ ಬಿಜೆಪಿ ಶನಿವಾರ ಅಮಾನತುಗೊಳಿಸಿದೆ. ಕೇಂದ್ರ ಗೃಹ ಕಾರ್ಯದರ್ಶಿ ಹುದ್ದೆಯಿಂದ ನಿವೃತ್ತರಾದ ಆರ್.ಕೆ.ಸಿಂಗ್ ಕೆಲ ತಿಂಗಳ ನಂತರ 2014ರಲ್ಲಿ ಬಿಜೆಪಿ ಸೇರಿದ್ದರು. ಬಿಹಾರ ಉಪ ಮುಖ್ಯಮಂತ್ರಿ, ಬಿಜೆಪಿ ಮಾಜಿ ರಾಜ್ಯಾಧ್ಯಕ್ಷ ಸಾಮ್ರಾಟ್ ಚೌಧರಿ ಅವರಂತಹ ನಾಯಕರು ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗಿದ್ದಾರೆ ಎಂದು ಟೀಕಿಸಿದ್ದರು. ಎಂಎಲ್‌ಸಿ ಅಶೋಕ್ ಕುಮಾರ್ ಅಗರ್ವಾಲ್ ಮತ್ತು ಅವರ ಪತ್ನಿ, ಕತಿಹಾರ್ ಮೇಯರ್ ಉಷಾ ಅಗರ್ವಾಲ್‌ರನ್ನೂ ಅಮಾನತುಗೊಳಿಸಲಾಗಿದೆ. ಅಗರ್ವಾಲ್ ದಂಪತಿ ತಮ್ಮ ಮಗ ಸೌರಭ್‌ನನ್ನು ಬಿಜೆಪಿ ಅಭ್ಯರ್ಥಿ ವಿರುದ್ಧವೇ ಕತಿಹಾರ್ ವಿಧಾನಸಭಾ ಕ್ಷೇತ್ರದಿಂದ ವಿಕಾಸಶೀಲ ಇನ್ಸಾನ್ ಪಕ್ಷದಿಂದ ಕಣಕ್ಕಿಳಿಸಿದ್ದರು. ಬಿಜೆಪಿ ಮಾಜಿ ಉಪ ಮುಖ್ಯಮಂತ್ರಿ ತರಕಿಶೋರ್ ಪ್ರಸಾದ್ ವಿರುದ್ಧವೇ ಪ್ರಚಾರ ಮಾಡಿದ್ದರು ಎಂದು ಬಿಜೆಪಿಯ ರಾಜ್ಯ ನಾಯಕರು ಸುದ್ದಿಸಂಸ್ಥೆಗೆ ಶನಿವಾರ ತಿಳಿಸಿದ್ದಾರೆ. ಅದರ ಬೆನ್ನಲ್ಲೇ ಆರ್.ಕೆ.ಸಿಂಗ್, ಬಿಜೆಪಿ ಪ್ರಾಥಮಿಕ ಸದಸ್ಯತ್ವಕ್ಕೆ ಶನಿವಾರ ಸಂಜೆ ರಾಜೀನಾಮೆ ಸಲ್ಲಿಸಿದ್ದಾರೆ ಎಂದು ವರದಿಯಾಗಿದೆ.

ಎನ್‌ಡಿಎ ಗೆಲುವು ಇಸಿಐ ಪ್ರಾಯೋಜಿತ

ಮುಂಬೈ: ಬಿಹಾರ ಚುನಾವಣೆಯ ಫಲಿತಾಂಶವು ಆಶ್ಚರ್ಯಕರವಲ್ಲ, ಚುನಾವಣಾ ಆಯೋಗ ಮತ್ತು ಬಿಜೆಪಿ ತಾವು ಬಯಸಿದ ಫಲಿತಾಂಶ ಪಡೆಯಲು ಒಟ್ಟಾಗಿ ಕೆಲಸ ಮಾಡುತ್ತಿವೆ. ಈ ಫಲಿತಾಂಶವು ಚುನಾವಣಾ ಆಯೋಗ ಮಾಡಿದ ಮಹಾ ವಂಚನೆ. ಎನ್‌ಡಿಎ ಮತ ಕಳವು ಮೂಲಕ ಗೆಲುವು ಸಾಧಿಸಿದೆ ಎಂದು ಶಿವಸೇನೆ(ಯುಬಿಟಿ) ಶನಿವಾರ ಟೀಕಿಸಿದೆ. ಮುಖ್ಯಮಂತ್ರಿ ನಿತೀಶ್ ಕುಮಾರ್ ಸ್ಮರಣಶಕ್ತಿ ಕಳೆದುಕೊಳ್ಳುತ್ತಿದ್ದಾರೆ. ಆರೋಗ್ಯ ಸಮಸ್ಯೆ ಇರುವ ನಾಯಕ ಬಿಹಾರವನ್ನು ಹೇಗೆ ಮುನ್ನಡೆಸಬಲ್ಲರು? ಎಂದು ಶಿವಸೇನೆ(ಯುಬಿಟಿ ಪಕ್ಷದ ಮುಖವಾಣಿ 'ಸಾಮ್ನಾ' ಪತ್ರಿಕೆಯ ಸಂಪಾದಕೀಯದಲ್ಲಿ ಟೀಕಿಸಲಾಗಿದೆ. ಚುನಾವಣಾ ಪ್ರಕ್ರಿಯೆ ಕಾವಲುಗಾರನಾಗಿ ಇರಬೇಕಾದ ಚುನಾವಣಾ ಆಯೋಗವೇ ಮತ ಕಳ್ಳರಿಗೆ ಸಹಾಯ ಮಾಡಿದೆ. ಬಿಹಾರ ಚುನಾವಣೆ ಭಾರತೀಯ ಪ್ರಜಾಪ್ರಭುತ್ವದಲ್ಲಿ ನಡೆದ ಒಂದು ದೊಡ್ಡ ಹಗರಣ. ಇದಕ್ಕೆ ಚುನಾವಣಾ ಆಯೋಗ ಸಹಕಾರ ನೀಡಿದೆ ಎಂದು ಟೀಕಿಸಲಾಗಿದೆ.

ಲಂಚ ನೀಡಿ ಮತ ಖರೀದಿ: ಜೆಎಸ್‌ಪಿ

ಪಟನಾ: ಬಿಹಾರ ವಿಧಾನಸಭೆ ಚುನಾವಣೆಯಲ್ಲಿ ಖಾತೆ ತೆರೆಯುವಲ್ಲಿ ವಿಫಲವಾಗಿದ್ದರಿಂದ 'ಜನ ಸುರಾಜ್ ಪಕ್ಷ'(ಜೆಎಸ್‌ಪಿ) ಸಂಸ್ಥಾಪಕ, ಚುನಾವಣಾ ತಂತ್ರಜ್ಞ ಪ್ರಶಾಂತ್ ಕಿಶೋರ್ ತೀವ್ರ ಮುಖಭಂಗ ಅನುಭವಿಸಿದ್ದಾರೆ. ಶನಿವಾರ ಮೊದಲ ಬಾರಿಗೆ ಪ್ರತಿಕ್ರಿಯೆ ನೀಡಿದ ಅವರು, ಸೋಲಿನ ಬಗ್ಗೆ ನಿರಾಶೆ ವ್ಯಕ್ತಪಡಿಸಿದರು. ಭರ್ಜರಿ ಪ್ರಚಾರ ಹಾಗೂ ರಾಜ್ಯದಲ್ಲಿನ ನಿರುದ್ಯೋಗ, ವಲಸೆ ಮತ್ತು ಕೈಗಾರಿಕೆಗಳ ಕೊರತೆ ಮೊದಲಾದ ಸಮಸ್ಯೆಗಳನ್ನು ಎತ್ತಿ ತೋರಿಸಿದರೂ ಮತದಾರರ ಮನಸ್ಸು ಗೆಲ್ಲಲಾಗಲಿಲ್ಲ ಎಂದರು. ಮಹಿಳಾ ರೋಜ್ಗಾರ್ ಯೋಜನೆಯಡಿ ತಲಾ 10 ಸಾವಿರ ರು.ನಂತೆ ಲಕ್ಷಾಂತರ ಮಹಿಳೆಯರ ಖಾತೆಗಳಿಗೆ ಒಟ್ಟು 40,000 ಕೋಟಿ ರು.ಗಳನ್ನು ವರ್ಗಾವಣೆ ಮಾಡಿರುವುದು ಎನ್‌ಡಿಎ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದೆ. ಚುನಾವಣೆಗೆ ಮುಂಚಿತವಾಗಿ ಮಹಿಳಾ ಮತದಾರರಿಗೆ ಲಂಚ ನೀಡಿ ಮತಗಳ ಖರೀದಿಸಲಾಗಿದೆ ಎಂದರು.

ಅತ್ಯಾಚಾರ: ಮೌಲ್ವಿ ಗುಜರಾತ್‌ನಲ್ಲಿ ಸೆರೆ

ಅಹಮದಾಬಾದ್: ಮಾದಕ ದ್ರವ್ಯ ನೀಡಿ ಮಹಿಳೆಯೊಬ್ಬರನ್ನು ಅತ್ಯಾಚಾರ ಮಾಡಿ ನಂತರ ಬಲವಂತದ ಮತಾಂತರಕ್ಕಾಗಿ ಒತ್ತಾಯಿಸಿದ್ದ ಗುಜರಾತ್ ರಾಜ್ಯದ ಅಂಕಲೇಶ್ವರದ ಕೆನಡಾ ಮೂಲದ ಮದರಸಾ ಮೌಲ್ವಿ(52)ಯನ್ನು ಸಂತ್ರಸ್ತೆಯ ದೂರಿನ ಮೇರೆಗೆ ಶನಿವಾರ ಬಂಧಿಸಲಾಗಿದೆ. ಅಂಕಲೇಶ್ವರ-ಸೂರತ್ ಗಡಿಯಲ್ಲಿ ಅಪರಾಧ ಕೃತ್ಯ ನಡೆದಿದೆ. ಮೌಲ್ವಿ ಅಜ್ವಾದ್ ಮಹಿಳೆಗೆ ಆಗಾಗ್ಗೆ ಕರೆ, ಮೆಸೇಜ್ ಮಾಡುತ್ತಿದ್ದ. ನ.9ರಂದು ಮದರಸಾಗೆ ಕರೆಸಿಕೊಂಡು ಮಾದಕದ್ರವ್ಯ ಬೆರೆಸಿದ ಪರಿಮಳಯುಕ್ತ ನೀರು ನೀಡಿ ಪ್ರಜ್ಞೆ ತಪ್ಪುವಂತೆ ಮಾಡಿ ಅತ್ಯಾಚಾರ ನಡೆಸಿದ. ಪ್ರಜ್ಞೆ ನಂತರ ಪ್ರತಿಭಟಿಸಿದ್ದಕ್ಕೆ ಮತಾಂತರಕ್ಕೆ ಮೌಲ್ವಿ ಒತ್ತಾಯಿಸಿದ. ಒಪ್ಪದೇ ಇದ್ದುದಕ್ಕೆ ನನ್ನ ಮಕ್ಕಳನ್ನು ಕೊಲ್ಲುತ್ತೇನೆ ಎಂದು ಬೆದರಿಕೆ ಹಾಕಿದ ಎಂದು ಮಹಿಳೆ ದೂರಿದ್ದಾರೆ.

{ ಎಂ.ಕೆ.ಸ್ಟಾಲಿನ್ } ತ.ನಾಡು ಸಿಎಂ

ಬಿಹಾರ ಚುನಾವಣೆ ಫಲಿತಾಂಶ ಸಮಾಜ ಕಲ್ಯಾಣ, ಸಾಮಾಜಿಕ-ಸೈದ್ಧಾಂತಿಕ ಒಕ್ಕೂಟ, ರಾಜಕೀಯ ಸಂದೇಶ, ಮತದಾರರ ನಿರ್ಧಾರ ಎಲ್ಲವನ್ನೂ ಪ್ರತಿಬಿಂಬಿಸುತ್ತದೆ. ಇದು ಎಲ್ಲರಿಗೂ ಪಾಠವಾಗಲಿದೆ. ಈ ಬಾರಿಯ ನಿರ್ಣಾಯಕ ಗೆಲುವಿಗಾಗಿ ಜೆಡಿಯು ವರಿಷ್ಠ ನಿತೀಶ್ ಕುಮಾರ್‌ರನ್ನು ಅಭಿನಂದಿಸುವೆ. ಬಿಹಾರದ ಜನರ ನಿರೀಕ್ಷೆಗಳನ್ನು ಪೂರ್ಣಗೊಳಿಸಿ ಎಂದು ಕೋರುವೆ.

ಹರಿಯಾಣದ ಫರೀದಾಬಾದ್‌ನಲ್ಲಿ ಅ.30ರಂದು ಮೊಬೈಲ್ ಫೋನ್ ದುರಸ್ತಿಗೆಂದು ತೆರಳಿದ್ದ 'ಕಾರ್ ಬಾಂಬರ್' ಡಾ.ಉಮರ್, ಮಳಿಗೆಯಲ್ಲಿ ಮೊದಲಿಗೆ ಕಾಲುಮೇಲೆ ಕಾಲು ಹಾಕಿ ಆರಾಮವಾಗಿ ಕುಳಿತಿದ್ದ. ದುರಸ್ತಿಗಾಗಿ ಮೊಬೈಲ್ ಫೋನನ್ನು ಮಳಿಗೆಯವರಿಗೆ ನೀಡಿದ ಬಳಿಕ ಆತಂಕಕ್ಕೀಡಾಗಿ ತಲೆ ಮೇಲೆ ಕೈಹೊತ್ತು ಕುಳಿತಿದ್ದ ಸಂದರ್ಭದ ಫೋಟೊಗಳ ಸರಣಿ.

ಫರೀದಾಬಾದ್ ಮಳಿಗೆಯಲ್ಲಿ ಅ.30ರಂದು ಮೊಬೈಲ್ ದುರಸ್ತಿ ಬಾಂಬರ್ ಬಳಿ ಇದ್ದ 2 ಮೊಬೈಲ್ ಫೋನ್‌ಗಳ ಪತ್ತೆಗೆ ಶೋಧ

ಕಾರು ಬಾಂಬರ್ ಡಾ.ಉಮರ್ ಹೊಸ ವಿಡಿಯೊ, ಫೋಟೊ ಪತ್ತೆ

ಫರೀದಾಬಾದ್: ದೆಹಲಿಯ ಕೆಂಪು ಕೋಟೆ ಸಮೀಪದ 'ಲಾಲ್ ಖಿಲಾ ಮೆಟ್ರೊ ನಿಲ್ದಾಣ'ದ ಗೇಟ್ ನಂ.1ರ ಬಳಿಯ ಟ್ರಾಫಿಕ್ ಸಿಗ್ನಲ್‌ನಲ್ಲಿ ಕೆಂಪು ದೀಪ ಬೆಳಗಿದಾಗ ತನ್ನ ಹುಂಡೈ ಐ 20 ಕಾರನ್ನು ಅಮೋನಿಯಂ ನೈಟ್ರೇಟ್ ಮತ್ತಿತರ ಸ್ಫೋಟಕಗಳನ್ನು ಬಳಸಿ ಸ್ಫೋಟಿಸಿ ಆತ್ಮಾಹುತಿ ದಾಳಿ ನಡೆಸಿದ ಜೈಶ್ ಎ ಮೊಹಮ್ಮದ್ ಉಗ್ರ ಸಂಘಟನೆಯ ನಂಟು ಹೊಂದಿದ್ದ, ಕಾಶ್ಮೀರದ ಪುಲ್ವಾಮಾ ಮೂಲದ 'ಭಯೋತ್ಪಾದಕ ವೈದ್ಯ' ಡಾ. ಉಮರ್ ಉನ್ ನಬಿಯ ಸ್ಪಷ್ಟವಾದ ಚಿತ್ರಗಳು, ಆತನ ಚಟುವಟಿಕೆಗಳ ದೃಶ್ಯಗಳ ವಿಡಿಯೊಗಳು ಈಗ ಒಂದೊಂದಾಗಿ ಹೊರಬೀಳುತ್ತಿವೆ.

ಹರಿಯಾಣದ ಧವೂಜ್ ಗ್ರಾಮದಲ್ಲಿನ ಅಲ್ ಫಲಾಹ್ ವಿಶ್ವವಿದ್ಯಾಲಯದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಸಹಾಯಕ ಪ್ರೊಫೆಸರ್ ಆಗಿದ್ದ ಡಾ. ಉಮರ್, ಅಕ್ಟೋಬರ್ 30ರಂದು ಫರೀದಾಬಾದ್‌ನ ಒಂದು ವ್ಯಾಪಾರಿ ಮಳಿಗೆಗೆ ಭೇಟಿ ನೀಡಿದ ದೃಶ್ಯ ಮಳಿಗೆಯಲ್ಲಿದ್ದ ಸಿಸಿಟಿವಿಯನ್ನು ಸೆರೆಯಾಗಿದ್ದು, ಆ ವಿಡಿಯೊವನ್ನು ಕುಶಾಗ್ರ ಮಿಶ್ರಾ ಎಂಬವರು 'ಎಕ್ಸ್' ಖಾತೆಯಲ್ಲಿ ಶನಿವಾರ ಮಧ್ಯಾಹ್ನ 3.32ರಲ್ಲಿ ಹಂಚಿಕೊಂಡಿದ್ದಾರೆ.

ಅ.30ರಂದು ಡಾ.ಉಮರ್ ಫರೀದಾಬಾದ್‌ನಲ್ಲಿನ ಮೊಬೈಲ್ ಮಾರಾಟ ಮತ್ತು ದುರಸ್ತಿ ಮಳಿಗೆಗೆ ಭೇಟಿ ನೀಡಿದ್ದಾಗ ಆತನ ಬಳಿ ಎರಡು ಮೊಬೈಲ್ ಫೋನ್‌ಗಳಿದ್ದವು. ಭುಜದಲ್ಲಿ ನೇತುಹಾಕಿಕೊಳ್ಳುವ ಕಪ್ಪು ಲೆದರ್ ಬ್ಯಾಗ್ ಸಮೇತ ಮೊಬೈಲ್ ಮಳಿಗೆಗೆ ಬಂದಿದ್ದ ಡಾ.ಉಮರ್, ಮಳಿಗೆಯಲ್ಲಿನ ಸ್ಟೂಲ್ ಮೇಲೆ ಕಾಲು ಮೇಲೆ ಕಾಲು ಹಾಕಿ ಕುಳಿತು ಬ್ಯಾಗ್‌ನಿಂದ ಒಂದು ಮೊಬೈಲ್ ಫೋನನ್ನು ಹೊರತೆಗೆದು ದುರಸ್ತಿ ಪಡಿಸಿಕೊಡುವಂತೆ ಅಂಗಡಿ ಮಾಲೀಕರಿಗೆ ನೀಡಿದ. ಇನ್ನೊಂದು ಮೊಬೈಲನ್ನು ಕೈನಲ್ಲಿ ಹಿಡಿದುಕೊಂಡಿದ್ದ ಎಂಬುದು ವಿಡಿಯೊದಲ್ಲಿ ದಾಖಲಾಗಿದೆ. ಮೊಬೈಲ್ ದುರಸ್ತಿಗೆ ನೀಡಿದ ಬಳಿಕ ಡಾ.ಉಮರ್, ಬಹಳ ಆತಂಕದಲ್ಲಿದ್ದ. ಮೊಬೈಲ್‌ನಲ್ಲಿರುವ ರಹಸ್ಯ ಮಾಹಿತಿಯೇನಾದರೂ ಅಂಗಡಿಯವರಿಗೆ ತಿಳಿದುಬಿಡಬಹುದೆಂಬ ಆತಂಕವಿರಬಹುದು. ಆಗ ಕೆಲವು ನಿಮಿಷಗಳ ಕಾಲ ಡಾ.ಉಮರ್ ಬಹಳ ಒತ್ತಡಕ್ಕೆ ಒಳಗಾಗಿದ್ದ. ಆತ ಉದ್ವಿಗ್ನನಾಗಿದ್ದ, ಚಿಂತೆಗೀಡಾದಂತೆ ಕಂಡು ಬಂದಿದ್ದು ಸಿಸಿಟಿವಿಯಲ್ಲಿ ದಾಖಲಾಗಿದೆ.

ಡಾ.ಉಮರ್ 2 ಮೊಬೈಲ್ ಫೋನ್ ಎಲ್ಲಿ?: ಅ.30ರಂದು ಎರಡು ಮೊಬೈಲ್ ಫೋನ್‌ಗಳನ್ನು ಹೊಂದಿದ್ದ ಡಾ.ಉಮರ್, ನ.10ರ ಸೋಮವಾರ ಸಂಜೆ 6.58ರಲ್ಲಿ ದೆಹಲಿ ಕೆಂಪುಕೋಟೆ ಬಳಿ 'ಲಾಲ್ ಖಿಲಾ ಮೆಟ್ರೊ ಸ್ಟೇಷನ್' ಸಮೀಪದ ಟ್ರಾಫಿಕ್ ಸಿಗ್ನಲ್‌ನಲ್ಲಿ ಕಾರನ್ನು ಸ್ಫೋಟಿಸಿ ಆತ್ಮಾಹುತಿ ದಾಳಿ ನಡೆಸಿದ ಬಳಿಕ ಆತನ ಮೃತದೇಹದ ಛಿದ್ರ ಭಾಗಗಳು ಲಭ್ಯವಾದವು. ಆದರೆ ಸ್ಫೋಟದ ಸ್ಥಳದಲ್ಲಿ ಡಾ. ಉಮರ್‌ಗೆ ಸೇರಿದ ಯಾವುದೇ ಮೊಬೈಲ್ ಫೋನಾಗಲೀ, ಅದರ ತುಣುಕುಗಳಾಗಲೀ ಕಂಡು ಬಂದಿಲ್ಲ. ಆತನ ಮೊಬೈಲ್ ಎಲ್ಲಿರಬಹುದು ಎಂಬುದೇ ತನಿಖಾ ತಂಡಕ್ಕೂ ತಿಳಿಯದಾಗಿದೆ.

ಡಾ.ಉಮರ್‌ನ ಸ್ಪಷ್ಟ ಭಾವಚಿತ್ರ

ಡಾ. ಉಮರ್ ಮೊಹಮ್ಮದ್ ಉನ್‌ನಬಿಯ ಅಸ್ಪಷ್ಟ ಚಿತ್ರಗಳೇ ಈವರೆಗೆ ಮಾಧ್ಯಮಗಳಲ್ಲಿ ಪ್ರಕಟಗೊಂಡಿದ್ದವು. ಆದರೆ, ಶನಿವಾರ ಆತನ ಮುಖ ಸ್ಪಷ್ಟವಾಗಿ ತೋರಿಸುವ ಸಿಸಿಟಿವಿ ದೃಶ್ಯಾವಳಿ ಮತ್ತು ಹೆಗಲಲ್ಲಿ ಸ್ಟೆತಸ್ಕೋಪ್ ನೇತುಹಾಕಿಕೊಂಡು ಆಸ್ಪತ್ರೆಯಲ್ಲಿ ಟೇಬಲ್ ಹಿಂದೆ ಆರಾಮವಾಗಿ ಕುಳಿತಿರುವ ಸಂದರ್ಭದ ಸ್ಪಷ್ಟ ಫೋಟೊ ಕೂಡಾ ಲಭ್ಯವಾಗಿದೆ.

ಅಲ್ ಫಲಾಹ್ ವಿವಿ ವಿರುದ್ಧ ಎಫ್‌ಐಆರ್

ಫರೀದಾಬಾದ್: ಹರಿಯಾಣ ರಾಜ್ಯದ ಫರೀದಾಬಾದ್ ಜಿಲ್ಲೆಯ ಧವೂಜ್ ಗ್ರಾಮದ ಬಳಿ ಇರುವ ಅಲ್ ಫಲಾಹ್ ವಿಶ್ವವಿದ್ಯಾಲಯದ ಡಾ.ಮುಜಮ್ಮಿಲ್, ಡಾ.ಆದಿಲ್, ಡಾ.ಶಾಹೀನಾ ಸಯೀದ್ ಸೇರಿದಂತೆ ಹಲವು ವೈದ್ಯರುಗಳು, ವೈದ್ಯಕೀಯ ವಿದ್ಯಾರ್ಥಿಗಳು 'ದೆಹಲಿ ಕಾರು ಸ್ಫೋಟ' ಮತ್ತು ಧವೂಜ್‌ನ ಡಾ.ಮುಜಮ್ಮಿಲ್‌ನ ಬಾಡಿಗೆ ಮನೆಯಲ್ಲಿ 2900 ಕಿಲೋ ಸ್ಫೋಟಕ ಪತ್ತೆ ಪ್ರಕರಣದಲ್ಲಿ ಬಂಧನಕ್ಕೊಳಗಾದ ಬಳಿಕ 'ಅಲ್ ಫಲಾಹ್ ವಿಶ್ವ ವಿದ್ಯಾಲಯ'ದತ್ತ ನೋಟ ಹರಿಸಿದ ದೆಹಲಿ ಕ್ರೈಂ ಬ್ರಾಂಚ್ ಪೊಲೀಸರು ಕಡೆಗೂ ಶನಿವಾರ 2 ಎಫ್‌ಐಆರ್ ದಾಖಲಿಸಿದ್ದಾರೆ. ಯುನಿವರ್ಸಿಟಿ ಗ್ರಾಂಡ್ ಕಮಿಷನ್(ಯುಜಿಸಿ) ಮತ್ತು ಕಾಲೇಜು ಗುಣಮಟ್ಟ ಪ್ರಮಾಣೀಕರಿಸುವ 'ಎನ್‌ಎಎಸಿ'(ನ್ಯಾಕ್)ಗೆ ವಂಚನೆ, ಫೋರ್ಜರಿ, ಸುಳ್ಳು ಮಾಹಿತಿ ನೀಡಿದ ಆರೋಪದಡಿ ಎರಡು ಎಫ್‌ಐಆರ್‌ಗಳನ್ನು ಶನಿವಾರ ದಾಖಲಿಸಲಾಗಿದೆ. ದೆಹಲಿ ಕ್ರೈಂ ಬ್ರಾಂಚ್‌ನ ಹಿರಿಯ ಅಧಿಕಾರಿಗಳ ಒಂದು ತಂಡ ಶನಿವಾರ ಅಲ್ ಫಲಾಹ್ ವಿವಿಯ ಓಕ್ಲಾದಲ್ಲಿನ ಕಚೇರಿಗೆ ಭೇಟಿ ನೀಡಿತ್ತು. ವಿಶ್ವವಿದ್ಯಾಲಯ ವಿರುದ್ಧ ಕೇಳಿಬಂದಿರುವ ಹಲವು ಆರೋಪಗಳಿಗೆ ಸಂಬಂಧಿಸಿ ತನಿಖೆ ನಡೆಸಲಾಗುತ್ತಿದ್ದು, ಕೆಲವು ಮಹತ್ವದ ದಾಖಲೆ ಪತ್ರಗಳನ್ನು ಸಲ್ಲಿಸುವಂತೆ ಅಲ್ ಫಲಾಹ್ ವಿವಿಗೆ ದೆಹಲಿ ಕ್ರೈಂ ಬ್ರಾಂಚ್ ಪೊಲೀಸರು ಸೂಚನೆ ನೀಡಿದ್ದಾರೆ.

ಪಾಸ್‌ಪೋರ್ಟ್‌ಗೆ ಅರ್ಜಿ ಸಲ್ಲಿಸಿದ್ದ ಡಾ.ಶಾಹಿನಾ

ದೆಹಲಿ: ಹರಿಯಾಣದ ಅಲ್ ಫಲಾಹ್ ವಿಶ್ವವಿದ್ಯಾಲಯದಲ್ಲಿ ಡಾ. ಉಮರ್, ಡಾ.ಮುಜಮ್ಮಿಲ್, ಡಾ.ಆದಿಲ್ ಜತೆಗೂಡಿ ಸೇವೆ ಸಲ್ಲಿಸುತ್ತಾ, ದೇಶದ ವಿವಿಧೆಡೆ ಭಾರೀ ಸ್ಫೋಟಕ್ಕೆ ಸಂಚು ಹೂಡಿ, ಧವೂಜ್‌ನಲ್ಲಿನ ಬಾಡಿಗೆ ಮನೆಯಲ್ಲಿ 2900 ಕಿಲೋ ಸ್ಫೋಟಕ ಗಳನ್ನು ಸಂಗ್ರಹಿಸಿಟ್ಟಿದ್ದ ಜೈಶ್ ಎ ಮೊಹಮ್ಮದ್ ಉಗ್ರ ಸಂಘಟನೆಯ ಸಂಪರ್ಕದಲ್ಲಿದ್ದ ಡಾ.ಉಮರ್ ಮತ್ತು ಡಾ.ಶಾಹಿನಾ ಸಯೀದ್, ವಿದೇಶಕ್ಕೆ ಪರಾರಿಯಾಗಲು ಸಿದ್ಧತೆ ನಡೆಸಿದ್ದರು ಎಂಬುದು ತನಿಖೆ ವೇಳೆ ತಿಳಿದುಬಂದಿದೆ. ಸದ್ಯ ಬಂಧನಕ್ಕೊಳಗಾಗಿರುವ ಲಖನೌ ಮೂಲದ ಡಾ.ಶಾಹಿನಾ ಸಯೀದ್ ವಿದೇಶಕ್ಕೆ ಪರಾರಿಯಾಗಲೆಂದೇ ಪಾಸ್‌ಪೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಳು. ಪೊಲೀಸರಿಂದ ಪಾಸ್‌ಪೋರ್ಟ್ ವೆರಿಫಿಕೇಷನ್ ಕೂಡಾ ನಡೆದಿತ್ತು ಎಂಬುದು ತಿಳಿದುಬಂದಿದೆ.

ಫರಿದಾಬಾದ್ ಅಲ್-ಫಲಾಹ್ ವಿಶ್ವವಿದ್ಯಾಲಯದಲ್ಲಿ ಹಿರಿಯ ವೈದ್ಯೆಯಾಗಿದ್ದ ಶಾಹಿನಾ ಕಾರಿನಲ್ಲಿ ಅಸಾಲ್ಟ್ ರೈಫಲ್ ಮತ್ತು ಗುಂಡುಗಳು ಪತ್ತೆಯಾಗಿದ್ದರಿಂದ ನ.10ರಂದು ಆಕೆಯನ್ನು ಬಂಧಿಸಲಾಗಿತ್ತು. ಡಾ.ಉಮರ್, ಡಾ.ಮುಜಮ್ಮಿಲ್, ಡಾ.ಆದಿಲ್ ಮತ್ತು ಡಾ.ಶಾಹೀನಾ ಅಲ್ ಫಲಾಹ್ ವಿಶ್ವವಿದ್ಯಾಲಯದಲ್ಲಿದ್ದಾಗ ಡಾ.ಮುಜಮ್ಮಿಲ್ ಚೇಂಬರ್‌ನಲ್ಲೇ ರಹಸ್ಯ ಸಭೆಗಳನ್ನು ನಡೆಸುತ್ತಿದ್ದರು. ದೆಹಲಿಯ ಕೆಂಪು ಕೋಟೆ, ಉತ್ತರ ಪ್ರದೇಶದ ಅಯೋಧ್ಯೆ ಸೇರಿದಂತೆ ದೇಶದ ಐದಾರು ಕಡೆ ಭಾರೀ ಪ್ರಮಾಣದಲ್ಲಿ ಸ್ಫೋಟ ನಡೆಸಲು ಸಂಚು ರೂಪಿಸುತ್ತಿದ್ದರು ಎಂಬುದು ತನಿಖೆ ವೇಳೆ ತಿಳಿದುಬಂದಿದೆ. ಮೂಲತಃ ಲಖನೌ ನಗರದ ಡಾ.ಶಾಹೀನ ಸಯೀದ್, ಅಲ್-ಫಲಾಹ್ ವಿಶ್ವವಿದ್ಯಾಲಯ ಸೇರುವ ಮೊದಲು ಬೇರೆ ಬೇರೆ ವೈದ್ಯಕೀಯ ಕಾಲೇಜುಗಳಲ್ಲಿ ಕೆಲಸ ಮಾಡಿದ್ದಳು. 2012ರ ಸೆಪ್ಟೆಂಬರ್‌ನಿಂದ 2013ರ ಡಿಸೆಂಬರ್‌ವರೆಗೆ ಕಾನ್ಪುರದ ವೈದ್ಯಕೀಯ ಕಾಲೇಜಿನಲ್ಲಿ ಔಷಧಶಾಸ್ತ್ರ ವಿಭಾಗದ ಮುಖ್ಯಸ್ಥಳಾಗಿದ್ದಳು ಎಂಬುದು ತನಿಖೆ ವೇಳೆ ತಿಳಿದು ಬಂದಿದೆ.

ನೋಂದಣಿ ರದ್ದು: ಧವೂಜ್‌ನಲ್ಲಿ 2900 ಕಿಲೋ ಸ್ಫೋಟಕ ಪತ್ತೆ ಪ್ರಕರಣದಲ್ಲಿ ಭಾಗಿಯಾಗಿರುವ, ಭಾರತದ ವಿವಿಧೆಡೆ ಭಾರೀ ಸ್ಫೋಟಕ್ಕೆ ಸಂಚು ಹೂಡಿದ್ದ ಆರೋಪದಡಿ ಬಂಧಿತರಾಗಿರುವ ಅಲ್ ಫಲಾಹ್ ವಿವಿ ಆಸ್ಪತ್ರೆಯ ವೈದ್ಯರಾದ ಡಾ.ಮುಜಮ್ಮಿಲ್, ಡಾ.ಶಾಹೀನ್ ಸಾಹಿದಿ ಮತ್ತು ಡಾ.ಆದಿಲ್ ನಾಲ್ವರು ಆರೋಪಿ ವೈದ್ಯರ ವೈದ್ಯಕೀಯ ನೋಂದಣಿಯನ್ನು ರದ್ದುಗೊಳಿಸಲು ಭಾರತದಲ್ಲಿ ವೈದ್ಯಕೀಯ ಶಿಕ್ಷಣವನ್ನು ನಿಯಂತ್ರಿಸುವ ಉನ್ನತ ಸಂಸ್ಥೆಯಾದ 'ರಾಷ್ಟ್ರೀಯ ವೈದ್ಯಕೀಯ ಆಯೋಗ' ನಿರ್ಧರಿಸಿದೆ ಎಂದು ಮೂಲಗಳು ತಿಳಿಸಿವೆ.

ಪಶ್ಚಿಮ ಬಂಗಾಳ ವೈದ್ಯನ ಸೆರೆ

ದೆಹಲಿ: ದೆಹಲಿ ಕೆಂಪುಕೋಟೆ ಬಳಿಯ ಲಾಲ್ ಖಿಲಾ ಮೆಟ್ರೊ ನಿಲ್ದಾಣ ಬಳಿ ಹುಂಡೈ ಐ20 ಕಾರು ಸ್ಫೋಟಿಸಿದ ಡಾ.ಉಮರ್ ಆತ್ಮಾಹುತಿ ದಾಳಿಗೆ ಸಂಬಂಧಿಸಿದಂತೆ ಪಶ್ಚಿಮ ಬಂಗಾಳ ಮೂಲದ ಯುವಕ, ಹರಿಯಾಣ ರಾಜ್ಯ ಅಲ್ ಫಲಾಹ್ ವಿಶ್ವವಿದ್ಯಾಲಯದಲ್ಲಿ ಎಂಬಿಬಿಎಸ್ ಪದವಿ ಪಡೆದಿದ್ದ ವೈದ್ಯ ಡಾ.ಝುನಿಶಾರ್ ಆಲಂನನ್ನು ಪಶ್ಚಿಮ ಬಂಗಾಳದ ಉತ್ತರ ದಿನಾಜ್‌ಪುರದಲ್ಲಿ ಪ್ರಕರಣದ ತನಿಖೆ ನಡೆಸುತ್ತಿರುವ 'ರಾಷ್ಟ್ರೀಯ ತನಿಖಾ ಸಂಸ್ಥೆ' (ಎನ್‌ಐಎ) ಬಂಧಿಸಿದೆ.

ಈತ ಡಾ.ಉಮರ್ ಉನ್‌ನಬಿ, ಡಾ.ಮುಜಮ್ಮಿಲ್, ಡಾ. ಶಾಹೀನಾ ಕಾರ್ಯನಿರ್ವಹಿಸುತ್ತಿದ್ದ ಹರಿಯಾಣ ರಾಜ್ಯದ ಫರಿದಾಬಾದ್ ವಿಶ್ವವಿದ್ಯಾಲಯದಿಂದಲೇ 2024ರಲ್ಲಿ ಎಂಬಿಬಿಎಸ್ ಪದವಿ ಪಡೆದಿದ್ದ. ದೆಹಲಿ ಪೊಲೀಸರ ಜತೆಗೂಡಿ ಪಶ್ಚಿಮ ಬಂಗಾಳದ ಉತ್ತರ ದಿನಾಜ್‌ಪುರ ಜಿಲ್ಲೆಯ ದಲ್ಖೋಲಾಕ್ಕೆ ತೆರಳಿದ ಎನ್‌ಐಎ ಅಧಿಕಾರಿಗಳ ತಂಡ, ಅಲ್ಲಿನ ಸೂರ್ಯಾಪುರ ಮಾರುಕಟ್ಟೆಯಲ್ಲಿ ಝುನಿಶಾರ್ ಆಲಂನನ್ನು ಬಂಧಿಸಿದೆ. ನ.12ರಂದು ಮದುವೆ ಸಮಾರಂಭದಲ್ಲಿ ಭಾಗವಹಿಸಲು ತನ್ನೂರು ಕೋನಾಲ್ ಗ್ರಾಮಕ್ಕೆ ಬಂದಿದ್ದ ಝುನಿಶಾರ್‌ನನ್ನು ವಿಚಾರಣೆಗಾಗಿ ಸಿಲಿಗುರಿಗೆ ಕರೆದೊಯ್ಯಲಾಗಿದೆ. ಬಂಧಿತ ಡಾ.ಝುನಿಶಾರ್ ಮತ್ತು ಆತನ ತಂದೆ ತೌಹಿದ್ ಆಲಂ ಲುಧಿಯಾನದಲ್ಲಿ ವಾಸಿಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ. ದೆಹಲಿ ಸ್ಫೋಟ ಸಂಬಂಧ ಎನ್‌ಐಎ ಈವರೆಗೆ ಅಲ್ ಫಲಾಹ್ ವಿಶ್ವವಿದ್ಯಾಲಯದ ನಾಲ್ವರು ವೈದ್ಯರನ್ನು ಬಂಧಿಸಿದೆ. ಇದು ಐದನೇ ವೈದ್ಯನ ಬಂಧನವಾಗಿದೆ.

ನಿತೀಶರೇ ಸಿಎಂ ಆಗಿರಲಿ

ಪಟನಾ: ಬಿಹಾರದಲ್ಲಿ ಮುಂದಿನ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಯಾರಾಗಬೇಕು ಎಂದು ನಿರ್ಧರಿಸುವುದು ಶಾಸಕರ ಅಧಿಕಾರ. ನಿತೀಶ್ ಕುಮಾರ್ ಅವರೇ ಬಿಹಾರದ ಮುಖ್ಯಮಂತ್ರಿಯಾಗಿ ಮುಂದುವರಿಯಬೇಕು ಎಂಬುದು ನನ್ನ ವೈಯಕ್ತಿಕ ಬಯಕೆಯಾಗಿದೆ ಎಂದು ಹೇಳಿರುವ ಚಿರಾಗ್ ಪಾಸ್ವಾನ್, ಲೋಕಜನಶಕ್ತಿ ಪಕ್ಷವು ನಿತೀಶ್ ಕುಮಾರ್ ನೇತೃತ್ವದ ಸರಕಾರವನ್ನು ಸೇರಲು ಉತ್ಸುಕವಾಗಿದೆ ಎಂದೂ ಹೇಳಿದ್ದಾರೆ. ರಾಜ್ಯ ರಾಜಕಾರಣ ಪ್ರವೇಶಿಸುವ ಆಲೋಚನೆಯಲ್ಲಿರುವ ಕೇಂದ್ರ ಸಚಿವ, ಲೋಕಜನಶಕ್ತಿ (ಆರ್‌ವಿ) ಪಕ್ಷದ ಮುಖಂಡ ಚಿರಾಗ್ ಪಾಸ್ವಾನ್, ಅಚ್ಚರಿ ಎಂಬಂತೆ ಶನಿವಾರ ಬೆಳಗ್ಗೆ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರನ್ನು ಅಭಿನಂದಿಸಲು ಸಿಎಂ ನಿವಾಸಕ್ಕೆ ಭೇಟಿ ನೀಡಿದ್ದಾರೆ. 2020ರ ಚುನಾವಣೆ ಬಳಿಕ ನಿತೀಶ್ ಕುಮಾರ್ ವಿಚಾರದಲ್ಲಿ ಮುನಿದು ಅಂತರ ಕಾಯ್ದುಕೊಂಡಿದ್ದ ಚಿರಾಗ್ ಪಾಸ್ವಾನ್ ಅವರಲ್ಲಿನ ಈ ದಿಢೀರ್ ಬದಲಾವಣೆ ಅಚ್ಚರಿಗೆ ಕಾರಣವಾಗಿದೆ. ನಿತೀಶ್ ಕುಮಾರ್ ಅವರು ಚಿರಾಗ್‌ರನ್ನು ನಗುತ್ತಲೇ ಸ್ವಾಗತಿಸಿದ್ದಾರೆ. ಚಿರಾಗ್ ಭುಜದ ಮೇಲೆ ಕೈ ಇಟ್ಟು ನಿತೀಶ್ ನಗೆ ಚೆಲ್ಲಿದ್ದಾರೆ. ಸಂತೋಷದ ಮಾತುಗಳನ್ನು ವಿನಿಮಯ ಮಾಡಿಕೊಂಡಿದ್ದಾರೆ.

ಕ್ಷೇತ್ರ ಗೆಲ್ಲಲಾಗದ ಆರ್‌ಜೆಡಿ ಮತ ಗಳಿಕೆಯಲ್ಲಿ ಮುಂಚೂಣಿ

ಆರ್‌ಜೆಡಿ	23%
ಬಿಜೆಪಿ	20.08%
ಜೆಡಿಯು	19.25%



ಪಟನಾ: ಬಿಹಾರ ವಿಧಾನಸಭೆಗೆ ಎರಡು ಹಂತಗಳಲ್ಲಿ ನಡೆದ ಚುನಾವಣೆಯ ಫಲಿತಾಂಶ ಪ್ರಕಟವಾಗಿ, ಬಿಜೆಪಿ-ಜೆಡಿಯು ಜಂಟಿ ನೇತೃತ್ವದ 'ಎನ್‌ಡಿಎ' ಮೈತ್ರಿಕೂಟ ಪ್ರಚಂಡ ವಿಜಯ ಸಾಧಿಸಿದೆ. ನ.6 ಮತ್ತು ನ.11ರಂದು ಒಟ್ಟು 243 ಕ್ಷೇತ್ರಗಳಲ್ಲಿ ನಡೆದ ಮತದಾನದಲ್ಲಿ ಯಾವ ಪಕ್ಷಕ್ಕೆ ಶೇಖಡಾವಾರು ಎಷ್ಟೆಷ್ಟು ಮತಗಳು ಲಭಿಸಿವೆ ಎಂಬ ಅಂಕಿ ಅಂಶ ಇಲ್ಲಿದೆ.

2020ರ ಚುನಾವಣೆಯಲ್ಲಿ ಆದಂತೆಯೇ ಈ ಬಾರಿಯೂ ಮತ ಗಳಿಕೆ ಪ್ರಮಾಣದಲ್ಲಿ ರಾಷ್ಟ್ರೀಯ ಜನತಾ ದಳ(ಆರ್‌ಜೆಡಿ) ಪಕ್ಷವೇ ಮುಂಚೂಣಿಯಲ್ಲಿದೆ. ಯುವ ನಾಯಕ ತೇಜಸ್ವಿ ಯಾದವ್ ನೇತೃತ್ವದಲ್ಲಿ ಆರ್‌ಜೆಡಿ ಪಕ್ಷವು 143 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿತ್ತು. ಅದರಲ್ಲಿ ಕೇವಲ 25 ಹುರಿಯಾಳುಗಳಷ್ಟೇ ಗೆದ್ದಿದ್ದಾರೆ. ಆದರೆ, ಒಟ್ಟಾರೆಯಾಗಿ ಆರ್‌ಜೆಡಿ ಶೇ.23ರಷ್ಟು ಮತ ಗಳಿಕೆ ಮಾಡಿದೆ. ತಲಾ 101 ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಿದ್ದ ಬಿಜೆಪಿ ಮತ್ತು ಜೆಡಿಯು ಕ್ರಮವಾಗಿ 89 ಮತ್ತು 85 ಕ್ಷೇತ್ರಗಳಲ್ಲಿ ಜಯ ಸಾಧಿಸಿದ್ದರೂ, ಈ ಎರಡೂ ಪಕ್ಷಗಳ ಮತ ಗಳಿಕೆ ಪ್ರಮಾಣ ಆರ್‌ಜೆಡಿಗಿಂತ ಕಡಿಮೆ ಇದೆ ಎನ್ನುವುದು ಗಮನಾರ್ಹ. ಬಿಜೆಪಿ ಈ ಚುನಾವಣೆಯಲ್ಲಿ ಅತ್ಯಧಿಕ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಂಡಿದ್ದರೂ ಒಟ್ಟಾರೆ ಮತ ಗಳಿಕೆ ಪ್ರಮಾಣ ಶೇ.20.08ರಷ್ಟಿದೆ. ಅಂದರೆ, ಆರ್‌ಜೆಡಿ ಮತ ಗಳಿಕೆ ಪ್ರಮಾಣಕ್ಕೆ ಹೋಲಿಸಿದರೆ ಶೇ.2.92ರಷ್ಟು ಕಡಿಮೆ ಇದೆ. ಜೆಡಿಯು ಕೂಡಾ 85 ಅಭ್ಯರ್ಥಿಗಳನ್ನು ಗೆಲ್ಲಿಸಿಕೊಂಡಿದ್ದರೂ ಮತ ಗಳಿಕೆ ಮಾತ್ರ ಶೇ.19.25ರಷ್ಟಿದೆ. ಆರ್‌ಜೆಡಿಗಿಂತ ಶೇ.3.75ರಷ್ಟು ಕಡಿಮೆ ಇದೆ.

ಉಳಿದಂತೆ 61 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಕಾಂಗ್ರೆಸ್ ಶೇ.8.71ರಷ್ಟು ಮತ ಗಳಿಸಿದ್ದರೂ ಕೇವಲ 6 ಕ್ಷೇತ್ರದಲ್ಲಿ ಗೆಲುವು ಕಾಣಲು ಸಾಧ್ಯವಾಗಿದೆ. ಅಚ್ಚರಿ ಎಂದರೆ, ಶೇ.1.85ರಷ್ಟು ಮತ ಗಳಿಕೆ ಮಾಡಿರುವ ಸಂಸದ ಅಸಾದುದ್ದೀನ್ ಒವೈಸಿ ನೇತೃತ್ವದ 'ಎಐಎಂಐಎಂ' ಪಕ್ಷ 5 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದೆ.

ಎನ್‌ಡಿಎ ಮೈತ್ರಿಕೂಟದ ಚಿರಾಗ್ ಪಾಸ್ವಾನ್ ನೇತೃತ್ವದ 'ಲೋಕ ಜನಶಕ್ತಿ ಪಕ್ಷ' 29 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿತ್ತು. ಆದರೆ, 1 ಕ್ಷೇತ್ರದಲ್ಲಿ ಚಿತ್ರನಟಿ ಸಲ್ಲಿಸಿದ ನಾಮಪತ್ರವೇ ತಿರಸ್ಕೃತಗೊಂಡಿದ್ದರಿಂದ 28 ಕ್ಷೇತ್ರಗಳಲ್ಲಷ್ಟೇ 'ಎಲ್‌ಜೆಪಿ' ಸ್ಪರ್ಧೆ ಸೀಮಿತಗೊಂಡಿತು. ಹಾಗಿದ್ದೂ 19 ಕ್ಷೇತ್ರಗಳಲ್ಲಿ ಜಯ ಸಾಧಿಸಿದೆ. ಆದರೆ, ಎಲ್‌ಜೆಪಿ ಮತ ಗಳಿಕೆ ಪ್ರಮಾಣ ಶೇ.4.97ರಷ್ಟು(ಕಾಂಗ್ರೆಸ್‌ಗಿಂತಲೂ ಕಡಿಮೆ) ಇದೆ.

ನೋಟಾ: ಸಿಪಿಐ(ಶೇ.0.74), ಸಿಪಿಐಎಂ (ಶೇ.0.60), ಶರದ್ ಪವಾರ್ ನೇತೃತ್ವದ ಎನ್‌ಸಿಪಿ(ಶೇ.0.03) ಕೂಡಾ ಈ ಚುನಾವಣೆಯಲ್ಲಿ ಸ್ಪರ್ಧೆ ಮಾಡಿದ್ದವು. ಆದರೆ, ಅವುಗಳ ಮತ ಗಳಿಕೆ ಪ್ರಮಾಣ 'ನೋಟಾ'ಗಿಂತಲೂ ಬಹಳ ಕಡಿಮೆ ಇದೆ. ಶೇ.1.81 ಮತದಾರರು 'ನೋಟಾ'ಗೆ ಮತ ಚಲಾಯಿಸಿದ್ದಾರೆ.

ಮತ ಗಳಿಕೆ ಪ್ರಮಾಣ

ಪಕ್ಷ	ಶೇ. ಗಳಿಕೆ
ಎಎಪಿ	0.30
ಎಐಎಫ್‌ಬಿ	0.00
ಎಐಎಂಐಎಂ	1.85
ಬಿಜೆಪಿ	20.08
ಬಿಎಲ್‌ಎಸ್‌ಪಿ	0.00
ಬಿಎಸ್‌ಪಿ	1.62
ಸಿಪಿಐ	0.74
ಸಿಪಿಐಎಂ	0.60
ಸಿಪಿಐಎಂಎಲ್	2.84
ಕಾಂಗ್ರೆಸ್	8.71
ಜೆಡಿಯು	19.25
ಲೋಕಜನಶಕ್ತಿ	4.97
ಎನ್‌ಸಿಪಿ	0.03
ನೋಟಾ	1.81
ಎನ್‌ಪಿಇಪಿ	0.01
ಆರ್‌ಎಸ್‌ಎಲ್‌ಜೆಪಿ	0.17
ಆರ್‌ಜೆಡಿ	23.00
ಇತರೆ	14.00

ಕಲಾಧರ ಪ್ರಸಾದ್ ಮಂಡಲ್‌ಗೆ 73,572 ಮತ ಅಂತರದ ಗೆಲುವು | ಕೇವಲ 27 ಮತ ಅಂತರದಲ್ಲಿ ತಿಣುಕಾಡಿ ಗೆದ್ದ ಜೆಡಿಯು ಅಭ್ಯರ್ಥಿ

ಗರಿಷ್ಠ-ಕನಿಷ್ಠ ಮತ ಅಂತರದ ಗೆಲುವಿನ ರೋಚಕತೆ

ಪಟನಾ: ನ.6 ಮತ್ತು 11ರಂದು 2 ಹಂತಗಳಲ್ಲಿ ನಡೆದ ಬಿಹಾರ ವಿಧಾನ ಸಭಾ ಚುನಾವಣೆಯ ಮತ ಎಣಿಕೆ ನ.14ರ ಶುಕ್ರ ವಾರ ನಡೆದು ಪೂರ್ಣ ಫಲಿತಾಂಶ ಪ್ರಕಟ ವಾಗಿದೆ. 243 ಕ್ಷೇತ್ರಗಳಲ್ಲಿ ನಡೆದ ಭಾರೀ ಹಣಾಹಣಿಯಲ್ಲಿ ಪ್ರಮುಖವಾಗಿ ಬಿಜೆಪಿ-ಜೆಡಿಯು ಜಂಟಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಮತ್ತು ಆರ್‌ಜೆಡಿ-ಕಾಂಗ್ರೆಸ್ ಜಂಟಿ ನೇತೃತ್ವದ ಮಹಾ ಘಟಬಂಧನ್ ಒಕ್ಕೂಟದ ನಡುವೆಯೇ ನೇರ ಹಣಾಹಣಿ ನಡೆದಿತ್ತು. ಈ ಹೋರಾಟದಲ್ಲಿ 'ಎನ್‌ಡಿಎ' ಮೈತ್ರಿಕೂಟ ಪ್ರಚಂಡ ಬಹುಮತಗಳಿಸಿ ಮತ್ತೊಮ್ಮೆ ಅಧಿಕಾರಕ್ಕೇರಿದ್ದರೆ, 'ಮಹಾ ಘಟ ಬಂಧನ್' ಪರಾಜಯ ಗೊಂಡು ಮತ್ತೊಂದು ಅವಧಿಗೆ ಪ್ರತಿಪಕ್ಷ ಸ್ಥಾನ ದಲ್ಲಿ ಕೂರಬೇಕಿದೆ. ಬಹುತೇಕ ಏಕಪಕ್ಷೀಯವಾಗಿದ್ದ(ಎನ್‌ಡಿಎ ಪರ) ಈ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಮತ್ತು ಜೆಡಿಯು ಪಕ್ಷಗಳ ತಲಾ 101 ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದವು. ಪ್ರತಿಯಾಗಿ ಬಿಜೆಪಿಯ 89 ಮತ್ತು ಜೆಡಿಯುನ 85 ಹುರಿಯಾಳುಗಳಿಗೆ ಗೆಲುವು ದಕ್ಕಿದೆ. ಅಂದರೆ ಬಿಜೆಪಿಗೆ ಶೇ.88.12 ಮತ್ತು ಜೆಡಿಯುಗೆ ಶೇ.84.16ರಷ್ಟು ಜಯ ಸಿಕ್ಕಂತಾಗಿದೆ. 243 ಕ್ಷೇತ್ರಗಳಲ್ಲಿ ನಡೆದ ಚುನಾವಣೆಯಲ್ಲಿ ಗರಿಷ್ಠ ಮತಗಳ ಅಂತರ ಹಾಗೂ ಕನಿಷ್ಠ ಮತಗಳ ಅಂತರದಿಂದ ಗೆದ್ದವರತ್ತ ಕಣ್ಣು ಹಾಯಿಸಿದರೆ ಆಶ್ಚರ್ಯವಾಗುತ್ತದೆ. ಈ ಫಲಿತಾಂಶದಲ್ಲಿ ಬಿಜೆಪಿ ಮತ್ತು ಜೆಡಿಯು ಅಭ್ಯರ್ಥಿಗಳಲ್ಲಿ ಬಹಳಷ್ಟು ಮಂದಿಗೆ ಅರ್ಧ ಲಕ್ಷಕ್ಕೂ ಅಧಿಕ ಮತಗಳ ಗೆಲುವು ಸಿಕ್ಕಿದೆ. ಬಿಜೆಪಿಯ 7 ಮತ್ತು ಜೆಡಿಯು ಪಕ್ಷದ 5 ಹುರಿಯಾಳುಗಳಿಗೆ ಅರ್ಧ ಲಕ್ಷಕ್ಕಿಂತಲೂ ಅಧಿಕ ಮತಗಳ ಅಂತರದ ಗೆಲುವು ದೊರೆತಿದೆ.

ಅತ್ಯಧಿಕ ಮತಗಳ ಗೆಲುವು

ರೂಪಾಲಿ ಕ್ಷೇತ್ರದಲ್ಲಿ 1,24,826 ಮತಗಳನ್ನು ಪಡೆದ ಸಂಯುಕ್ತ ಜನತಾ ದಳ (ಜೆಡಿಯು) ಅಭ್ಯರ್ಥಿ ಕಲಾಧರ ಪ್ರಸಾದ್ ಮಂಡಲ್ ಅವರು 73,572 ಮತಗಳ ಭಾರೀ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಅವರ ಎದುರಾಳಿಯಾಗಿದ್ದ ರಾಷ್ಟ್ರೀಯ ಜನತಾ ದಳದ(ಆರ್‌ಜೆಡಿ) ಅಭ್ಯರ್ಥಿ ಬಿಮಾ ಭಾರ್ತಿ ಕೇವಲ 51,254 ಮತಗಳನ್ನಷ್ಟೇ ಪಡೆಯಲು ಸಾಧ್ಯವಾಗಿದೆ. 27 ಸುತ್ತುಗಳ ಮತ ಎಣಿಕೆಯಲ್ಲಿ ಕಲಾಧರ ಅವರು ಸತತ ಮುನ್ನಡೆ ಕಾಯ್ದುಕೊಂಡಿದ್ದರು. ಈ ಚುನಾವಣೆಯಲ್ಲಿ ಕಲಾಧರ ಪ್ರಸಾದ್ ಮಂಡಲ್ ಅವರೊಬ್ಬರೇ ಇಷ್ಟೊಂದು ದೊಡ್ಡ ಅಂತರದಲ್ಲಿ ಗೆಲುವು ಕಂಡವರು. ನಂತರದಲ್ಲಿ 59,079 ಮತಗಳ ಅಂತರದ ಜಯವನ್ನು ಕಂಡವರು ದಿಘಾ ವಿಧಾನ ಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸಂಜೀವ್ ಚೌರಾಸಿಯ. ಅವರೆದುರು ಸಿಪಿಐಎಂಎಲ್‌ಎಲ್ ಪಕ್ಷದ ದಿವ್ಯಾ ಗೌತಮ್ ಸೆಣಸಲಾರದೇ ಸುಲಭವಾಗಿ ಸೋಲೊಪ್ಪಿಕೊಂಡಿದ್ದಾರೆ. ಇವರಿಬ್ಬರಿಗೆ ಹೊರತಾಗಿ ಚಿರಾಗ್ ಪಾಸ್ವಾನ್ ನೇತೃತ್ವದ 'ಲೋಕ ಜನಶಕ್ತಿ ಪಕ್ಷ'ದ ಅಭ್ಯರ್ಥಿ ರಾಜೇಶ್ ಕುಮಾರ್ ಅಲಿಯಾಸ್ ಬಬ್ಲು ಗುಪ್ತಾ ಸುಗೌಲಿ ಕ್ಷೇತ್ರದಲ್ಲಿ 58,191 ಮತಗಳ ಅಂತರದ ಗೆಲುವು ಕಂಡಿದ್ದಾರೆ. ಜನಶಕ್ತಿ ಜನತಾ ದಳ ಪಕ್ಷದ ಶ್ಯಾಮ್ ಕಿಶೋರ್ ಚೌಧರಿ ಸೋಲು ಕಂಡಿದ್ದಾರೆ.

ಗೋಪಾಲಪುರ ಕ್ಷೇತ್ರದಲ್ಲಿ ಕಣಕ್ಕಿಳಿದಿದ್ದ ಜೆಡಿಯು ಅಭ್ಯರ್ಥಿ ಶೈಲೇಶ್ ಕುಮಾರ್ ಅಲಿಯಾಸ್ ಬುಲೊ ಮಂಡಲ್ ಕೂಡಾ 58,135 ಮತಗಳಷ್ಟು ಭಾರೀ ಅಂತರದ ಗೆಲುವು ದಕ್ಕಿಸಿಕೊಂಡಿದ್ದಾರೆ. ಅವರೆದುರು ವಿಕಾಸಶೀಲ್ ಇನ್ಸಾನ್ ಪಾರ್ಟಿಯ ಪ್ರೇಮ್ ಸಾಗರ್ ಅಲಿಯಾಸ್ ಡಬ್ಲು ಯಾದವ್ ಸುಲಭವಾಗಿ ಸೋಲೊಪ್ಪಿದ್ದಾರೆ.

ಕಷ್ಟಪಟ್ಟು ಗೆದ್ದವರು

ಬಿಜೆಪಿಯ ಅತ್ಯಂತ ಜನಪ್ರಿಯ ನಾಯಕ, ಪ್ರಧಾನಿ ನರೇಂದ್ರ ಮೋದಿ ಮತ್ತು ಸತತ 20 ವರ್ಷಗಳಿಂದ ಮುಖ್ಯಮಂತ್ರಿ ಆಗಿ ರುವ, ಜೆಡಿಯು ವರಿಷ್ಠ ನಿತೀಶ್ ಕುಮಾರ್ ಅವರ ಪ್ರಭಾವ ಬಹಳ ದಟ್ಟವಾಗಿದ್ದ ಈ ಚುನಾವಣೆಯಲ್ಲಿ ಬಿಜೆಪಿ ಮತ್ತು ಜೆಡಿಯು ಸೇರಿದಂತೆ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಗಳೆಲ್ಲರೂ ಭಾರೀ ಬಹುಮತದಿಂದ ಗೆಲುವಿನ ನಗೆ ಬೀರಿದ್ದಾರೆ. ಆದರೆ...,

ಸಂದೇಶ್ ವಿಧಾನಸಭಾ ಕ್ಷೇತ್ರದಲ್ಲಿ ಸಂಯುಕ್ತ ಜನತಾ ದಳದ(ಜೆಡಿಯು) ಅಭ್ಯರ್ಥಿ ರಾಧಾ ಚರಣ್ ಸಹ ಅವರು ಕೇವಲ 27 ಮತಗಳ ಅಂತರದಲ್ಲಿ ಬಹಳ ತಿಣುಕಾಡಿ ಜಯ ಸಂಪಾದಿಸಿದ್ದಾರೆ. ಅವರಿಗೆ ರಾಷ್ಟ್ರೀಯ ಜನತಾ ದಳ(ಆರ್‌ಜೆಡಿ) ಅಭ್ಯರ್ಥಿ ದೀಪು ಸಿಂಗ್ ಭಾರೀ ಸ್ಪರ್ಧೆ ಒಡ್ಡಿದ್ದರು. 28 ಸುತ್ತುಗಳ ಮತ ಎಣಿಕೆವರೆಗೂ ಭಾರೀ ಹಣಾಹಣಿ ನಡೆದಿತ್ತು.

ಇನ್ನೊಂದೆಡೆ, ಅಜಿಯೋನ್ ವಿಧಾನಸಭಾ ಕ್ಷೇತ್ರದಲ್ಲಿಯೂ ಬಿಜೆಪಿ ಅಭ್ಯರ್ಥಿ ಮಹೇಶ್ ಪಾಸ್ವಾನ್ ಕೇವಲ 95 ಮತಗಳ ಅಂತರದಲ್ಲಿ ಕಷ್ಟಪಟ್ಟು ಗೆದ್ದಿದ್ದಾರೆ. ಅವರಿಗೆ ಕಮ್ಯುನಿಸ್ಟ್ ಪಾರ್ಟಿ ಆಫ್ಇಂಡಿಯ- ಮಾರ್ಕ್ಸಿಸ್ಟ್- ಲೆನಿನಿಸ್ಟ್- ಲಿಬರೇಷನ್ (ಸಿಪಿಐಎಂಎಲ್‌ಎಲ್) ಪಕ್ಷದ ಅಭ್ಯರ್ಥಿ ಶಿವ ಪ್ರಕಾಶ್ ರಂಜನ್ ತುರುಸಿನ ಸ್ಪರ್ಧೆ ಒಡ್ಡಿದ್ದರು. 26 ಸುತ್ತು ಗಳ ಮತ ಎಣಿಕೆ ಬಳಿಕ ಗೆಲುವಿನ ಕಿರೀಟ ಬಿಜೆಪಿಯ ಮಹೇಶ್ ಪಾಸ್ವಾನ್ ಪಾಲಿಗೆ ಒಲಿಯಿತು. ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಮಾಯಾ ವತಿ ಅವರ ನೇತೃತ್ವದ ಪಕ್ಷವಾದ 'ಬಹುಜನ ಸಮಾಜ ಪಕ್ಷ'(ಬಿಎಸ್‌ಪಿ) ಬಿಹಾರ ವಿಧಾನಸಭೆ ಚುನಾವಣೆಯಲ್ಲಿ ಯಾವ ಮೈತ್ರಿಕೂಟದ ಜತೆಗೂ ಸೇರಿಕೊಳ್ಳದೇ ಏಕಾಂಗಿ ಯಾಗಿಯೇ ದೊಡ್ಡ ಸಂಖ್ಯೆಯಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿತ್ತು. ಆದರೆ, ಆ ಪಕ್ಷಕ್ಕೆ ಗೆಲುವು ಸಿಕ್ಕಿದ್ದು ಮಾತ್ರ 1 ಕ್ಷೇತ್ರದಲ್ಲಿ. ಅದೂ ಕೇವಲ 30 ಮತಗಳ ಅಂತರದಲ್ಲಿ ದೊರೆತ ಅತ್ಯಂತದ ಕಷ್ಟದ ಗೆಲುವು. ರಾಮ್‌ಗರ್ ಕ್ಷೇತ್ರದಲ್ಲಿ ಬಿಎಸ್‌ಪಿಯ ಸತೀಶ್ ಕುಮಾರ್ ಸಿಂಗ್ ಯಾದವ್ ಕೇವಲ 30 ಮತಗಳ ಅಂತರ ದಲ್ಲಿ ವಿಜಯ ಶಾಲಿಯಾಗಿದ್ದಾರೆ. ಎದುರಾಳಿಯಾಗಿ ಬಿಜೆಪಿಯ ಅಶೋಕ್ ಕುಮಾರ್ ಸಿಂಗ್ ತೀವ್ರ ಸ್ಪರ್ಧೆ ಒಡಿದ್ದರು. ಧಾಕಾ ವಿಧಾನಸಭಾ ಕ್ಷೇತ್ರದಲ್ಲಿಯೂ ಆರ್‌ಜೆಡಿಯ ಫೈಸಲ್ ರೆಹಮಾನ್‌ಗೆ ಬಿಜೆಪಿಯ ಪವನ್‌ಕುಮಾರ್ ಜೈಸ್ವಾಲ್ ಎದುರು ಕೇವಲ 178 ಮತಗಳ ಅಂತರದ ಗೆಲುವು ಸಿಕ್ಕಿದೆ. 61 ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಿದ್ದ ಕಾಂಗ್ರೆಸ್‌ಗೆ ಗೆಲುವು ಸಿಕ್ಕಿದ್ದ ಕೇವಲ 6 ಕ್ಷೇತ್ರಗಳಲ್ಲಿ, ಅದರಲ್ಲೂ ಫೋರ್ಬೆಸ್‌ಗಂಜ್ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಮನೋಜ್ ಬಿಸ್ವಾಸ್‌ಗೆ ಕೇವಲ 221 ಮತಗಳ ಅಂತರದ ಗೆಲುವು ಸಾಧ್ಯವಾಗಿದೆ. ಸ್ವಲ್ಪ ಹಿಂದೆ ಮುಂದೆ ಆಗಿದ್ದರೆ ಬಿಜೆಪಿಯ ವಿದ್ಯಾಸಾಗರ್ ಕೇಸರಿ ಗೆದ್ದುಬಿಡುವ ಸಾಧ್ಯತೆ ಇದ್ದಿತು.

ಸಮಾಚಾರ ಸಣ್ಣದಲ್ಲ

ಖರ್ಗೆ ಮನೆಯಲ್ಲಿ ರಾಹುಲ್ ಸಭೆ

ದೆಹಲಿ: ಬಿಹಾರ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಹೀನಾಯ ಸೋಲು ಕಂಡಿದೆ. ಅದರ ಬೆನ್ನಲ್ಲೇ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಿವಾಸದಲ್ಲಿ ಶನಿವಾರ ಬೆಳಗ್ಗೆ ಮಹತ್ವದ ಸಭೆ ನಡೆಸಿದ್ದಾರೆ. ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಪಕ್ಷದ ಖಜಾಂಚಿ ಅಜಯ್ ಮಾಕನ್ ಮತ್ತು ಎಐಸಿಸಿ ಬಿಹಾರ ಉಸ್ತುವಾರಿ ಕೃಷ್ಣ ಅಲ್ಲಾವರು ಅವರು ಭಾಗಿಯಾಗಿದ್ದಾರೆಂದು ಮೂಲಗಳು ತಿಳಿಸಿವೆ. ಬಿಹಾರದಲ್ಲಿ ಕಾಂಗ್ರೆಸ್‌ಗೆ ಉಂಟಾಗಿರುವ ಭಾರಿ ಸೋಲಿನ ಬಗ್ಗೆ ಸಭೆಯಲ್ಲಿ ಕೂಲಂಕಷವಾಗಿ ಚರ್ಚೆ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ. ಫಲಿತಾಂಶ ಪ್ರಕಟವಾದ ಬಳಿಕ ಶುಕ್ರವಾರ ಸಂಜೆ ಪ್ರತಿಕ್ರಿಯೆ ನೀಡಿದ್ದ ರಾಹುಲ್ ಗಾಂಧಿ, ಈ ಬಾರಿಯ ಬಿಹಾರ ಚುನಾವಣೆಯಲ್ಲಿ ಬಿಹಾರ ಜನರು ಮಹಾಘಟಬಂಧನ್ ಮೇಲೆ ನಂಬಿಕೆಯಿಟ್ಟು ಅಪಾರ ಸಂಖ್ಯೆಯಲ್ಲಿ ಮತ ಹಾಕಿದ್ದಾರೆ. ಆದರೆ, ಚುನಾವಣೆ ಆರಂಭದಿಂದಲೇ ಸರಿಯಾಗಿ ನಡೆಸಲಾಗಿಲ್ಲ. ನಾವು ಸಂವಿಧಾನದ ಸಂರಕ್ಷಣೆ ಹಾಗೂ ಪ್ರಜಾಪ್ರಭುತ್ವದ ಸಂರಕ್ಷಣೆಗಾಗಿ ಬಿಹಾರದಲ್ಲಿ ಹಲವು ದಿನ ಯಾತ್ರೆ ನಡೆಸಿದ್ದೆವು. ಆದರೂ, ಫಲಿತಾಂಶ ನಮ್ಮ ಪರವಾಗಿ ಬಂದಿಲ್ಲ. ಈ ಜನಾದೇಶವನ್ನು ಕಾಂಗ್ರೆಸ್ ಹಾಗೂ ಐಎನ್‌ಡಿಐಎ ಒಕ್ಕೂಟ ಸ್ವೀಕರಿಸುತ್ತದೆ. ಈ ಸೋಲಿನ ಪರಾಮರ್ಶೆ ಮಾಡುತ್ತೇವೆ. ಪ್ರಜಾಪ್ರಭುತ್ವವನ್ನು ಉಳಿಸಲು ಮುಂದೆಯೂ ಹೋರಾಟ ನಡೆಸುತ್ತೇವೆ ಎಂದು ಹೇಳಿದ್ದರು.

ಬಿಹಾರ: ಮಖಾನಾ ಮಂಡಳಿ ಆಕರ್ಷಣೆ



ದೆಹಲಿ: ಮಖಾನಾ ಮಂಡಳಿ ಸ್ಥಾಪಿಸುವ ಘೋಷಣೆ ಮತ್ತು ಮಖಾನಾ ಉತ್ಪಾದನೆಗೆ ಗಣನೀಯ ಪ್ರಮಾಣದಲ್ಲಿ ಸಹಾಯಧನ ನೀಡುವುದಾಗಿ ಎನ್‌ಡಿಎ ಸರಕಾರ ಭರವಸೆ ನೀಡಿರುವುದು ಕೂಡಾ ಈ ಬಾರಿಯ ಬಿಹಾರ ವಿಧಾನಸಭೆ ಚುನಾ ವಣೆಯಲ್ಲಿ ಆಡಳಿತರೂಢ ಎನ್‌ಡಿಎ ಮೈತ್ರಿಕೂಟದ ಭರ್ಜರಿ ಗೆಲುವಿಗೆ ಸಹಕಾರಿಯಾಗಿದೆ. ಮಖಾನಾ ಮಂಡಳಿಯ ಪ್ರಯೋಜನಗಳನ್ನು ಪ್ರಚಾರ ಸಭೆಗಳಲ್ಲಿ ಒತ್ತಿ ಹೇಳಿದ್ದರಿಂದಲೇ ಮುಜಾಫರ್‌ಪುರ, ವೈಶಾಲಿ, ದರ್ಭಂಗಾ, ಮಧುಬನಿ, ಸುಪೌಲ್, ಸಮಸ್ತಿಪುರ, ಪೂರ್ನಿಯಾ, ಸಹಸಾರ್, ಖಗಾ ರಿಯಾ ಮತ್ತು ಸುಪೌಲ್ ಜಿಲ್ಲೆಗಳನ್ನು ಒಳಗೊಂಡ 'ಮಖಾನಾ' ಬೆಳೆವ ಪ್ರದೇಶಗಳಲ್ಲಿನ ವಿಧಾನಸಭಾ ಕ್ಷೇತ್ರಗಳಲ್ಲಿ ಎನ್‌ಡಿಎ ಅಭ್ಯರ್ಥಿಗಳಿಗೆ ಬಹಳ ಅನುಕೂಲವಾಗಿದೆ ಎಂದೇ ವಿಶ್ಲೇಷಿಸಲಾಗುತ್ತಿದೆ. ಮೀನುಗಾರ ಸಮುದಾಯದ 5 ಲಕ್ಷಕ್ಕೂ ಹೆಚ್ಚು ಕುಟುಂಬಗಳಿಗೆ ಮಖಾನಾ ಉತ್ಪಾದನೆ ದೊಡ್ಡ ಆದಾಯ ತಂದುಕೊಡುವ ಉದ್ಯಮವಾಗಿದೆ. ಮಖಾನಾ ಮಂಡಳಿ ಸ್ಥಾಪನೆಯಾಗುವುದು ಈ ಪ್ರದೇಶದ ಜನರಿಗೆ ಬಹಳ ಮುಖ್ಯವಾಗಿದೆ. ಹಾಗಾಗಿಯೇ ಅವರೆಲ್ಲರೂ ಎನ್‌ಡಿಎಯನ್ನು ಚುನಾವಣೆಯಲ್ಲಿ ಬೆಂಬಲಿಸಿದ್ದಾರೆ ಎನ್ನಲಾಗಿದೆ.

ಜಮ್ಮು ಸ್ಫೋಟ: ಮೃತರ ಕುಟುಂಬಕ್ಕೆ ಪರಿಹಾರ

ಜಮ್ಮು-ಕಾಶ್ಮೀರ: ಕೇಂದ್ರಾಡಳಿತ ಪ್ರದೇಶ ಜಮ್ಮು ಮತ್ತು ಕಾಶ್ಮೀರದ ನೌಗಮ್ ಪೊಲೀಸ್ ಠಾಣೆಯಲ್ಲಿ ಸಂಭವಿಸಿದ ಆಕಸ್ಮಿಕ ಸ್ಫೋಟದಲ್ಲಿ ಮೃತಪಟ್ಟವರ ಕುಟುಂಬಕ್ಕೆ ರೂ. 10 ಲಕ್ಷ ರು. ಪರಿಹಾರವನ್ನು ಅಲ್ಲಿನ ಸರಕಾರ ಶನಿವಾರ ಘೋಷಿಸಿದೆ. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಮಾಹಿತಿ ನೀಡಿರುವ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ, ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಪರಿಹಾರ ನೀಡಲಾಗುವುದು. ತೀವ್ರವಾಗಿ ಗಾಯಗೊಂಡವರಿಗೆ ತಲಾ ರು. 1 ಲಕ್ಷ ಪರಿಹಾರ ನೀಡಲಾಗುವುದು ಎಂದು ತಿಳಿಸಿದ್ದಾರೆ. ಒಗ್ಗಟ್ಟಿನ ಮತ್ತು ತಕ್ಷಣದ ನೆರವಿನ ಸಂಕೇತವಾಗಿ, ಸರಕಾರ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಮೃತರ ಕುಟುಂಬ ಸದಸ್ಯರಿಗೆ ರು. 10 ಲಕ್ಷ ಹಾಗೂ ತೀವ್ರವಾಗಿ ಗಾಯಗೊಂಡವರಿಗೆ ರು. 1 ಲಕ್ಷ ಪರಿಹಾರವನ್ನು ಘೋಷಿಸಿದೆ ಎಂದು ಅವರು ಹೇಳಿದ್ದಾರೆ. ಜಮ್ಮು ಮತ್ತು ಕಾಶ್ಮೀರ ಆರೋಗ್ಯ ಸಚಿವೆ ಸಕೀನಾ ಇಟೂ ಅವರು ಆಕಸ್ಮಿಕ ಸ್ಫೋಟದಲ್ಲಿ ಮೃತಪಟ್ಟವರ ಕೆಲ ಕುಟುಂಬಗಳನ್ನು ಭೇಟಿಯಾಗಿದ್ದಾರೆ. ಆಸ್ಪತ್ರೆಗೆ ಭೇಟಿ ನೀಡಿ ಅವರು ಗಾಯಾಳುಗಳ ಬಗ್ಗೆ ವಿಚಾರಿಸಿದ್ದು, ಈ ದುಃಖದ ಸಮಯದಲ್ಲಿ ಸರಕಾರ ಸಂತ್ರಸ್ತ ಕುಟುಂಬಗಳೊಂದಿಗೆ ದೃಢವಾಗಿ ನಿಲ್ಲುತ್ತದೆ ಎಂದು ಭರವಸೆ ನೀಡಿರುವುದಾಗಿ ಪೋಸ್ಟ್‌ನಲ್ಲಿ ಹೇಳಿದ್ದಾರೆ.

{ ಆರ್.ಅಶೋಕ } ಪ್ರತಿಪಕ್ಷ ನಾಯಕ

ಬಿಹಾರದ ಚುನಾವಣೆಯಲ್ಲಿ ಗೆದ್ದಿದ್ದರೆ ಡಿಸಿಎಂ ಡಿ.ಕೆ.ಶಿವಕುಮಾರ್‌ಗೆ ಅವಕಾಶ ಬರುತ್ತಿತ್ತು. ಈಗ ಸಿಎಂ ಸಿದ್ದರಾಮಯ್ಯ ಬಲಿಷ್ಠವಾಗಿದ್ದಾರೆ. ರಾಹುಲ್ ಗಾಂಧಿಯ ಮಾತನ್ನು ಇನ್ನು ಯಾರೂ ಕೇಳುವುದಿಲ್ಲ. ಸಿದ್ದರಾಮಯ್ಯನವರ ಮಾತನ್ನು ರಾಹುಲ್ ಗಾಂಧಿ ಕೇಳಬೇಕಾಗುತ್ತದೆ.

ಜ್ಞಾನಭಾರತಿ ಕಲಾಗ್ರಾಮದಲ್ಲಿ ಸರಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ | ಸಚಿವರು ಸೇರಿದಂತೆ ಹಲವು ಗಣ್ಯರ ಭಾಗಿ

ಮಣ್ಣಲ್ಲಿ ಮಣ್ಣಾದ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ

ಬೆಂಗಳೂರು: ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಸಾಲುಮರದ ತಿಮ್ಮಕ್ಕ ಅವರ ಅಂತ್ಯಕ್ರಿಯೆ ಬೆಂಗಳೂರಿನ ಜ್ಞಾನಭಾರತಿ ಕಲಾಗ್ರಾಮದಲ್ಲಿ ಸಕಲ ಸರಕಾರಿ ಗೌರವಗಳೊಂದಿಗೆ ಶನಿವಾರ ನೆರವೇರಿತು. ಪುತ್ರ ಉಮೇಶ್ ಅವರು ಹಿಂದೂ ಸಂಪ್ರದಾಯದಂತೆ ವಿಧಿವಿಧಾನ ನೆರವೇರಿಸಿ ಅಂತಿಮ ಸಂಸ್ಕಾರ ನೆರವೇರಿಸಿದರು.

ಅಂತ್ಯಕ್ರಿಯೆಯ ವೇಳೆ ಮೂರು ಸುತ್ತು ಕುಶಾಲ ತೋಪು ಸಿಡಿಸುವ ಮೂಲಕ ಪೊಲೀಸರು ತಿಮ್ಮಕ್ಕ ಅವರಿಗೆ ವಿಶೇಷ ಗೌರವ ಸಲ್ಲಿಸಿದರು. ಶುಕ್ರವಾರ ತಿಮ್ಮಕ್ಕ ಅವರ ಹುಟ್ಟೂರು ಹಾಸನ ಜಿಲ್ಲೆಯಲ್ಲೂ ಅಂತಿಮ ದರ್ಶನದ ವ್ಯವಸ್ಥೆ ಮಾಡಲಾಗಿತ್ತು. ಬಳಿಕ ಶನಿವಾರ ಬೆಳಗ್ಗೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಸಾರ್ವಜನಿಕರಿಗೆ ಅಂತಿಮ ದರ್ಶನದ ವ್ಯವಸ್ಥೆ ಮಾಡಲಾಗಿತ್ತು.

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಸಚಿವ ವಿ.ಸೋಮಣ್ಣ ತಿಮ್ಮಕ್ಕ ಅವರು ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು. ಬಳಿಕ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಸಚಿವರಾದ ಎಚ್.ಸಿ.ಮಹದೇವಪ್ಪ, ಈಶ್ವರ್ ಖಂಡ್ರೆ, ಪ್ರತಿಪಕ್ಷ ನಾಯಕ ಆರ್.

ಸಾಲುಮರದ ತಿಮ್ಮಕ್ಕನವರಿಗೆ ರಾಜ್ಯ ಸರಕಾರದ ಸಚಿವರು ಅಂತಿಮ ಗೌರವ ಸಲ್ಲಿಸಿದರು.

ಅಶೋಕ, ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ನರೇಂದ್ರ ಸ್ವಾಮಿ ಸೇರಿದಂತೆ ಹಲವರು ಅಂತಿಮ ದರ್ಶನ ಪಡೆದರು.

ಮಕ್ಕಳಿಲ್ಲದ ನೋವನ್ನು ಮರೆಯಲು ಗಿಡಗಳನ್ನು ನೆಡುವ ಕಾಯಕ ಆರಂಭಿಸಿದ ತಿಮ್ಮಕ್ಕ, ಸಾವಿರಾರು ಗಿಡಗಳನ್ನು ನೆಡುವ ಮೂಲಕ ಸಮಾಜಕ್ಕೆ ಬಹು ದೊಡ್ಡ ಮಾದರಿಯಾದರು. ಜೀವನದುದ್ದಕ್ಕೂ ಗಿಡಗಳನ್ನು ನೆಡುತ್ತಲೇ ಮಕ್ಕಳಂತೆ ಪ್ರೀತಿಸಿದ್ದರು. 114 ವರ್ಷ ಪರಿಸರದ ಜತೆಗೆ ತುಂಬು ಜೀವನ ನಡೆಸಿದ್ದರು. ಕಳೆದ ಒಂದು ತಿಂಗಳಿಂದ ವಯೋಸಹಜ ಸಮಸ್ಯೆಯಿಂದ ಬಳಲುತ್ತಿದ್ದ ಅವರು, ನ.14 ರಂದು ಇಹಲೋಕ ತ್ಯಜಿಸಿದ್ದರು.

ಅಪಾರವಾದ ನಷ್ಟ: ಸುದ್ದಿಗಾರರೊಂದಿಗೆ ಮಾತನಾಡಿದ ಡಾ.ಜಿ.ಪರಮೇಶ್ವರ್, ಇಡೀ ನಾಡಿಗೆ ಹೊಸ ಆದರ್ಶ ರೂಪಿಸಿದ ಎಲ್ಲರ ಅಚ್ಚುಮೆಚ್ಚಿನ ತಾಯಿ ಪದ್ಮಶ್ರೀ ಸಾಲುಮರದ ತಿಮ್ಮಕ್ಕನವರು ನಮ್ಮನ್ನು ಅಗಲಿರುವುದು ನೋವಾಗಿದೆ. ತಿಮ್ಮಕ್ಕನವರ ಅಗಲಿಕೆಯು ವೈಯಕ್ತಿಕವಾಗಿ ನನಗೆ ಅಪಾರವಾದ ನಷ್ಟವಾಗಿದೆ. ಅವರು ನನಗೆ ಹಾಗೂ ನಮ್ಮ ಕುಟುಂಬಕ್ಕೆ ಬಹಳ ಹತ್ತಿರವಾಗಿದ್ದವರು. ಬಹುಶಃ ಯಾರು ಕೂಡ ನಡೆಯದ ದಾರಿ ಸೃಷ್ಟಿ ಮಾಡಿ, ಪರಿಸರ ಸಂರಕ್ಷಣೆ ಮಾತನ್ನು, ಕೃತಿಯಲ್ಲಿ ಮಾಡಿ ತೋರಿಸಿದವರು. ಅತ್ಯಂತ ಬಡ ಕುಟುಂಬದಿಂದ ಬಂದಂತಹ ತಿಮ್ಮಕ್ಕ, ಮಕ್ಕಳಿಲ್ಲ ಎಂಬ ಕಾರಣಕ್ಕಾಗಿ ಗಿಡ ನೆಡುವ ಮೂಲಕ ಅವೇ ತನ್ನ ಮಕ್ಕಳೆಂದು ಸಾಕಿದರು ಎಂದು ನೆನೆದರು.

13 ಸಾವಿರ ಸಸಿ: ಖಂಡ್ರೆ

114 ವರ್ಷ ಜೀವಿಸಿದ್ದ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರ ಗೌರವಾರ್ಥ ರಾಜ್ಯದ 114 ಸ್ಥಳಗಳಲ್ಲಿ 13 ಸಾವಿರ ಸಸಿಗಳನ್ನು ನೆಟ್ಟು ಪೋಷಿಸಲಾಗುವುದು. ಮರಗಳನ್ನೇ ಮಕ್ಕಳಂತೆ ಮಮಕಾರದಿಂದ ಬೆಳೆಸಿ ವಿಶ್ವಕ್ಕೇ ವೃಕ್ಷಗಳ ಮಹತ್ವ ಸಾರಿದ ಸಾಲುಮರದ ತಿಮ್ಮಕ್ಕ ಅವರ ಹೆಸರಲ್ಲಿ ಸಸಿ ನೆಡುವ ಮೂಲಕ ಅರಣ್ಯ ಇಲಾಖೆ ಗೌರವ ಸಲ್ಲಿಸಲಿದೆ. ಇಲಾಖೆಯು ಅವರನ್ನು ಪರಿಸರ ರಾಯಭಾರಿಯಾಗಿ ಪುರಸ್ಕರಿಸಿತ್ತು. ಅಜ್ಜಿಯ ಪ್ರೇರಣೆಯಿಂದ ನೂರಾರು ಜನರು ತಮ್ಮ ಕೈಲಾದಷ್ಟು ಸಸಿ ನೆಟ್ಟು ಪೋಷಿಸುತ್ತಿದ್ದಾರೆ. ಲಕ್ಷಾಂತರ ಪರಿಸರ ಪ್ರೇಮಿಗಳಿಗೆ ಪ್ರೇರಣೆಯಾಗಿದ್ದ ತಿಮ್ಮಕ್ಕ ಅವರ ನಿಧನದಿಂದ ರಾಜ್ಯ ನಿಷ್ಠಾವಂತ ಪರಿಸರ ಕಾಳಜಿಯ ಮಹಾಜೀವಿಯನ್ನು ಕಳೆದುಕೊಂಡಿದೆ. ಸಾಲುಮರದ ತಿಮ್ಮಕ್ಕ ಅವರ ಹೆಸರಿನಲ್ಲಿ ಪ್ರಶಸ್ತಿ ನೀಡಲಾಗುವುದು ಎಂದು ಸಚಿವ ಖಂಡ್ರೆ ತಿಳಿಸಿದರು.

ಸ್ವಚ್ಛತಾ ಕಾರ್ಯ ಪರಿಶೀಲಿಸಿದ ಕೇಂದ್ರ ಪಾಲಿಕೆ ಆಯುಕ್ತರು

ಪೌರಕಾರ್ಮಿಕರ ಕಾರ್ಯ ಶ್ಲಾಘನೀಯ

ಬೆಂಗಳೂರು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಬೃಹತ್ ಸ್ವಚ್ಛತಾ ಕಾರ್ಯವನ್ನು ಪರಿಶೀಲಿಸಿದರು.

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಪೌರಕಾರ್ಮಿಕರಿಗೆ ಶೌಚಾಲಯ, ಡ್ರೆಸಿಂಗ್ ರೂಂ, ಆಶ್ರಯ ತಾಣ ಹಾಗೂ ಅಗತ್ಯ ಪರಿಕರಗಳನ್ನು ಒದಗಿಸಬೇಕು ಎಂದು ಅಧಿಕಾರಿಗಳಿಗೆ ಬೆಂಗಳೂರು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಸೂಚನೆ ನೀಡಿದರು.

ಕೇಂದ್ರ ನಗರ ಪಾಲಿಕೆಯ ವ್ಯಾಪ್ತಿಯ ಶಾಂತಿನಗರ, ಸಿ.ವಿ. ರಾಮನ್ ನಗರ, ಚಾಮರಾಜಪೇಟೆ, ಚಿಕ್ಕಪೇಟೆ, ಶಿವಾಜಿನಗರ, ಗಾಂಧಿನಗರ 6 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಹಮ್ಮಿಕೊಂಡ ಬೃಹತ್ ಸ್ವಚ್ಛತಾ ಕಾರ್ಯವನ್ನು ಪರಿಶೀಲನೆ ನಡೆಸಿದರು.

ಚಿಕ್ಕಪೇಟೆ ವಿಭಾಗದ ಆರ್.ವಿ. ರಸ್ತೆ, ಲಾಲ್‌ಬಾಗ್ ರಸ್ತೆಯಲ್ಲಿನ ಪರಿಶೀಲನೆ ವೇಳೆ ಸ್ವಚ್ಛತಾ ಕಾರ್ಯದಲ್ಲಿ ನಿರತರಾಗಿದ್ದ ಪೌರಕಾರ್ಮಿಕರೊಂದಿಗೆ ಚರ್ಚೆ ನಡೆಸಿ, ಅವರ ಸಮಸ್ಯೆಗಳನ್ನು ಆಲಿಸಿದರು ಹಾಗೂ ಅವರೊಂದಿಗೆ ಟೀ ಕುಡಿದರು.

ಈ ಸಂದರ್ಭದಲ್ಲಿ ಮಾತನಾಡಿ, ಪೌರಕಾರ್ಮಿಕರಿಗೆ ಮಳೆಗಾಲದ ಸಂದರ್ಭದಲ್ಲಿ ಆಶ್ರಯಕ್ಕಾಗಿ ಆಶ್ರಯ ತಾಣ, ಡ್ರೆಸಿಂಗ್ ರೂಂ, ಶೌಚಾಲಯಗಳ ವ್ಯವಸ್ಥೆ ಹಾಗೂ ಅಗತ್ಯ ಪರಿಕರ, ಸಕಾಲಕ್ಕೆ ವೇತನ ಪಾವತಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿದರು.

ಟ್ರಾವೆಲ್ಸ್‌ನವರಿಗೆ ದಂಡ ವಿಧಿಸಿ: ಗಾಂಧಿನಗರದಲ್ಲಿ ನಡೆಯುತ್ತಿರುವ ಸ್ವಚ್ಛತಾ ಕಾರ್ಯ ಪರಿಶೀಲನೆಯ ವೇಳೆ ಸುಮಾರು ಹೊತ್ತಿನಿಂದ ರಸ್ತೆಯಲ್ಲಿ ನಿಲ್ಲಿಸಲಾಗಿದ್ದ ಟ್ರಾವೆಲ್ಸ್‌ನ್ನು ಗಮನಿಸಿ, ಸಂಚಾರಕ್ಕೆ ಅಡಚಣೆಯಾಗುತ್ತಿರು ವುದರ ಜತೆಗೆ ಟ್ರಾವೆಲ್ಸ್ ಸಂಸ್ಥೆಯ ಕಚೇರಿಯವ ರಿಂದ ರಸ್ತೆಯಲ್ಲಿ ನೈರ್ಮಲ್ಯ ಹಾಳಾಗಿದ್ದು, ಸದರಿ ಏಜನ್ಸಿಯವರಿಗೆ ದಂಡ ವಿಧಿಸಲು ಸೂಚಿಸಿದರು.

ಗಾಂಧಿನಗರ ಪರಿಶೀಲನೆ ವೇಳೆ ಮಾತನಾಡಿದ ಆಯುಕ್ತರು, ಸಾಮೂಹಿಕ ಸ್ವಚ್ಛತಾ ಕಾರ್ಯವು ಅತ್ಯಂತ ಯಶಸ್ವಿಯಾಗಿದ್ದು, ಸ್ವಚ್ಛತೆ ಕಾರ್ಯದಲ್ಲಿ ಭಾಗಿಯಾದ ಎಲ್ಲರ ಕಾರ್ಯ ಶ್ಲಾಘಿಸಿದರು. 15 ದಿನಕ್ಕೊಮ್ಮೆ ಸ್ವಚ್ಛತಾ ಕಾರ್ಯ ನಡೆಸಿದಲ್ಲಿ ನಗರವನ್ನು ಸ್ವಚ್ಛ, ಸುಂದರ ಮತ್ತು ನೈರ್ಮಲ್ಯ, ಹಾಗೂ ಆರೋಗ್ಯಕರ ನಗರ ನಿರ್ಮಾಣಕ್ಕೆ ಕಾರ್ಯಪ್ರವೃತ್ತರಾಗಲು ಅಧಿ ಕಾರಿಗಳಿಗೆ ಮತ್ತು ಸಿಬ್ಬಂದಿಗೆ ಸೂಚಿಸಿದರು. ಈ ವೇಳೆ ಮುಖ್ಯ ಅಭಿಯಂತರರಾದ ವಿಜಯ್ ಕುಮಾರ್ ಹರಿದಾಸ್, ಅಧೀಕ್ಷಕ ಅಭಿಯಂತ ರರು, ಡಿಜಿಎಂಗಳು, ಎ.ಜಿಎಂಗಳು, ಕಾರ್ಯ ಪಾಲಕ ಅಭಿಯಂತರರು, ಅರಣ್ಯ, ತೋಟ ಗಾರಿಕೆ, ಆರೋಗ್ಯ ವಿಭಾಗ ಸೇರಿದಂತೆ ಮತ್ತಿತರ ಅಧಿಕಾರಿಗಳು ಇದ್ದರು.

ತಮಿಳರು ಜಾಗೃತರಾಗಿರಿ: ಕಮಲ್ ಎಚ್ಚರಿಕೆ

ಚೆನ್ನೈ: ಬಿಹಾರದಲ್ಲಿನ ಎನ್‌ಡಿಎ ಮೈತ್ರಿಕೂಟದ ಐತಿಹಾಸಿಕ ಗೆಲುವಿಗೆ ಪ್ರತಿಕ್ರಿಯಿಸಿದ ಮಕ್ಕಳ್ ನಿಧಿ ಮಯ್ಯಮ್ (ಎಂಎನ್‌ಎಂ) ಮುಖ್ಯಸ್ಥ ಕಮಲ್ ಹಾಸನ್, 'ನಮ್ಮ ರಾಜ್ಯದ ವಿಧಾನಸಭಾ ಚುನಾವಣೆಗೆ ಕೆಲವೇ ತಿಂಗಳು ಮಾತ್ರ ಬಾಕಿ ಇದೆ. ನಾವು ಜಾಗರೂಕರಾಗಿರಬೇಕು, ತಮಿಳುನಾಡು ಜಾಗರೂಕರಾಗಿರಬೇಕು ಎಂದು ನಾನು ಹೇಳಬಲ್ಲೆ ಅಷ್ಟೆ' ಎಂದು ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ. ಬಿಹಾರದ ಎನ್‌ಡಿಎ ಜಯ ನಿಜವಾದ ನೈತಿಕ ಗೆಲುವಲ್ಲ, ಭಾರತೀಯ ಚುನಾವಣಾ ಆಯೋಗವನ್ನು ಬಿಜೆಪಿ ದುರುಪಯೋಗ ಪಡಿಸುತ್ತಿದೆ ಎಂದರು.

ಪ್ರೆಸ್‌ಕ್ಲಬ್‌ನಲ್ಲಿ ವಿಜಯಾನಂದ ಕಾಶಪ್ಪನವರ್ ಮಾಧ್ಯಮ ಸಂವಾದ

ಸಮಾಜದ ದಾರಿ ತಪ್ಪಿಸುತ್ತಿರುವ ಕಾವಿಧಾರಿಗಳು

ಬೆಂಗಳೂರು: ವರ್ಗ, ವರ್ಣರಹಿತ ಸಮಾಜ ನಿರ್ಮಾಣ ಮಾಡಿದವರು ವಿಶ್ವಗುರು ಬಸವಣ್ಣ, ಆದರೆ ಈಗ ಕೆಲವು ಕಾವಿಧಾರಿಗಳು ಸಮಾಜದ ದಾರಿ ತಪ್ಪಿಸುತ್ತಿದ್ದಾರೆ ಎಂದು ಶಾಸಕ ವಿಜಯಾನಂದ್ ಎಸ್. ಕಾಶಪ್ಪನವರ್ ಅಭಿಪ್ರಾಯಪಟ್ಟರು.

ಬೆಂಗಳೂರು ಪ್ರೆಸ್‌ಕ್ಲಬ್‌ನಲ್ಲಿ ನಡೆದ ಮಾಧ್ಯಮ ಸಂವಾದದಲ್ಲಿ ಮಾತನಾಡಿದ ಅವರು, ರಾಜಕೀಯ ಜೀವನದಲ್ಲಿ ಹೇಗೆ ಇರಬೇಕು ಎಂಬ ಮಾರ್ಗದರ್ಶನವನ್ನು ಮಾಜಿ ಮುಖ್ಯಮಂತ್ರಿ ಧರ್ಮಸಿಂಗ್ ರವರು ನನಗೆ ನೀಡಿದ್ದು, ರಾಜಕೀಯದಲ್ಲಿ ಸೋಲು-ಗೆಲುವು ಕಂಡಿದ್ದೇನೆ. ರೈತ ಮತ್ತು ನೇಕಾರ ಎರಡು ಕಣ್ಣುಗಳು ಇದ್ದಂತೆ ಎಂದರು.

ರಾಜಕೀಯ ಹಿನ್ನೆಲೆ ಇರುವ ಕುಟುಂಬ ನಮ್ಮದು. ನಮ್ಮ ತಂದೆಯವರು ಕೃಷಿ ಸಹಕಾರ ಪತ್ತಿನ ಸಹಕಾರ ಸಂಘ ಮತ್ತು 1979ರಲ್ಲಿ ತಾಲೂಕ ಬೋರ್ಡ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಮೂರು ಬಾರಿ ಶಾಸಕರಾದ ತಂದೆಯವರು, ಮುಖ್ಯಮಂತ್ರಿ ಎಸ್.ಎಂ.ಕೃಷ್ಣರವರ ಸಚಿವ ಸಂಪುಟದಲ್ಲಿ ಮಂತ್ರಿಯಾಗಿ ಸೇವೆ ಸಲ್ಲಿಸಿದರು.

ಹುನಗುಂದ ಮತಕ್ಷೇತ್ರಕ್ಕೆ ಹನಿ ನೀರಾವರಿ, ವಿವಿಧ ಅಭಿವೃದ್ಧಿ ಕ್ಷೇತ್ರದ ಅಭಿವೃದ್ಧಿ ಸಾವಿರಾರು ಕೋಟಿ ಅನುದಾನ ನೀಡಲಾಗಿದೆ. ಕೊಡಲ ಸಂಗಮ ಬಸವಣ್ಣನವರ ಕ್ಷೇತ್ರ ಅಭಿವೃದ್ಧಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯರವರು ನೂರಾರು ಕೋಟಿ ಅನುದಾನ ನೀಡಿದ್ದಾರೆ. ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯರವರು, ಉಪಮುಖ್ಯಮಂತ್ರಿಗಳಾದ ಡಿ.ಕೆ.

ಪ್ರೆಸ್‌ಕ್ಲಬ್‌ನಲ್ಲಿ ನಡೆದ ಮಾಧ್ಯಮ ಸಂವಾದದಲ್ಲಿ ವಿಜಯಾನಂದ ಕಾಶಪ್ಪನವರ್ ಮಾತನಾಡುತ್ತಿರುವುದು.

ಶಿವಕುಮಾರ್‌ರವರ ನೇತೃತ್ವದಲ್ಲಿ 5 ಗ್ಯಾರಂಟಿ ಯೋಜನೆಗಳನ್ನು ಪ್ರತಿ ಹಳ್ಳಿಗಳಿಗೆ ತಲುಪಿಸಲಾಗಿದೆ. ಬಸವ ಬೆಳಕು ವಿದ್ಯಾರ್ಥಿಗಳಿಗೆ ಸಾಲಸೌಲಭ್ಯ ಯೋಜನೆ ವಿದೇಶದಲ್ಲಿ ವಿದ್ಯಾಭ್ಯಾಸ ಮಾಡುವವರಿಗೆ ವಿದೇಶ ವಿದ್ಯಾವಿಕಾಸ, ರೈತರಿಗೆ ಜಮೀನಿಗೆ ನೀರಾವರಿ ಸೌಲಭ್ಯಕ್ಕೆ ಆರ್ಥಿಕ ನೆರವು ನೀಡಲು ಜೀವಜಲ ಯೋಜನೆ ಮತ್ತು ಕಾಯಕ ಕಿರಣ, ವಿಭೂತಿ ನಿರ್ಮಾಣ ಘಟಕ, ಭೋಜನಾಲಯ, ಸ್ವಾವಲಂಬ ಸಾರಥಿ, ಸ್ವಯಂ ಉದ್ಯೋಗ ಸಾಲ ಯೋಜನೆ, ಸ್ವಾತಂತ್ರ್ಯ ಅಮೃತ್ ಮಹೋತ್ಸವ ಮುನ್ನಡೆ, ಸ್ವಸಹಾಯ ಸಂಘಗಳಿಗೆ ಆಹಾರವಾಹಿನಿ ಯೋಜನೆಗಳನ್ನು ಅನುಷ್ಠಾನಕ್ಕೆ ತರಲಾಗಿದೆ. ಭ್ರಷ್ಟಚಾರಕ್ಕೆ ಕಡಿವಾಣ ಹಾಕಲಾಗಿದೆ, ಶಾಸಕರ ಶಿಫಾರಸ್ಸಿನ ಮೇಲೆ ಅರ್ಹ ಫಲಾನುಭವಿಗಳಿನ್ನು ಗುರುತಿಸಲಾಗುತ್ತದೆ. ಈ ಎಲ್ಲ ಯೋಜನೆಗಳು ವೀರಶೈವ ಲಿಂಗಾಯಿತ ಸಮುದಾಯದ ಅಭಿವೃದ್ಧಿಗೆ ಸಹಕಾರಿಯಾಗಿದೆ ಎಂದು ಹೇಳಿದರು.

ಮಾಧ್ಯಮ ಸಂವಾದಲ್ಲಿ ಪ್ರೆಸ್ ಕ್ಲಬ್ ಅಧ್ಯಕ್ಷರಾದ ಆರ್. ಶ್ರೀಧರ್, ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಬೆಳ್ಳಿತಟ್ಟೆ, ಕಾರ್ಯದರ್ಶಿ ಮಂಜುನಾಥ್, ಖಜಾಂಚಿ ಶರಣಬಸಪ್ಪ, ಹಿರಿಯ ಪತ್ರಕರ್ತರಾದ ಯಾಸಿರ್, ವೀರಶೈವ-ಲಿಂಗಾಯಿತ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಹಡಗಲಿ ಅರುಣ್ ಕುಮಾರ್ ಉಪಸ್ಥಿತರಿದ್ದರು.

ಮತಚೋರಿ: ಯುವ ಕಾಂಗ್ರೆಸ್ ಪ್ರತಿಭಟನೆ

ಬೆಂಗಳೂರು: ರಾಜ್ಯ ಕಾಂಗ್ರೆಸ್ ನಾಯಕರು ಫ್ರೀಡಂ ಪಾರ್ಕ್‌ನಲ್ಲಿ ಮತ ಚೋರಿ ವಿರುದ್ಧ ಪ್ರತಿಭಟನೆ ನಡೆಸಿದರು. ರಾಜ್ಯ ಯೂತ್ ಕಾಂಗ್ರೆಸ್‌ನಿಂದ ಆಯೋಜಿದ್ದ ಪ್ರತಿಭಟನೆಯಲ್ಲಿ ಸಚಿವ ಸಂತೋಷ್ ಲಾಡ್, ರಾಜ್ಯಸಭೆ ಸದಸ್ಯ ಜಿ.ಸಿ. ಚಂದ್ರಶೇಖರ್, ಮೇಲ್ಮನೆ ಸಚೇತಕ ಸಲೀಂ ಅಹ್ಮದ್, ಎಐಸಿಸಿ ಯೂತ್ ಅಧ್ಯಕ್ಷ ಉದಯ್ ಬಾನು, ರಾಜ್ಯ ಯೂತ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್ ಸೇರಿ ಹಲವು ನಾಯಕರು ಭಾಗಿಯಾಗಿದ್ದರು.

ಈ ವೇಳೆ ಮಾತನಾಡಿದ ಸಚಿವ ಸಂತೋಷ್ ಲಾಡ್, ಪ್ರತಿಭಟನೆ ಬಿಹಾರ ಚುನಾವಣೆ ಸೋತಿದ್ದಕ್ಕಲ್ಲ. ಏಕೆ ಸೋತೆವು ಅಂತ ತೋರಿಸುವ ಪ್ರಯತ್ನ ಇದಾಗಿದೆ. ದೊಡ್ಡ ಪ್ರಮಾಣದಲ್ಲಿ ವೋಟರ್ ಲಿಸ್ಟ್ ಬದಲಾವಣೆ ಆಗಿದೆ. ಈ ಬಗ್ಗೆ ರಾಹುಲ್ ದೇಶದ ಗಮನ ಸೆಳೆದಿದ್ದರು. ಚುನಾವಣಾ ಆಯೋಗ ಆಯುಕ್ತ ಜ್ಞಾನೇಶ್ ಕುಮಾರ್ ಬಂದು ಐದಾರು ತಿಂಗಳಾಯ್ತು. ಬಿಹಾರ, ಮಹಾರಾಷ್ಟ್ರ, ಹರ್ಯಾಣದಲ್ಲಿ ಮತಪಟ್ಟಿ ಬದಲಾವಣೆ ಮಾಡಿದರು. ನಾವು ದೇಶದ ಜನರಿಗೆ ಮಾಹಿತಿ ಕೊಡುವ ಪ್ರಯತ್ನ ಮಾಡುತ್ತಿದ್ದೇವೆ ಎಂದು ದೂರಿದರು.

ಹರಿಯಾಣದಲ್ಲಿ 25 ಲಕ್ಷ ವೋಟ್ ಹೆಚ್ಚಾಗಿದೆ. ಮಹಾರಾಷ್ಟ್ರದಲ್ಲಿ 45 ಲಕ್ಷ ವೋಟ್ ಹೆಚ್ಚಾಗಿದೆ. ಪಾರ್ಲಿಮೆಂಟ್ ಚುನಾವಣೆ ನಡೆದು ಕಡಿಮೆ ಅವಧಿ, ಅಷ್ಟರೊಳಗೆ ಇಷ್ಟು ಮತದಾರರ ಸಂಖ್ಯೆ ಹೇಗೆ ಹೆಚ್ಚಾಯ್ತು?. 101 ಸೀಟು ಬಿಜೆಪಿ ಸ್ಪರ್ಧಿಸಿತ್ತು. 101 ಕ್ಷೇತ್ರಗಳಲ್ಲಿ ಜೆಡಿಯು ಸ್ಪರ್ಧೆ ಮಾಡುತ್ತದೆ. ಶೇ.90 ರಷ್ಟು ಸ್ಟ್ರೈಕ್ ರೇಟ್ ಬರುತ್ತೆ ಅಂದರೆ ಹೇಗೆ?. ಇದರಲ್ಲಿ ಅನುಮಾನ ಬರುತ್ತೋ ಇಲ್ವೋ ಹೇಳಿ ಎಂದು ಆಕ್ರೋಶ ಹೊರಹಾಕಿದರು.

ದಾವೂದ್ ಮಾದಕ ಲೋಕ: ನಟಿ ಶ್ರದ್ಧಾ, ನೋರಾ ಹೆಸರು

ಮುಂಬೈ: ಬಾಲಿವುಡ್‌ನ ಖಳ ಪಾತ್ರಧಾರಿಯಾಗಿ ಹೆಸರು ಮಾಡಿದ್ದ ಶಕ್ತಿಕಪೂರ್ ಅವರ ಪುತ್ರಿ, ಅರಳು ಪ್ರತಿಭೆ ಶ್ರದ್ಧಾ ಕಪೂರ್ ಹೆಸರು ಡ್ರಗ್ಸ್ ಪಾರ್ಟಿಗಳಲ್ಲಿ ಭಾಗಿಯಾಗಿದ್ದವರ ಹೆಸರಿನ ಜತೆ ತಳಕು ಹಾಕಿಕೊಂಡಿದೆ. ಭೂಗತ ಪಾತಕಿ ದಾವೂದ್ ಇಬ್ರಾಹಿಂ ಜತೆ ಸಂಬಂಧ ಹೊಂದಿದ 252 ಕೋಟಿ ರು.ಗಳ ಮಾದಕವಸ್ತು ಕಳ್ಳಸಾಗಣೆ ಜಾಲದ ಆರೋಪಿ ಮೊಹಮ್ಮದ್ ಸಲೀಂ, 'ತಾನು ಆಯೋಜಿಸುತ್ತಿದ್ದ ಮಾದಕ ದ್ರವ್ಯ ಬಳಸುತ್ತಿದ್ದ ಪಾರ್ಟಿಗಳಲ್ಲಿ ಬಾಲಿವುಡ್ ನಟಿಯರಾದ ಶ್ರದ್ಧಾ ಕಪೂರ್ ಮತ್ತು ನೋರಾ ಫತೇಹಿ ಮತ್ತಿತರರು ಭಾಗಿಯಾಗುತ್ತಿದ್ದರು ಎಂದು ತನಿಖೆ ವೇಳೆ ಪೊಲೀಸರಿಗೆ ಮಾಹಿತಿ ನೀಡಿದ್ದಾನೆ ಎಂದು ವರದಿಯಾಗಿದೆ.

ಇತರೆ ಸೆಲೆಬ್ರಿಟಿಗಳಾದ ಓರಿರ್, ಅಬ್ಬಾಸ್ ಮಸ್ತಾನ್, ಜೀಶನ್ ಸಿದ್ದಿಕಿ ಹಾಗೂ ನಟಿ ಶ್ರದ್ಧಾ ಕಪೂರ್ ಅವರ ಸಹೋದರ ಸಿದ್ಧಾಂತ್ ಕಪೂರ್ ಹೆಸರೂ ಈ ಡ್ರಗ್ಸ್ ಪಾರ್ಟಿಗಳಲ್ಲಿ ಭಾಗಿಯಾಗಿದ್ದವರ ಪಟ್ಟಿಯಲ್ಲಿ ಕಾಣಿಸಿಕೊಂಡಿದೆ. ಇವರೆಲ್ಲರಿಗೂ ತನಿಖಾಧಿಕಾರಿಗಳು ನೋಟಿಸ್ ನೀಡಿ ವಿಚಾರಣೆಗೆ ಹಾಜರಾಗಲು ಸೂಚಿಸಿದ್ದಾರೆ ಎನ್ನಲಾಗಿದೆ.

ಈ ಸಲ ಮಳೆಯಿಂದ ಜೋಳದ ಗುಣಮಟ್ಟ ಹಾಳು | ಮೆಕ್ಕೆಜೋಳ ಶೇ.40 ಇಳುವರಿ ಕುಸಿತ

ಜೋಳದ ಬೆಳೆ ಕುಸಿತ: ಸಂಕಷ್ಟದಲ್ಲಿ ರೈತರು

ಹೂವಪ್ಪ. ಐ. ಹೆಚ್ ಬೆಂಗಳೂರು

ಪ್ರಸಕ್ತ ವರ್ಷದಲ್ಲಿ ತೀವ್ರವಾಗಿ ಮಳೆ ಸುರಿದ ಹಿನ್ನೆಲೆ ಯಲ್ಲಿ ಮೆಕ್ಕೆಜೋಳ ಬೆಳೆಯ ಇಳುವರಿ ಕುಸಿದಿದ್ದು, ಗುಣಮಟ್ಟ ಕಳೆದುಕೊಂಡಿದೆ, ಜತೆಗೆ ಬೆಲ ಪಡೆಯುವಲ್ಲಿಯೂ ರೈತರು ನಷ್ಟಕ್ಕೀಡಾಗುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಕೃಷಿ ಇಲಾಖೆ ಮತ್ತು ಸರಕಾರವು ರೈತರ ನೆರವಿಗೆ ನಿಲ್ಲುವ ಮೂಲಕ ನಿರಂತರವಾಗಿ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವವರನ್ನು ಮೇಲೆತ್ತಬೇಕು ಎಂದು ರೈತ ಸಮುದಾಯ ನಿರೀಕ್ಷಿಸುತ್ತಿವೆ.

ಹೆಚ್ಚು ಮೆಕ್ಕೆಜೋಳ ಬೆಳೆಯುವ ದಾವಣಗೆರೆ, ಚಿತ್ರದುರ್ಗ, ಹಾವೇರಿ ಸೇರಿದಂತೆ ಹಲವೆಡೆ ರೈತರು ಈ ಬಾರಿ ಒಳ್ಳೆಯ ಫಸಲಿನ ನಿರೀಕ್ಷೆಯಲ್ಲಿ ಉತ್ತಮ ಆದಾಯ ಬರುತ್ತದೆ, ಸಾಲ-ಸೋಲ ತೀರಿಸಿಕೊಂಡು ನೆಮ್ಮದಿಯಿಂದಿರಬಹುದು ಎಂಬ ಕನಸು ಕಟ್ಟಿಕೊಂಡಿದ್ದರು, ಆದರೆ ಮಳೆಯ ಕಣ್ಣಾಮುಚ್ಚಾಲೆ ಆಟಕ್ಕೆ ಈ ಬಾರಿಯೂ ಮೆಕ್ಕೆಜೋಳ ಬೆಳೆದಿದ್ದ ರೈತರು ಇಳುವರಿ ಕುಸಿತದಿಂದ ನಷ್ಟ ಅನುಭವಿಸುವ ಎಲ್ಲಾ ಲಕ್ಷಣಗಳೂ ಕಂಡುಬರುತ್ತಿವೆ. ಇದೀಗ ಆರ್ಥಿಕವಾಗಿ ನೆಲಕಚ್ಚಿರುವ ತಮ್ಮನ್ನು ಮೇಲೆತ್ತುವವರು ಯಾರು ಎನ್ನುವ ಆತಂಕ ರೈತರಿಗೆ ಶುರುವಾಗಿದೆ.

'ಈ ವರ್ಷಾರಂಭದಲ್ಲಿ ಉತ್ತಮ ಇಳುವರಿಯ ನಿರೀಕ್ಷೆ ಇಟ್ಟುಕೊಂಡಿದ್ದೆವು, ಅಲ್ಲದೆ ಆರ್ಥಿಕವಾಗಿ ಈ ಬಾರಿ ಲಾಭಗಳಿಸುವ ಆಶಾಭಾವನೆಯಲ್ಲಿದ್ದೆವು, ಆದರೆ ಯೂರಿಯಾ ರಸಗೊಬ್ಬರದ ಪೂರೈಕೆಯಿಲ್ಲದೆ ಅಭಾವ ಸೃಷ್ಟಿಯಾಗಿತ್ತೋ, ಆಗಿನಿಂದಲೇ ರೈತರ ಅದೃಷ್ಟ ಕೈ ಕೊಟ್ಟಿತ್ತು. ಹೇಗೋ ಕಷ್ಟಪಟ್ಟು ಗೊಬ್ಬರ ತಂದು ಹಾಕಿದ ನಂತರ ಬೆಳೆ ಹುಲುಸಾಗಿ ಬೆಳೆಯಿತು, ನಂತರ ಮಳೆ ಕೊಟ್ಟು ಕೈಗೆ ಬಂದ ತುತ್ತು ಬಾಯಿಗೆ ಬಾರದಂತಾಗಿದೆ' ಎನ್ನುತ್ತಾರೆ ಬಸವಪಟ್ಟಣ ರೈತ ಶ್ರೀಕಾಂತ.

ಮಧ್ಯದಲ್ಲಿ ಕೈಕೊಟ್ಟ ಮಳೆ: ತೆನೆಗಟ್ಟುವ ಸಮಯದಲ್ಲಿ ಸರಿಸುಮಾರು 20ರಿಂದ 30 ದಿನ

ಗಳ ಕಾಲ ಮಳೆ ಕಾಣದಂತೆ ಮಾಯವಾಗಿದ್ದರಿಂದ ಸಮರ್ಪಕ ನೀರಿನ ಪೂರೈಕೆ ಇಲ್ಲದೆ ತೆನೆ ಕಾಳುಗಟ್ಟುವ ಪ್ರಕ್ರಿಯೆ ಮೆಕ್ಕೆಜೋಳ ಬೆಳೆಯಲ್ಲಿ ಕುಂಠಿತವಾಗಿದೆ. ಬೆಳೆ ಹುಲುಸಾಗಿ ಬೆಳೆದಿದ್ದರೂ ತೆನೆಗಳು ಸರಿಯಾಗಿ ಕಾಳುಗಟ್ಟದೇ ಸಣ್ಣಗೆ ಬೆಳೆದಿವೆ. ತೆನೆಯ ಆರಂಭ ದಿಂದ ತುದಿಯವರೆಗೂ ಕಾಳುಗಟ್ಟಿಲ್ಲ, ತೆನೆಗಳ ತೂಕ ಕಡಿಮೆಯಾಗಿದ್ದು ಇಳುವರಿ ಕುಂಠಿತವಾಗಿದೆ, ಹೆಚ್ಚಿನ ಬೆಲೆಯೂ ಸಿಗುತ್ತಿಲ್ಲ ಎಂದು ರೈತರೂ ಅಲವತ್ತುಕೊಳ್ಳುತ್ತಾರೆ. ದಾವಣಗೆರೆ ಜಿಲ್ಲೆ (ಜಗಳೂರು ತಾಲೂಕು) ಅತಿಹೆಚ್ಚು ಮೆಕ್ಕೆಜೋಳ ಆಶ್ರಿತ ಪ್ರದೇಶವಾಗಿದ್ದು ಹಾವೇರಿ, ಧಾರವಾಡ, ಬಾಗಲಕೋಟೆಯು ನಂತರದ ಜಿಲ್ಲೆಗಳಾಗಿವೆ.

ಈ ವರ್ಷ ಬೆಳೆದಿರುವ ಮೆಕ್ಕೆಜೋಳ ಬೆಳೆಯಲ್ಲಿ ಶೇ.40ಕ್ಕೂ ಅಧಿಕವಾಗಿ ಸಣ್ಣ ಮತ್ತು ಜೊಳ್ಳು ಕಾಳು ಗಳೇ ತುಂಬಿವೆ. ಬೆಳೆ ಹುಲುಸಾಗಿ ಬೆಳೆದಿದ್ದರೂ ಸಕಾಲಿಕ ಮಳೆ ಇಲ್ಲದೆ ನಂತರ ಭಾರೀ ಮಳೆಗೆ ಕಾಳು ಸಂಪೂರ್ಣ ತೆನೆಗಟ್ಟಿಲ್ಲ. ತೆನೆಯ ಅರ್ಧಭಾಗದಲ್ಲಿ ಮಾತ್ರ ಕಾಳುಗಟ್ಟಿದ್ದು, ಅವೂ ಕೂಡ ಸಣ್ಣದಾಗಿವೆ, ಬೆಂಡಾಗಿ ಹೋಗಿವೆ. ಕೆಲವು ಜಿಲ್ಲೆಗಳಲ್ಲಿ ಉತ್ತಮ ವಾಗಿರುವುದಾಗಿ ಕಂಡುಬಂದರೂ ಇಳುವರಿಯ ವಿಷಯದಲ್ಲಿ ಹೆಚ್ಚುಕಡಿಮೆ ಇದೇ ಪರಿಸ್ಥಿತಿ ಇದೆ. ಇದರಿಂದಾಗಿ ರೈತರು ಇಟ್ಟುಕೊಂಡಿದ್ದ ಲಾಭದ ನಿರೀಕ್ಷೆ ಬಹುತೇಕ ಹುಸಿಯಾಗಿದೆ.

ಬೆಳೆಯ ವೆಚ್ಚ ದುಬಾರಿ: ಬಿತ್ತನೆಬೀಜ, ರಸಗೊಬ್ಬರ, ಕೃಷಿ ಕೂಲಿ ಆಳುಗಳು ಸೇರಿದಂತೆ ಕೃಷಿ ಒಳಸುರಿಗಳ ಬೆಲೆ ದುಪ್ಪಟ್ಟಾದರೂ ಇಳುವರಿ ಇಲ್ಲದೆ, ಮಾರುಕಟ್ಟೆ ಬೆಲೆ ಏರಿಳಿತವಾಗುತ್ತಿರುವುದು ರೈತರಿಗೆ ಸಂಕಷ್ಟ ತಂದಿದೆ. ಬಿತ್ತನೆಬೀಜ, ರಸಗೊಬ್ಬರದ ಬೆಲೆ ಗಗನ ಕ್ಕೇರುತ್ತಿದೆ. ಐದಾರು ವರ್ಷಗಳ ಹಿಂದೆ ಐದು ಕೆ.ಜಿಗೆ ರು. 500ರಿಂದ 800 ರು. ರಷ್ಟಿದ್ದ ಉತ್ತಮ ಬಿತ್ತನೆ ಬೀಜದ ಬೆಲೆ ಇಂದು ನಾಲ್ಕು ಕೆ.ಜಿಗೆ 1500ರಿಂದ 2000ರಷ್ಟಾಗಿದೆ. ಒಟ್ಟಾರೆ ಎಕರೆಗೆ 20ರಿಂದ 30 ಸಾವಿರ ರು. ಖರ್ಚಾಗುತ್ತದೆ, ಆದರೆ ಉತ್ಪನ್ನದಿಂದ ಮಾತ್ರ ರೈತನಿಗೆ ಲಾಭ ಪಡೆಯಲು ಸಾಧ್ಯವಾಗುತ್ತಿಲ್ಲ ಎಂದು ಹೇಳುತ್ತಾರೆ ರೈತರು.

ಕೈ ಕೊಟ್ಟ ಇಳುವರಿ

ಎಕರೆಗೆ ಕನಿಷ್ಠ 30-ಕ್ವಿಂಟಲ್ ಇಳುವರಿ ನೀಡುತ್ತಿದ್ದ ಮೆಕ್ಕೆಜೋಳ, ಮಳೆಯ ಅತಿವೃಷ್ಟಿಯಿಂದಾಗಿ ಎಕರೆಗೆ ಸರಾಸರಿ 15-20 ಕ್ವಿಂಟಲ್‌ಗೆ ಹಾಗೂ ಕೆಲವೊಂದು ಪ್ರದೇಶದಲ್ಲಿ 8-10 ಕ್ವಿಂಟಲ್ ಬಂದಿದೆ. ಇದರಿಂದಾಗಿ ಎಕರೆಗೆ ಕನಿಷ್ಠ 15 ಸಾವಿರ ರು. ನಷ್ಟ ಉಂಟಾಗಿದೆ. ಬೆಲೆಯೂ ಸಾಮಾನ್ಯವಾಗಿದ್ದು, ಖರ್ಚು ಸರಿದೂಗಿಸು ವುದೂ ಕೂಡ ಸಾಧ್ಯವಾಗುತ್ತಿಲ್ಲ ಎನ್ನುತ್ತಾರೆ ರೈತರು.

ಮೆಕ್ಕೆಜೋಳ ಬೆಳೆಯ ಇಳುವರಿ ಕುಸಿದಿರುವ ಜತೆಗೆ ಬೆಲೆಯಲ್ಲಿಯೂ ರೈತರು ನಷ್ಟಕ್ಕೀಡಾಗುತ್ತಿರುವುದ ರಿಂದ ಕೃಷಿ ಇಲಾಖೆ ಮತ್ತು ಸರಕಾರ ರೈತರ ನೆರವಿಗೆ ನಿಲ್ಲುವ ಮೂಲಕ ನಿರಂತರ ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿರುವ ರೈತರನ್ನು ಮೇಲೆತ್ತುವ ಕಾರ್ಯ ಮಾಡಬೇಕು

-ವಿರೂಪಾಕ್ಷಪ್ಪ, ರೈತ, ಚನ್ನಗಿರಿ

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ, ಹೊಳಲ್ಕೆರೆ, ಚಿತ್ರದುರ್ಗ ತಾಲೂಕುಗಳಲ್ಲಿ ಮೆಕ್ಕೆಜೋಳ ಬೆಳೆಯು ತ್ತಿದ್ದು, ಇಲ್ಲೂ ಕೂಡ ಪರಿಸ್ಥಿತಿ ಭಿನ್ನವಾಗಿಲ್ಲ. ಮೆಕ್ಕೆ ಜೋಳ ಬೆಳೆದು ನಿಂತು ತೆನೆ ಕಟ್ಟುವ ವೇಳೆ ಗೌರಿ ಗಣೇಶ ಹಬ್ಬದ ಸಮಯದಲ್ಲಿ ಕೈಕೊಟ್ಟ ಮಳೆ ಯಿಂದಾಗಿ ಇಳುವರಿ ಕುಂಠಿತವಾಗಿದೆ, ಹಾಗಾಗಿ ರೈತನಿಗೆ ಆರ್ಥಿಕ ಸಂಕಷ್ಟವೂ ಎದುರಾಗಿದೆ.

'ದೀಪಾವಳಿ ನಂತರ ಕೊಯ್ಲು ಆರಂಭವಾಗಬೇಕಿತ್ತು, ಆದರೆ ಸುರಿದ ಮಳೆಯಿಂದಾಗಿ, ಬೆಳೆದು ನಿಂತಿರುವ ಅಳಿದುಳಿದ ಮೆಕ್ಕೆಜೋಳದ ದಂಟುಗಳು ಕರಗುತ್ತಿದ್ದು, ಅಲ್ಲಲ್ಲಿ ನೆಲಕ್ಕೆ ಬೀಳುತ್ತಿವೆ. ಇದೇ ರೀತಿ ವಾತಾವರಣ ಮುಂದುವರಿದಲ್ಲಿ ನೆಲಕ್ಕೆ ಬಿದ್ದ ಮೆಕ್ಕೆಜೋಳ ಅಲ್ಲೇ ಮೊಳಕೆ ಬರಲಿದೆ. ಇದರಿಂದಾಗಿ ರೈತನಿಗೆ ದಕ್ಕದಂತೆ ಮಣ್ಣು ಪಾಲಾಗಲಿದೆ' ಎಂದು ಹೊಳಲ್ಕೆರೆ ತಾಲೂಕಿನ ಚಿಕ್ಕಂದವಾಡಿಯ ಯುವ ರೈತ ರವಿಕುಮಾರ್ ಆತಂಕ ವ್ಯಕ್ತಪಡಿಸಿದರು. ಬೆಳೆವಿಮೆ ಕಂತು ಕಟ್ಟಿದ್ದು, ನಷ್ಟದಲ್ಲಿರುವ ರೈತರಿಗೆ ಈ ಬಾರಿಯಾದರೂ ವಿಮೆ ಸೇರಿದಂತೆ ಸರ್ಕಾರ ಸೂಕ್ತ ಪರಿಹಾರ ನೀಡಲಿ ಎಂದು ರೈತರೂ ಹೇಳುತ್ತಿದ್ದಾರೆ.

ಮೆಕ್ಕೆಜೋಳ ಖರೀದಿಯ ಬೆಲೆಯಲ್ಲಿಯೂ ರೈತರಿಗೆ ಸಂಕಷ್ಟ ಎದುರಾಗಿದೆ. ಸರಕಾರದಿಂದ ರು.2400 ಬೆಂಬಲ ಬೆಲೆ ಇದೆ. ಮೆಕ್ಕೆಜೋಳಕ್ಕೆ ದಾವಣಗೆರೆ ಪ್ರಮುಖ ಮಾರುಕಟ್ಟೆಯಾಗಿದ್ದು, ಕಳೆದ ವರ್ಷ ಈ ಅವಧಿಯಲ್ಲಿ 2,000-2,200 ರು. ವರೆಗೂ ಇತ್ತು, ಈ ವರ್ಷ ಮೆಕ್ಕೆಜೋಳ ಕ್ವಿಂಟಲ್‌ಗೆ 1800-1900 ಇದ್ದು ಒಣಗಿದ ಜೋಳಕ್ಕೆ 1900-2,000 ರು.ಗೆ ಮಾರಾಟವಾಗುತ್ತಿದೆ. ಇಳುವರಿಯೂ ಈ ಕಡೆ ಇಲ್ಲ, ಬೆಲೆಯೂ ಕಡಿಮೆ ಎಂದು ನೊಂದ ರೈತಸಂಘದ ಮುಖಂಡರು, ಕಾರ್ಯಕರ್ತರು ಪ್ರತಿಭಟನೆಯನ್ನೂ ನಡೆಸುತ್ತಿದ್ದಾರೆ.

ಅಭಿವೃದ್ಧಿಯನ್ನು ಒಪ್ಪಿದ ಬಿಹಾರಿಗಳು: ಕಾರಜೋಳ

ಬೆಂಗಳೂರು: ಒಂದು ಕಡೆ ನರೇಂದ್ರ ಮೋದಿಯವರ ಅಭಿವೃದ್ಧಿ, ವಿಕಾಸ, ಇನ್ನೊಂದು ಕಡೆ ನಿತೀಶ್ ಕುಮಾರ್ ಅವರ ಸಾಮಾಜಿಕ ನ್ಯಾಯ ಗಮನಿಸಿ ಬಿಹಾರದ ಜನತೆ ಮುದ್ರೆ ಒತ್ತಿದ್ದಾರೆ ಎಂದು ಸಂಸದ ಗೋವಿಂದ ಕಾರಜೋಳ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ನಿತೀಶ್ ಕುಮಾರ್ 20 ವರ್ಷದ ಆಡಳಿತದ ಮೂಲಕ ಜನಮನದಲ್ಲಿದ್ದಾರೆ. ಇದರಿಂದ ಎನ್‌ಡಿಎ 202 ಸೀಟು ಗೆದ್ದಿದ್ದೇವೆ. ಕಾಂಗ್ರೆಸಿನವರು ಅಧಿಕಾರ ಕಳೆದುಕೊಂಡು ಹುಚ್ಚರಂತೆ ವರ್ತಿಸುತ್ತಿದ್ದಾರೆ. ಬುದ್ಧಿ ಭ್ರಮೆ ಆಗಿದೆ. ಇಡೀ ದೇಶದಲ್ಲಿ ಜನರು ಅವರನ್ನು ತಿರಸ್ಕರಿಸುತ್ತಿದ್ದಾರೆ. ರಾಹುಲ್ ಗಾಂಧಿಯವರು ಒಬ್ಬ ಅಪಕ್ವ ರಾಜಕಾರಣಿ ಎಂದು ಟೀಕಿಸಿದರು. ದೇಶದಲ್ಲಿ ಧರ್ಮ ಮತ್ತು ಜಾತಿಗಳನ್ನು ಒಡೆಯುವುದರ ಮೂಲಕ ಜನರಲ್ಲಿ ವಿಷಬೀಜ ಬಿತ್ತಿ ಮತಬ್ಯಾಂಕ್ ಮಾಡಿಕೊಂಡು ಕಾಂಗ್ರೆಸ್ ಆಡಳಿತ ನಡೆಸುತ್ತ ಬಂತು. ಇದೀಗ ಜನತೆ ಇಂಥ ಕಾಂಗ್ರೆಸ್ ಮತ್ತು ಅಪ್ರಬುದ್ಧ ರಾಜಕಾರಣಿಯನ್ನು ನಾಯಕನೆಂದು ಒಪ್ಪುತ್ತಿಲ್ಲ. ಮತಗಳ್ಳತನ ಎಂಬುದು ಮಹಾನ್ ದೇಶದ್ರೋಹಿ ನಡವಳಿಕೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಂದು ಸಾಂವಿಧಾನಿಕ ಸಂಸ್ಥೆಯಾದ ಚುನಾವಣೆ ಆಯೋಗವು 79 ವರ್ಷಗಳಲ್ಲಿ ನಿಷ್ಪಕ್ಷಪಾತದಿಂದ ಚುನಾವಣೆ ನಡೆಸಿದೆ. ಇದೇ ಕಾರಣಕ್ಕೆ 60 ವರ್ಷ ಕಾಂಗ್ರೆಸಿನವರು ಆಡಳಿತ ಮಾಡಲು ಸಾಧ್ಯವಾಗಿದೆ ಎಂದರು.

ಬಿಹಾರದ ಜನರಿಗೆ ಅಪಮಾನ: ಪ್ರತಿಪಕ್ಷ ನಾಯಕ ಆರ್. ಅಶೋಕ ಮಾತನಾಡಿ, ಕಾಂಗ್ರೆಸ್ ಸೋಲು ಕಂಡಾಗಲೆಲ್ಲ ಮತಗಳ್ಳತನ ಹಾಗೂ ಇವಿಎಂ ಸರಿ ಇಲ್ಲ ಎಂಬ ಆರೋಪ ಬರುತ್ತದೆ. ಬಿಹಾರದಲ್ಲೇ ವೋಟ್ ಚೋರಿ ಬಗ್ಗೆ ಅಭಿಯಾನ ಮಾಡಿದ್ದು, ಅದನ್ನು ಮತದಾರರು ತಿರಸ್ಕರಿಸಿದ್ದಾರೆ. ಮತ ಪಟ್ಟಿ ಪರಿಷ್ಕರಣೆ ವೇಳೆ ಅನ್ಯದೇಶಗಳ ಜನರ ಹೆಸರು, ಸತ್ತವರ ಹೆಸರು ರದ್ದಾಗಿದೆ. ವಿಶೇಷ ಪರಿಷ್ಕರಣೆ ಸರಿ ಇಲ್ಲ ಎಂದರೆ ಯಾರೂ ನಂಬಲ್ಲ. ಕಾಂಗ್ರೆಸ್ ಎಲ್ಲ ರಾಜ್ಯಗಳಲ್ಲಿ ಮಕಾಡೆ ಮಲಗಿದ್ದು, ಕರ್ನಾಟಕದಲ್ಲೂ ಆಡಳಿತ ಕೊನೆಯಾಗಲಿದೆ ಎಂದರು.

ಸಮಾಚಾರ ಸಣ್ಣದಲ್ಲ

ವಿಶ್ವ ಶೂಟಿಂಗ್ ಸ್ಪರ್ಧೆ: ಇಶಾಗೆ ಕಂಚಿನ ಪದಕ

ಕೈರೊ: ಭಾರತದ ಅನುಭವಿ ಶೂಟರ್ ಇಶಾ ಸಿಂಗ್ ಅವರು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವ ಚಾಂಪಿಯನ್‌ಶಿಪ್‌ನ ಮಹಿಳೆಯರ 25 ಮೀ. ಸ್ಪೋರ್ಟ್ ಪಿಸ್ತೂಲ್ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದರು. ಆದರೆ ಒಲಿಂಪಿಕ್ಸ್ ಅವಳಿ ಪದಕ ವಿಜೇತೆ ಮನು ಭಾಕರ್ ನಿರಾಸೆ ಮೂಡಿಸಿದರು. 26 ವರ್ಷದ ಇಶಾ ಅವರಿಗೆ ಇದು ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಮೊದಲ ವೈಯಕ್ತಿಕ ಪದಕವಾಗಿದೆ. ಫೈನಲ್ ಸ್ಪರ್ಧೆಯಲ್ಲಿ 30 ಅಂಕಗಳೊಂದಿಗೆ ಇಶಾ ಮೂರನೇ ಸ್ಥಾನ ಗಳಿಸಿದರು. ಹಾಲಿ ಒಲಿಂಪಿಕ್ ಚಾಂಪಿಯನ್, ಕೊರಿಯಾದ ಯಾಂಗ್ ಜಿಯಿನ್ (40 ಅಂಕ) ಚಿನ್ನದ ಸಾಧನೆ ಮಾಡಿದರೆ, ಚೀನಾದ ಯಾವೋ ಕಿಯಾನ್ಸನ್ (38) ಬೆಳ್ಳಿ ಪದಕವನ್ನು ತಮ್ಮದಾಗಿಸಿಕೊಂಡರು. ಮೂರು ಚಿನ್ನ, ಐದು ಬೆಳ್ಳಿ ಮತ್ತು ನಾಲ್ಕು ಕಂಚಿನ ಪದಕ ಗೆದ್ದ ಭಾರತವು ಪದಕ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದೆ. 10 ಚಿನ್ನದೊಂದಿಗೆ 18 ಪದಕ ಗೆದ್ದಿರುವ ಚೀನಾ ಅಗ್ರಸ್ಥಾನದಲ್ಲಿದ್ದರೆ, ಕೊರಿಯಾ 6 ಚಿನ್ನ ಸಹಿತ 11 ಪದಕಗಳೊಂದಿಗೆ ಎರಡನೇ ಸ್ಥಾನದಲ್ಲಿದೆ.

ವಿರಾಮ
ಪ್ರತಿ ಭಾನುವಾರ

ಜಡೇಜಾ-ಕುಲ್ದೀಪ್ ಸ್ಪಿನ್ ಮೋಡಿಗೆ ಕುಸಿದ ದ.ಆಫ್ರಿಕಾ | ಇಂದೇ ಪಂದ್ಯ ಮುಗಿಯುವ ಸಾಧ್ಯತೆ

ಭಾರತದ ಬಿಗಿಹಿಡಿತದಲ್ಲಿ ಟೆಸ್ಟ್

ಕೋಲ್ಕತ್ತಾ: ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವೆ ಇಲ್ಲಿನ ಈಡನ್ ಗಾರ್ಡನ್ಸ್‌ನಲ್ಲಿ ನಡೆಯುತ್ತಿರುವ ಮೊದಲ ಟೆಸ್ಟ್ ಪಂದ್ಯ ಮೂರೇ ದಿನಕ್ಕೆ ಅಂತ್ಯವಾಗುವ ಸಾಧ್ಯತೆಯಿದೆ. ಪಂದ್ಯದ ಎರಡನೇ ದಿನವಾದ ಶನಿವಾರ ಭಾರತ ಸಂಪೂರ್ಣ ಹಿಡಿತ ಸಾಧಿಸಿತು. ಮೊದಲ ದಿನ 1 ವಿಕೆಟ್ ಕಳೆದುಕೊಂಡು 37 ರನ್ ಗಳಿಸಿದ್ದ ಭಾರತ ಶನಿವಾರ 189 ರನ್‌ಗಳಿಗೆ ಆಲೌಟ್ ಆಯಿತು. 30 ರನ್‌ಗಳ ಹಿನ್ನಡೆಯೊಂದಿಗೆ 2ನೇ ಇನ್ನಿಂಗ್ಸ್ ಆರಂಭಿಸಿದ ದ.ಆಫ್ರಿಕಾ ತಂಡವು ದಿನದಾಂತ್ಯಕ್ಕೆ 7 ವಿಕೆಟ್ ಕಳೆದುಕೊಂಡು ಕೇವಲ 93 ರನ್ ಗಳಿಸಿದ್ದು, ಒಟ್ಟಾರೆ 63 ರನ್‌ಗಳ ಮುನ್ನಡೆಯನ್ನಷ್ಟೇ ಹೊಂದಿದೆ. ಭಾನುವಾರ ಹರಿಣ ಪಡೆ ಬೇಗ ಆಲೌಟ್ ಆದರೆ, ಭಾರತಕ್ಕೆ ಸಾಧಾರಣ ಗುರಿ ಸಿಗುವ ಸಾಧ್ಯತೆಯಿದೆ.

189ಕ್ಕೆ ಆಲೌಟ್ ಆದ ಭಾರತ: 2ನೇ ದಿನ ಚಹಾ ವಿರಾಮಕ್ಕೂ ಮುನ್ನ ಭಾರತ ತನ್ನ ಮೊದಲ ಇನ್ನಿಂಗ್ಸ್ ಅನ್ನು 189ಕ್ಕೆ ಅಂತ್ಯಗೊಳಿಸಿತು. ಶುಕ್ರವಾರ ಅಜೇಯರಾಗಿದ್ದ ಕೆಎಲ್ ರಾಹುಲ್ 39 ರನ್ ಗಳಿಸಿ ಔಟ್ ಆದರು. ವಾಷಿಂಗ್ಟನ್ ಸುಂದರ್ 29, ರಿಷಭ್ ಪಂತ್ 27, ಜಡೇಜಾ 27, ಅಕ್ಷರ್ ಪಟೇಲ್ 16, ಧ್ರುವ್ ಜುರೆಲ್ 14 ರನ್ ಗಳಿಸಿದರೆ, ಶುಭ್‌ಮನ್ ಗಿಲ್ ರಿಟೈರ್ಡ್ ಔಟ್ (4), ಕುಲ್ದೀಪ್ 1, ಸಿರಾಜ್ 1 ರನ್ ಗಳಿಸಿದರು.

ಜಡೇಜಾ ದಾಳಿಗೆ ದ.ಆಫ್ರಿಕಾ ತತ್ತರ: 30 ರನ್‌ಗಳ ಇನ್ನಿಂಗ್ಸ್ ಹಿನ್ನಡೆಯೊಂದಿಗೆ 2ನೇ ಇನ್ನಿಂಗ್ಸ್ ಆರಂಭಿಸಿದ ಹರಿಣಗಳಿಗೆ ಕುಲ್ದೀಪ್ ಮೊದಲ ಆಘಾತ ನೀಡಿದರು. 11 ರನ್ ಗಳಿಸಿದ್ದ ರಿಕಲ್ಟನ್ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಜಡೇಜಾ 4 ವಿಕೆಟ್ ಪಡೆದು ದಕ್ಷಿಣ ಆಫ್ರಿಕಾ ತಂಡವನ್ನು ಧೂಳೀಪಟ ಮಾಡಿದರು. ಮಾರ್ಕ್ರಮ್ (4), ವಿಯಾನ್ ಮುಲ್ಡರ್ (11), ಟೋನಿ ಡಿ ಜೋರ್ಜಿ (2), ಟ್ರಿಸ್ಟಾನ್ ಸ್ಟಬ್ಸ್ (5) ವಿಕೆಟ್ ಪಡೆದು ಮಿಂಚಿದರು.

9 ರನ್ ಗಳಿಸಿದ್ದ ವಿಕೆಟ್ ಕೀಪರ್ ಕೈಲ್ ವೇರೆನ್‌ರನ್ನು ಅಕ್ಷರ್ ಪಟೇಲ್ ಬೌಲ್ಡ್ ಮಾಡಿದರೆ, 34ನೇ ಓವರ್‌ನಲ್ಲಿ ಕುಲ್ದೀಪ್ ಯಾದವ್ ಬೌಲಿಂಗ್‌ನಲ್ಲಿ ಕೆಎಲ್ ರಾಹುಲ್ ಅವರಿಗೆ ಕ್ಯಾಚ್ ನೀಡಿ ಮಾರ್ಕೊ ಜಾನ್ಸನ್ ಔಟ್ ಆದರು. ಜಾನ್ಸೆನ್ 16 ಎಸೆತಗಳಲ್ಲಿ ಒಂದು ಸಿಕ್ಸರ್ ಸೇರಿದಂತೆ 13 ರನ್ ಗಳಿಸಿದರು.

ಹರಿಣಗಳಿಗೆ ಬವುಮಾ ಬಲ: ದ.ಆಫ್ರಿಕಾ ತಂಡದ ನಾಯಕ ತೆಂಬ ಬವುಮಾ ಅಜೇಯ 29 ಹಾಗೂ ಕಾರ್ಬಿನ್ ಬಾಷ್ ಅಜೇಯ 1 ರನ್ ಗಳಿಸಿ 3ನೇ ದಿನಕ್ಕೆ ಬ್ಯಾಟಿಂಗ್ ಕಾಯ್ದಿರಿಸಿದ್ದಾರೆ. ಭಾರತದ ಪರ 2ನೇ ಇನ್ನಿಂಗ್ಸ್‌ನಲ್ಲಿ ಸ್ಪಿನ್ ಬೌಲರ್‌ಗಳು ಅದ್ಭುತ ಪ್ರದರ್ಶನ ತೋರಿದ್ದಾರೆ. ಜಡೇಜಾ 4 ವಿಕೆಟ್ ಪಡೆದರೆ, ಕುಲ್ದೀಪ್ ಯಾದವ್ 2 ವಿಕೆಟ್, ಅಕ್ಷರ್ ಪಟೇಲ್ 1 ವಿಕೆಟ್ ಪಡೆದಿದ್ದಾರೆ.

4 ಸಾವಿರ ರನ್ ಪೂರೈಸಿದ ಕನ್ನಡಿಗ ರಾಹುಲ್: ಕನ್ನಡಿಗ ಕೆ.ಎಲ್ ರಾಹುಲ್ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ 4 ಸಾವಿರ ರನ್ ಮೈಲುಗಲ್ಲು ತಲುಪಿದ್ದಾರೆ. ದ.ಆಫ್ರಿಕಾ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ 15 ರನ್ ಪೂರ್ತಿಗೊಳಿಸುತ್ತಿದ್ದಂತೆ ರಾಹುಲ್ ಈ ಸಾಧನೆಗೈದರು. ಭಾರತ ತಂಡದ ಪರ ಟೆಸ್ಟ್‌ನಲ್ಲಿ 4 ಸಾವಿರಕ್ಕಿಂತ ಹೆಚ್ಚಿನ ಮೊತ್ತ ದಾಖಲಿಸಿದ 18ನೇ ಬ್ಯಾಟರ್ ಎನಿಸಿಕೊಂಡರು. ಅತ್ಯಧಿಕ ರನ್ ಕಲೆಹಾಕಿದ ದಾಖಲೆ ದಿಗ್ಗಜ ಸಚಿನ್ ತೆಂಡೂಲ್ಕರ್(15921 ರನ್) ಹೆಸರಿನಲ್ಲಿದ್ದು, ರಾಹುಲ್ ದ್ರಾವಿಡ್(13265) ದ್ವಿತೀಯ ಸ್ಥಾನದಲ್ಲಿದ್ದಾರೆ.

ಗಿಲ್ ಗಾಯದ ಬಗ್ಗೆ ಬಿಸಿಸಿಐ ಪ್ರತಿಕ್ರಿಯೆ

ಬ್ಯಾಟಿಂಗ್ ವೇಳೆ ಗಾಯಗೊಂಡು ರಿಟೈರ್ಡ್ ಔಟ್ ತೆಗೆದುಕೊಂಡಿರುವ ಭಾರತ ತಂಡದ ನಾಯಕ ಶುಭ್‌ಮನ್ ಗಿಲ್ ಮತ್ತೆ ಬ್ಯಾಟಿಂಗ್ ಮಾಡಲಿಲ್ಲ. ಅವರ ಗಾಯದ ಬಗ್ಗೆ ಬಿಸಿಸಿಐ ಎಕ್ಸ್ ಖಾತೆಯ ಮೂಲಕ ಅಪ್‌ಡೇಟ್ ನೀಡಿದೆ. ಶುಭ್‌ಮನ್ ಗಿಲ್ ಅವರಿಗೆ ಕುತ್ತಿಗೆ ಸೆಳೆತವಿದ್ದು, ಬಿಸಿಸಿಐ ವೈದ್ಯಕೀಯ ತಂಡವು ಅವರನ್ನು ಮೇಲ್ವಿಚಾರಣೆ ಮಾಡುತ್ತಿದೆ. ಅವರ ಆರೋಗ್ಯ ಸುಧಾರಣೆಯ ಆಧಾರದ ಮೇಲೆ ಅವರು ಭಾನುವಾರ ಪಂದ್ಯದಲ್ಲಿ ಭಾಗವಹಿಸುವಿಕೆಯ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ ಎಂದು ಬರೆದಿದೆ. ಗಿಲ್ ಅನುಪಸ್ಥಿತಿಯಲ್ಲಿ ಶನಿವಾರದಂದು ಉಪನಾಯಕ ರಿಷಭ್ ಪಂತ್ ತಂಡದ ನಾಯಕತ್ವ ವಹಿಸಿಕೊಂಡಿದ್ದರು.

ಟೆಸ್ಟ್‌ನಲ್ಲಿ ಜಡೇಜಾ ಅಪರೂಪದ ಸಾಧನೆ

ಭಾರತದ ಆಲ್‌ರೌಂಡರ್ ರವೀಂದ್ರ ಜಡೇಜಾ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ 4000 ರನ್ ಮತ್ತು 300ರಕ್ಕಿಂತ ಹೆಚ್ಚು ವಿಕೆಟ್‌ಗಳನ್ನು ಪಡೆದ ವಿಶ್ವದ ನಾಲ್ಕನೇ ಹಾಗೂ ಎರಡನೇ ಭಾರತೀಯ ಕ್ರಿಕೆಟಿಗ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಕಪಿಲ್ ದೇವ್ ಭಾರತದ ಪರ ಮೊದಲಿಗರಾಗಿದ್ದಾರೆ. ಇದೀಗ ವಿಶ್ವದ ನಂ. 1 ಟೆಸ್ಟ್ ಆಲ್‌ರೌಂಡರ್ ಆಗಿರುವ ಜಡೇಜಾ, ದ.ಆಫ್ರಿಕಾ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ ಶನಿವಾರ ಈ ಮೈಲಿಗಲ್ಲು ತಲುಪಿದರು. ತಮ್ಮ 88ನೇ ಟೆಸ್ಟ್ ಪಂದ್ಯವನ್ನು ಆಡುತ್ತಿರುವ ಜಡೇಜಾ ಅವರಿಗೆ, 4000 ರನ್‌ಗಳ ಗಡಿ ತಲುಪಲು ಕೇವಲ 10 ರನ್‌ಗಳ ಅಗತ್ಯವಿದ್ದು, ಅದನ್ನು ಪೂರೈಸಿದರು. ಈಗಾಗಲೇ 338 ಕ್ಕೂ ಹೆಚ್ಚು ವಿಕೆಟ್‌ಗಳನ್ನು ತಮ್ಮ ಹೆಸರಿನಲ್ಲಿ ಈ ದಾಖಲೆ ಹೊಂದಿರುವ 36 ವರ್ಷದ ಜಡೇಜಾ ಅವರು ಕಪಿಲ್ ದೇವ್, ಇಯಾನ್ ಬೋಥಮ್ ಮತ್ತು ಡೇನಿಯಲ್ ವೆಟ್ಟೋರಿ ಅವರ ವಿಶೇಷ ಪಟ್ಟಿಗೆ ಸೇರ್ಪಡೆಗೊಂಡರು.

ಅತಿಥೇಯ ಕರ್ನಾಟಕ-ಚಂಡೀಗಢ ನಡುವಿನ ಪಂದ್ಯ

ಇಂದಿನಿಂದ ಹುಬ್ಬಳ್ಳಿಯಲ್ಲಿ ರಣಜಿ

ಹುಬ್ಬಳ್ಳಿ: ಭಾನುವಾರದಿಂದ 19ರ ವರೆಗೆ ಇಲ್ಲಿನ ರಾಜನಗರದ ಕೆಎಸ್‌ಸಿಎ ಮೈದಾನ ದಲ್ಲಿ ಕರ್ನಾಟಕ ಮತ್ತು ಚಂಡೀಗಢ ತಂಡ ಗಳ ನಡುವೆ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯ ನಡೆಯಲಿದೆ. ಮಯಾಂಕ್ ಅಗರ್ವಾಲ್ ನಾಯಕತ್ವದ ರಾಜ್ಯ ತಂಡವು ಮನನ್ ವೋಹ್ರಾ ನೇತೃತ್ವದ ಚಂಡೀಗಢ ತಂಡವನ್ನು ಎದುರಿಸಲಿದೆ. ಪಂದ್ಯಾವಳಿಗೆ ಇಲ್ಲಿನ ಮೈದಾನ ಸಂಪೂರ್ಣ ಸಿದ್ಧಗೊಂಡಿದ್ದು, ನಗರಕ್ಕೆ ಶುಕ್ರವಾರ ಆಗಮಿಸಿದ ಎರಡೂ ತಂಡಗಳು ರಡು ದಿನ ಸಂಪೂರ್ಣ ಅಭ್ಯಾಸ ನಡೆಸಿವೆ.

ರಾಜನಗರದ ಮೈದಾನವು ಹಲವು ಪಂದ್ಯಗಳಿಗೆ ಆತಿಥ್ಯ ವಹಿಸಿದೆ. ಕಳೆದ ವರ್ಷ ಜನವರಿ 5ರಿಂದ 8ರವರೆಗೆ ಇಲ್ಲಿ ನಡೆದಿದ್ದ ಪಂಜಾಬ್ ಎದುರಿನ ರಣಜಿ ಪಂದ್ಯದಲ್ಲಿ ಕರ್ನಾಟಕ ತಂಡವು ಏಳು ವಿಕೆಟ್‌ಗಳ ಅಂತರದಿಂದ ಗೆಲುವು ಸಾಧಿಸಿತ್ತು. ನಂತರ ಅದೇ ಫೆಬ್ರವರಿ 16ರಿಂದ 18ರವರೆಗೆ ನಡೆದ ಚಂಡೀಗಢ ವಿರುದ್ಧದ ಪಂದ್ಯ ಡ್ರಾ ಆಗಿತ್ತು.

ಈ ಬಾರಿ ಚಂಡೀಗಢ ತಂಡವನ್ನು ಮಣಿಸುವ ಉತ್ಸಾಹದಲ್ಲಿರುವ ಕರ್ನಾಟಕ ತಂಡದಲ್ಲಿ ನಾಯಕ ಮಯಾಂಕ್ ಅಗರ್ವಾಲ್, ಕರುಣ್ ನಾಯರ್, ಅಭಿನವ್ ಮನೋಹರ್, ಶ್ರೇಯಸ್ ಗೋಪಾಲ್, ವಿದ್ವತ್ ಕಾವೇರಪ್ಪರಂತಹ ಖ್ಯಾತ ಆಟಗಾರರು ಪಾಲ್ಗೊಳ್ಳಲಿದ್ದಾರೆ, ದೇವದತ್ತ ಪಡಿಕ್ಕಲ್ ಕೂಡಾ ತಂಡಕ್ಕೆ ಸೇರ್ಪಡೆಗೊಂಡಿದ್ದಾರೆ. ಹಾಗೆಯೇ ಚಂಡೀಗಢ ತಂಡವು ನಾಯಕ ಮನನ್ ವೋಹ್ರಾ ಹೊರತುಪಡಿಸಿ ಅಭಿಷೇಕ್ ಸೈನಿ, ಅಂಕಿತ್ ಕೌಶಿಕ್, ಕುನಾಲ್ ಮಹಾಜನ್‌ರಂತಹ ಪ್ರತಿಭಾನ್ವಿತ ಆಟಗಾರರನ್ನು ಹೊಂದಿದೆ.

ಈಗಾಗಲೇ ಕ್ಯೂರೇಟರ್‌ಗಳು ಕೂಡ ಹುಬ್ಬಳ್ಳಿಯ ಕೆಎಸ್‌ಸಿಎ ಮೈದಾನ ಮತ್ತು ಪಿಚ್‌ನ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಒಂದೂವರೆ ವರ್ಷದ ನಂತರ ಮತ್ತೊಂದು ರಣಜಿಗೆ ಆತಿಥ್ಯ ವಹಿಸಲು ಅವಕಾಶ ಸಿಕ್ಕಿರುವ ಕಾರಣ ಹೆಚ್ಚಿನ ಸಂಖ್ಯೆಯಲ್ಲಿ ಕ್ರಿಕೆಟ್ ಪ್ರೇಮಿಗಳು ಬರುವ ನಿರೀಕ್ಷೆ ಇದೆ ಎಂದು ಕೆಎಸ್‌ಸಿಎ ಧಾರವಾಡ ವಲಯದ ಹಂಗಾಮಿ ನಿರ್ದೇಶಕ ನಿಖಿಲ್ ಭೂಸದ ಹೇಳಿದ್ದಾರೆ.

ಕ್ರಿಕೆಟ್ ಪ್ರೇಮಿಗಳಿಗೆ ಉಚಿತ ಪ್ರವೇಶ

ಪಂದ್ಯ ವೀಕ್ಷಣೆಗೆ ಬರುವ ಕ್ರೀಡಾಸಕ್ತರು, ಸಾರ್ವಜನಿಕರು, ವಿದ್ಯಾರ್ಥಿಗಳಿಗೆ ರಾಜನಗರದ ಕೆಎಸ್‌ಸಿಎ ಮೈದಾನದ ಮೂರನೇ ಗೇಟ್‌ನಿಂದ ಉಚಿತ ಪ್ರವೇಶವಿದೆ. ವಿವಿಧ ಕ್ಲಬ್‌ಗಳಿಂದ ಪಂದ್ಯ ವೀಕ್ಷಣೆಗೆ ಬರುವ ಆಟಗಾರರಿಗೆ ಪ್ರತ್ಯೇಕ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ. ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳಿಗೆ ಪ್ರತ್ಯೇಕ ಸ್ಟ್ಯಾಂಡ್ ಕೂಡಾ ಇರಲಿವೆ.

ರಿಲೀಸ್, ರಿಟೈನ್ ಆರ್‌ಸಿಬಿ ಪಟ್ಟಿ ಬಿಡುಗಡೆ

ದೆಹಲಿ: ಮುಂಬರುವ ಐಪಿಎಲ್ ಟೂರ್ನಿಯ ಮಿನಿ ಹರಾಜಿನ ನಿಮಿತ್ತ ಹಾಲಿ ಚಾಂಪಿಯನ್ ಆರ್‌ಸಿಬಿ ತಂಡ, ಉಳಿಸಿಕೊಂಡ, ಬಿಡುಗಡೆ ಮಾಡಿದ ಹಾಗೂ ಟ್ರೇಡ್ ಡೀಲ್ ಮಾಡಿಕೊಂಡ ಆಟಗಾರರ ಪಟ್ಟಿಯನ್ನು ಶನಿವಾರ ಪ್ರಕಟಿಸಿದೆ. ಇದರಲ್ಲಿ ಎಂಟು ಮಂದಿ ಆಟಗಾರರನ್ನು ಬಿಡುಗಡೆ ಮಾಡಿದ್ದು, ಒಟ್ಟು 17 ಮಂದಿ ಆಟಗಾರರನ್ನು ಮುಂದಿನ ಆವೃತ್ತಿಗೆ ಉಳಿಸಿಕೊಂಡಿದೆ. ಕಳೆದ ಟೂರ್ನಿಯ ಪ್ಲೇಆಫ್ಸ್ ಹಂತದಲ್ಲಿ ಆರ್‌ಸಿಬಿಗೆ ಬಂದಿದ್ದ ಕನ್ನಡಿಗ ಮಯಾಂಕ್ ಅಗರ್ವಾಲ್ ಅವರನ್ನು ಬೆಂಗಳೂರು ಫ್ರಾಂಚೈಸಿ ಬಿಡುಗಡೆ ಮಾಡಿದೆ.

2026ರ ಐಪಿಎಲ್ ಟೂರ್ನಿ ಮಿನಿ ಹರಾಜು ಡಿಸೆಂಬರ್ 16ರಂದು ಅಬುಧಾಬಿಯಲ್ಲಿ ನಡೆಯಲಿದೆ. ಹಾಗಾಗಿ ಎಲ್ಲಾ ಫ್ರಾಂಚೈಸಿಗಳು ತಾವು ಉಳಿಸಿಕೊಳ್ಳಬಲ್ಲ ಹಾಗೂ ಬಿಡುಗಡೆಗೊಳಿಸಬಲ್ಲ ಆಟಗಾರರ ಪಟ್ಟಿಯನ್ನು ಅಂತಿಮಗೊಳಿಸಲು ಐಪಿಎಲ್ ಆಡಳಿತ ಮಂಡಳಿ ಶನಿವಾರಕ್ಕೆ ಕೊನೆಯ ದಿನವನ್ನು ನಿಗದಿಗೊಳಿಸಿತ್ತು. ಇದರಲ್ಲಿ ಆರ್‌ಸಿಬಿ ತಂಡ ಇಬ್ಬರು ಕನ್ನಡಿಗ ಆಟಗಾರರನ್ನು ರಿಲೀಸ್ ಮಾಡಿದ್ದು, ಮಯಾಂಕ್ ಅಗರ್ವಾಲ್ ಹಾಗೂ ಒಂದೂ ಪಂದ್ಯದಲ್ಲಿ ಅವಕಾಶ ಸಿಗದ ಮನೋಜ್ ಭಾಂಡಗೆ ಅವರನ್ನು ರಿಲೀಸ್ ಮಾಡಿದೆ.

ಆರ್‌ಸಿಬಿ ಬಿಡುಗಡೆ ಮಾಡಿದ ಆಟಗಾರರು: ಸ್ವಸ್ತಿಕ್ ಚಿಕಾರ, ಮಯಾಂಕ್ ಅಗರ್ವಾಲ್, ಟಿಮ್ ಸೀಫರ್ಟ್, ಲಿಯಾಮ್ ಲಿವಿಂಗ್‌ಸ್ಟೋನ್, ಮನೋಜ್ ಭಾಂಡಗೆ, ಲುಂಗಿ ಎನ್ಗಿಡಿ, ಬ್ಲೆಸಿಂಗ್ ಮುಝುರಬಾನಿ, ಮೋಹಿತ್ ರಾಥೆ

ಆರ್‌ಸಿಬಿ ಉಳಿಸಿಕೊಂಡ ಆಟಗಾರರು: ರಜತ್ ಪಾಟಿದಾರ್ (ನಾಯಕ), ವಿರಾಟ್ ಕೊಹ್ಲಿ, ದೇವದತ್ ಪಡಿಕ್ಕಲ್, ಫಿಲ್ ಸಾಲ್ಟ್, ಜಿತೇಶ್ ಶರ್ಮಾ, ಕೃಣಾಲ್ ಪಾಂಡ್ಯ, ಸ್ವಪ್ನಿಲ್ ಸಿಂಗ್, ಟಿಮ್ ಡೇವಿಡ್, ರೊಮಾರಿಯೋ ಶೆಫರ್ಡ್, ಜಾಕೋಬ್ ಬೆಥೆಲ್, ಜಾಶ್ ಹೇಜಲ್‌ವುಡ್, ಯಶ್ ದಯಾಳ್, ಭುವನೇಶ್ವರ್ ಕುಮಾರ್, ನುವಾನ್ ತುಷಾರ, ರಸಿಖ್ ದಾರ್ ಸಿಂಗ್, ಅಭಿನಂದನ್ ಸಿಂಗ್, ಸುಯಾಶ್ ಶರ್ಮಾ.

ಕೋಚ್ ಆಂಡಿ ಫ್ಲವರ್ ಪ್ರತಿಕ್ರಿಯೆ: 'ನಾವು ನಿಜವಾಗಿಯೂ ಬಲಿಷ್ಠ ತಂಡವನ್ನು ಉಳಿಸಿಕೊಳ್ಳಲು ಸಾಧ್ಯವಾಗಿದೆ. ಇತ್ತೀಚೆಗೆ ಪ್ರಶಸ್ತಿ ಗೆದ್ದ ಮತ್ತು ಅತ್ಯುತ್ತಮ ಕ್ರಿಕೆಟ್ ಆಡಿದ ಉತ್ತಮ ಇತಿಹಾಸ ಹೊಂದಿದ್ದೇವೆ. ನಾವು ನಮ್ಮ ತಂಡವನ್ನು ಬಲಪಡಿಸಲು ಎದುರು ನೋಡುತ್ತೇವೆ ಎಂದು ಹೇಳಿದ್ದಾರೆ.

ಸ್ಯಾಮ್ಸನ್ ರಾಜಸ್ಥಾನಕ್ಕೆ, ಜಡೇಜಾ ಚೆನ್ನೈಗೆ

ಮುಂಬೈ: ಬಹುದಿನಗಳಿಂದ ಭಾರೀ ಚರ್ಚೆಯಾಗುತ್ತಿದ್ದ ಸಂಜು ಸ್ಯಾಮ್ಸನ್ ಮತ್ತು ರವೀಂದ್ರ ಜಡೇಜಾ ಐಪಿಎಲ್ ತಂಡ ಬದಲಾವಣೆಯ ಸುದ್ದಿಗೆ ಕೊನೆಗೂ ಶನಿವಾರ ತೆರೆ ಬಿದ್ದಿದೆ. ಸಂಜು ಸ್ಯಾಮ್ಸನ್ ಅವರು ರಾಜಸ್ಥಾನ್ ರಾಯಲ್ಸ್ ತಂಡದಿಂದ ಚೆನ್ನೈ ಸೂಪರ್ ಕಿಂಗ್ಸ್‌ಗೆ ಅಧಿಕೃತವಾಗಿ ಸೇರ್ಪಡೆಯಾಗಿದ್ದಾರೆ. ಹಾಗೆಯೇ ಚೆನ್ನೈ ತಂಡದ ಆಟಗಾರರಾಗಿದ್ದ ರವೀಂದ್ರ ಜಡೇಜಾ ಮತ್ತು ಸ್ಯಾಮ್ ಕರನ್ ರಾಜಸ್ಥಾನ್ ರಾಯಲ್ಸ್‌ಗೆ ಸೇರಿದರು.

ಸ್ಯಾಮ್ಸನ್ 18 ಕೋಟಿ ರು.ಗೆ ಚೆನ್ನೈಗೆ ತೆರಳಿದರೆ, ರವೀಂದ್ರ ಜಡೇಜಾ 14 ಕೋಟಿ ರು.ಗೆ ರಾಜಸ್ಥಾನ್ ರಾಯಲ್ಸ್‌ಗೆ ಮರಳಿದರು. ಐದು ಬಾರಿ ಚಾಂಪಿಯನ್ ಆಗಿದ್ದ ಸಿಎಸ್‌ಕೆ ಕಳೆದ ಐಪಿಎಲ್‌ನಲ್ಲಿ ಪ್ಲೇಆಫ್‌ಗಳನ್ನು ತಲುಪಲು ವಿಫಲವಾಗಿತ್ತು. ಇಂಗ್ಲೆಂಡ್ ಆಲ್‌ರೌಂಡರ್ ಸ್ಯಾಮ್ ಕರನ್ ಚೆನ್ನೈ ಸೂಪರ್ ಕಿಂಗ್ಸ್‌ನಿಂದ ರಾಜಸ್ಥಾನ್ ರಾಯಲ್ಸ್‌ಗೆ ತಮ್ಮ ಪ್ರಸ್ತುತ ಲೀಗ್ ಶುಲ್ಕ 2.4 ಕೋಟಿ ರು.ಗಳಲ್ಲಿ ಸೇರಿಕೊಂಡರು. ಸ್ಯಾಮ್ಸನ್ ಆಗಮನದಿಂದ ಚೆನ್ನೈ ತಂಡಕ್ಕೆ ಸಮರ್ಥ ವಿಕೆಟ್ ಕೀಪರ್ ಮತ್ತು ಆರಂಭಿಕ ಬ್ಯಾಟರ್ ಲಭಿಸಿದಂತಾಗಿದೆ. ಧೋನಿಯ ಉತ್ತರಾಧಿಕಾರಿಯಾಗಿ ಸ್ಯಾಮ್ಸನ್ ಚೆನ್ನೈ ತಂಡವನ್ನು ಮುನ್ನಡೆಸಲಿದ್ದಾರೆ. ಧೋನಿ ಮುಂದಿನ ಐಪಿಎಲ್ ಆವೃತ್ತಿಯಲ್ಲಿ ಕೇವಲ ಇಂಪ್ಯಾಕ್ಟ್ ಆಟಗಾರನಾಗಿ ಆಡುವ ಸಾಧ್ಯತೆ ಇದೆ.

'ರಾಜಸ್ಥಾನ್ ರಾಯಲ್ಸ್ ನನಗೆ ನನ್ನ ಮೊದಲ ವೇದಿಕೆ ಮತ್ತು ಮೊದಲ ಗೆಲುವಿನ ರುಚಿಯನ್ನು ನೀಡಿದ ತಂಡ. ಮತ್ತೆ ಈ ತಂಡಕ್ಕೆ ಮರಳುವುದು ವಿಶೇಷವೆನಿಸುತ್ತದೆ. ಇದು ನನಗೆ ಕೇವಲ ಒಂದು ತಂಡವಲ್ಲ, ಇದು ತವರು. ರಾಜಸ್ಥಾನ್ ರಾಯಲ್ಸ್ ತಂಡದಲ್ಲಿ ನಾನು ನನ್ನ ಮೊದಲ ಐಪಿಎಲ್ ಗೆದ್ದಿದ್ದೇನೆ ಮತ್ತು ಪ್ರಸ್ತುತ ಆಟಗಾರರ ಗುಂಪಿನೊಂದಿಗೆ ಹೆಚ್ಚಿನದನ್ನು ಗೆಲ್ಲಲು ನಾನು ಆಶಿಸುತ್ತೇನೆ' ಎಂದು ಜಡೇಜಾ ಹೇಳಿದ್ದಾರೆ.

ತೆರೆಗೆ ಸಿದ್ಧವಾದ ಗಿಡುಗ

ಈ ಹಿಂದೆ ರಾಜ ರಾಣಿ ರೋರರ್ ರಾಕೆಟ್ ಸಿನಿಮಾವನ್ನು ನಿರ್ದೇಶಿಸಿ ಚಂದನವನದ ಭರವಸೆ ನಿರ್ದೇಶಕರಾಗಿ ಗುರುತಿಸಿಕೊಂಡಿರುವ ಕೆಂಪೇಗೌಡ ಮಾಗಡಿ, ಈಗ ಮತ್ತೊಂದು ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಗಿಡುಗ ಶೀರ್ಷಿಕೆಯಲ್ಲಿ ಸಿನಿಮಾ ಮೂಡಿಬರುತ್ತಿದ್ದು, ಚಿತ್ರಕಥೆ, ಸಂಭಾಷಣೆ ಬರೆದಿದ್ದಾರೆ. ಜತೆಗೆ ಶ್ರೀ ಸಿನಿಮಾಸ್ ಬ್ಯಾನರ್‌ನಲ್ಲಿ ಸಿನಿಮಾ ನಿರ್ಮಾಣಕ್ಕೂ ಬಂಡವಾಳ ಹೂಡುತ್ತಿದ್ದಾರೆ. ಶಂಕರ ನಾರಾಯಣ ನಂಬುದಿರಿ ಮತ್ತು ವಿ.ಎ.ರತೀಶ್ ಹುದಿಕೇರಿ ನಿರ್ಮಾಣದಲ್ಲಿ ಕೈ ಜೋಡಿಸಿದ್ದಾರೆ. ಗಿಡುಗ ಚಿತ್ರಕ್ಕೆ ದಿ ಹಂಟರ್ ಎಂಬ ಅಡಿಬರಹವಿದೆ. ಇದನ್ನು ಗಮನಿಸಿದರೆ ಸಿನಿಮಾದಲ್ಲಿ ಥ್ರಿಲ್ಲರ್ ಸ್ಟೋರಿ ಇರುವುದು ಖಚಿತವಾಗುತ್ತದೆ. ಅದರ ಜತೆಗೆ ಅಣ್ಣ ತಂಗಿ ಬಾಂಧವ್ಯದ ಕಥೆಯೂ ಚಿತ್ರದಲ್ಲಿ ಬೆರೆತಿದೆ. ಸಸ್ಪೆನ್ಸ್, ಮರ್ಡರ್ ಮಿಸ್ಟರಿ ಅಂಶಗಳನ್ನು ಒಳಗೊಂಡಿರುವುದರಿಂದ ನಿರ್ದೇಶಕರು ಚಿತ್ರದ ಸಾರಾಂಶವನ್ನು ಗೌಪ್ಯವಾಗಿಟ್ಟಿದ್ದಾರೆ. ರತೀಶ್ ನಾಯಕನಾಗಿ ನಟಿಸಿದ್ದು, ಭವಾನಿ ನಾಯಕನ ತಂಗಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ಭಾನು, ಮೋಹನ್, ಚಾಮರಾಜು, ರೇವಣ್ಣ ಮಾಗಡಿ, ಚೆನ್ನಬಸವ, ಕಿಶೋರ್, ಸಂಜೀವ್, ಮಾಸ್ಟರ್ ಹೃದಯನ್ ಗೌಡ, ಮಾಸ್ಟರ್ ಪುನೀತ್ ಮುಂತಾದವರು ನಟಿಸಿದ್ದಾರೆ. ಚಿತ್ರದ ಹಾಡುಗಳಿಗೆ ವಿನ್ಸೆಂಟ್ ಮುಕೇಶ್ ಸಂಗೀತ ಸಂಯೋಜಿಸಿದ್ದು, ದೀಪು ಅರಸಿಕೆರೆ ಛಾಯಾಗ್ರಹಣದ ಜವಾಬ್ದಾರಿ ನಿರ್ವಹಿಸಿದ್ದಾರೆ. ಆದಿ ಆದರ್ಶ್ ಸಂಕಲನ, ಮಾರುತಿ ಮಾಗಡಿ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ಬೆಂಗಳೂರು, ಮಾಗಡಿ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ಗಿಡುಗ ಇದೇ ತಿಂಗಳು ಬಿಡುಗಡೆಯಾಗಲಿದೆ.

ವಾರ್ತೆ ಓದಲು ಬಂದ ನಾಗಶೇಖರ್

ಮೈನಾ, ಮಾಸ್ತಿ ಗುಡಿ, ಸಂಜು ವೆಡ್ಸ್ ಗೀತಾ ಹೀಗೆ ಸೂಪರ್ ಹಿಟ್ ಚಿತ್ರಗಳನ್ನು ನಿರ್ದೇಶನ ಮಾಡಿದ ನಿರ್ದೇಶಕ ನಾಗಶೇಖರ್ ಇದೀಗ ನಾಯಕನಾಗಿ ನಟಿಸುತ್ತಿದ್ದಾರೆ. ವಾರ್ತೆಗಳು ಓದುತ್ತಿರುವವರು ಶಂಕರ್‌ನಾಗ್ ಚಿತ್ರದ ಮೂಲಕ ನಾಗಶೇಖರ್ ಬಹಳ ದಿನಗಳ ನಂತರ ತೆರೆಮೇಲೆ ಬರುತ್ತಿದ್ದಾರೆ. ಹಾಸ್ಯ ಕಲಾವಿದನಾಗೇ ಚಿತ್ರರಂಗಕ್ಕೆ ಬಂದ ನಾಗಶೇಖರ್, ಈಗ ವಾರ್ತೆಗಳು ಓದುತ್ತಿರುವವರು ಶಂಕರ್‌ನಾಗ್ ಶೀರ್ಷಿಕೆಯ ಮೂಲಕವೇ ಕುತೂಹಲ ಮೂಡಿಸಿದ್ದಾರೆ. ಈ ಚಿತ್ರಕ್ಕೆ ಜಿಯಾ ಉಲ್ಲಾ ಖಾನ್ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ನಾಗಶೇಖರ್ ಅವರ ಹುಟ್ಟು ಹಬ್ಬದ ಪ್ರಯುಕ್ತ ವಾರ್ತೆಗಳು ಓದುತ್ತಿರುವವರು ಶಂಕರ್‌ನಾಗ್ ಚಿತ್ರದ ಮುಹೂರ್ತ ನೆರವೇರಿದೆ. ಆರ್.ಆರ್. ನಗರದ ಶ್ರೀ ರಾಜರಾಜೇಶ್ವರಿ ದೇವಸ್ಥಾನದಲ್ಲಿ ಸರಳವಾಗಿ ನಡೆದ ಈ ಕಾರ್ಯಕ್ರಮದಲ್ಲಿ ನಾಗಶೇಖರ್ ಅವರ ತಾಯಿ ಚಿತ್ರದ ಪ್ರಥಮ ದೃಶ್ಯಕ್ಕೆ ಕ್ಲಾಪ್ ಮಾಡಿ ಶುಭ ಹಾರೈಸಿದರು. ವಿ.ಎನ್.ಕಿರಣ್ ಅರ್ಪಿಸುತ್ತಿರುವ ಈ ಚಿತ್ರಕ್ಕೆ ಎ.ರಾಮ್ ಚಿರು ಪ್ರೊಡಕ್ಷನ್ ಹೌಸ್ ಮೂಲಕ ರಾಮ್ ಚಿರು ಬಂಡವಾಳ ಹೂಡುತ್ತಿದ್ದಾರೆ, ನವೆಂಬರ್ 15ರಿಂದ ಈ ಚಿತ್ರದ ಚಿತ್ರೀಕರಣ ಪ್ರಾರಂಭವಾಗಲಿದೆ. ಈ ಚಿತ್ರದಲ್ಲಿ ನಾಯಕನಾಗಿ ನಟಿಸುವುದರೊಂದಿಗೆ ನಾಗಶೇಖರ್ ಸಹ ನಿರ್ಮಾಣದ ಜವಾಬ್ದಾರಿ ಹೊತ್ತಿದ್ದು ಜತೆಗೆ ಸಂಗೀತ ನಿರ್ದೇಶಕನಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. ಇನ್ನೇನು ಸಿನಿಮಾದ ಶೂಟಿಂಗ್ ಆರಂಭವಾಗಲಿದೆ.

ಕ್ರಿಸ್‌ಮಸ್‌ಗೆ ಮಾರ್ಕ್ ಎಂಟ್ರಿ

ವಿಟಾಕೀಸ್

ಕಿಚ್ಚ ಸುದೀಪ್ ಅಭಿನಯದ ಮಾರ್ಕ್ ಪೋಸ್ಟರ್ ಹಾಗೂ ಟೀಸರ್ ಮೂಲಕ ಗಮನಸೆಳೆದಿದೆ. ಈಗ ಚಿತ್ರದ ಶೂಟಿಂಗ್ ಕೂಡ ಮುಕ್ತಾಯವಾಗಿದ್ದು ಚಿತ್ರತಂಡ ಕುಂಬಳ ಕಾಯಿ ಒಡೆದಿದೆ. ಮಾರ್ಕ್ ಸೆಟ್ಟೇರಿದಾಗಲೇ ಚಿತ್ರತಂಡ ಬಿಡುಗಡೆಯ ದಿನಾಂಕ ಘೋಷಿಸಿತ್ತು.

ಅಂತೆಯೇ ಮಾರ್ಕ್ ಚಿತ್ರ ಕ್ರಿಸ್‌ಮಸ್ ಹಬ್ಬದಂದೇ ವಿಶ್ವಾದ್ಯಂತ ತೆರೆಗೆ ಬರಲಿದೆ. ಮ್ಯಾಕ್ಸ್ ಸಿನಿಮಾದಲ್ಲಿ ಸುದೀಪ್ ಮತ್ತು ವಿಜಯ್ ಕಾರ್ತಿಕೇಯ ಅವರ ಕಾಂಬಿನೇಷನ್ ಮೋಡಿ ಮಾಡಿತ್ತು. ಈಗ ಮತ್ತೆ ಅವರಿಬ್ಬರು ಮಾರ್ಕ್ ಸಿನಿಮಾದ ಮೂಲಕ ರಂಜಿಸಲು ಬರುತ್ತಿದ್ದಾರೆ. ಮ್ಯಾಕ್ಸ್ ರೀತಿಯೇ ಈ ಬಾರಿ ಕೂಡ ಪೊಲೀಸ್ ಆಫೀಸರ್ ಪಾತ್ರದಲ್ಲಿ ಸುದೀಪ್ ಅವರು ಕಾಣಿಸಿಕೊಳ್ಳುತ್ತಿದ್ದಾರೆ. ಕ್ರಿಸ್‌ಮಸ್ ಹಬ್ಬದ ಪ್ರಯುಕ್ತ ಡಿಸೆಂಬರ್ 25ರಂದು ಮಾರ್ಕ್ ಸಿನಿಮಾ ಅದ್ಧೂರಿಯಾಗಿ ರಿಲೀಸ್ ಆಗಲಿದೆ. ಮಾರ್ಕ್ ಸಿನಿಮಾಗೆ ಶೇಖರ್ ಚಂದ್ರ ಛಾಯಾಗ್ರಹಣ ಮಾಡಿದ್ದು, ಅಜನೀಶ್ .ಬಿ.ಲೋಕನಾಥ್ ಸಂಗೀತ ಸಂಯೋಜಿಸಿದ್ದಾರೆ. ಈ ಸಿನಿಮಾದಲ್ಲಿ ಸುದೀಪ್, ಅಜಯ್ ಮಾರ್ಕಂಡೆ ಪಾತ್ರದಲ್ಲಿ ನಟಿಸಿದ್ದು, ವಿಭಿನ್ನ ಗೆಟಪ್‌ನಲ್ಲಿ ಮಿಂಚಿದ್ದಾರೆ. ಭರ್ಜರಿ ಆ್ಯಕ್ಷನ್ ನಲ್ಲಿಯೂ ಅಬ್ಬರಿಸಿದ್ದಾರೆ. ಮಾರ್ಕ್ ಅದ್ದೂರಿ ವೆಚ್ಚದ ಸಿನಿಮಾವಾಗಿದ್ದು ಸತ್ಯ ಜ್ಯೋತಿ ಫಿಲಂಸ್ ಹಾಗೂ ಕಿಚ್ಚ ಕ್ರಿಯೇಷನ್ಸ್ ಬ್ಯಾನರ್‌ನಲ್ಲಿ ನಿರ್ಮಾಣವಾಗಿದೆ.

ಜೈಲರ್‌ನಲ್ಲಿ ಮೇಘನಾ



ನಟಿ ಮೇಘನಾ ರಾಜ್ ತಮಿಳು ಚಿತ್ರರಂಗಕ್ಕೂ ಕಾಲಿಟ್ಟಿದ್ದಾರೆ. ರಜನಿಕಾಂತ್ ಅಭಿನಯದ ಜೈಲರ್ 2 ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಆ ಮೂಲಕ ಹದಿಮೂರು ವರ್ಷಗಳ ಬಳಿಕ ಮೇಘನಾ ತಮಿಳು ಚಿತ್ರರಂಗದಲ್ಲಿ ಬಣ್ಣಹಚ್ಚುತ್ತಿದ್ದಾರೆ. ಪುಂಡ ಚಿತ್ರದಲ್ಲಿ ನಟಿಸಿದ ಮೇಘನಾ ರಾಜ್ ರಾಜಹುಲಿ ಚಿತ್ರದಲ್ಲಿ ಅಭಿನಯಿಸಿ ಪ್ರಸಿದ್ಧಿ ಪಡೆದರು. ಅಲ್ಲಿಂದ ಸಾಲು ಸಾಲು ಅವಕಾಶಗಳು ಅರಸಿ ಬಂದವು. ಮೇಘನಾ ಕನ್ನಡದ ಜತೆಗೆ ತಮಿಳು, ಮಲೆಯಾಳಂ ಹಾಗೂ ತೆಲುಗು ಭಾಷೆಯ ಸಿನಿಮಾಗಳಲ್ಲಿಯೂ ನಟಿಸಿ ಗಮನಸೆಳೆದಿದ್ದಾರೆ. ಇತ್ತೀಚೆಗೆ ಸಿನಿಮಾ ಆಯ್ಕೆಯಲ್ಲಿ ಚ್ಯೂಸಿ ಆಗಿರುವ ಮೇಘನಾ, 2023ರಲ್ಲಿ ರಿಲೀಸ್ ಆದ ತತ್ಸಮ ತದ್ಭವ ಸಿನಿಮಾದಲ್ಲಿ ನಟಿಸಿದ್ದರು. ಇದಾದ ಬಳಿಕ ಅವರ ನಟನೆಯ ಯಾವುದೇ ಸಿನಿಮಾದಲ್ಲಿ ಕಾಣಿಸಿಕೊಳ್ಳಲಿಲ್ಲ. ಈಗ ಎರಡು ವರ್ಷಗಳ ಬಳಿಕ ರಜನಿಕಾಂತ್ ಜತೆಗೆ ಅಭಿನಯಿಸುತ್ತಿದ್ದಾರೆ. 2023ರಲ್ಲಿ ರಿಲೀಸ್ ಆದ ಜೈಲರ್ ಸಿನಿಮಾ ಸೂಪರ್ ಹಿಟ್ ಆಯಿತು. ಈ ಚಿತ್ರದ ಸೀಕ್ವೆಲ್ ಆಧರಿಸಿ ಜೈಲರ್ 2 ಸಿನಿಮಾ ಸಿದ್ಧವಾಗುತ್ತಿದೆ. ಈ ಚಿತ್ರದ ಶೂಟಿಂಗ್ ಕೂಡ ಭರದಿಂದ ಸಾಗುತ್ತಿದೆ. ಚಿತ್ರದಲ್ಲಿ ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್ ಕೂಡ ಅಭಿನಯಿಸುತ್ತಿದ್ದಾರೆ.



ಈ ವಾರ ಮಾರುತ

ನಿರ್ದೇಶಕ ಎಸ್ ನಾರಾಯಣ್ ನಿರ್ದೇಶನದ ಮಾರುತ ಇದೇ ವಾರ ತೆರೆಗೆ ಬರಲಿದೆ. ದುನಿಯಾ ವಿಜಯ್ ಹಾಗೂ ಶ್ರೇಯಸ್ ಮಂಜು ಪ್ರಮುಖ ಪಾತ್ರದಲ್ಲಿ ನಟಿಸಿರುವ ಈ ಚಿತ್ರದಲ್ಲಿ ಬೃಂದಾ ಆಚಾರ್ಯ ನಾಯಕಿಯಾಗಿ ನಟಿಸಿದ್ದಾರೆ. ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಕಥಾಹಂದರ ಹೊಂದಿರುವ ಈ ಚಿತ್ರ ಇದೇ 21ರಂದು ರಾಜ್ಯಾದ್ಯಂತ ಅದ್ದೂರಿಯಾಗಿ ಬಿಡುಗಡೆಯಾಗುತ್ತಿದೆ. ಈ ಚಿತ್ರದ ಪ್ರೀ ರಿಲೀಸ್ ಇವೆಂಟ್ ಅದ್ದೂರಿಯಾಗಿ ನೆರವೇರಿತು.

ಕಳೆದ ಒಂದು ವರ್ಷದ ಹಿಂದೆ ಶುರುವಾದ ಚಿತ್ರವಿದು. ಕಥೆ ಕೇಳಿ ಕೆ. ಮಂಜು ಹಾಗೂ ರಮೇಶ್ ಯಾದವ್ ನಿರ್ಮಾಣಕ್ಕೆ ಮುಂದಾದರು. ಚಿತ್ರದಲ್ಲಿ ಎಲ್ಲರ ಗಮನ ಸೆಳೆಯುವ ಪ್ರಮುಖ ಪಾತ್ರಕ್ಕೆ ನಟರೊಬ್ಬರು ಬೇಕಿತ್ತು. ಆಗ ನಮಗೆ ನೆನಪಾಗಿದ್ದೆ ದುನಿಯಾ ವಿಜಯ್ ಅವರು. ನಮ್ಮ ಚಿತ್ರದಲ್ಲಿ ನಟಿಸಲು ವಿಜಯ್ ಅವರು ಒಪ್ಪಿದ್ದು ಬಹಳ ಖುಷಿಯಾಯಿತು. ಇನ್ನೂ, ಇದು ನನ್ನ ನಿರ್ದೇಶನದ ಐವತ್ತೊಂದನೇ ಚಿತ್ರವಿದು. ಈ ಹಿಂದಿನ ಸಿನಿಮಾಗಳಿಗಿಂತ ಮಾರುತ ವಿಶೇಷವಾಗಿದೆ ಎಂದು ಎಸ್.ನಾರಾಯಣ್ ಹೇಳಿದರು.

ಮನುಷ್ಯನಿಗೆ ಎಲ್ಲದಕ್ಕಿಂತ ಶಿಸ್ತು ಹಾಗೂ ಸಮಯ ಪರಿಪಾಲನೆ ಮುಖ್ಯ. ನಾನು ಅದನ್ನು ಕಲಿತದ್ದು ಎಸ್.ನಾರಾಯಣ್ ಅವರಿಂದ. ಶ್ರೇಯಸ್, ಬೃಂದಾ ಆಚಾರ್ಯ ಸೇರಿದಂತೆ ಎಲ್ಲಾ ಕಲಾವಿದರು ಅದ್ಭುತವಾಗಿ ನಟಿಸಿದ್ದಾರೆ. ನನ್ನ ಪಾತ್ರ ಕೂಡ ಚೆನ್ನಾಗಿದೆ ಎಂದರು ದುನಿಯಾ ವಿಜಯ್.

ಎಸ್.ನಾರಾಯಣ್ ಅವರ ನಿರ್ದೇಶನದಲ್ಲಿ ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಚಿತ್ರವನ್ನು ಕೆ.ಮಂಜು ಅವರ ಜತೆಗೆ ಸೇರಿ ನಿರ್ಮಾಣ ಮಾಡಿರುವುದು ಖುಷಿ ಕೊಟ್ಟಿದೆ ಎಂದು ನಿರ್ಮಾಪಕ ರಮೇಶ್ ಯಾದವ್ ಸಂತಸ ಹಂಚಿಕೊಂಡರು.

ಎಸ್ ನಾರಾಯಣ್ ಅವರಂತಹ ಅನುಭವಿ ನಿರ್ದೇಶಕರ ಬಳಿ ಕೆಲಸ ಮಾಡಿ ಸಾಕಷ್ಟು ಕಲಿತಿದ್ದೇನೆ. ಇನ್ನೂ, ಅನುಭವಿ ಕಲಾವಿದರ ದೊಡ್ಡ ತಾರಾಬಳಗವೇ ನಮ್ಮ ಚಿತ್ರದಲ್ಲಿದ್ದು, ಅವರೊಟ್ಟಿಗೆ ಅಭಿನಯಿಸಿದ್ದು, ಬಹಳ ಸಂತೋಷವಾಗಿದೆ ಎಂದು ನಾಯಕ ಶ್ರೇಯಸ್ ಕೆ ಮಂಜು ತಿಳಿಸಿದರು. ಮಾರುತ ಸಸ್ಪೆನ್ಸ್, ಥ್ರಿಲ್ಲರ್ ಜತೆಗೆ ಆ್ಯಕ್ಷನ್ ಕಥೆಯನ್ನು ಹೊತ್ತು ಬರುತ್ತಿದೆ.

ತೆರೆಗೆ ಬರಲಿದೆ

ಶಂಕರ್‌ನಾಗ್ ಬಯೋಪಿಕ್

ಕನ್ನಡ ಚಿತ್ರರಂಗದ ಶ್ರೇಷ್ಠ ನಟರಲ್ಲಿ ಶಂಕರ್ ನಾಗ್ ಕೂಡ ಒಬ್ಬರು. ಎಸ್.ಪಿ.ಸಾಂಗ್ಲಿಯಾನ, ಮಿಂಚಿನ ಓಟ, ಒಂದಾನೊಂದು ಕಾಲದಲ್ಲಿ, ಹೊಸ ಜೀವನ... ಹೀಗೆ ಹಲವು ಸಿನಿಮಾಗಳಲ್ಲಿ ನಟಿಸಿರುವ ಶಂಕರ್ ನಾಗ್ ಅಭಿನಯದ ಮೂಲಕವೇ ಗಮನಸೆಳೆದರು. ಮಾತ್ರವಲ್ಲ ಡಾ.ರಾಜ್‌ಕುಮಾರ್ ಸೇರಿದಂತೆ ದಿಗ್ಗಜರು ಅಭಿನಯಿಸಿದ ಸಿನಿಮಾಗಳನ್ನು ನಿರ್ದೇಶಿಸಿ ಪ್ರಸಿದ್ಧಿ ಒಪಡೆದವರು. ಬೆಂಗಳೂರಿನ ಮೆಟ್ರೋ ಕೂಡ ಶಂಕರ್ ನಾಗ್ ಅವರ ಕನಸಾಗಿತ್ತು. ಹೀಗೆ ಕನ್ನಡ ಚಿತ್ರರಂಗಕ್ಕೆ ಅಪಾರ ಕೊಡುಗೆ ನೀಡಿದ ಶಂಕರ್‌ನಾಗ್ ಚಿಕ್ಕ ವಯಸ್ಸಿನಲ್ಲಿಯೇ ಅಕಾಲಿಕ ಮರಣಕ್ಕೆ ತುತ್ತಾದರು. ಶಂಕರ್ ನಾಗ್ ಅವರ ಅಗಲಿಗೆ ಚಿತ್ರರಂಗಕ್ಕೆ ತುಂಬಲಾರದ ನಷ್ಟ ತಂದೊಡ್ಡಿತು. ಈಗ ಶಂಕರ್‌ನಾಗ್ ಅವರ ಬಯೋಪಿಕ್ ತೆರೆಗೆ ತರಲು ಸಿದ್ಧತೆಗಳು ನಡೆಯುತ್ತಿವೆ.

ವಿಶೇಷ ಎಂದರೆ ಈ ಸಿನಿಮಾವನ್ನು ಖ್ಯಾತ ನಿರ್ದೇಶಕ ಉಪೇಂದ್ರ ಅವರು ನಿರ್ದೇಶನ ಮಾಡಲಿದ್ದಾರಂತೆ. ಈ ಕುರಿತು ಉಪೇಂದ್ರ ಅವರು ಮಾತನಾಡಿರುವ ವಿಡಿಯೊ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ಎಲ್ಲರೂ ಶಂಕರ್ ನಾಗ್ ಅವರ ಬಯೋಪಿಕ್ ಮಾಡಿ ಎನ್ನುತ್ತಾರೆ. ಅದಕ್ಕೆ ಅನಂತ್ ನಾಗ್, ಗಾಯತ್ರಿ ಮೊದಲಾದವರ ಒಪ್ಪಿಗೆ ಪಡೆಯಬೇಕು. ಶಂಕರಣ್ಣ ಅವರ ಬಗ್ಗೆ ಮಾಹಿತಿ ಕಲೆ ಹಾಕಿ ಸ್ಕ್ರಿಪ್ಟ್ ರೆಡಿ ಮಾಡಬೇಕು. ಮೇರುಪರ್ವತಕ್ಕೆ ಎಲ್ಲಿಯೂ ಲೋಪ ಆಗದಂತೆ ಬಯೋಪಿಕ್ ಮಾಡಬೇಕು. ಕಮರ್ಷಿಯಲ್ ಆಗಿ ಕೂಡ ಇರಬೇಕು. ಅಭಿಮಾನಿಗಳಿಗೆ ಇಷ್ಟ ಆಗುವಂತೆ ಸಿನಿಮಾ ಮಾಡಬೇಕು ಎಂದು ಉಪೇಂದ್ರ ಹೇಳಿದ್ದಾರೆ. ಶಂಕರ್ ನಾಗ್ ಅವರು ಅಭಿಮಾನಿಗಳ ಆರಾಧ್ಯ ದೈವ, ಹಾಗಾಗಿ ಅವರ ಬಯೋಪಿಕ್ ಬೆಳ್ಳಿತೆರೆಗೆ ಬರಬೇಕು ಎಂಬುದು ಎಲ್ಲರ ಕನಸಾಗಿದೆ. ಈಗ ಉಪ್ಪಿ, ಶಂಕರಣ್ಣನ ಬಯೋಪಿಕ್ ಕುರಿತಂತೆ ಮಾತನಾಡಿರುವುದು ಕರುನಾಡಿನ ಜನರಲ್ಲಿ ಸಂತಸ ತಂದಿದೆ.



ವಿರಾಮ

ಸಾರ್ವಜನಿಕ ರಸ್ತೆಯುದ್ದಕ್ಕೂ ನೂರಾರು ಗಿಡಗಳನ್ನು ನೆಟ್ಟು, ಅವುಗಳಿಗೆ ನೀರೆರೆದು ಪೋಷಿಸಿ, ರಕ್ಷಿಸಿ, ಮರಗಳನ್ನಾಗಿಸಿದವರು ಸಾಲುಮರದ ತಿಮ್ಮಕ್ಕ. ಹೆದ್ದಾರಿಯ ಪಕ್ಕದಲ್ಲಿ ನೆಟ್ಟು ಬೆಳೆಸಿದ ಆ ಸಾಲುಮರಗಳಿಂದ ಅವರು ಯಾವುದೇ ಆರ್ಥಿಕ ಲಾಭವನ್ನು ಬಯಸಿರಲಿಲ್ಲ, ನಿರೀಕ್ಷಿಸಿಯೂ ಇರಲಿಲ್ಲ! ಹಕ್ಕಿಗಳಿಗೆ, ಇತರ ಜೀವಿಗಳಿಗೆ ಆಶ್ರಯ ನೀಡಲಿ ಎಂಬುದು ಒಂದು ಆಸೆ; ರಸ್ತೆಯಲ್ಲಿ ಸಂಚರಿಸುವ ಜನರಿಗೆ ನೆರಳನ್ನು ನೀಡಲು ಎಂಬುದು ಇನ್ನೊಂದು ಬಯಕೆ. ಅಷ್ಟೇ! ಇಂತಹ ನಿಸ್ವಾರ್ಥ ಸೇವೆ ಮಾಡಿದ ಸಾಲುಮರದ ತಿಮ್ಮಕ್ಕನವರು, ತಾವು ಬೆಳೆಸಿದ ಮರಗಳನ್ನು ಮಕ್ಕಳಂತೆಯೇ ಕಂಡರು. ಆ ಮರಗಳನ್ನು ರಕ್ಷಿಸುವಲ್ಲಿ ಮಾತೃಪ್ರೇಮ ಮೆರೆದರು. ಹಳ್ಳಿಗಾಡಿನಲ್ಲೇ ಹುಟ್ಟಿ ಬೆಳೆದ ತಿಮ್ಮಕ್ಕನವರು, ಮರಗಳನ್ನು ನೆಡುವ ಕೈಂಕರ್ಯದ ಮೂಲಕ ಪ್ರಸಿದ್ಧರಾದರು; ಅದಕ್ಕಾಗಿ ಪದ್ಮಶ್ರೀ ಪ್ರಶಸ್ತಿ ಪಡೆಯಲು ದೆಹಲಿಗೆ ಹೋಗಿಬಂದರು! ರಾಷ್ಟ್ರಪತಿಗಳ ಹಸ್ತದಿಂದ ಪದ್ಮಶ್ರೀ ಪ್ರಶಸ್ತಿಯನ್ನು ಅವರು ಪಡೆದಾಗ ತಮ್ಮ ಹಳ್ಳಿಯಲ್ಲಿ ಅವರು ನೆಟ್ಟ ನೂರಾರು ಆಲದ ಮರಗಳು, ಮೌನವಾಗಿ ತಮ್ಮ ಎಲೆಗಳನ್ನು ಅಲುಗಿಸಿ ಚಪ್ಪಾಳೆ ತಟ್ಟಿರಲೇಬೇಕು! ಕರ್ನಾಟಕದ ಗ್ರಾಮೀಣ ಪ್ರದೇಶದ ಪರಿಸರಪ್ರೇಮಿಯೊಬ್ಬರು ಪದ್ಮಪ್ರಶಸ್ತಿ ಪಡೆದ ಅಪರೂಪದ ಕ್ಷಣ ಅದು!

ಮರಗಳೇ ಎನ್ನ ಮಕ್ಕಳು!

» ಶಶಿಧರ ಹಾಲಾಡಿ

ಬದುಕಿದ್ದಾಗಲೇ ದಂತಕಥೆಯಾಗಿ ಪ್ರಸಿದ್ಧರಾದಂತಹವರ ಪಟ್ಟಿಯಲ್ಲಿ ಸಾಲು ಮರದ ತಿಮ್ಮಕ್ಕನವರ ಹೆಸರು ಅಗ್ರಗಣ್ಯ ಎನಿಸುತ್ತದೆ. ಶಾಲೆಗೆ ಹೋಗದ, ಅಕ್ಷರಾಭ್ಯಾಸ ಮಾಡದ ಈ ಮಹಿಳೆ, ಪರಿಸರ ಸಂರಕ್ಷಣೆಯಲ್ಲಿ ಮಾಡಿದ ಕೆಲಸ, ತನ್ನ ಕೆಲಸದ ಮೂಲಕ ಒಂದು ಜನಾಂಗಕ್ಕೆ ನೀಡಿದ ಪ್ರೇರಣೆಯು ಅಗಾಧ. ರಸ್ತೆಯ ಇಕ್ಕೆಲದಲ್ಲಿ ನೂರಾರು ಗಿಡಗಳನ್ನು ನೆಟ್ಟು, ಆ ಗಿಡಗಳಿಗೆ ಬೇಸಗೆಯಲ್ಲಿ ನೀರುಣಿಸಿ, ಗಿಡಗಳನ್ನು ರಕ್ಷಿಸಿ, ಬೆಳೆಸಿ, ಸಾಲುಮರಗಳ ನೆರಳನ್ನು, ಆಸರೆಯನ್ನು ಕಲ್ಪಿಸಿಕೊಟ್ಟ ತಿಮ್ಮಕ್ಕನವರ ಸಾಧನೆ ಮತ್ತು ಅವರು ಗಳಿಸಿದ ಮನ್ನಣೆ ನಿಜಕ್ಕೂ ವಿಶೇಷ. ಹಲವು ವರ್ಷಗಳ ಕಾಲ ಗಿಡಗಳಿಗೆ ನೀರುಣಿಸಿ, ಮೇಕೆಗಳು ಆ ಗಿಡಗಳ ಕುಡಿಯನ್ನು ತಿಂದು ಹಾಕದಂತೆ ಕಾಪಾಡಿ, ಸುಮಾರು 400 ಸಾಲುಮರಗಳನ್ನು ಬೆಳೆಸಿದ ಹಳ್ಳಿಯ ಹೆಂಗಸು ತಿಮ್ಮಕ್ಕನವರು, ಇಂದಿನ ಆಧುನಿಕ ಯುಗದ ಪರಿಸರ ಪ್ರೇಮಿಗಳಿಗೂ ಆದರ್ಶ ಎನಿಸಿದ್ದಾರೆ. ಹಾಗೆ ನೋಡಿದರೆ, ಸಾಲುಮರದ ತಿಮ್ಮಕ್ಕನವರ ಸಾಧನೆಯು ಬಹು ದೀರ್ಘಕಾಲದ ತನಕ, ಬಹುಮಟ್ಟಿಗೆ ಅಜ್ಞಾತವಾಗಿಯೇ ಉಳಿದಿತ್ತು. 1911ರಲ್ಲಿ ಜನಿಸಿದ ತಿಮ್ಮಕ್ಕನವರು, ಆ ಕಾಲದ ಗ್ರಾಮೀಣ ಮಹಿಳೆಯರ ರೀತಿ, ತಮ್ಮ ಪಾಡಿಗೆ ಬದುಕು ಕಟ್ಟಿಕೊಂಡಿದ್ದವರು; ಏಕತಾನದ ಬದುಕು; ಹಸು ಮೇಯಿಸುವಂತಹ ಸಣ್ಣ ಪುಟ್ಟ ಕೆಲಸ ಮಾಡುವ ಕಾಯಕ. ಪತಿ ಬಿಕ್ಕಲು ಚಿಕ್ಕಯ್ಯನವರ ಜತೆ ಸರಳ ಜೀವನ.

ಬದುಕಿನಲ್ಲೊಂದು ತಿರುವು

ಈ ನಡುವೆ, ಒಂದು ದಿನ ಮಾಗಡಿ ತಾಲೂಕಿನ ಹುಲಿಕಲ್ ಮತ್ತು ಕುದೂರು ಗ್ರಾಮಗಳನ್ನು ಸಂಪರ್ಕಿಸುವ ರಸ್ತೆಯ ಪಕ್ಕದಲ್ಲಿ ಹತ್ತು ಆಲದ ಕುಡಿಗಳನ್ನು ನೆಟ್ಟು, ನೀರುಣಿಸಲು ತೊಡಗಿದರು ಆ ದಂಪತಿ. ಅವರಿಗೆ ಅರಿವಿಲ್ಲದೇ ಮಾಡಿದ ಆ ಕೆಲಸವು, ಅವರ ಬದುಕಿಗೊಂದು ಗುರಿಯನ್ನು ಕಲ್ಪಿಸಿತು. ಹಕ್ಕಿಗಳಿಗೆ ಆಶ್ರಯ ನೀಡುವ, ದಾರಿಹೋಕರಿಗೆ ನೆರಳು ನೀಡುವ ಮರಗಳನ್ನು ಬೆಳೆಸುವ, ಪರಿಸರಪ್ರೇಮದ ಕೆಲಸ ಅದು; ಪರಿಸರವಾದದ ಪರಿಚಯವಿಲ್ಲದೇ, ಪರಿಸರ ರಕ್ಷಣೆಗೆ ತೊಡಗಿದ್ದರು ಆ ದಂಪತಿ! ರಸ್ತೆಬದಿ ನೆಟ್ಟ ಗಿಡಗಳನ್ನು ತಮ್ಮ ಮಕ್ಕಳ ರೀತಿಯಲ್ಲಿ ಪೋಷಿಸತೊಡಗಿದರು. ಪ್ರತಿ ವರ್ಷ ಮಳೆ ಬಿದ್ದ ಕೂಡಲೇ, ಅದೇ ರಸ್ತೆಯ ಎರಡೂ ಬದಿಗಳಲ್ಲಿ ಇನ್ನಷ್ಟು ಆಲದ ಕುಡಿಗಳನ್ನು ನೆಟ್ಟು, ನೀರೆರೆದು ಪೋಷಿಸತೊಡಗಿದರು. ಆ ಗಿಡಗಳಿಗೆ ಮುಳ್ಳಿನ ಬೇಲಿ ಮಾಡಿ, ಮೇಕೆಗಳು, ಕುರಿಗಳು ಆ ಗಿಡಗಳನ್ನು ತಿನ್ನದಂತೆ ನೋಡಿಕೊಂಡರು. ಪ್ರತಿ ಬೇಸಗೆಯಲ್ಲೂ ದೂರದಿಂದ ನೀರನ್ನು ಹೊತ್ತು ತಂದು, ತಾವು ನೆಟ್ಟ ಗಿಡಗಳಿಗೆ ಎರೆದು, ಅವು ಬಾಡದಂತೆ ನೋಡಿಕೊಂಡರು; 1950–60ರ ದಶಕದಿಂದಲೇ ಅವರ ಈ ನಿಸ್ವಾರ್ಥ ಕೈಂಕರ್ಯ ಮುಂದುವರಿದಿತ್ತು. ಆ ಸುತ್ತಲಿನ ಗ್ರಾಮಸ್ತರು ಇವರ ಕೆಲಸವನ್ನು ನೋಡಿ ಮೆಚ್ಚಿದ್ದರು; ಆದರೆ, ವಿಶೇಷವಾದ ಪ್ರಚಾರ ದೊರಕದೇ, ಇವರ ಪರಿಸರ ಪ್ರೇಮವು ಅಜ್ಞಾತವಾಗಿಯೇ ನಡೆದಿತ್ತು.

ಹುಲಿಕಲ್ ಮತ್ತು ಕುದೂರು ನಡುವೆ, ರಸ್ತೆಯುದ್ದಕ್ಕೂ ಎರಡೂ ಪಕ್ಕದಲ್ಲಿ ಇವರು ಬೆಳೆಸಿದ ಸುಮಾರು 385 ಮರಗಳು ನೆರಳು ನೀಡತೊಡಗಿದವು; ಆ ಮಟ್ಟಕ್ಕೆ ಮರಗಳು ಬೆಳೆಯಲು ಆ ದಂಪತಿ ಸಾಕಷ್ಟು ಬೆವರು ಸುರಿಸಿದ್ದಂತೂ ನಿಜ; ಅವುಗಳನ್ನು ಕಾಪಾಡುವ ಜತೆಯಲ್ಲೇ, ಎಳವೆಯಲ್ಲಿದ್ದಾಗ, ಬೇಸಗೆಯ ಸಮಯದಲ್ಲಿ ನೀರುಣಿಸುವ ಕೆಲಸನ್ನು ಮಾಡಲೇಬೇಕಿತ್ತು. ನಡುನಡುವೆ ಒಂದೊಂದು ವರ್ಷ ಸಾಕಷ್ಟು ಮಳೆಯಾಗದೇ, ಸನಿಹದ ಜಲಮೂಲಗಳು ಒಣಗಿದಾಗ, ಬಹುದೂರದಿಂದ ನೀರನ್ನು ಹೊತ್ತು ತಂದು, ತಾವು ನೆಟ್ಟ ಗಿಡಗಳಿಗೆ ಉಣಿಸುವ ಮೂಲಕ, ಮಾತೃಪ್ರೇಮವನ್ನು ಮೆರೆದರು ತಿಮ್ಮಕ್ಕ.

ಕಾಯಕ ನಿಷ್ಠೆ ಜೀವನಪ್ರೀತಿ

ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೇ, ಸಾರ್ವಜನಿಕ ರಸ್ತೆಯ ಎರಡೂ ಪಕ್ಕದಲ್ಲಿ ಆಲದ ಮರಗಳನ್ನು ನೆಟ್ಟು ಬೆಳೆಸುವ ಅವರ ಈ ಕಾಯಕನಿಷ್ಠೆಯನ್ನು, ಜೀವನ ಪ್ರೀತಿಯನ್ನು, ಸಾಹಸವನ್ನು ವರ್ಣಿಸಲು ಸೂಕ್ತ ಪದಗಳಿಲ್ಲ. ಮಕ್ಕಳಿಲ್ಲದ ಆ ದಂಪತಿಗೆ, ಆ ರಸ್ತೆಯುದ್ದಕ್ಕೂ ಬೆಳೆದು ನಿಂತ ಮರಗಳೇ ಮಕ್ಕಳು ಎನಿಸಿದವು. ಅವುಗಳು ಬೆಳೆಯುವುದನ್ನು ನೋಡುತ್ತಾ, ಅವುಗಳ ಪಾಲನೆ ಪೋಷಣೆ ಮಾಡುತ್ತಾ, ಬದುಕಿನಲ್ಲಿ ಪ್ರೀತಿಯನ್ನು ಕಂಡುಕೊಂಡರು ಆ ದಂಪತಿ. ಈ ನಡುವೆ, 1991ರಲ್ಲಿ ತಿಮ್ಮಕ್ಕನವರ ಪತಿ ಬಿಕ್ಕಲು ಚಿಕ್ಕಯ್ಯ ತೀರಿ ಹೋದಾಗ, ತಿಮ್ಮಕ್ಕ ಏಕಾಂಗಿಯಾದರು. ಆದರೆ, ಅವರು ಕಷ್ಟಪಟ್ಟು ನೆಟ್ಟು ಬೆಳೆಸಿದ 385 ಆಲದ ಮರಗಳು, ತಿಮ್ಮಕ್ಕನವರನ್ನು ಏಕಾಂಗಿಯಾಗಿರಲು ಬಿಡಲಿಲ್ಲ; ಆ ಮರಗಳನ್ನು ಇನ್ನಷ್ಟು ನಿಷ್ಠೆಯಿಂದ, ಪ್ರೀತಿಯಿಂದ, ಕಾಳಜಿಯಿಂದ ರಕ್ಷಿಸಲು ತೊಡಗಿಕೊಂಡರು, ಸಾಲುಮರದ ತಿಮ್ಮಕ್ಕ.

ಹುಲಿಕಲ್ ಮತ್ತು ಕುದೂರು ಗ್ರಾಮಗಳ ನಡುವಿನ 4 ಕಿ.ಮೀ. ಉದ್ದದ ರಸ್ತೆಯ ಎರಡೂ ಬದಿಗಳಲ್ಲಿ ಬೆಳೆದು ನಿಂತಿದ್ದ 385ಕ್ಕೂ ಅಧಿಕ ಮರಗಳು ಅದಾಗಲೇ ನೆರಳು ನೀಡುತ್ತಿದ್ದರೂ, ಅವು ಆ ಮಟ್ಟಕ್ಕೆ ಬೆಳೆದು ನಿಲ್ಲುವಲ್ಲಿ ತಿಮ್ಮಕ್ಕ ದಂಪತಿ ಮಾಡಿದ ಕೈಂಕರ್ಯ ಆಗಿನ್ನೂ ಪ್ರಸಿದ್ಧಿಗೆ ಬಂದಿರಲಿಲ್ಲ. 1994ರ ಒಂದು ದಿನ; ಕನ್ನಡದ ಪ್ರಮುಖ ದಿನಪತ್ರಿಕೆಯೊಂದು, ಸಾಲುಮರದ ತಿಮ್ಮಕ್ಕ ಬೆಳೆಸಿದ ಸಾಲುಮರಗಳ ಕುರಿತು ಒಂದು ಸಚಿತ್ರ ವರದಿಯನ್ನು ಪ್ರಕಟಿಸಿತು. 'ಓದು ಬರಹ ಕಲಿಯದ, ಹಳ್ಳಿಗಾಡಿನ ಏಕಾಂಗಿ ಮಹಿಳೆಯೊಬ್ಬಳು ಸಾರ್ವಜನಿಕ ರಸ್ತೆಯ ಎರಡೂ ಪಕ್ಕದಲ್ಲಿ, ನೂರಾರು ನೆರಳಿನ ಮರಗಳನ್ನು ಬೆಳೆಸಿದ್ದಾಳೆ, ಆ ಮೂಲಕ ಪಕ್ಷಿ ಸಂಕುಲಕ್ಕೆ ಆಶ್ರಯ ಕಲ್ಪಿಸಿದ್ದಾಳೆ' ಎಂಬ ವಿಚಾರವು ಕನ್ನಡನಾಡಿನಾದ್ಯಂತ ಸಂಚಲನವನ್ನೇ ಸೃಷ್ಟಿಸಿತು. ಸರಕಾರದ ಇಲಾಖೆಗಳು ಮಾಡಬಹುದಾದಂತಹ ಇಂತಹ ಪರಿಸರ ಸ್ನೇಹಿ ಚಟುವಟಿಕೆಯನ್ನು, ಮಾಗಡಿ ತಾಲೂಕಿನ ನಿರಕ್ಷರಕುಕ್ಷಿ ಮಹಿಳೆಯೊಬ್ಬಳು ಮಾಡಿದ್ದಾಳೆ ಎಂಬ ವಿಷಯವು, ಜನಸಾಮಾನ್ಯರಲ್ಲಿ ಮತ್ತು ಪರಿಸರಪ್ರೇಮಿಗಳಲ್ಲಿ ಬೆರಗನ್ನು ಮೂಡಿಸಿತು; ನಿಧಾನವಾಗಿ, ಹಲವು ಸಂಘ ಸಂಸ್ಥೆಗಳು ತಿಮ್ಮಕ್ಕನ ಸಾಧನೆಯನ್ನು ಗುರುತಿಸಿದವು, ಹೊಗಳಿದವು, ಸನ್ಮಾನವನ್ನೂ ಮಾಡಿದವು; ಅವರ ಈ ಪರಿಸರ ಸ್ನೇಹಿ ಚಟುವಟಿಕೆಯಲ್ಲಿ ತಾವೂ ಕೈ ಜೋಡಿಸಿದವು.

ಹುಲಿಕಲ್ ಮತ್ತು ಕುದೂರು ಗ್ರಾಮದ, ಆ ಸುತ್ತಲಿನ ಜನರಿಗೆ ಕೆಲವು ದಶಕಗಳಿಂದಲೇ ಈ ಮಹಿಳೆ ಚಿರಪರಿಚಿತ; ತಮ್ಮ ಗ್ರಾಮದ ರಸ್ತೆಯ ಎರಡೂ ಪಕ್ಕದಲ್ಲಿ ಗಿಡಗಳನ್ನು ನೆಟ್ಟು, ನೀರು ಹಾಕುತ್ತಾ, ಅವುಗಳನ್ನು ರಕ್ಷಿಸುತ್ತಿದ್ದ ಈ ಮಹಿಳೆಯನ್ನು ಗ್ರಾಮಸ್ಥರು 'ಸಾಲುಮರದ ತಿಮ್ಮಕ್ಕ' ಎಂದೇ ಕರೆಯುತ್ತಿದ್ದರು. ಹಳ್ಳಿಯ ಜನರು ಇಟ್ಟ ಹೆಸರಾದ 'ಸಾಲುಮರದ ತಿಮ್ಮಕ್ಕ' ಈಗ ನಾಡಿನಾದ್ಯಂತ ಪ್ರಚುರಗೊಂಡಿತು.

ಉಮೇಶ್ ಅವರ ಸಹಕಾರ

ಇಳಿವಯಸ್ಸಿನಲ್ಲಿ ತಿಮ್ಮಕ್ಕನವರನ್ನು ನೋಡಿಕೊಳ್ಳಲು, ಆಸರೆಯಾದವರು ಅವರ ದತ್ತುಪುತ್ರ ಬಳ್ಳೂರು ಉಮೇಶ್. ತಿಮ್ಮಕ್ಕನವರ ರೀತಿಯೇ ಗಿಡಗಳನ್ನು ನೆಡುವಲ್ಲಿ ಆಸಕ್ತಿ ಇದ್ದ ಬೇಲೂರು ಮೂಲದ ಉಮೇಶ್ ಅವರು, ಈಚಿನ ವರ್ಷಗಳಲ್ಲಿ ತಿಮ್ಮಕ್ಕನವರ ಜತೆಯಲ್ಲೇ ಇದ್ದರು; ತಮ್ಮ ಊರಿನ ಜಾತ್ರೆಗೆ ಹೋಗುವಾಗ ಮತ್ತು ಇತರ ಸಮಾರಂಭಗಳಲ್ಲಿ ಭಾಗವಹಿಸುವಾಗ, ತಿಮ್ಮಕ್ಕನವರನ್ನು ಕ್ಷೇಮವಾಗಿ ಕರೆದುಕೊಂಡು ಹೋಗಿ ಬರುತ್ತಿದ್ದರು.

ಬಿಬಿಸಿ ಗುರುತಿಸಿದ ಸಾಧನೆ

ಏಕಾಂಗಿ, ಅನಕ್ಷರಸ್ಥ ಮಹಿಳೆಯೊಬ್ಬಳು, ರಸ್ತೆಯ ಬದಿ ನೂರಾರು ಮರಗಳನ್ನು ಬೆಳೆಸಿ, ಸಾಲುಮರದ ವನವನ್ನೇ ಬೆಳೆಸಿದ್ದಾಳೆ ಎಂಬ ಸುದ್ದಿ ಕರ್ನಾಟಕದಾಚೆಯೂ ಹರಡಲು ಹೆಚ್ಚು ಸಮಯ ಬೇಕಾಗಲಿಲ್ಲ. ರಾಷ್ಟ್ರೀಯ ಸುದ್ದಿಯಾದ ಈ ಪರಿಸರಸ್ನೇಹಿ ಚಟುವಟಿಕೆಯು ಅಂತಾರಾಷ್ಟ್ರೀಯ ಮಟ್ಟದಲ್ಲೂ ಹರಡಿತು. ಬಿ.ಬಿ.ಸಿ. ಸಂಸ್ಥೆಯು 2014ರಲ್ಲಿ ಸಾಲುಮರದ ತಿಮ್ಮಕ್ಕನ ಸಾಧನೆಯನ್ನು ಗುರುತಿಸಿ, ಜಗತ್ತಿನ ಪ್ರಭಾವಶಾಲಿ ಮಹಿಳೆಯರಲ್ಲಿ ಒಬ್ಬರನ್ನಾಗಿ ಇವರನ್ನು ಹೆಸರಿಸಿದ್ದಂತೂ, ಇಡೀ ದೇಶಕ್ಕೇ ಹೆಮ್ಮೆಯ ವಿಚಾರ. ನಮ್ಮ ರಾಜ್ಯದ ಸರಕಾರ ಮತ್ತು ಪ್ರತಿಷ್ಠಿತ ಸಂಸ್ಥೆಗಳು ಸಾಲುಮರದ ತಿಮ್ಮಕ್ಕನ ಸಾಧನೆಯನ್ನು ಗೌರವಿಸಿದವು.

ಮಾಗಡಿ ತಾಲೂಕಿನ ಹುಲಿಕಲ್ ಮತ್ತು ಕುದೂರು ನಡುವೆ ಆರಂಭದಲ್ಲಿ ಸುಮಾರು 400 ಮರಗಳನ್ನು ಬೆಳೆಸಿದ ಸಾಲುಮರದ ತಿಮ್ಮಕ್ಕನವರು, ಆ ನಂತರವೂ ಗಿಡನೆಡುವ ಕೈಂಕರ್ಯವನ್ನು ಮುಂದುವರಿಸಿದರು. ಅವರೊಂದಿಗೆ ಹಲವು ಸಂಸ್ಥೆಗಳು ಕೈಜೋಡಿದಿವರು. ಇದುವರೆಗೆ ಒಟ್ಟು 8,000ಕ್ಕೂ ಹೆಚ್ಚಿನ ಮರಗಳನ್ನು ಅವರು ನೆಟ್ಟಿದ್ದಾರೆ.

ಮಂತ್ರಿ ಸಮಾನ ಗೌರವ

ಕುದೂರು ಬಳಿ ರಸ್ತೆಯುದ್ದಕ್ಕೂ ಅವರು ನೆಟ್ಟಿರುವ ಮರಗಳು ಇಂದು ವಿಶಾಲ ಕ್ಯಾನೋಪಿಯನ್ನು ಸೃಷ್ಟಿಸಿವೆ; ದಾರಿಹೋಕರಿಗೆ, ಪಕ್ಷಿಗಳಿಗೆ, ಜಾನುವಾರುಗಳಿಗೆ ನೆರಳನ್ನು ನೀಡಿವೆ. ಈ ಮರಗಳನ್ನು ನೆಡುತೋಪನ್ನಾಗಿ ಸರಕಾರ ಘೋಷಿಸಿದ್ದು, ಅವುಗಳನ್ನು ತನ್ನ ಸುಪರ್ದಿಗೆ ತೆಗೆದುಕೊಂಡು, ರಕ್ಷಣೆ ನೀಡಿದೆ. ಜತೆಗೆ, ಇಂತಹ ಒಂದು ಸಾಧನೆಗಾಗಿ, ಸಾಲು ಮರದ ತಿಮ್ಮಕ್ಕನವರಿಗೆ, ಆಜೀವ ಪರ್ಯಂತ ಕ್ಯಾಬಿನೆಟ್ ದರ್ಜೆಯ ಮಂತ್ರಿಯ ಸ್ಥಾನಮಾನ ನೀಡಿ ಗೌರವಿಸಿದೆ.

21ನೆಯ ಶತಮಾನದಲ್ಲಿ ಸಾಲುಮರದ ತಿಮ್ಮಕ್ಕನವರ ಸಾಧನೆಯು ಇನ್ನಷ್ಟು ಪ್ರಸಿದ್ಧವಾಯಿತು. ಅಕ್ಷರಶಃ ನೂರಾರು ಸಂಘ ಸಂಸ್ಥೆಗಳು, ಬಳಗಗಳು, ಗೆಳೆಯರ ಗುಂಪು ಅವರಿಗೆ ಸನ್ಮಾನ ಮಾಡಿವೆ. ಹಲವು ಕಡೆ ಅವರನ್ನು ಗೌರವ ಅತಿಥಿಯಾಗಿ ಕರೆದು, ಪರಿಸರ ರಕ್ಷಣೆಯ ಸಂದೇಶವನ್ನು ಹರಡಿವೆ. ಸಾಲುಮರಗಳನ್ನು ಬೆಳೆಸಿದ ಇವರ ನಿಸ್ವಾರ್ಥ ಚಟುವಟಿಕೆಯು, ಅವರಿಗೆ 2019ರಲ್ಲಿ ಪದ್ಮಶ್ರೀ ಪ್ರಶಸ್ತಿಯನ್ನು ತಂದುಕೊಟ್ಟಿದೆ. ಓದುಬರಹ ಕಲಿಯದ ಗ್ರಾಮೀಣ ಮಹಿಳೆಯೊಬ್ಬರು ಪದ್ಮಶ್ರೀ ಪಡೆದದ್ದು, ಪರಿಸರ ರಕ್ಷಿಸುವ ಎಲ್ಲರಿಗೂ ಇನ್ನಷ್ಟು ಸ್ಫೂರ್ತಿ ನೀಡಿದೆ.

ಇಂದು ಕಾಲ ಬದಲಾಗಿದೆ. ಸಾಲುಮರದ ತಿಮ್ಮಕ್ಕನವರು ಬೆಳೆಸಿದ ಮರಗಳು ನೆರಳನ್ನು ನಿಡುತ್ತಲೇ ಇವೆ; 20ನೆಯ ಶತಮಾನದ ತನಕ ಹೆದ್ದಾರಿಯುದ್ದಕ್ಕೂ ಸಾಲುಮರಗಳನ್ನು ಬೆಳೆಸುವುದು ಆದ್ಯ ಚಟುವಟಿಕೆಗಳಲ್ಲಿ ಒಂದು ಎನಿಸಿತ್ತು. ಆದರೆ 21ನೆಯ ಶತಮಾನದ ಈಚಿನ ವರ್ಷಗಳಲ್ಲಿ, ರಸ್ತೆ ಬದಿಯ ಮರಗಳನ್ನು ಕಡಿದು, ಹಲವು ಲೇನ್‌ಗಳ ರಸ್ತೆ ನಿರ್ಮಾಣ, ಕಾಮಗಾರಿಯು ಹೆಚ್ಚು ಆದ್ಯತೆಯನ್ನು ಪಡೆಯುತ್ತಿದೆ. ಪರಿಸರ ರಕ್ಷಣೆಯ ಅಭಿಯಾನವು, ಹೊಸ ಆಯಾಮದಲ್ಲಿ ಮುಂದುವರಿದಿದ್ದು, ಕವಲುದಾರಿ ಹಿಡಿದಿರುವ ಈ ಸಂದರ್ಭದಲ್ಲಿ, ತಾವೇ ಕೈಯಾರ ನೀರೆರೆದು 385 ಆಲದ ಮರಗಳನ್ನು ಬೆಳೆಸಿದ ಸಾಲುಮರದ ತಿಮ್ಮಕ್ಕನ ಕೈಂಕರ್ಯವು ಒಂದು ಅದ್ಭುತ ಕೆಲಸ ಎಂದು ಗೋಚರವಾಗುತ್ತಿದೆ ಮತ್ತು ಆದರ್ಶಪ್ರಾಯವಾಗಿ ಕಾಣಿಸುತ್ತಿದೆ. ಕಳೆದ ವಾರ ನಮ್ಮನ್ನಗಲಿದ ಸಾಲುಮರದ ತಿಮ್ಮಕ್ಕ, ಈ ಕಾಲಮಾನದ ಎಲ್ಲಾ ಪರಿಸರ ಹೋರಾಟಗಾರರಿಗೆ ಸ್ಫೂರ್ತಿ ತುಂಬಲಿ ಎಂದು ಆಶಿಸೋಣ.

ರಾಷ್ಟ್ರಪತಿಗಳಿಗೆ ಆಶೀರ್ವಾದ!

ಸಾರ್ವಜನಿಕ ರಸ್ತೆಯ ಇಕ್ಕೆಲಗಳಲ್ಲಿ ನೂರಾರು ಮರಗಳನ್ನು ಬೆಳೆಸಿದ ಕೈಂಕರ್ಯಕ್ಕಾಗಿ, ಸಾಲುಮರದ ತಿಮ್ಮಕ್ಕನವರಿಗೆ ಹಲವು ಪ್ರಶಸ್ತಿ ಗೌರವಗಳು ಸಂದಿವೆ. ವಿದೇಶದಲ್ಲೂ ಇವರ ಈ ಸಾಧನೆಯುನ್ನು ಗುರುತಿಸಲಾಗಿದೆ. ಕರ್ನಾಟಕ ಸರಕಾರವು ಅವರಿಗೆ ಮಂತ್ರಿಯ ಸ್ಥಾನಮಾನವನ್ನು ನೀಡಿದೆ. ಭಾರತ ಸರಕಾರವು 2019ರಲ್ಲಿ ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಆ ಪ್ರಶಸ್ತಿಯನ್ನು ರಾಷ್ಟ್ರಪತಿಗಳಿಂದ ಸ್ವೀಕರಿಸಿದ ತಿಮ್ಮಕ್ಕನವರು, ಪ್ರತಿಯಾಗಿ ರಾಷ್ಟ್ರಪತಿಗಳಿಗೆ ನಮಿಸಿ, ಅವರ ತಲೆ ಸವರಿ ಆಶೀರ್ವಾದವನ್ನೂ ಮಾಡಿದರು! ಮರಗಳೇ ಎನ್ನ ಮಕ್ಕಳು ಎಂದು ನಂಬಿದ ಸಾಲು ಮರದ ತಿಮ್ಮಕ್ಕನವರು, ಪರಿಸರ ರಕ್ಷಣೆಯನ್ನು ತಾವೇ ಸ್ವತಃ ಮಾಡಿ ತೋರಿಸಿದವರು; ಆ ಮೂಲಕ ಎಲ್ಲಾ ಪರಿಸರಪ್ರೇಮಿಗಳಿಗೆ ಮಾದರಿ ಎನಿಸಿದ್ದಾರೆ.

» ಸುರೇಂದ್ರ ಪೈ ಭಟ್ಕಳ

ಎಲ್ಲಾ ತಾಯಂದಿರಂತೆ ತಾನು ಅಮ್ಮ ಎಂದು ಕರೆಯಿಸಿಕೊಳ್ಳಬೇಕೆಂಬ ಕನಸು! ಹಳ್ಳಿಯಲ್ಲಿ ಓಡಾಡುವ ಮಕ್ಕಳೆಂದರೆ ಅಕ್ಕರೆ. ಮಕ್ಕಳು ಮಾತ್ರವಲ್ಲ, ಸಕಲ ಜೀವಾದಿಗಳು, ಗಿಡ ಮರಗಳು ಎಲ್ಲವೂ ಆಕೆಗೆ ಇಷ್ಟ. ಅದನ್ನೇ ಯೋಚಿಸುತ್ತಾ ಇದ್ದಾಗ, ಅದೊಂದು ಕ್ಷಣ, ಆಕೆಯ ಮನದಲ್ಲೊಂದು ಆಲೋಚನೆ ಮೂಡಿತು; ಅದು ಕೇವಲ ಆಲೋಚನೆ ಅಲ್ಲ, ಹೃದಯದಲ್ಲಿ ಬಿತ್ತಿದ ಬೀಜ. ತನ್ನೆದೆಯಲ್ಲಿ ಹುದುಗಿಸಿಕೊಂಡಿದ್ದ ಆ ಬೀಜ, ಅಲ್ಲೇ ಕುದುರಿಕೊಂಡಿತು, ನಿಧಾನವಾಗಿ ಜೀವಸಂಚಯಗೊಂಡಿತು. ಆ ಬೀಜ ಮೊಳೆತು ಸಸಿಯಾಗಿ, ನಿಧಾನವಾಗಿ ಬೆಳೆದು ಸಾಲು ಸಾಲು ಮರಗಳಾದವು. ಆಕೆ ತನ್ನ ಮಕ್ಕಳೆಂದು ನಂಬಿದ್ದ ಗಿಡ ಮರಗಳು, ಅಸಾಧಾರಣ ಸಾಧನೆ ಮಾಡಿದವು, ಗಿಡ ನೆಟ್ಟವರೂ ಈ ಬದುಕಿನಲ್ಲಿ ಯಶಸ್ಸು ಗಳಿಸಬಹುದೆಂದು ಸಾಧಿಸಿತೋರಿಸಿದವು.

ಅಂದಿನಿಂದ ಆಕೆ ಜೀವಸಂಕುಲಕ್ಕೆ ವೃಕ್ಷಮಾತೆಯಾದಳು. ಕಷ್ಟದಲ್ಲೇ ಜೀವನ ಸಾಗಿಸಿ, ಸಾಲು ಸಾಲು ಮರಗಳನ್ನು ನೆಟ್ಟು ನಿತ್ಯವೂ ನೀರುಣಿಸಿ ಸಾಕಿ ಸಲಹಿದ ಸಾಲುಮರದ ತಿಮ್ಮಕ್ಕ ನಮ್ಮೊಂದಿಗಿಲ್ಲ. 114 ವರ್ಷಗಳ ಕಾಲ ತುಂಬು ಶತಾಯುಷಿ ಜೀವನವನ್ನು ನಡೆಸಿ ಇದೀಗ ತನ್ನ ದೇಹವನ್ನು ತೊರೆದು, ಪ್ರಕೃತಿ ಮಾತೆ ಮಡಿಲು ಸೇರಿದ್ದಾಳೆ. ಬಹುಶಃ ಅಂದು ಆಕೆಗೆ ತಾನು ಮಾಡ ಹೊರಟಿದ್ದ ಕೆಲಸ ಮುಂದೊಂದು ದಿನ ಮನುಕುಲಕ್ಕೆ ಆದರ್ಶಪ್ರಾಯವಾಗಲಿದೆ ಎಂಬ ಅರಿವು ಇರಲಿಕ್ಕಿಲ್ಲ. ಮರಗಳೇ ತನ್ನ ಮಕ್ಕಳೆಂದು ಭಾವಿಸಿ ತನ್ನೂರಿನ ಹಳ್ಳಿಯ ರಸ್ತೆ ಅಂಚಿನಲ್ಲೊಂದು ಸಸಿ ನೆಡಲು ಪ್ರಾರಂಭಿಸಿದವಳು ಪರಿಸರಪ್ರೇಮಿ ತಿಮ್ಮಕ್ಕ. ತಾನು ನೆಟ್ಟ ಒಂದು ಸಸಿ, ಹೆಮ್ಮರವಾಗಿ ಬೆಳೆದು ಬಿಸಿಲ ಬೇಗೆಯಲ್ಲಿ ದಣಿದು ಬಂದ ದಾರಿಹೋಕರಿಗೆ ನೆರಳ ನೀಡುತ್ತಾ ಮೊಗದಲ್ಲಿ ಮಂದಹಾಸ ಮೂಡಿಸಿತು. ಪಕ್ಷಿ ಸಂಕುಲಗಳಿಗೆ ಆಶ್ರಯದ ತಾಣವಾಯಿತು. ಮನುಕುಲಕ್ಕೆ ಶುದ್ಧ ಆಮ್ಲಜನಕವನ್ನು ನೀಡಿ, ಭೂಮಿಯ ಸಮತೋಲನವನ್ನು ಕಾಪಾಡಿತು. ಪರಿಸರ ಸಂರಕ್ಷಣೆಯೇ ನನ್ನ ಬದುಕಿನ ದಾರಿ ಎಂದು ನಂಬಿದ ಆಕೆ ನಿಜಕ್ಕೂ ಸಾವಿರದ ಸಾಲು ಮರಗಳ ವೃಕ್ಷಮಾತೆಯಾಗಿ ಚಿರಸ್ಥಾಯಿಯಾಗಿ ಎಲ್ಲರ ಮನದಲ್ಲಿ ಉಳಿದುಬಿಟ್ಟಳು.

ನಿರ್ಮಲ ಬದುಕು

ಪರಿಸರವೇ ಜೀವನವೆಂದು ಬದುಕುವ ಪರಿವೇ ನಿರ್ಮಲ. ಶಿಕ್ಷಣದ ಗಂಧವೇ ತಿಳಿಯದ, ಹೊಟ್ಟೆ ಬಟ್ಟೆಗಾಗಿ ಕಲ್ಲು ಗಣಿಯಲ್ಲಿ ದಿನಗೂಲಿ ಕೆಲಸ ಮಾಡುತ್ತಾ ದಿನವನ್ನು ಕಳೆದ ಜೀವನ ಆಕೆಯದು. ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನಲ್ಲಿ 1911 ಜೂನ್ 30ರಂದು ಜನನ. ನಂತರ ಮಾಗಡಿ ತಾಲೂಕಿನ ಚಿಕ್ಕಯ್ಯ ಎಂಬುವವರನ್ನು ವಿವಾಹವಾದರು. ಆದರೆ ದುರದೃಷ್ಟವಶಾತ್, ಇವರಿಗೆ ಮಕ್ಕಳಿರಲಿಲ್ಲ. ಅಂದು ತಿಮ್ಮಕ್ಕನ ಭಾವನೆಗಳಿಗೆ ಬೆಳಕಾದವರೆ ಈ ಸಸಿಗಳು. ಅಂದಿನಿಂದ ರಸ್ತೆಯ ಬದಿಯಲ್ಲಿ ತಾನು ನೆಟ್ಟ ಆಲದ ಸಸಿಗಳನ್ನು ನೆಟ್ಟು ಅವುಗಳನ್ನೇ ಮಕ್ಕಳಂತೆ ಭಾವಿಸಿ ಬೆಳೆಸಿದ್ದಳು.

ಸಾವಿರದ ಸಾಲುಮರಗಳು!

ಗಿಡಗಳಿಗೆ ನೀರುಣಿಸಿದ ತಿಮ್ಮಕ್ಕ

ಮೊದಲಿಗೆ ಮರಗಳಿಂದ ಸಸಿಗಳನ್ನು ಕಸಿಮಾಡಲು ಆರಂಭಿಸಿ ಮೊದಲ ವರ್ಷದಲ್ಲಿ ಹತ್ತು ಸಸಿಗಳನ್ನು ನೆರೆಯ ಕದೂರು ಹಳ್ಳಿಯ ರಸ್ತೆಯ ಬಳಿ ನೆಡಲಾಯಿತು. ಹೀಗೆ ಪ್ರಾರಂಭವಾದ ಪಯಣ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಸಾಗಿ ಸಾವಿರಾರು ಮರಗಳು ಸಾಲು ಸಾಲಾಗಿ ಬೆಳೆದವು. ತಮ್ಮ ಮಕ್ಕಳಾದ ಸಸಿಗಳನ್ನು ಬೆಳೆಸಲು, ಪೋಷಿಸಲು ತಮ್ಮ ದಿನಗೂಲಿಯ ಆದಾಯವನ್ನೇ ಬಳಸಿಕೊಂಡರು. ಆಧುನಿಕ ಸೌಲಭ್ಯವಿರದ ಕಾಲದಲ್ಲೂ ನಿತ್ಯವೂ ನಾಲ್ಕಾರು ಕಿ.ಮೀ. ನಡೆದುಕೊಂಡೇ ನೀರು ತಂದು, ನಿತ್ಯ ನೀರು ಹಾಕಿ, ದನಕರುಗಳು ಗಿಡಗಳನ್ನು ತಿನ್ನದಂತೆ ನೋಡಿಕೊಂಡು ಪೋಷಿಸಿದಳು. ಆ ಗಿಡಗಳೀಗ ದೊಡ್ಡ ಮರಗಳಾಗಿ, ರಸ್ತೆಯುದ್ದಕ್ಕೂ ಬೆಳೆದು ನಿಂತಿವೆ. ಆ ಸಾಲುಮರಗಳೇ ಒಂದು ನೆಡುತೋಪಾಗಿವೆ; ಶುದ್ಧ ಗಾಳಿ ಮತ್ತು ಸುಂದರ ನೋಟವನ್ನು ಒದಗಿಸುತ್ತಿವೆ.

ಆಕೆ ಎಂದಿಗೂ ತನ್ನ ಕಾರ್ಯವನ್ನು ಫೇಸ್‌ಬುಕ್ ಮೂಲಕ, ಇನ್ಸ್ಟಾಗ್ರಾಂ ರೀಲ್ಸ್ ಮೂಲಕ ಪ್ರಚಾರ ಮಾಡಿದವಳಲ್ಲ. ಆಕೆ ನಮ್ಮಷ್ಟು ಓದಿದವಳು ಅಲ್ಲ. ಆದರೂ ಇಂದಿನ ಜೆನ್ ಅಲ್ಫಾ ಮಕ್ಕಳಿಗೂ ಆಕೆಯ ಗುರುತಿದೆ. ಕಲುಷಿತ ಗಾಳಿ ಹಾಗೂ ಪರಿಸರ ಮಾಲಿನ್ಯವು ದಿನೇ ದಿನೇ ಹೆಚ್ಚಾಗುತ್ತಾ ಉಸಿರುಗಟ್ಟಿಸುವ ಇಂದಿನ ಪರಿಸ್ಥಿತಿಯಲ್ಲಿ ಮುಂದಿನ 10–15 ವರ್ಷಗಳ ಬಳಿಕ ಜನರೆಲ್ಲಾ ಹತ್ತಕ್ಕೆ ನೂರರಷ್ಟು ದುಡ್ಡು ನೀಡಿ ಆಕ್ಸಿಜನ್ ಸಿಲಿಂಡರ್, ಸಸಿಗಳನ್ನು ಕೊಂಡು ಅವುಗಳನ್ನು ತಮ್ಮ ಹೆಗಲಿಗೆ ನೇತುಹಾಕಿಕೊಂಡು ಸಾಗುತ್ತಿರುವಂತಹ ವಿಡಿಯೋವೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವುದನ್ನು ನೋಡಿದಾಗ ಸಾಲುಮರದ ತಿಮ್ಮಕ್ಕ ನೆನಪಾಗುತ್ತಾಳೆ.

ಅಭಿವೃದ್ಧಿಯ ಹೆಸರಿನಲ್ಲಿ ರಸ್ತೆ, ಹೆದ್ದಾರಿಯ ಅಗಲೀಕರಣಕ್ಕೆಂದು, ಮೆಟ್ರೋ ನಿರ್ಮಾಣಕ್ಕೆಂದು, ಮನೆ ಕಟ್ಟಲೆಂದು ನಿತ್ಯವೂ ಸಾವಿರಾರು ಮರಗಳ ಮಾರಣಹೋಮ ನಡೆಯುತ್ತಿರುವ ಈ ಸಮಯದಲ್ಲಿ, ಮಾರ್ಗ ಮಧ್ಯದಲ್ಲಿ ದೊಡ್ಡ ಆಲದ ಮರದ ಬುಡವೊಂದನ್ನು ಕಡಿದು ಎಸೆದಿರುವುದನ್ನು ಕಂಡಾಗ ಮನಸ್ಸಿಗೆ ಅದೇನೋ ಸಂಕಟವಾಗುತ್ತದೆ. ಆಗ ಮತ್ತೆ ತಿಮ್ಮಕ್ಕ ನಮ್ಮನ್ನು ಕಾಡುತ್ತಾಳೆ.

ಅನಕ್ಷರಸ್ಥೆಯಾಗಿದ್ದರೂ ಪರಿಸರ ಸಂರಕ್ಷಣೆಯಲ್ಲಿ ತಿಮ್ಮಕ್ಕಳ ಮಹತ್ತರ ಸಾಧನೆಗೆ ಹಲವಾರು ಸಂಘ ಸಂಸ್ಥೆ ಸೇರಿದಂತೆ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳು ಪ್ರಶಸ್ತಿ ನೀಡಿ ಸನ್ಮಾನಿಸಿವೆ. ರಾಜ್ಯೋತ್ಸವ ಪ್ರಶಸ್ತಿ, ವಿಶಾಲಾಕ್ಷಿ ಪ್ರಶಸ್ತಿ, ಇಂದಿರಾ ಪ್ರಿಯದರ್ಶಿನಿ ವೃಕ್ಷಮಿತ್ರ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿ ಪ್ರಶಸ್ತಿ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ – ಈ ರೀತಿ ಸಾಲು ಸಾಲು ಗೌರವಗಳಿಗೆ ಇವರು ಪಾತ್ರರಾಗಿದ್ದಾರೆ. ಅಮೆರಿಕ ಸಂಯುಕ್ತ ಸಂಸ್ಥಾನದ ಲಾಸ್ ಏಂಜಲೀಸ್ ಮತ್ತು ಓಕ್‌ಲ್ಯಾಂಡ್, ಕ್ಯಾಲಿಫೋರ್ನಿಯಗಳಲ್ಲಿ ಸ್ಥಿತವಾಗಿರುವ ಪರಿಸರ ಶಿಕ್ಷಣಕ್ಕಾಗಿ ಇರುವ ಪರಿಸರವಾದಿ ಸಂಘಟನೆಯ ಹೆಸರನ್ನು ತಿಮ್ಮಕ್ಕ ಅವರನ್ನು ಆಧರಿಸಿ ಇಡಲಾಗಿದೆ. ಶಾಲಾ ಪಠ್ಯಪುಸ್ತಕದಲ್ಲೂ 'ಸಾಲು ಮರದ ತಿಮ್ಮಕ್ಕ' ಎಂಬ ಪಾಠವಿದೆ.

ಮಾಗಡಿ ತಾಲೂಕಿನ ಕುದೂರು ಸುತ್ತಮುತ್ತ ಆಕೆ ನೆಟ್ಟ 384 ಆಲದ ಮರಗಳು ಸೇರಿದಂತೆ, ಕರ್ನಾಟಕದಾದ್ಯಂತ ನೆಟ್ಟಿರುವ ಸುಮಾರು 8,000ಕ್ಕೂ ಹೆಚ್ಚು ಮರಗಳು ಇಂದು ಹಸುರನ್ನು ಸೂಸುತ್ತಿವೆ, ಆಮ್ಲಜನಕವನ್ನು ನೀಡುತ್ತಿವೆ, ಪಕ್ಷಿಗಳಿಗೆ ಆಸರೆ ನೀಡಿವೆ. ಆಕೆ ಗಿಡಗಳನ್ನು ನೆಡಲು ಆಯ್ಕೆ ಮಾಡಿಕೊಂಡದ್ದು ಆಲದ ಮರದ ಸಸಿಗಳನ್ನು. ಅವು ಆಮ್ಲಜನಕದ ಪವರ್‌ಹೌಸ್. ಹಾಗಾಗಿ ಅವು ಪರಿಸರ ವ್ಯವಸ್ಥೆಯ ನಾಯಕ ಇದ್ದಂತೆ. ಆಲದ ಮರಗಳನ್ನು ಸಾಲಾಗಿ ಬೆಳೆಯುವ ಮೂಲಕ, ಆ ಗಿಡಗಳಿಗೆ ನೀರನ್ನು ಹೊತ್ತುತಂದು ನೀಡುವ ಮೂಲಕ, ತಿಮ್ಮಕ್ಕ ಇಂದು ಅಮರರಾಗಿದ್ದಾರೆ.

ಅಕ್ಕ

ನೀರುಣಿಸುತ ಬೇರಿಳಿಸುತ ಚಿಗುರನು ನಗಿಸುತ್ತ
ನೆರಳನೆ ನೆನಸುತ್ತ ಹಸಿರನೆ ಕನಸುತ್ತ
ಸಾಲು ಸಾಲು ಬೆಳೆಸಿದರೂ ಸಾಲದು ಎನ್ನುತ್ತ
ಜೀವ ಮಿಡಿದ ಮನಸೇ
ನೀನಿದ್ದುದೆ ಕನಸೇ?

ಇಟ್ಟೆಯ ಬರಿ ಬೀಜ?
ನೆಟ್ಟೆಯ ಸಸಿ? ಮಣ್ಣೊಟ್ಟೆಯ
ಎತ್ತೆರೆದೆಯ ನೀರ?
ಅಟ್ಟಿದ್ದೆಯ ತೊಂಡು ದನವ
ಗಟ್ಟಿಸಿದೆಯ ಬೇರ?

ಮಿಗೆ ಬೆವರಿದೆ ನೀನು
ದಗೆ ಇಳಿಸಿದೆ ನೀನು
ತಿರೆ ತಣಿಸಿದೆ ನೀನು
ನೆರೆ ಕಲಿಸಿದೆ ನೀನು

ಹುಟ್ಟಿದ್ದವೆ ಸುಮ್ಮನೆ ಗಿಡ ಮೊಳೆತಿದ್ದವೆ ಬೀಜ
ಒಂದಿದ್ದವು ನೂರಾದವು ನೋಡಿದೆವೀ ಮೋಜ
ಹಾದಿಬದಿಗೆ ಹಸುರನಿಟ್ಟೆ ನಡಿಗೆಗೆ ನೆರಳೆಂದು
ನೆಟ್ಟ ಸಸಿಗಳೊಂದೊಂದೂ ಗಟ್ಟಿ ಮರಗಳಿಂದು

ನೆಟ್ಟೆಯ ಸಿಹಿ ಮಾವೇ
ಉಂಡೆಯ ಬರಿ ಬೇವೆ
ಸುಲಭ ಮರಗಳೆಣಿಕೆಯಂತು
ಬೀಜದೆಣಿಕೆಯೆಂತು?
ಊರಿಗೆ ನೀ ನೆರಳೇ
ನಾಡಿಗೆ ನೀ ಬೆಳಕೆ

ತೆರೆದುದು ಬರಿ ಗುಳಿಯೇ
ಪರಿಸರದ ಕಳಕಳಿಯೆ
ಎರೆದುದು ಬರಿ ಜಲವೇ
ಎದೆಯಾಳದ ಒಲುಮೆ
ನೆಟ್ಟುದು ಬರಿ ಗಿಡವೇ
ಸಂಕಲ್ಪವು ದೃಢವೇ!
ಚಿಗುರಿಸಿದ್ದು ಬರಿಯೆಲೆಯೇ
ಭವಿತದ ಭರವಸೆಯೇ

ಎಲೆ ನಗುತಿವೆ ಹೂವಳುವುವೆ
ಮರ ನಂಬವು ತಾವೇ
ಇಂಥವಳಿಗೆ ಸಾವೇ?
ಸಾವಿರದಿಹ ತಾವೇ !



» ಬಿ.ಎಸ್. ಚಂದ್ರಶೇಖರ್

ಪುಸ್ತಕ ವಿಮಾನ

ಸ್ವಾತಂತ್ರ್ಯ ಹೋರಾಟದ ಹೆಜ್ಜೆಗುರುತುಗಳು

» ನಾರಾಯಣ ಯಾಜಿ

ನೇತಾಜಿ ಸುಭಾಸ್‌ಚಂದ್ರ ಬೋಸ್ ಅವರು ಇಂಗ್ಲೀಷಿನಲ್ಲಿ ಬರೆದ ಆತ್ಮಕಥೆಯನ್ನು ''ಭಾರತೀಯ ಹೋರಾಟ'' ಎನ್ನುವ ಹೆಸರಿನಲ್ಲಿ ಪ್ರೊ. ಕೆ.ಇ.ರಾಧಾಕೃಷ್ಣ ಕನ್ನಡಕ್ಕೆ ತಂದಿದ್ದಾರೆ. ಹಾಗೇ ಅಜಾದ್ ಹಿಂದ್ ಫೌಜ್‌ನ ಅನಾಮಧೇಯ ಯೋಧಳೊಬ್ಬಳು ಬರೆದ ''ಜೈ ಹಿಂದ್ ದಿನಚರಿ'' ಈ ಎರಡೂ ಕೃತಿಗಳು ಇತಿಹಾಸಪುಟದ ಅನೇಕ ಸಂಗತಿಗಳನ್ನು ತೆರೆದಿಡುತ್ತದೆ. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ನೆಹರೂ, ಗಾಂಧಿ ಒಂದು ಕಡೆ, ಅದಕ್ಕೆ ಪ್ರತಿಯಾಗಿ ನೇತಾಜಿ ಸುಭಾಸ್ ಬಾಬು ಎನ್ನುವ ಸುದ್ದಿ ಯಾವತ್ತಿನಿಂದಲೂ ಕೇಳುತ್ತಲೇ ಇದ್ದೇವೆ. ಈ ಇಬ್ಬರ ನಡುವೆ ಸಂಬಂಧಗಳು ಹೇಗಿತ್ತು ಎನ್ನುವುದಕ್ಕೆ ಈ ಎರಡೂ ಕೃತಿಗಳು ಸಹಾಯಕಾರಿ. ಇದು ಕೇವಲ ಅನುವಾದಮಾತ್ರವಲ್ಲ, ನೇತಾಜಿಯವರ, ಅವರ ಅಣ್ಣ ಶರತ್ ಬಾಬು, ಎಮಿಲಿ ಅವರೆಲ್ಲರ ಅಪರೂಪದ ಪತ್ರಗಳು ಇಲ್ಲಿವೆ.

ನೇತಾಜಿ ಎಂದರೆ ಭಾರತೀಯರಿಗೆಲ್ಲ ಅದೇನೋ ಒಂದು ಆಕರ್ಷಣೆ. ಕಲಕತ್ತಾದ ಸಿರಿವಂತ ಕುಟುಂಬದ ಇವರು,

ಬ್ರಿಟನ್ನಿನಲ್ಲಿ ಐಸಿಎಸ್ ಪಾಸಾಗಿ ಅತ್ಯನ್ನತ ಸರಕಾರಿ ಹುದ್ದೆಗೆ ಏರಬಹುದಾಗಿರುವುದನ್ನು ಬಿಟ್ಟು ಬ್ರಿಟಿಷರ ವಿರುದ್ಧ ಹೋರಾಡಲು ಭಾರತಕ್ಕೆ ಬರುತ್ತಾರೆ. ಅವರ ಹೋರಾಟದ ಚಿತ್ರಣ ಇಲ್ಲಿದೆ. ಜರ್ಮನಿ, ಇಟಲಿ, ಜಪಾನ್ ಸಿಂಗಾಪುರ ನಂತರ ರಂಗೂನ್ ಹೀಗೆ ಹಲವು ದೇಶಗಳಲ್ಲಿ ತಿರುಗಿದ ಅವರ ಸಾಹಸೀ ನಡೆಯ ಕುರಿತು ಗಾಥೆಗಳನ್ನು ಕೇಳಿದ್ದೇವೆ. ಅವರ ಕೊನೆಯೂ ಸಹ ಒಂದು ರಹಸ್ಯವಾಗಿ ಉಳಿದಿದೆ. ಎಲ್ಲಕ್ಕಿಂತಲೂ ಹೆಚ್ಚಾಗಿ ನೇತಾಜಿ ಯಾಕೆ ಕಾಂಗ್ರೆಸಿನಿಂದ ಹೊರನಡೆದರು, ತಮ್ಮದೇ ಆದ ಫಾರ್ವರ್ಡ್ ಬ್ಲಾಕ್‌ಪಕ್ಷ ಕಟ್ಟಿದರು ಎನ್ನುವ ವಿವರಗಳು ಇಲ್ಲಿವೆ.

ನೇತಾಜಿಯವರ ಆತ್ಮಕಥೆ ''ದ ಇಂಡಿಯನ್ ಸ್ಟ್ರಗಲ್' ಅನುವಾದ ಇದು. 1920 ರಿಂದ 1934ರವರೆಗೆ ಮೊದಲ ಭಾಗ ಹಾಗೂ 1934ರಿಂದ 1942 ಎರಡೂ ಭಾಗಗಳಲ್ಲಿದೆ. ಇದರಲ್ಲಿ ಸ್ವತಃ ನೇತಾಜಿಯವರೇ ತನ್ನ ಮತ್ತು ಇತರ ಸ್ವಾತಂತ್ರ್ಯ ಹೋರಾಟಗಾರರ ಕುರಿತು ಹೇಳಿಕೊಂಡಿದ್ದಾರೆ. ಇದರಲ್ಲಿ ಎಲ್ಲಿಯೂ ನೇತಾಜಿಯವರ ಜನನ, ತಂದೆ ತಾಯಿಗಳ ಉಲ್ಲೇಖವಿಲ್ಲ, ತನ್ನ ಬಾಲ್ಯ ಮತ್ತು ತನ್ನನ್ನು ತಾನು ಎಲ್ಲಕ್ಕಿಂತ ಮಿಗಿಲಾಗಿ ತೋರಿಸಿಕೊಳ್ಳಬೇಕೆನ್ನುವ ಹಪಹಪಿಕೆಯಿಲ್ಲ. ಗಾಂಧೀಜಿಯನ್ನು ದೂಷಣೆ ಮಾಡಿದ ಯಾವುದೇ ಒಂದು ವಾಕ್ಯವೂ ಇಲ್ಲ. ಗಾಂದೀಜಿಯವರನ್ನು ಉಲ್ಲೇಖಿಸುವಾಗ ''ಮಹಾತ್ಮಾ'' ಎಂದೇ ಸಂಭೋಧಿಸುತ್ತಾರೆ.

ಸುಭಾಸ್ ಚಂದ್ರ ಬೋಸ್ ಅವರ ಆತ್ಮಕಥೆ ಮತ್ತು ಅನಾಮಿಕ ಯೋಧೆಯೊಬ್ಬಳು ಬರೆದ ದಿನಚರಿ, ಇವೆರಡನ್ನು ಕನ್ನಡಕ್ಕೆ ಅನುವಾದ ಮಾಡಿದವರು ಪ್ರೊ. ಕೆ.ಇ.ರಾಧಾಕೃಷ್ಣ.

ವಿಭಿನ್ನ ಗುಂಪು ಮತ್ತು ಭಿನ್ನ ಭಿನ್ನ ನಡೆಯುಳ್ಳ ಕಾಂಗ್ರೆಸಿನಲ್ಲಿ ಎಲ್ಲರನ್ನು ಸಮನ್ವತೆಯಿಂದ ತೆಗೆದುಕೊಂಡು ಹೋಗುವ ಸಾಮರ್ಥ್ಯವಿರುವವರು ಮಹಾತ್ಮಾ ಗಾಂಧೀಜಿ ಮಾತ್ರ ಎನನ್ನುತ್ತಾರೆ. ಗಾಂಧೀಜಿಯವರ ಜೊತೆ ತನಗೆ ಸಾಗಲಾಗಿರುವುದಕ್ಕೆ ಅವರ ಮನಸ್ಸಿನಲ್ಲಿ ವಿಷಾದ ಮೂಡಿರುವುದನ್ನು ಕಾಣಬಹುದು.

''ಜೈ ಹಿಂದ್ ದಿನಚರಿ'', ಅನಾಮಿಕರಾಗಿ ಉಳಿಯುವ ಅಜಾದ ಸೈನಿಕರ ಅಮೂಲ್ಯ ಸಾಧನೆಯನ್ನು ತಿಳಿಸುತ್ತದೆ. ಕೇವಲ ನೂರಾ ಮೂರು ದಿನಗಳಲ್ಲಿ ಲೇಖಕಿ ತನ್ನ ಅನುಭವವನ್ನು ದಾಖಲಿಸಿದ ಘಟನಾವಳಿಗಳು ಇಲ್ಲಿವೆ. ವಿವರಗಳು ಅಷ್ಟೇನೂ ಇಲ್ಲ.

ಪ್ರೊ. ರಾಧಾಕೃಷ್ಣ ಅವರಿಗೆ ಅವರ ಮಿತ್ರ, ಹಿರಿಯ ನ್ಯಾಯವಾದಿ ಶ್ರೀ ನಿರೂಪ್ ಅವರ ಮೂಲಕ ಸಿಕ್ಕಿದ ಅಪ್ರಕಟಿತ ಡೈರಿ ಈ ''ಜೈ ಹಿಂದ್ ದಿನಚರಿ''. ಯಾವುದೇ ಒಂದು ಕೃತಿಯ ಯಶಸ್ಸಿಗೆ ಅದರ ಕೃತಿಕಾರನ ಹೆಸರು ಮುಖ್ಯವಲ್ಲ. ಅದನ್ನು ನಿರೂಪಿಸುವಲ್ಲಿ ಆತ ತನ್ನನ್ನು ತಾನು ಹೇಗೆ ಅರ್ಪಣೆ ಮಾಡಿಕೊಂಡಿದ್ದಾನೆ ಎನ್ನುವುದರಲ್ಲಿ ಆ ಕೃತಿಯ ಯಶಸ್ಸು ಇದೆ. ಈ ದಿನಚರಿಯ ಲಿಪಿಕಾರ ಹೆಸರಿಲ್ಲದ ಓರ್ವ ಧೀರ ಮಹಿಳೆ. ತನ್ನನ್ನು ತಾನು ಶ್ರೀಮತಿ ಎಂ. ಎಂದು ಕರೆದುಕೊಂಡಿದ್ದಾಳೆ.

ಮಹಿಳೆಯ ಸಾಹಸಗಳು

ಆಕೆ ಅಜಾದ್ ಹಿಂದ್ ಫೌಜ್‌ನ ಝಾನ್ಸಿ ಲಕ್ಷ್ಮೀಬಾಯಿ ವಿಭಾಗದಲ್ಲಿ ಇದ್ದು ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಧೀಮಂತ ಮಹಿಳೆ. ಸುಭಾಸಚಂದ್ರ ಬೋಸರ ಕುರಿತು ಆಕೆಯ ನಿಷ್ಠೆ ಮತ್ತು ಅವರು ತಂದುಕೊಡ ಬಹುದಾದಂತಹ ಮಾತ್ರಭೂಮಿಯ ಸ್ವಾತಂತ್ರ್ಯದ ವಿಷಯದಲ್ಲಿ ಆಕೆಗೆ ಮತ್ತು ಆಕೆಯ ಪತಿಗೆ ಅಚಲವಾದ ನಂಬಿಕೆಯಿದೆ. ಈಕೆ ಮೂಲತಃ ತಮಿಳುನಾಡಿನವಳು ಎನ್ನುವದಷ್ಟೇ ಗೊತ್ತಾಗುತ್ತದೆ. ಅಜಾದ್ ಹಿಂದ್ ಫೌಜ್‌ನ ಸೈನಿಕರು ತಮ್ಮ ಗುರುತನ್ನು ಬಿಟ್ಟುಕೊಡುವುದಿಲ್ಲ. ಆಕೆಯ ಪತಿ ಸಹ ಅಜಾದ್ ಹಿಂದ್ ಫೌಜ್‌ನ ಸೈನಿಕ. ಅವರು ಎಲ್ಲಿಯವರು ಎನ್ನುವ ವಿವರಣೆ ಇಲ್ಲ. ಅವರಿಗೆ ಓರ್ವ ಮಗನಿದ್ದಾನೆ. ತಮ್ಮ ನಂತರ ಆತನ ಗತಿ ಏನು ಎನ್ನುವುದ ಕಳವಳ ಆಗಾಗ ಕಾಣಿಸಿದರೂ ಅದು ಈ ದಂಪತಿಗಳ ಹೋರಾಟದ ಕೆಚ್ಚನ್ನು ಕಡಿಮೆಮಾಡುವುದಿಲ್ಲ. ಈ ಕೃತಿಯುದ್ದಕ್ಕೂ ಕಂಡುಬರುವುದು ಅಜಾದ್ ಹಿಂದ್ ಫೌಜ್‌ನ ಸ್ವಾತಂತ್ರ್ಯದ ಹಸಿವು. ಆ ಕಾರಣಕ್ಕಾಗಿ ತಮ್ಮ ವೈಯಕ್ತಿಕ ಹಿತಾಸಕ್ತಿಯನ್ನು ಮರೆತು ಇವರೆಲ್ಲರೂ ಮುನ್ನೆಡೆಯುತ್ತಿದ್ದಾರೆ. ''ದೇಶಕ್ಕಾಗಿ ಎಲ್ಲ, ಸ್ವಂತಕ್ಕೆ ಸ್ವಲ್ಪ'' ಎನ್ನುವ ಘೋಷವಾಕ್ಯ ಇವರ ನಿರ್ವಚನವಾಗಿದೆ. ಹಾಗಾಗಿ ಇಲ್ಲಿ ಬರುವ ಹೆಸರುಗಳಾದ ಲೇಖಕಿ ಶ್ರೀಮತಿ ಎಂ.. ಅವರ ಪತಿ ಶ್ರೀ. ಪಿ ಟಿ, ಎಂ, ಎನ್, ಕೆ, ಆರ್, ಕರ್ನಲ್ ಜಿ, ಕುಮಾರಿ ಸಿ, ಎಂ., ಎಸ್., ಡಿ., ಎಲ್., ಹೀಗೆ ಹಲವಾರು ಹೆಸರುಗಳಿವೆ. ಅವುಗಳ ವಿವರಗಳನ್ನು ಪ್ರೊ. ರಾಧಾಕೃಷ್ಣ ಅವರು ಅನುಬಂಧದಲ್ಲಿ ನೀಡಿದ್ದಾರೆ.

ಗಾಂಧೀಜಿಯವರಿಗೆ ಗೌರವ

ಜೂನ್ 19, 1943ರಂದು ಸುಭಾಶ್ಚಂದ್ರ ಭೋಸರು ಸ್ಯುನ್ಯಾನ್‌ಗೆ ಬಂದು ನೇರವಾಗಿ ಅಜಾದ್ ಹಿಂದ್ ಫೌಜ್‌ನ ನಾಯಕತ್ವವನ್ನು ಸ್ವೀಕರಿಸುವ ವೇದಿಕೆಯಲ್ಲಿ ಮಹಾತ್ಮಾ ಗಾಂಧೀಜಿಯವರ ಒಂದು ದೊಡ್ಡ ಚಿತ್ರವನ್ನು ವೇದಿಕೆಯಲ್ಲಿ ಪ್ರಧಾನವಾಗಿ ಹಾಕಲಾಗಿತ್ತು. ಇನ್ನೊಂದು ಭಾರತಮಾತೆಯ ಆಕೃತಿ. ಗಾಂಧಿಜಿಯ ಹೋರಾಟವನ್ನು ಎಲ್ಲಿಯೂ ಸುಭಾಸರು ಅಗೌರವದಿಂದ ನೋಡುವುದಿಲ್ಲ. ಗಾಂಧೀಜಿಯವರ ''ಭಾರತ ಬಿಟ್ಟು ತೊಲಗಿ' ಚಳುವಳಿ ಸ್ವಾತಂತ್ರ್ಯ ಹೋರಾಟದಲ್ಲಿಯೇ ಮಹತ್ವದ ಪಾತ್ರ ವಹಿಸುತ್ತದೆ. ಒಂದರ್ಥದಲ್ಲಿ ಇದು ಸುಭಾಸರು ತನ್ನ ಪೌಜಿಗೆ ಕೊಟ್ಟ ''ದಿಲ್ಲಿ ಚಲೋ'' ಘೋಷಣೆಗೆ ಪ್ರತಿಯಾಗಿ ಬಂದಿದ್ದು. ಎರಡನೆಯ ಮಹಾಯುದ್ಧದಲ್ಲಿ ಆಂಗ್ಲರು ಭಾರತವನ್ನು ಕೇಳದೇ ಯುದ್ಧದಲ್ಲಿ ತೊಡಗಿಸಿಕೊಂಡಿದ್ದು ಅವರಿಗೆ ಸಹ್ಯವಾಗಿರಲಿಲ್ಲ. ಆಗ ಅವರು''ಭಾರತ ಬಿಟ್ಟು ತೊಲಗಿ' ಚಳುವಳಿಗೆ ಕರೆ ಕೊಟ್ಟರು. ಆಂಗ್ಲರು ಸುಳ್ಳು ಸುದ್ಧಿಯನ್ನು ಹರಡುವಲ್ಲಿ ನಿಸ್ಸೀಮರು. ಕುತಂತ್ರಮಾಡುವುದರಲ್ಲಿ ಎತ್ತಿದವರು. ಗಾಂಧೀ ಮಾರ್ಗ ಮತ್ತು ಸುಭಾಸರ ಮಾರ್ಗ ಇಲ್ಲಿ ಕವಲೊಡೆಯುವುದಕ್ಕೆ ಕಾರಣ ಇಲ್ಲಿದೆ.

ಯಶಸ್ಸಿನ ಮಾರ್ಗದಲ್ಲಿದ್ದ ಜಪಾನಿ ಪಡೆ ಸೋತಾಗ ಅನಿವಾರ್ಯವಾಗಿ ಅಜಾದ್ ಹಿಂದ್ ಸಹ ಸೋಲನ್ನು ಕಾಣಬೇಕಾಗುತ್ತದೆ. ಸ್ವತಃ ನೇತಾಜಿಯವರೇ ತಮ್ಮ ಪಡೆ ಸೋಲಲು ಕಾರಣವನ್ನು ವಿವರಿಸುವಾಗ ವಿಧಿ ಅವರ ಹಾದಿಗೆ ಅಡ್ಡ ಬಂದಿರುವುದನ್ನು ಕಾಣುತ್ತೇವೆ. ಆದರೂ ಅಜಾದ್ ಹಿಂದ್ ಬ್ಯಾಂಕಿನಲ್ಲಿ ಠೇವಣಿ ಇಟ್ಟವರಿ ಗೆಲ್ಲ ವಾಪಾಸುಕೊಟಿದೆ. ಕೊನೆಯಲ್ಲಿ ನೇತಾಜಿ ಅವರ ಅಘಘಾತದ ವಿಷಯವನ್ನು ಹೇಳುವಾಗ ''ಅವರು ಮುನ್ನೆಡೆದರು! ಎಂತಹ ಮಹಾನ್ ವ್ಯಕ್ತಿ ಇವರು!'' ಎನ್ನುವ ವೀರ ವರ್ಣನೆಗಳು ಯಾವ ಮಹಾನ್ ಸಾಹಿತ್ಯವನ್ನು ಮೀರಬಲ್ಲವು.

''ನನ್ನ ದಿನಚರಿಯೇ! ನಿನ್ನಲ್ಲಿ ನಾನು ಮನಬಿಚ್ಚಿ ಮಾತನಾಡುತ್ತೇನೆ. ನಿನ್ನಲ್ಲಿ ನಾನು ಹೃದಯ ಬಿಚ್ಚಿಡುತ್ತೇನೆ. ನಾನೀಗ ಝುರ್ಝುರಿತ ಮಹಿಳೆ!'' ಎನ್ನುತ್ತಲೇ ಡೈರಿ ಕೊನೆಯಾಗುತ್ತದೆ. ಆದರೆ ದೇಶಪ್ರೇಮವಲ್ಲ. ಮುಗಿಸುವ ಮುನ್ನ ಆಕೆ ಹೇಳುವ ''ಜೈ ಹಿಂದ್,. ಜೈ ಹಿಂದ್ ಜೈ'' ನಮ್ಮನ್ನು ಕಾಡುತ್ತದೆ. ಇವೆರಡೂ ಅನುವಾದಿತ ಪುಸ್ತಕಗಳು ಕನ್ನಡದ ಓದುಗರಿಗೆ ಇತಿಹಾಸದಲ್ಲಿ ಅಡಗಿದ ಹೊಸ ವಿಚಾರಗಳನ್ನು ನೀಡುತ್ತವೆ.





ಭಾರತೀಯ ಹೋರಾಟ ಮತ್ತು, ಅಸಾಮಾನ್ಯ ದಿನಚರಿ,
ಅನು: ಪ್ರೊ. ಕೆ.ಇ.ರಾಧಾಕೃಷ್ಣ, ಪ್ರ: ಸನ್‌ಸ್ಟಾರ್ ಪಬ್ಲಿಷರ್ಸ್,
ಬೆಂಗಳೂರು, 08022224143

ವಿಶ್ವವಾಣಿ ಅಂಕಿತ ಟಾಪ್ ಟೆನ್



1
ಬದುಕ ಗೆಲ್ಲಿಸು ಮನವೇ
(ನೈಜ ಘಟನೆಗಳನ್ನು ಆಧರಿಸಿದ, ಸ್ಫೂರ್ತಿ ನೀಡುವ ಬರಹಗಳ ಸಂಗ್ರಹ)
ಲೇ: ನೇಮಿಚಂದ್ರ
ಪ್ರ: ನವಕರ್ನಾಟಕ ಪ್ರಕಾಶನ, ಬೆಂಗಳೂರು
ಬೆಲೆ: ರೂ 325/-



2
ಕರೆಂಟಿನ ಕಥೆ
(ಜಗತ್ತಿನಲ್ಲಿ ವಿದ್ಯುಚ್ಛಕ್ತಿಯನ್ನು ಹೇಗೆ ಕಂಡು ಹಿಡಿದರು? ವಿದ್ಯುಚ್ಛಕ್ತಿಯ ಉಗಮ ಮತ್ತು ವಿಕಾಸದ ಕಥನ)
ಲೇ: ಡಾ। ಗಜಾನನ ಶರ್ಮ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ: ರೂ 450/-

3
ಓ ಅರಬ್ಬಿ ಕೊಲ್ಲಿಯೇ ....
(ಹೆಚ್ಚಿನ ಗಳಿಕೆಗಾಗಿ ಕೊಲ್ಲಿ ದೇಶಗಳಿಗೆ ಹೋದವರು ಸುಖವಾಗಿದ್ದಾರೆಯೇ? ವಲಸಿಗರ ಮನ ಕದಡುವ ಕಥಾನಕಗಳು)
ಲೇ: ರೆಜಿಮೋನ್ ಕುಟ್ಟಪ್ಪನ್
ಅನು: ಜ್ಯೋತಿ ಎ
ಪ್ರ: ಬಹುರೂಪಿ, ಬೆಂಗಳೂರು
ಬೆಲೆ: 400/-



4
ಗಾಂಧಿಮನೆಯ ಅವಲಕ್ಕಿ ಸರ
(ವಿಭಿನ್ನವಾದ ಓದಿನ ಅನುಭವ ನೀಡುವ ಕಾದಂಬರಿ)
ಲೇ: ಎಂ. ಜಿ. ಹೆಗಡೆ
ಪ್ರ: ಸೃಷ್ಟಿ ಪ್ರಕಾಶನ, ಬೆಂಗಳೂರು
ಬೆಲೆ: ರೂ 380/-



5
ಕೋಲುದಾರಿ
(18 ವಯಸ್ಸಿಗೇ ಕಣ್ಣು ಕಳೆದುಕೊಂಡರೂ, ಛಲದಿಂದ ಬದುಕನ್ನು ರೂಪಿಸಿಕೊಂಡ ಸಿದ್ದೇಶ್ ಅವರ ಆತ್ಮಕಥನ)
ಲೇ: ಸಿದ್ದೇಶ್.ಕೆ
ಪ್ರ: ಛಂದ ಪುಸ್ತಕ, ಬೆಂಗಳೂರು
ಬೆಲೆ: ರೂ 160/-

6
ಭೂಮಿಗೀತ
(ಕರಾವಳಿ ಭಾಗದ ಜನಜೀವನವನ್ನು ಚಿತ್ರಿಸುವ ನಾ.ಮೊಗಸಾಲೆಯವರ ಹೊಸ ಕಾದಂಬರಿ)
ಲೇ: ಡಾ। ನಾ. ಮೊಗಸಾಲೆ
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಬೆಲೆ: ರೂ 450/-

7
ಈ ಹಣಕಾಸು ತಪ್ಪುಗಳನ್ನು ನೀವು ಮಾಡಬೇಡಿ!
(ಗಳಿಸಿದ ಹಣವನ್ನು ಸರಿಯಾಗಿ ನಿರ್ವಹಿಸದಿದ್ದರೆ ಅನಾಹುತ ಆದೀತು! ಹಣದ ನಿರ್ವಹಣೆಗಾಗಿ ಉಪಾಯಗಳನ್ನು ಸೂಚಿಸಿದ್ದಾರೆ ಲೇಖಕರು)
ಲೇ: ರಂಗಸ್ವಾಮಿ ಮೂಕನಹಳ್ಳಿ
ಪ್ರ: ಸಾವಣ್ಣ ಪ್ರಕಾಶನ, ಬೆಂಗಳೂರು
ಬೆಲೆ: ರೂ 325/-

8
ಮಿಥ್ಯಸುಖ
(ಲೇಖಕಿ ಕಾವ್ಯಾ ಕಡಮೆ ಅವರ ಅಪರೂಪದ ಕಾದಂಬರಿ)
ಲೇ: ಕಾವ್ಯಾ ಕಡಮೆ
ಪ್ರ: ಜೀರುಂಡೆ ಪುಸ್ತಕ, ಬೆಂಗಳೂರು
ಬೆಲೆ: ರೂ 365/-

9
ಪಂಚತಂತ್ರ
(ಇದು ಬರೀ ಗದ್ಯಕಥೆಯಲ್ಲ, ಮೂಲಶ್ಲೋಕಗಳೂ, ವ್ಯಾಖ್ಯಾನವೂ ಇಲ್ಲಿವೆ.)
ಕನ್ನಡಕ್ಕೆ: ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ
ಪ್ರ: ಸದಾತನ ಪ್ರಕಾಶನ, ಬೆಂಗಳೂರು
ಬೆಲೆ: ರೂ 600/-



10
ಜುಗಾರಿ ಕ್ರಾಸ್
(ತೇಜಸ್ವಿಯವರ ಪ್ರಸಿದ್ಧ ಕಾದಂಬರಿ. ಈಗ ಚಲನಚಿತ್ರವಾಗುತ್ತಿದೆ.)
ಲೇ: ಕೆ.ಪಿ. ಪೂರ್ಣಚಂದ್ರ ತೇಜಸ್ವಿ
ಪ್ರ: ಪುಸ್ತಕ ಪ್ರಕಾಶನ, ಮೂಡಿಗೆರೆ
ಬೆಲೆ: ರೂ 246/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004.
ದೂರವಾಣಿ: 26617100/26617755
ಮೊಬೈಲ್ ನಂ: 9019190502

ಹಗಲೆಂದರೆ ಬೆಳಕಲ್ಲ

» ಆರ್.ಪಿ.ಮಾಲಿನಿ

'ಹಗಲೆಂದರೆ ಬೆಳಕಲ್ಲ' ಇದು ಸದಾಶಿವ ಸೊರಟೂರು ಬರೆದಿರುವ ಹನ್ನೊಂದು ಕಥೆಗಳಿರುವ ಕಥಾ ಸಂಕಲನ. ಈ ಪುಸ್ತಕವು ಅಂಕಿತ ಪುಸ್ತಕದ 992ನೆ ಪುಸ್ತಕ; ಅಂಕಿತ ಪ್ರಕಾಶನವು ಸದ್ಯದಲ್ಲೇ ಒಟ್ಟು 1,000 ಪುಸ್ತಕಗಳ ಪ್ರಕಟಣೆಯ ದಾಖಲೆಯನ್ನು ಮಾಡಲಿದ್ದು, ಆ ಪುಸ್ತಕಗಳ ಪಟ್ಟಿಗೆ ಈ ಕಥಾಸಂಕಲನವು ಒಂದು ಹೆಮ್ಮೆಯ ಸೇರ್ಪಡೆ ಎನ್ನಬಹುದು. ಸದಾಶಿವ ಸೊರಟೂರು ಅವರು ಸೂಕ್ಷ್ಮ ಸಂವೇದನೆಯ ಕಥೆಗಾರರು. ಅವರು ಕವಿಯಾಗಿಯೂ ಹೆಸರು ಮಾಡಿದ್ದಾರೆ. ಸ್ತ್ರೀ ಸಂವೇದನೆಯನ್ನು ಆಳವಾಗಿ ಊತು, ಅವಳಲ್ಲಿ ನಡೆಯುವ ಚಿಂತನವನ್ನು ತಾನು ಅನುಭವಿಸಿದಂತೆ 'ಹಗಲೆಂದರೆ ಬೆಳಕಲ್ಲ' ಎಂಬ ಕಥೆಯಲ್ಲಿ ಚಿತ್ರಿಸಿದ್ದಾರೆ. ಸ್ತ್ರೀಯರ ಸಂಕೀರ್ಣ ಬದುಕಿನ ಚಿತ್ರಣ, ಮಕ್ಕಳ ತಪ್ಪು ನಿರ್ಧಾರಗಳನ್ನು ಅನುಭವಿಸುತ್ತ ಸವೆಸುವ ದಿನಚರಿ, ಸದಾಕಾಲ ಒಂದಲ್ಲ ಒಂದು ಸಂಘರ್ಷದಲ್ಲಿ ಜೀವನ ಸಾಗಿಸುವ ಹೆಣ್ಣಿನ ಅನಿವಾರ್ಯ ಸ್ಥಿತಿಗಳು ಇಲ್ಲಿನ ಕಥೆಗಳಲ್ಲಿ ಆಪ್ತವಾಗಿ ರೂಪುಗೊಂಡಿವೆ, ಇವು ಮನಸ್ಸಿಗೆ ತಟ್ಟುತ್ತವೆ. 'ಬೆಳದಿಂಗಳು ಸುರಿದ ಮನೆ' ಎಂಬ ಕಥೆಯಲ್ಲಿ ನಾಯಕಿ ಯಶೋದಾಗೆ ಅವಳ ದಾರಿಯಲ್ಲಿ ಉಜ್ವಲ ಭವಿಷ್ಯವಿಲ್ಲದೆ ಇದ್ದಾಗ, ಕಥೆಗಾರರು ಹೇಳುವುದು ಈ ರೀತಿ : 'ಕಾಲವು ಬಿಸಾಕಿ ಹೋದ ಹಳೆಯ ವಸ್ತುವಿನಂತೆ ಕಾಣುತ್ತಿದ್ದಳು.' ಇಂಥ ಸ್ಥಿತಿಯಲ್ಲಿದ್ದ ಯಶೋದಾಗೆ ಬರಡು ನಾಡಿನಲ್ಲಿ ಮಳೆ ಬಂದಂತೆ, ಮೊದಲ ಪ್ರೀತಿ ಹುಡುಕಿಕೊಂಡು ಬರುವುದನ್ನು ಮನೋಜ್ಞವಾಗಿ ಕಥನ ರೂಪದಲ್ಲಿ ಚಿತ್ರಿಸಿದ್ದಾರೆ. ಇಲ್ಲಿನ ಕಥೆಗಳೆಲ್ಲವೂ ಗಮನ ಸೆಳೆಯುವಂತಿವೆ, ಆಪ್ತ ಓದನ್ನು ನೀಡುವಂತಿವೆ.



ಹಗಲೆಂದರೆ ಬೆಳಕಲ್ಲ ಕಥೆಗಳು
ಲೇ: ಸದಾಶಿವ ಸೊರಟುರು
ಪ್ರ: ಅಂಕಿತ ಪುಸ್ತಕ, ಬೆಲೆ ರು.150/-

ಕನ್ನಡ ಲಿಪಿ ವಿಕಾಸ

ಕನ್ನಡ ಲಿಪಿ ವಿಕಾಸ
ಲೇ: ಡಾ. ಎಂ.ಜಿ. ಮಂಜುನಾಥ ಮತ್ತು ಜಿ.ಕೆ. ದೇವರಾಜಸ್ವಾಮಿ
ಪ್ರ:: ಜಗದುರು ಶ್ರೀ ಮನ್ಮಧ್ವಾಚಾರ್ಯ ಮೂಲ ಮಹಾಸಂಸ್ಥಾನ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠ, ಮಂತ್ರಾಲಯ
ಬೆಲೆ: ರು.150/-

» ಬೇದ್ರೆ ಮಂಜುನಾಥ, ಮೈಸೂರು

ಕನ್ನಡ ಲಿಪಿಯ ಬಗ್ಗೆ ಆಗಿರುವ ಸಂಶೋಧನೆಯ ಕುರಿತಾದ ಗ್ರಂಥವೊಂದು ತೆಲುಗುನಾಡಿನಿಂದ ಪ್ರಕಟವಾಗಿದೆ. ಇಪ್ಪತ್ತೆಂಟು ಅಧ್ಯಾಯಗಳು ಮತ್ತು ನಾಲ್ಕು ಅನುಬಂಧ ಟಿಪ್ಪಣಿಗಳನ್ನು ಹೊಂದಿರುವ ''ಕನ್ನಡ ಲಿಪಿ ವಿಕಾಸ'' ಕೃತಿಯಲ್ಲಿ, ಕನ್ನಡ ಲಿಪಿಯ ಜೊತೆ ಕರ್ನಾಟಕದಲ್ಲಿ ಲಭಿಸಿರುವ ಬ್ರಾಹ್ಮೀ, ದೇವನಾಗರಿ, ನಂದಿನಾಗರಿ, ಗ್ರಂಥ, ಅರವ, ವಟ್ಟೆಳುತ್ತು, ತಿಗಳಾರಿ, ತುಳು, ತೆಲುಗು, ಶಂಕು ಲಿಪಿ, ಮೋಡಿ ಬರಹ ಇತ್ಯಾದಿಗಳ ಸಾಂದರ್ಭಿಕ ಅಧ್ಯಯನವಿದೆ. ಕನ್ನಡ ಅಂಕೆಗಳ ವಿಕಾಸಕ್ಕೂ ಪ್ರತ್ಯೇಕ ಅಧ್ಯಾಯವಿದೆ. ಮಣ್ಣು, ಕಲ್ಲು, ಕಬ್ಬಿಣ, ಚಿನ್ನ, ಬೆಳ್ಳಿ, ತಾಮ್ರ, ಕಂಚು, ಹಿತ್ತಾಳೆ, ಮರ, ಚರ್ಮ, ಸ್ಫಟಿಕ, ಶಂಕು, ಭೂರ್ಜಪತ್ರ, ತಾಳೆಗರಿ, ಕಡತ, ಕಾಗದ, ಸೀಸ, ಆನೆಯದಂತ, ಪ್ರಾಣಿಗಳ ಮೂಳೆಗಳು, ಮರದ ಎಲೆಗಳಲ್ಲಿ ಮೂಡಿರುವ ಲಿಪಿಗಳ ದಾಖಲೆ ಇತಿಹಾಸದ ಬಗ್ಗೆ ಆಸಕ್ತಿ ಹುಟ್ಟಿಸುವ ಹಲವು ವಿಷಯಗಳನ್ನು ಪ್ರಸ್ತಾಪಿಸಲಾಗಿದೆ.

ಬೀಜರೂಪದ ಬರವಣಿಗೆ, ವಿಗ್ರಹರೂಪ ಮತ್ತು ತಾಂತ್ರಿಕ ಬರವಣಿಗೆ, ಚಿತ್ರಲಿಪಿ, ಭಾವಲಿಪಿ, ಅಂತರಾವಸ್ಥೆಯ ಲಿಪಿ, ಕ್ರೀಟನ್ ಲಿಪಿ, ಹೆಟ್ಟೈಟ್ ಲಿಪಿ, ಸುಮೇರಿಯನ್ ಲಿಪಿ, ಧ್ವನಿಲಿಪಿ, ಶಬ್ದಾತ್ಮಕ ಲಿಪಿ, ಹೈರೋಗ್ಲಿಫಿಕ್ ಲಿಪಿ, ಹೈರಾಟಿಕ್ ಲಿಪಿ, ಡಿಮೋಟಿಕ್ ಲಿಪಿ, ಎಲಮೈಟ್ ಲಿಪಿ, ಕ್ಯೂನಿಫಾರಂ ಲಿಪಿಗಳ ಪ್ರಸ್ತಾಪದೊಂದಿಗೆ ವರ್ಣಮಾಲೆಯ ಉಗಮದ ಇತಿಹಾಸವನ್ನು ವಿವರವಾಗಿ ತಿಳಿಸಲಾಗಿದೆ. ಜೈನಸೂತ್ರಗಳಲ್ಲಿ ಉಲ್ಲೇಖಿಸಿರುವ ಹದಿನೆಂಟು ಲಿಪಿಗಳು, ಬೌದ್ಧಗ್ರಂಥ ಲಲಿತ ವಿಸ್ತಾರದಲ್ಲಿ ಕೊಟ್ಟಿರುವ ಅರವತ್ತನಾಲ್ಕು ಲಿಪಿಗಳು, ವಿದೇಶಿ ಲಿಪಿಗಳು, ಬುಡಕಟ್ಟು ಲಿಪಿಗಳು, ಜನಾಂಗೀಯ ಲಿಪಿ, ಚಿತ್ರಲಿಪಿ, ಗೂಢಲಿಪಿ, ಕೊರೆಯಲ್ಪಟ್ಟ ಲಿಪಿ, ಅಲಂಕಾರಿಕ ಲಿಪಿ, ಶೀಘ್ರಲಿಪಿ, ಗ್ರಂಥಲಿಪಿ, ಗಣಿತದ ವಿಶೇಷ ಲಿಪಿ, ಅಮಾನುಷ / ಕಾಲ್ಪನಿಕ ಲಿಪಿಗಳನ್ನು ಚುಟುಕಾಗಿ ವಿವರಿಸಲಾಗಿದೆ.

ಶಾಸನಗಳ ಪಡಿಯಚ್ಚು ತೆಗೆಯುವ ವಿಧಾನಗಳ ಕುರಿತ ವಿಸ್ತೃತ ವಿವರಣೆಯಿದೆ. ಶಾಸನಗಳಲ್ಲಿ ಕಾಲಗಣನೆ ಅಧ್ಯಾಯದಲ್ಲಿ ಕಲಿಯುಗ ಸಂವತ್ಸರ, ಸೃಷ್ಟಿಗತಾಬ್ದ ವರ್ಷ, ಶಾಲಿವಾಹನ ಶಕ ಸಂವತ್ಸರ, ವಿಕ್ರಮ ಶಕೆ, ಚಾಲುಕ್ಯ ವಿಕ್ರಮ ಶಕೆ, ಬಿಜ್ಜಳ ಶಕೆ, ಮಹಾವೀರ ಸಂವತ್ಸರ, ಹಿಜಿರ ಶಕೆ, ಸಾಂಕೇತಿಕ ಕಾಲಗಣನೆಯ ವಿವರಗಳಿವೆ. ಅರವತ್ತಮೂರು ಶಾಸನಗಳ ಚಿತ್ರಗಳು ಮತ್ತು ಅವುಗಳಿಗೆ ಸಂಬಂಧಿಸಿದ ಪಠ್ಯವನ್ನು ನೀಡಿದ್ದಾರೆ. ಮಂತ್ರಾಲಯದ ಮಠದಿಂದ ಶ್ರೀ ರಘುನಂದನ ರಾಘವೇಂದ್ರಮಾಲಾದ 101 ಪುಸ್ತಕಗಳಲ್ಲಿ 93ನೇ ಪುಷ್ಪವಾಗಿ ಪ್ರಕಟವಾಗಿರುವ ''ಕನ್ನಡ ಲಿಪಿ ವಿಕಾಸ'' ಎಂಬ ಅಪರೂಪದ ಕೃತಿ ಈಗ ಲಭ್ಯವಾಗುತ್ತಿಲ್ಲ. ಮರುಮುದ್ರಿಸಲು ಯಾರಾದರೂ ಮುಂದೆಬಂದಾರೆಯೇ?

ಅಫೀಮಿನ ಲಾಭ ಬ್ರಿಟಿಷರಿಗೆ ಬೇಡ!

ಸ್ವಾತಂತ್ರ್ಯ ಹೋರಾಟದ ಸೇನಾನಿಗಳು, ಅಗ್ರಗಣ್ಯರೆಂದು ಕರೆಯುವವರೆಲ್ಲರಿಗಿಂತ ಬಹಳ ಮುಂಚೆಯೇ ಹುಟ್ಟಿ ತನ್ನ ಬದುಕು, ವಿಚಾರ ಮತ್ತು ಹೋರಾಟಗಳಿಂದ ಭಾರತದ ರಾಷ್ಟ್ರೀಯತೆಯ ಕಲ್ಪನೆಗೆ ಒಂದು ಸ್ಪಷ್ಟ ದಿಕ್ಕು ಮತ್ತು ಸೂಕ್ತ ತಳಹದಿಯನ್ನು ಒದಗಿಸಿದವರು ದಾದಾಬಾಯಿ ನವರೋಜಿ. (4.9.1825-30.6.1917) ಭಾರತದ ಸ್ಥಿತಿಗತಿಯನ್ನು ಕುರಿತು ವಿದೇಶಿ ನೆಲದಲ್ಲಿ ಪ್ರಥಮವಾಗಿ, ಪ್ರಭಾವಶಾಲಿಯಾಗಿ, ಆ ಕಾಲದ ಆಳುವ ವರ್ಗವು ವಿರೋಧವನ್ನು ಕೂಡ ಕಟ್ಟಿಕೊಂಡು ಮೊದಲು ಮಾತನಾಡಿದವರು ದಾದಾ ಬಾಯಿ ನವರೋಜಿ. ಅವರ ಕುರಿತ ಪುಸ್ತಕವೊಂದು ಸದ್ಯದಲ್ಲೇ ಪ್ರಕಟವಾಗಲಿದ್ದು, ಅದರ ಆಯ್ದ ಭಾಗ ಇಲ್ಲಿದೆ.

» ಕೆ.ಸತ್ಯನಾರಾಯಣ

ಮಧ್ಯಪಾನದ ಬಗ್ಗೆ ಬಾಲ್ಯದಿಂದಲೂ ನವರೋಜಿಯವರಿಗೆ ವಿರೋಧವಿತ್ತು, ತಿರಸ್ಕಾರವಿತ್ತು. ರಾಜಕೀಯ ವಿಚಾರಗಳಲ್ಲಿ ನವರೋಜಿಯವರ ಗೆಳೆಯರಾಗಿದ್ದ ಸ್ಯಾಮ್ಯುಯೆಲ್ ಸ್ಮಿತ್ ಮತ್ತು ಕೇನ್ ಪಾನನಿರೋಧಿ ಚಳುವಳಿಗಾಗಿ ಸಂಘಟನೆಗಳನ್ನು ರೂಪಿಸುತ್ತಿದ್ದರು. ಭಾರತದಲ್ಲಿ, ಮುಂಬೈನಲ್ಲಿ ಕೂಡ ಇದರ ಶಾಖೆ ಪ್ರಾರಂಭವಾಯಿತು. ದಾದಾಭಾಯಿ ಪ್ರಾರಂಭದಿಂದಲೂ ಈ ಚಳು ವಳಿಯ ಸಕ್ರಿಯ ವಕ್ತಾರರಾಗಿದ್ದರು. ಮಧ್ಯಪಾನದಿಂದಾಗುವ ನೈತಿಕ ದುಷ್ಪರಿಣಾಮ, ಆರೋಗ್ಯ ಹಾನಿಯನ್ನಷ್ಟೇ ಅಲ್ಲದೆ, ಆರ್ಥಿಕ ದುಷ್ಪರಿಣಾಮಗಳನ್ನು ಕುರಿತು ಕೂಡ ಗಂಭೀರವಾಗಿ ಯೋಚಿಸಬೇಕೆಂದು ಅಂಕಿ ಅಂಶ ಗಳ ತಜ್ಞ, ಅರ್ಥಶಾಸ್ತ್ರಜ್ಞ ನವರೋಜಿ ವಿಚಾರ ಮಂಡಿಸಿದರು. ಇಂಗ್ಲೆಂಡಿನಂತ ಒಂದು ರಾಷ್ಟ್ರ ಪ್ರತಿ ವಾರವೂ ನೂರಾಮೂವತ್ತು ಲಕ್ಷ ಪೌಂಡ್‌ನಷ್ಟು ಹಣವನ್ನು ಮಧ್ಯಪಾನದ ಚಟಕ್ಕಾಗಿ ಪೋಲು ಮಾಡುತ್ತಿದ್ದರೆ, ಅಷ್ಟೇ ಹಣದಿಂದ ಬ್ರಿಟನ್ ಒಂದು ವರ್ಷಕ್ಕೆ ಬೇಕಾದ ಬ್ರೆಡ್, ಬೆಣ್ಣೆ, ಚೀಸ್ ಮತ್ತು ಹಾಲು ಕೊಳ್ಳಬಹು ದಲ್ಲವೇ? ಎಂದು ಪ್ರಶ್ನಿಸಿದರು. ಇಷ್ಟೊಂದು ಮಧ್ಯಪಾನದಿಂದ ನಾಗರಿಕರ ಆರೋಗ್ಯದ ಮೇಲೆ, ಉತ್ಪಾದನಾ ಶಕ್ತಿಯ ಮೇಲೆ ಆಗುವ ಪರಿಣಾಮವನ್ನು ಕುರಿತು ಯೋಚಿಸಬಹು ದಲ್ಲವೇ? ಇಷ್ಟೊಂದು ಹಣವನ್ನು ಸಮುದ್ರಕ್ಕೆ ಎರಚಿ ಪೋಲು ಮಾಡಿದರೂ ಆಗುವ ಅಪಾಯ ಮಧ್ಯಪಾನದ ಚಟದಿಂದ ಉಂಟಾಗುವ ಕೆಟ್ಟ ಪರಿಣಾಮಕ್ಕಿಂತ ಕಡಿಮೆಯಿರುತ್ತದೆ ಎಂದು ವಾದಿಸಿದರು.

ಮಧ್ಯಪಾನ ಕುರಿತಂತೆ ಯವುದೇ ಕಾನೂನು, ನಿರ್ಣಯಗಳನ್ನು ಸ್ಥಳೀಯ ಸಂಸ್ಥೆಗಳು ತೆಗೆದುಕೊಳ್ಳಬೇಕು, ಎಲ್ಲ ನಾಗರಿಕರು ಇದರಲ್ಲಿ ಪಾಲ್ಗೊಳ್ಳಬೇಕು, ಹೆಚ್ಚಿನ ನಾಗರಿಕರಿಗೆ ಮಧ್ಯ ಪಾನ ಬೇಡ, ಕೆಲವೇ ನಾಗರಿಕರ ಅಭಿಪ್ರಾಯ ಗಳನ್ನು ಹೇರುವುದು ಆವಾಗ ಕಷ್ಟವಾಗುತ್ತದೆ, ಅಲ್ಪ ಸಂಖ್ಯಾತ ಶ್ರೀಮಂತರು, ಕುಲೀನರು, ಬಹುಸಂಖ್ಯಾತ ಶ್ರೀಸಾಮಾನ್ಯರ ಮೇಲೆ, ಕಾರ್ಮಿಕರ ಮೇಲೆ ತಮ್ಮ ಮನೋಧರ್ಮ, ನಿರ್ಧಾರಗಳನ್ನು ಏಕೆ ಹೇರಬೇಕು ಎಂಬ ವಾದವನ್ನು ನವರೋಜಿ ಮತ್ತು ಅವರ ಒಡನಾಡಿಗಳು ಮುಂದಿಟ್ಟರು.

ಮದ್ಯಪಾನ ವಿರೋಧ

ಸಂಪೂರ್ಣ ಪಾನನಿರೋಧದ ಪರವಾಗಿ ಭಾರತೀಯರ ಒಂದು ಒಕ್ಕೂಟವನ್ನು (ಇಂಗ್ಲೆಂಡಿನಲ್ಲಿ) ಪ್ರಾರಂಭಿಸಬೇಕೆಂಬ ವಿಚಾರ ಮೂಡಿ, ಸ್ಯಾಮ್ಯುಯೆಲ್ ಸ್ಮಿತ್‌ರೇ ಈ ಕೂಟವನ್ನು ಉದ್ಘಾಟಿಸಿ, ನವರೋಜಿ ಸ್ಥಾಪಕ ಅಧ್ಯಕ್ಷರಾದರು. ಈ ಒಕ್ಕೂಟದಿಂದ ಗಣನೀಯ ಪರಿಣಾಮವಾಗದಿದ್ದರೂ, ಸಾಕಷ್ಟು ಭಾರ ತೀಯ ಯುವಕರು ಚಳುವಳಿಯ ಪ್ರಭಾವಕ್ಕೆ ಒಳಗಾದದ್ದು ನವರೋಜಿಯವರಿಗೆ ತೃಪ್ತಿ ಉಂಟುಮಾಡಿತ್ತು. ಈ ಯುವಕರು ಭಾರತಕ್ಕೆ ಹಿಂತಿರುಗಿದಾಗ ದೇಶಾದ್ಯಂತ ಪಾನನಿರೋಧ ಚಳುವಳಿ, ಸಂಘಟನೆಯನ್ನು ಪ್ರಾರಂಭಿಸ ಬಹುದು, ಪ್ರಭಾವ ಬೀರಬಹುದು ಎಂಬುದು ನವರೋಜಿಯವರ ಆಸೆಯಾಗಿತ್ತು.

ಈ ಚಟುವಟಿಕೆಗಳ ವರ್ಷಗಳಲ್ಲಿ ಗಾಂಧಿ ಕೂಡ ಲಂಡನ್‌ನಲ್ಲೇ ಇದ್ದರು. ಇದರಲ್ಲೆಲ್ಲ ಅವರು ಭಾಗಿಯಾಗಿದ್ದರು ಎಂಬುದರ ಬಗ್ಗೆ ವಿವರಗಳನ್ನು ಯಾರೂ ದಾಖಲಿಸಿಲ್ಲ, ಹುಡು ಕಿಲ್ಲ. ನವರೋಜಿಯವರ ಆರ್ಥಿಕ ವಿಚಾರ ಗಳಿಂದ ತೀವ್ರವಾಗಿ ಪ್ರಭಾವಿತರಾಗಿದ್ದ ಗಾಂಧಿ, ಈ ವಿಷಯದಲ್ಲೂ ಅವರ ಪ್ರಭಾವಕ್ಕೆ ಒಳಗಾದಂತಿದೆ. ಮದ್ಯಪಾನದಿಂದಾಗುವ ನೈತಿಕ ಹಾನಿ, ಆರೋಗ್ಯದ ಮೇಲಿನ ದುಷ್ಪರಿಣಾಮಗಳ ಬಗ್ಗೆ ಗಾಂಧಿ ಸದಾ ಎಚ್ಚರಿಸುತ್ತಿದ್ದರು. ಮಧ್ಯಪಾನ ವಿರೋಧಿ ಚಳುವಳಿ ಮುಂದೆ ಕಾಂಗ್ರೆಸ್ ಪಕ್ಷದ ಒಂದು ಮುಖ್ಯ ಕಾರ್ಯಕ್ರಮವೇ ಆಗಿತ್ತು. 'ಮಧ್ಯಪಾನ ನಿರೋಧಿಸಿದರೆ ಸರ್ಕಾರದ ಬೊಕ್ಕಸಕ್ಕೆ ಆದಾಯ ಕಡಿಮೆ ಆಗಬಹುದಲ್ಲವೇ?' ಎಂಬ ಪ್ರಶ್ನೆಯನ್ನು ಗಾಂಧಿ ಸಾರಾಸಗಟಾಗಿ ತಿರಸ್ಕರಿಸಿದರು. 'ನನ್ನನ್ನು ಒಂದೇ ಒಂದು ದಿನ ಸರ್ವಾಧಿಕಾರಿಯನ್ನಾಗಿ ಮಾಡಿದರೂ ಸಾಕು, ನಾನು ಮೊದಲು ಜಾರಿಗೆ ತರುವ ಕಾರ್ಯಕ್ರಮ ವೆಂದರೆ ಪಾನನಿರೋಧ' ಎಂದು ಘೋಷಿಸಿದರು. ಗಾಂಧಿಯವರ ಈ ನಿಲುವುಗಳಲ್ಲಿ ನಾವು ನವರೋಜಿಯವರ ಚಿಂತನೆಯ ಪ್ರಭಾವವನ್ನು ಕಾಣಬಹುದು.

ಬ್ರಿಟಿಷ್ ಸರ್ಕಾರದ ಆಫೀಮು ನೀತಿಯನ್ನು ಕುರಿತ ದಾದಾಭಾಯಿಯವರ ವಿರೋಧವೂ ಕೂಡ ಇದೇ ರೀತಿಯ ಸಮಗ್ರ ನೆಲೆಗಳಿಂದಲೇ ಮೂಡಿ ಬಂದಿತ್ತು ಎನ್ನುವುದು ಗಮನಾರ್ಹ. ಬ್ರಿಟನ್ ಆಡಳಿತ ಭಾರತದಲ್ಲಿ ಕೆಲವು ಉತ್ತಮ ಸಂಘ, ಸಂಸ್ಥೆಗಳನ್ನು ಪ್ರಾರಂಭಿಸಲು ಕಾರಣವಾಗಿರಬಹುದು. ಆದರೆ ಇದೇ ಬ್ರಿಟನ್ ಸರ್ಕಾರವೇ ನಾಗರಿಕರ ಮೇಲೆ ದುಷ್ಪರಿಣಾಮ ಬೀರುವ ಅಬಕಾರಿ ನೀತಿಯನ್ನು ಕೂಡ ಜಾರಿಗೆ ತಂದು ಸರ್ಕಾರದ ಬೊಕ್ಕಸವನ್ನು ತುಂಬಲು ಪ್ರಾರಂಭಿಸಿದ್ದು ಅನೈತಿಕ ಎಂದೇ ವಾದಿಸಿದರು. ಭಾರತದಲ್ಲಿ ಮದ್ಯ ಮತ್ತು ಅದನ್ನು ತಯಾರಿಸಲು ಬೇಕಾದ ಎಲ್ಲ ಕಾರ್ಖಾನೆಗಳು ಸರ್ಕಾರದ ಅಧೀನದಲ್ಲೇ ಇದ್ದವು. ಮದ್ಯ ಮಾರುವ ಅಂಗಡಿಗಳಿಗೆ ಪರವಾನಗಿ ನೀಡುವ ಅಧಿಕಾರ ಸರ್ಕಾರದಲ್ಲೇ ಕೇಂದ್ರೀಕೃತವಾಗಿತ್ತು.

ಯಾರು ಹೆಚ್ಚು ಶುಲ್ಕ, ಕಂದಾಯದ ಮೊಬಲಗನ್ನು ಕಟ್ಟುವರೋ ಅವರಿಗೆ ಪರ ವಾನಗಿ ನೀಡುವ ರೀತಿಯನ್ನು ದಾದಾಭಾಯಿ ಮತ್ತು ಅವರ ಒಡನಾಡಿಗಳು ತೀವ್ರವಾಗಿ ಖಂಡಿಸಿದರು. ಅಬಕಾರಿ ಮೂಲದಿಂದ ಬರುವ ಆದಾಯದ ಮೇಲೆ ಈವತ್ತು ಕೂಡ ಭಾರತದ ಬಹುಪಾಲು ರಾಜ್ಯಗಳು ತಮ್ಮ ಆದಾಯದ ಮೂಲವನ್ನು ಕಂಡುಕೊಂಡಿರುವ ದುರಂತ ಮತ್ತು ಅಪಾಯದ ಸೂಚನೆಗಳನ್ನು ನವರೋಜಿ ನೂರಾರು ವರ್ಷಗಳ ಹಿಂದೆಯೇ ಗ್ರಹಿಸಿದ್ದರು ಎಂಬುದು ಅವರ ಮುಂಗಾಣ್ಕೆಯನ್ನು ಸೂಚಿಸುತ್ತದೆ.

ಮಾನವೀಯ ಮೌಲ್ಯಗಳಿಂದ ಕೂಡಿದ ಕ್ರೈಸ್ತ ಧರ್ಮವನ್ನು ಒಪ್ಪುವ ಬ್ರಿಟನ್ ಸರ್ಕಾರ, ಚೀನಾದಲ್ಲಿ ಹೇಗೆ ಅಫೀಮು ಮಾರಾಟ ಮಾಡು ವುದರ ಮೂಲಕ ಹಣವನ್ನು ಸಂಪಾದಿಸುತ್ತಿದೆ? ಇದು ಅನೈತಿಕವಲ್ಲವೇ? ಎಂದು ವಾದಿಸಿದರು. ಅಫೀಮು ತಯಾರಿಕೆಗೆ, ಮಾರಾಟಕ್ಕೆ ಬೇಕಾದ ಎಲ್ಲ ಅಧಿಕಾರವೂ ಸರ್ಕಾರದಲ್ಲೇ ಇತ್ತು. ಅಫೀಮು ತಯಾರಿಕೆಗೆ ಬೇಕಾದ ಗಸಗಸೆಯನ್ನು ಬೆಳೆಯಲು ಭಾರತೀಯ ರೈತರಿಗೆ ಸಹಾಯಧನ ನೀಡಿ, ಹಾಗೆ ಬಂದ ಫಸಲನ್ನು ಅಫೀಮು ತಯಾರಿಕೆಗೆ ಉಪಯೋಗಿಸಿ, ಚೀನಾದಲ್ಲಿ ಲಾಭಕ್ಕೆ ಮಾರಾಟ ಮಾಡುವುದರಿಂದ ಬ್ರಿಟನ್ ನಾಗರಿಕತೆ ಮತ್ತು ಸರ್ಕಾರ, ಚೀನಾ ಸಮಾಜ ವನ್ನು ಪಾಪಕೂಪಕ್ಕೆ ತಳ್ಳುತ್ತಿದೆ, ಆ ದುಷ್ಟ ಕಾರ್ಯದಲ್ಲಿ, ನೀತಿಯಲ್ಲಿ ಭಾರತವು, ಭಾರತೀ ಯರು ಕೂಡ ಪಾಲ್ಗೊಳ್ಳುವಂತೆ ಪ್ರಚೋದಿ ಸುತ್ತಿದೆ ಎಂದು ಪ್ರತಿಭಟಿಸಿದರು.



ದಾದಾಭಾಯಿ ನವರೋಜಿ
ಲೇ: ಕೆ. ಸತ್ಯನಾರಾಯಣ
ಪ್ರ: ನವಕರ್ನಾಟಕ ಪ್ರಕಾಶನ ಬೆಂಗಳೂರು

ಮೂಲಭೂತ ಪ್ರಶ್ನೆ

ಇದೆಲ್ಲವನ್ನೂ ಮೀರಿದ ಮೂಲಭೂತ ಪ್ರಶ್ನೆಯೊಂದನ್ನು ದಾದಾಭಾಯಿ ಬ್ರಿಟಿಷ್ ಆಡಳಿತದ ಮುಂದಿಟ್ಟರು. ಭಾರತದಲ್ಲಿ ಆಡಳಿತವನ್ನು ನಡೆಸಲು ಬೇಕಾದ ಆದಾಯವನ್ನು ಭಾರತೀಯರೇ ಉತ್ಪಾದಿಸಲಾರರೇ? ಇನ್ನೊಂದು ದೇಶದ ನಾಗರಿಕರಿಗೆ ವಿಷಪ್ರಾಶನ ಮಾಡಿ, ಅದರಿಂದ ಬರುವ ಆದಾಯದಿಂದ ಬ್ರಿಟನ್ ಭಾರತವನ್ನು ನಿರ್ವಹಿಸಬೇಕೇ? ಎಂದು ಪ್ರಶ್ನಿಸಿ, ಒಟ್ಟಿನಲ್ಲಿ ಭಾರತೀಯರು ಇಂಗ್ಲೆಂಡಿನ ಕರುಣೆ, ಕೆಟ್ಟ ವ್ಯಾಪಾರ ನೀತಿ, ಅನೈತಿಕ ವ್ಯಾವಹಾರಿಕತೆ, ಇವೆಲ್ಲವುಗಳು ಮೇಲೆ ಅವಲಂಬಿತರಾಗಿ, ಎಲ್ಲದರಲ್ಲೂ ಭಾಗಿಯಾಗಿ ತನ್ನ ಆರ್ಥಿಕ ಚೈತನ್ಯದಿಂದ ವಿಮುಖರಾಗಬೇಕೇ? ಎಂಬ ಪ್ರಶ್ನೆಯನ್ನು ನೇರವಾಗಿ ಎದುರಿಸಬೇಕು ಎಂದು ಬ್ರಿಟಿಷ್ ಸರ್ಕಾರ, ಅದರ ವಕ್ತಾರರು ಮತ್ತು ಭಾರತೀಯ ನಾಗರಿಕರಿಗೆ ಮನಗಾಣಿಸಲು ಪ್ರಯತ್ನಿಸಿದರು.

ಅಫೀಮು ನೀತಿಯ ವಿರೋಧದಲ್ಲೂ ನವರೋಜಿಯವರ ಒಟ್ಟು ಗಮನ ಭಾರತದ ಆರ್ಥಿಕ ಚೈತನ್ಯ, ಸಂಪನ್ಮೂಲಗಳ ಕಡೆಗೇ ಇರುವುದನ್ನು ಗಮನಿಸಬಹುದು. ಹೀಗೆ, ಯಾವುದೇ ಒಂದು ಸಮಸ್ಯೆ, ಸಂದರ್ಭವನ್ನು ತನಗೆ ಮುಖ್ಯವೆನಿಸಿದ ವಿಚಾರ, ಪ್ರಶ್ನೆಗಳೊಡನೆ ತಳುಕು ಹಾಕುವುದನ್ನು, ಹಾಗೆ ತಳುಕು ಹಾಕಿ ಸಾರ್ವಜನಿಕ ವೈಚಾರಿಕತೆಯಲ್ಲಿ ಸಮಗ್ರತೆ ಮತ್ತು ತುರ್ತು ರೂಪಿಸುವ ಮನೋಧರ್ಮ ವನ್ನು, ಅವರ ಪಾನನಿರೋಧ ಚಳುವಳಿ, ಅಫೀಮು ನೀತಿಯ ವಿರುದ್ಧದ ಪ್ರತಿಭಟನೆಯಲ್ಲೂ ಕಾಣಬಹುದು. **(ಆಯ್ದ ಭಾಗಗಳು)**

ನೀನಾರಿಗಾದೆಯೋ ಎಲೆ ಮಾನವಾ!

» ನಳಿನಿ ಟಿ. ಭೀಮಪ್ಪ

ಮಾನವನ ಬದುಕಿನಲ್ಲಿ ನಾನಾ ರೀತಿಯ ಪ್ರಭಾವ ಬೀರುವ ಎಲೆಗಳ ಲೋಕವೇ ಅದ್ಭುತ, ಅನನ್ಯ! ವೀಳ್ಯದೆಲೆಯನ್ನು ಮೆಲ್ಲುವ ಬಾಯಿ, ಸೊಪ್ಪಿನ ಸಾರನ್ನೂ ಸೇವಿಸುತ್ತದೆ! ಎಲೆಯ ಪುಡಿಯನ್ನು ಬತ್ತಿ ಮಾಡಿ, ಸುಟ್ಟು ಹೊಗೆಯ ರೂಪದಲ್ಲಿ ಸೇವಿಸುವ ಮಾನವನು, ಬಣ್ಣದ ಮದರಂಗಿಯನ್ನು ಕೈಗೂ ಮೆತ್ತಿಕೊಳ್ಳುವನು! ಆದ್ದರಿಂದ ಎಲೆಯ ಮಹಿಮೆ ಅಪಾರ.

ಖೈಕೆ ಪಾನ್ ಬನಾರಸ್‌ವಾಲಾ, ಖುಲ್ ಜಾಯೆ ಬಂದ್ ಅಕಲ್ ಕಾ ತಾಲಾ ಎಂದು ಎಪ್ಪತ್ತರ ದಶಕದ ಉತ್ತರಾರ್ಧದಲ್ಲಿ ತೆರೆ ಕಂಡ ಡಾನ್ ಸಿನೆಮಾದಲ್ಲಿ, ಹೆಚ್ಚಾಗಿ ಜಟ್ಟಿ ಪೈಲ್ವಾನ್‌ಗಳಂತಿದ್ದ ನಾಯಕರುಗಳ ನಡುವೆ, ಕಡ್ಡಿ ಪೈಲ್ವಾನ್‌ನಂತಿದ್ದ ಅಮಿತಾಭ್, ಭಂಗಿ ಎನ್ನುವ ಗಾಂಜಾಎಲೆಗಳ ರಸ ಕುಡಿದ ನಂತರ, ವೀಳ್ಯದೆಲೆಯೊಳಗೆ ಮಿಶ್ರಣವನ್ನು ತುಂಬಿ, ವಿಶೇಷ ರೀತಿಯಲ್ಲಿ ಮಡಚಿದಂತಿರುತ್ತಿದ್ದ ಪಾನ್ ಬೀಡಾವನ್ನು, ತಮ್ಮದೇ ವಿಶಿಷ್ಟ ಶೈಲಿಯಲ್ಲಿ ಬಾಯೊಳಗಿನ ಸ್ವಾಟೆಗೆ ತುರುಕಿಕೊಂಡು ಎಲೆಬಳ್ಳಿಯಂತೆ ತೂಗಾಡುತ್ತಾ ಡಾನ್ಸ್ ಮಾಡಿದ್ದನ್ನು ನೋಡಿ ಅಭಿಮಾನಿಗಳೆಲ್ಲ ಫಿದಾ ಆಗಿಬಿಟ್ಟರು. ಕೇವಲ ಕೊಲ್ಕತ್ತಾ, ಬನಾರಸ್‌ಗಳಿಗೇ ಹೆಚ್ಚು ಸೀಮಿತವಾಗಿದ್ದ ಪಾನ್ ಬೀಡಾವನ್ನು ಪಾನ್ ಬೀಡಾವನ್ನಾಗಿ ಮಾಡಿ, ದೇಶದುದ್ದಕ್ಕೂ ಹರಡಿದ ಕೀರ್ತಿ ಬಹುಶಃ ಇವರಿಗೇ ಸಲ್ಲಬೇಕು. ಎಲೆಗಳ ಮೂಲಕ ಖ್ಯಾತಿ ಪಡೆದ ಬಚ್ಚನ್ ಅವರನ್ನು ಕ(ಎ)ಲೆಗಾರ ಎನ್ನಲಿಕ್ಕಡ್ಡಿಯಿಲ್ಲ.

'ನೀನಾರಿಗಾದೆಯೋ ಎಲೆ ಮಾನವ' ಎಂದು ಗೋವು ಮನುಷ್ಯನನ್ನು ಪ್ರಶ್ನಿಸುವ ಪದ್ಯವಿದೆ. ಇದನ್ನು ಬೇರೆ ರೀತಿಯಲ್ಲಿ ಅರ್ಥೈಸಿಕೊಳ್ಳುವುದಾದರೆ, ಯಾವ ರೀತಿಯ 'ಎಲೆ' ಮಾನವನನ್ನು ಉದ್ದೇಶಿಸಿ ಹೇಳಿರಬಹುದು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಹಾಗೆ ನೋಡುವುದಾದರೆ ದೈನಂದಿನ ಬೇಕಾಗುವ ವೀಳ್ಯದೆಲೆ, ಬಾಳೆ ಎಲೆ, ಮಾವಿನೆಲೆ, ಬೇವಿನೆಲೆ, ಸೊಪ್ಪು ಸದೆ ಮಾರುವ ಎಲೆ ಮಾನವರ ಮೇಲೆ ಎಲ್ಲರೂ ಹೆಚ್ಚುಕಡಿಮೆ ಅವಲಂಬಿಗಳೇ. ಆದರೆ ಸದಾ ಎಲೆ ಅಡಿಕೆ ಮೆಲ್ಲುತ್ತ, ಸಂದು, ಗೊಂದು, ರಸ್ತೆ ಎನ್ನದೆ ಕಂಡಕಂಡಲ್ಲಿ ಪಿಚಕಾರಿ ಹೊಡೆದು ಚಿತ್ತಾರ ಮೂಡಿಸುವ ಎಲೆಮಾನವರು ತುಂಬ ಹಿಂದಿನಿಂದಲೂ ಕಂಡುಬರುತ್ತಾರೆ.

ಎಲೆಮಾನವರ ಕಿತಾಪತಿ

ಊಟವಾಗುತ್ತಿದ್ದಂತೆ ಎಲೆ ಅಡಿಕೆಯ ತಟ್ಟೆಯನ್ನು ಹುಡುಕುವ ಮಂದಿ 'ಎಲೆ ಮಾನವರು'. ಇವರು ಲಭ್ಯವಿರದ ಕಡೆಗೆ ತಮ್ಮದೇ ಸಂಚಿಯ ಅಂಗಡಿ ತೆಗೆದು ಮೆಲ್ಲುವವರು. ಅಂಥವರಿಗೆಂದೇ ಹಿಂದಿನ ಕಾಲದಲ್ಲಿ ಅವರವರ ಅಂತಸ್ತಿಗೆ ತಕ್ಕಂತೆ ವಿವಿಧ ವಿನ್ಯಾಸದ ಪೀ(ಥೂ)ಕುದಾನಿಗಳೂ ಲಭ್ಯ ವಿದ್ದವು. ಇತ್ತೀಚಿನ ದಿನಗಳಲ್ಲಿ, ಬಹುತೇಕ ಶುಭ ಸಮಾ ರಂಭಗಳಲ್ಲಿ, ಊಟದ ನಂತರ ಕೊನೆಯಲ್ಲಿ ಚೆರ್ರಿ ಹಣ್ಣಿನೊಂದಿಗೆ ಎಲೆಯ ಮೇಲೆ ಟೂಥ್‌ಪಿಕ್ ಚುಚ್ಚಿದ ಪಾನ್‌ಬೀಡಾಗಳು ಪವಡಿಸುತ್ತವೆ. ಕೆಲವು ಕಡೆ ಪಾನ್‌ವಾಲಾಗಳು ತಯಾರಿಸಿ ಕೊಡುತ್ತಿರುತ್ತಾರೆ. ಶುಭ ಸಮಾರಂಭ ಅಥವಾ ಸೂತಕ ಏನೇ ಇದ್ದರೂ ಎಲ್ಲೆಡೆ ಸಲ್ಲುವ ವೀಳ್ಯದೆಲೆಗಳನ್ನು 'ಎಲ್ಲೆಡೆ ಸ(ಮೆ)ಲ್ಲುವ ಎಲೆ' ಎನ್ನಲಡ್ಡಿಯಿಲ್ಲ.

ಇನ್ನೊಂದು ರೀತಿಯ ಎಲೆಗಳಿವೆ: ಅವೇ ರಂಗಿನ ಮದರಂಗಿ ಎಲೆಗಳು! ಮದರಂಗಿ ಎಲೆಗಳು ಹೆಣ್ಣಿನ ಜೀವನದಲ್ಲಿ ತುಂಬ ಪ್ರಾಮುಖ್ಯತೆಯನ್ನು ಗಳಿಸಿದೆ. ವೀಳ್ಯದೆಲೆಗಳು ಬಾಯಿಯ ಕೆಂಪನ್ನು ಹೆಚ್ಚಿಸಿದರೆ, ಮದರಂಗಿ ಎಲೆಗಳು ದೇಹಕ್ಕೆ ತಂಪನ್ನು ಹೆಚ್ಚಿಸಿ, ಹಸ್ತ, ಪಾದಗಳ ಮೇಲೆ ಕೆಂಪುಬಣ್ಣದ ಚಿತ್ತಾರ ಮೂಡಿಸಿ, ಕೇಶಕ್ಕೆ ರಂಗು, ಮೆರಗು ನೀಡುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

ವೀಳ್ಯದೆಲೆಗಳು ಹಲವಾರು ಕಾರ್ಯಕ್ರಮಗಳಲ್ಲಿ, ಅನೇಕ ರೀತಿಗಳಲ್ಲಿ ಬಳಕೆಯಾದರೆ, ವಿವಾಹ ಸಂದರ್ಭಗಳಲ್ಲಿ ಮದರಂಗಿ ಎಲೆಗಳ ಹೆಸರಿನಲ್ಲಿ ಮೆಹಂದಿ ಶಾಸ್ತ್ರ ಎನ್ನುವ ಹೆಂಗಳೆಯರ ಅದ್ದೂರಿ ಕಾರ್ಯಕ್ರಮವೇ ಚಾಲ್ತಿಯಲ್ಲಿದೆ. ಈಚೆಗೆ ಮೆಹಂದಿ ಶಾಸ್ತ್ರವು ಬಹಳ ಅದ್ದೂರಿಯಿಂದ ನಡೆಯು ವುದೂ ಇದೆ!

ಬಾರೆಲೆ ಆಟ

ಐವತ್ತೆರಡು ಇಸ್ಪಿಟ್ ಎಲೆಗಳುಳ್ಳ ಪ್ಯಾಕ್‌ಗಳು ಅನ್‌ಪ್ಯಾಕ್ ಆಗುವುದು ಬಾರ್‌ಗಳಲ್ಲಿಯೇ ಹೆಚ್ಚು. ಪೀರ್‌ಗ್ರುಪ್ ಪಂಟರುಗಳೆಲ್ಲ ಒಬ್ಬರಿಗೊಬ್ಬರು 'ಬಾರಲೇ' ಎಂದು ಆತ್ಮೀಯತೆಯಿಂದ ಆಹ್ವಾನಿಸಿ, ಬಾರುಗಳೊಳಗೊಂದುಗೂಡಿ, ಏಕ್ ದೋ ತೀನ್... ಎಂದು ಎಲೆಗಳನ್ನು ತೂರುತ್ತ, ಎಕ್ಕ ರಾಜಾ ರಾಣಿ ನಮ್ಮ ಕೈಯೊಳಗೆ... ಎಂದು ಹೆಮ್ಮೆ ಪಡುತ್ತಾ, ಬಿ ಹಿಯರ್ ಎಂದು ಬಿಯರ್ ಹೀರುತ್ತ, ರಮ್ ಏರಿಸುತ್ತಲೇ ರಮ್ಮಿ ಆಡುತ್ತಾ, ಸುತ್ತ ಮುತ್ತ ಗಬ್ಬುನಾತ ಬೀರಬಲ್ಲವರಾಗುವುದಿದೆ. ಹಾಗಾಗಿ ಎಕ್ಕ ಸಕ್ಕ ಎಕ್ಕ ಸಕ್ಕ ಎಂದು ಹಾಡುತ್ತಲೇ ಆಡುವ ಈ ಎಲೆಯಾಟವನ್ನ 'ಬಾರೆಲೆ ಆಟ'ವೆಂದೂ ಪರಿಗಣಿಸಬಹುದು. ಕೆಲ ಪಂಟರುಗಳು ಈ ಎಲೆಯಾಟದಲ್ಲಿ ಮನೆ, ಮಠವನ್ನು ಪಣಕ್ಕಿಟ್ಟು ಬರಿಗೈ ದಾಸರಾಗುವುದೂ ಇದೆ.

ದೇವಾನುದೇವತೆಗಳಿಗೆ ಹೆಚ್ಚಾಗಿ ಹೂವಿನ ಅಲಂಕಾರ ಪ್ರಿಯವಾದರೂ ಕೆಲ ದೇವರುಗಳು ಹೂವಿಗಿಂತ ಹೆಚ್ಚಾಗಿ ಪತ್ರೆಯನ್ನು ಅರ್ಪಿಸಿದಾಗಲೇ ಸಂತೃಪ್ತಗೊಳ್ಳುವುದಿದೆ. ಮಹಾಕಾಯ ಹೊಂದಿರುವ ಗಣಪನಿಗೆ, ಸ್ಲಿಮ್ಮಾಗಿರುವ ಗರಿಕೆ ಪತ್ರೆಯೆಂದರೆ ಬಲುಪ್ರೀತಿ. ವಿಷ್ಣುವೂ ಸಹ ತುಳಸಿ ಪತ್ರೆಯ ಮೂಲಕ ಆರಾಧಿಸಿದವರಿಗೆ ಬಲುಬೇಗ ಒಲಿಯುವುದಿದೆ. ಶಿವನೋ ಬಿಲ್ವಪತ್ರೆ ಪ್ರಿಯ. ಗರಿಕೆ, ತುಳಸಿಯನ್ನು ಸಲೀಸಾಗಿ ಕಿತ್ತು ತರಬಹುದು, ಆದರೆ ಶಿವ ನೊಲುಮೆಯ ಬಿಲ್ವಪತ್ರೆ ಮರವನ್ನು, ಅವನು ನೆಲೆಸಿರುವ ಕೈಲಾಸವನ್ನು ಹತ್ತಿದಂತೆ ಮರವನ್ನು ಏರಿ ತರುವುದಾಗುತ್ತದೆ. ಕಳಸದಲ್ಲಿ ಸ್ಥಾಪನೆಗೊಳ್ಳುವ ಲಕ್ಷ್ಮಿ, ಗೌರಿಯಂತಹ

ಸುಲಲಿತ ಪ್ರಬಂಧ

ಹೆಣ್ಣುದೇವತೆಗಳಿಗೆ ಮೂರು, ಐದು, ಒಂಭತ್ತು, ಹೀಗೆ ಕೆಲ ಬೆಸಸಂಖ್ಯೆಗಳಿಗನುಗುಣವಾಗಿ ಹಸಿರು ವೀಳ್ಯದೆಲೆಗಳನ್ನು ಸೀರೆಯ ಹಾಗೆ ಸುತ್ತಿಯೇ ಕೂರಿಸಬೇಕು. ವೀಳ್ಯದೆಲೆ ಲಭ್ಯವಿರದ ಪಕ್ಷದಲ್ಲಿ ಮಹಿಳೆಯರು ತಮ್ಮಿಚ್ಛೆಯ ಬಣ್ಣದ ಸೀರೆ ಸಿಗದಿದ್ದಾಗ, ಅದೇ ಬಣ್ಣದ ಚೂರು ಆಚೆ ಈಚೆ ಬಣ್ಣವನ್ನು ಓಕೆ ಮಾಡುವಂತೆ, ಮಾವಿನ ಎಲೆಯೋ, ಮತ್ತೊಂದು ಎಲೆಯನ್ನೋ ಕಳಸಕ್ಕೆ ತುಂಬುವುದಿದೆ. ಹಬ್ಬ, ಹುಣಿವೆ, ಅಮಾವಾಸ್ಯೆ, ಕೆಲ ವಿಶೇಷ ದಿನಗಳಲ್ಲಿ ವೀಳ್ಯದೆಲೆ ಅಲಂಕಾರ ಮಾಡಿಸಿಕೊಳ್ಳುವುದರಲ್ಲಿ ಗಂಡು, ಹೆಣ್ಣು ಎನ್ನುವ ತಾರತಮ್ಯ ಮಾಡದೆ ಎರಡೂ ದೇವತೆಗಳು ಮುಂದಿವೆ ಎನ್ನಬಹುದು.

ಹಾಗೆ ನೋಡಿದರೆ ಮನುಷ್ಯನ ಹೊಟ್ಟೆ, ಬಟ್ಟೆಯ ಅವಶ್ಯಕತೆಯನ್ನು ಮೊದಲು ಪೂರೆದದ್ದೇ ಎಲೆಗಳು! ಎಲೆಗಳು ಹೊಟ್ಟೆ ತುಂಬಿಸುತ್ತವೆ! ಹರಿವೆ ಸೊಪ್ಪು, ದಂಟಿನ ಸೊಪ್ಪು, ಬೆರಕೆ ಸೊಪ್ಪುಗಳನ್ನು ತಿನ್ನದವರೇ ಇಲ್ಲ. ಹೊಟ್ಟೆಗೆ ಆಹಾರವಾಗುವುದರ ಜತೆಯಲ್ಲೇ, ಬಟ್ಟೆಯಾಗಿ ಎಷ್ಟೋ ಎಲೆಬಳ್ಳಿಗಳು ಮಾನಮುಚ್ಚಿಕೊಳ್ಳಲು ನೆರವಾದವು ಎನ್ನಬಹುದು. ಊಟದ ಭಾಗವಾಗಿ, ಕುಡಿಯುವ ಲೋಟವಾಗಿ, ಊಟದ ತಟ್ಟೆಯಾಗಿ, ಬಟ್ಟಲುಗಳಾಗಿ, ಆಹಾರ ತಯಾರಿಸುವ ಭಾಗವಾಗಿ ಜೊತೆಗೆ ಔಷಧೀಯ ಗುಣಗಳಿಂದ ಹಸಿವಿಗೆ, ಆರೋಗ್ಯಕ್ಕೆ ಸಂಜೀವಿನಿಯಾದವು. ವಿಶೇಷ ಸಂದರ್ಭಗಳಲ್ಲಿ ಬಾಗಿಲುಗಳು ಸಹ ತಳಿರುತೋರಣದ ಅಲಂಕಾರದಿಂದ ಕಳೆಗಟ್ಟುವವು. ಮಾನವನ ಕೆಲವು ಚಟಗಳಿಗೂ ಸಹ ಎಲೆಗಳೇ ಆಧಾರ. ತಂಬಾಕು ಅಥವಾ ತಂಬಾಕು ತುಂಬಿದ ಬೀಡಿಯ ಎಲೆಗಳಿರಬಹುದು, ಬೀಡಿ, ಸಿಗರೇಟು, ನಶ್ಯ ಎಲ್ಲದರ ಮೂಲವೂ ಎಲೆಗಳೇ.

ಗರಿಗಳ ಲೋಕವೇ ಬೇರೆ. ಬರಹದ ಮಾಧ್ಯಮಕ್ಕೆ ಪೇಪರ್ ಬಳಕೆಯಾಗುವ ಮುನ್ನ, ನಮ್ಮ ಹಿರಿಯರು ದೊಡ್ಡ ದೊಡ್ಡ ಗ್ರಂಥಗಳನ್ನು ತಾಳೆಗರಿಯಲ್ಲಿಯೇ ತಪ್ಪಿಲ್ಲದಂತೆ ಅಚ್ಚುಕಟ್ಟಾಗಿ ಬರಹ ಮೂಡಿಸುತ್ತಿದ್ದರಂತೆ. ಅಂದಿನವರ ತಾಳ್ಮೆ, ಜಾಣ್ಮೆ ಮೆಚ್ಚತಕ್ಕದ್ದು. ಕೆಲ ದಶಕಗಳ ಹಿಂದೆ ತೆಂಗಿನ ಗರಿಯಿಂದ ಮಕ್ಕಳು ಪೀಪಿ, ವಾಚು ತಯಾರಿಸಿ ಆಡುತ್ತಿದ್ದರೆ, ಹಿರಿಯರು ಗರಿಗರಿಯಾಗಿ ಒಣಗಿದ ಗರಿಯಿಂದ ಕಡ್ಡಿಗಳನ್ನು ಬೇರ್ಪಡಿಸಿ ಕಡ್ಡಿಬರಲು ಮಾಡುವುದರಲ್ಲಿ ಉತ್ಸುಕರಾಗುತ್ತಿದ್ದರು.

ಹ್ಯಾರಿ ಪಾಟರ್ ಬ್ರೂಮ್ ಸ್ಟಿಕ್‌ನಂತೆ ಅದರ ಮಟ್ಟೆಯ ಮೇಲೆ ಕುಳಿತು, ನೆಲದ ಮೇಲೆಯೇ ಸವಾರಿ ಮಾಡುತ್ತ ಆಡುತ್ತಿದ್ದ ದಿನಗಳು ಪ್ರತಿಯೊಬ್ಬರ ಮನದಲ್ಲಿಯೂ ಹಸಿರಾಗಿರುತ್ತವೆ. ತೆಂಗಿನ ಮರದ ಹೆಡೆ, ಮಟ್ಟೆಗಳು ಯಾರ ತಲೆಯ ಮೇಲೆಯೂ ಬೀಳುವುದಿಲ್ಲ ಎನ್ನುವ ಮಾತಿದೆ. ಬಿದ್ದರೆ ತಲೆ ಉಳಿಯುವುದು ಅನುಮಾನ ಬಿಡಿ. ಈ ಮಟ್ಟೆಗಳನ್ನು ಎಳೆಯುವುದಕ್ಕೆ ರಟ್ಟೆಗಳು ಗಟ್ಟಿಯಿರಬೇಕು.

ಎಲೆ ಉದುರಿತು ಜಗಳ ಕೆದರಿತು!

ಮನುಷ್ಯನಿಗೆ ಕೇಶರಾಶಿಯಿಂದ ಸೌಂದರ್ಯ ಹೆಚ್ಚುವಂತೆ, ಮರಗಿಡಗಳಿಗೆ ಎಲೆಗಳಿಂದಲೇ ರಾಶಿ ಸೌಂದರ್ಯ. ಅಂಗಡಿಯವರು ಕೆಲ ಮಾಸಗಳಲ್ಲಿ ಡಿಸ್ಕೌಂಟ್ ಸೇಲ್ ಇಟ್ಟು, ಹಳೆಯ, ಉಳಿದ, ಪಳಿದ ಸ್ಟಾಕ್‌ಗಳನ್ನು ಖಾಲಿ ಮಾಡಿ, ಮುಂದೆ ಹಬ್ಬಗಳಿಗೆ ಹೊಸ ಹೊಸ ಮಾಲನ್ನು ತರಿಸುವುದಿದೆ. ಮರಗಳೂ ಸಹ ನಿರ್ದಿಷ್ಟ ಋತುವಿನಲ್ಲಿ ಲೀಫ್‌ಸ್ಟಾಕ್ ಎಲ್ಲವನ್ನೂ ಧರೆಗುದುರಿಸಿ ಬೋಳಾಗಿ, ವಸಂತದಲ್ಲಿ ಹೊಸ ಹಸಿರುಡುಗೆಯನ್ನು ತೊಡುವುದಿದೆ. ಸಾಮಾನ್ಯವಾಗಿ ಮರದ ಎಲೆಗಳು ಪುಟ್ಟ ಆಕಾರದ, ಹಗುರ ಗುಣವುಳ್ಳವು, ಹಣ್ಣಾಗಿ ಉದುರುವಾಗ ಬಣ್ಣ ಬದಲಾಯಿಸಿಕೊಂಡು ಸತ್ವವನ್ನೆಲ್ಲ ಕಳೆದುಕೊಂಡು, ತೂಕವನ್ನಿಳಿಸಿಕೊಂಡಂತೆ ಮತ್ತಷ್ಟು ಹಗುರಾಗಿ, ಗಾಳಿಯಲ್ಲಿ ತೇಲುತ್ತಲೋ, ಬಸ್ಕಿ ಹೊಡೆಯುತ್ತಲೋ ಭೂಮಿಗೆ ಬೀಳುವುದಿದೆ. ಮನುಷ್ಯ ವಾಸಿಸುವ ಮನೆಯ ಮುಂದಿನ ಮರಗಳ ಎಲೆಯುದುರುವಿಕೆ ನೆರೆಹೊರೆಯವರ ನಡುವೆ ಕಂದಕ ಸೃಷ್ಟಿಸುವುದಿದೆ. ಅವರ ಮನೆಯಂಗಳಕ್ಕೆ ಬಿದ್ದ ಎಲೆಯನ್ನು ಇವರಂಗಳಕ್ಕೆ, ಇವರದ್ದು ಅವರಂಗಳಕ್ಕೆ ಫುಟ್‌ಬಾಲ್ ಆಡಲು ಆರಂಭಿಸಿ, ಅದೇ ಮುಂದೆ ವದೆ ಬೀಳುವ ಹಂತಕ್ಕೂ ಹೋಗುವುದುಂಟು!

ನೀರಿನಲ್ಲಿ ಬಿದ್ದರೂ ಮುಳುಗದೆ ತೇಲುವ ಗುಣವಿರುವ ಎಲೆಯ ಬಗ್ಗೆ, ಹಿರಿಯ ಕವಿಗಳಾದ ಸುಬ್ರಾಯ ಚೊಕ್ಕಾಡಿಯವರು ತಮ್ಮ ಪದ್ಯದಲ್ಲಿ ಹೇಳುವಂತೆ,

ಮೇಲೆ ಆಕಾಶಕ್ಕೆ ಹಾರದೆ
ಕೆಳಗೆ ತಳಕ್ಕಿಳಿಯದೆ
ನದಿ ನಡುವ ತಿರುಗಣಿ ಮಡುವಿಗೆ ಸಿಲುಕಿಯೂ
ಒಳಸೇರದೆ
ಅಂಚಿನಲ್ಲೇ ಸುತ್ತು ಹಾಕುತ್ತಾ
ದಂಡೆಗುಂಟ ಚಲಿಸುತ್ತಿದೆ.

ಇದಕ್ಕಿಂತ ಅರ್ಥಪೂರ್ಣವಾಗಿ ಎಲೆಮಹಿಮೆಯನ್ನು ವಿವರಿಸಲುಂಟೆ?

ಹಹ್ಹಾಸ್ಯ!

ಸೇಲ್ಸ್‌ಮನ್ ಶಂಭು

» ಕೆ.ಶ್ರೀನಿವಾಸರಾವ್. ಹರಪನಹಳ್ಳಿ

ಶಂಭು ಪದವಿ ಮುಗಿಸಿ ಸರ್ಕಾರಿ ಕೆಲಸಕ್ಕಾಗಿ ಅಂಡಲೆಯದ ಕಛೇರಿಗಳಿಲ್ಲ. ವಯೋಮಿತಿ ಮುಗಿಯುತ್ತಾ ಬಂದಿತ್ತು. ಕೊನೆಗೆ ಬೇಸತ್ತು ಯಾವುದಾದರೂ ಒಂದು ಕಂಪನಿಯ ಮಾರಾಟ ಪ್ರತಿನಿಧಿ ಆಗಲು ಬಯಸಿ ಬೇಟೆಗೆ ಹೊರಟ. ಅವನ ಪುಣ್ಯ! ವಾಶಿಂಗ್ ಮೆಶಿನ್‌ಗೆ ಉಪಯೋಗಿಸುವ ಪೌಡರ್ ಮಾರುವ ಕೆಲಸ ಸಿಕ್ಕಿತು. ಮಾರಿದ ಒಂದಕ್ಕೆ ಇಂತಿಷ್ಟು ಕಮಿಷನ್ ಎಂದು ನಿರ್ಧಾರವಾಯಿತು. ಪೌಡರನ್ನು ದೊಡ್ಡದೊಂದು ಚೀಲಕ್ಕೆ ತುಂಬಿಕೊಂಡು, ಮೊದಲ ದಿನ ಕೆಲಸಕ್ಕೆ ಹೊರಟ.

ಮಹಿಳಾ ವಠಾರ. ಮನೆಯ ಬಾಗಿಲು ತಟ್ಟಿದ. ಮಧ್ಯವಯಸ್ಸಿನ ಹೆಂಗಸು ಬಾಗಿಲು ತೆರೆದಳು. ಶಂಭು ತನ್ನ ಪೌಡರ್ ಬಗ್ಗೆ ವಿವರಿಸಿದ. 'ಪ್ರಾತ್ಯಕ್ಷಿಕೆ ತೋರಿಸ್ತೀರಾ?' ಎಂದು ವಾಶಿಂಗ್ ಮಶಿನ್ ಬಳಿ ಕರೆದೊಯ್ದು ನಾಲ್ಕಾರು ಸೀರೆ ಕೈಗೆ ಕೊಟ್ಟರು. ಶಂಭು ಅತ್ಯುತ್ಸಾಹದಿಂದ ತನ್ನ ಪ್ರಪ್ರಥಮ ಗ್ರಾಹಕರಿಗೆ ಸೀರೆಗಳನ್ನು ಒಗೆದು ಹಿಂಡಿ ತೆಗೆದು ಹಿತ್ತಲಲ್ಲಿ ಒಣಗಿಸಿದ. 'ಎಷ್ಟು ಪೌಡರ್ ನಿಮಗೆ ಬೇಕು?' ಎಂದ. 'ನಮ್ಮ ಯಜಮಾನರು ಊರಿನಲ್ಲಿಲ್ಲ. ಮತ್ತೆ ನೀವು ಬಂದಾಗ ಕೊಳ್ಳುತ್ತೇನೆ' ಎಂಬ ಉತ್ತರ! ಸೀರೆ ಒಗೆದದ್ದೇ ಬಂತು! ಶಂಭು ಬೆವರು ಒರೆಸಿಕೊಂಡು ಹೊರಬಂದ.

ಬಟ್ಟೆ ಒಗೆಯುವ ಸಹವಾಸವೇ ಬೇಡವೆಂದು ಬಿಸ್ಕತ್ ವ್ಯಾಪಾರಕ್ಕೆ ಹೊರಟ. ಅದೊಂದು ಶಿಶುವಿಹಾರ. ಇಲ್ಲಿ ವ್ಯಾಪಾರ ಗ್ಯಾರಂಟಿ ಎಂದು ಅನಿಸಿತ್ತು. ಟೀಚರ್ ಮುಂದೆ ಕಡತ ಬಿಚ್ಚಿ ಬಿಸ್ಕತ್ ಪಾಕೆಟ್ಟುಗಳನ್ನು ತೋರಿಸಿದ. ಪಾಕೆಟ್ ಒಡೆದು ಒಂದು ಬಿಸ್ಕತ್ ತಿನ್ನಲು ಕೊಟ್ಟ. ಮಕ್ಕಳಿಗೂ ಕೊಡಿ ಎಂದು ಎಲ್ಲರನ್ನು ಕರೆದಳು.ಸುಮಾರು 25 ಮಕ್ಕಳು ಓಡಿ ಬಂದವು. ಎಲ್ಲರೂ ಒಂದೆರಡು ಬಿಸ್ಕೆಟ್ ತಿಂದರು. 'ಮೇಡಂ, 4 ಪಾಕೆಟ್ ತಿಂದಿದ್ದಾರೆ. ಹಣ ಕೊಡ್ತೀರಾ?' ಅಂದ. ಟೀಚರ್ ನಗುತ್ತ 'ಮಕ್ಕಳು ಕಣ್ರೀ..ಪಾಪ ! ಸ್ಯಾಂಪಲ್ ತಿಂದಿದ್ದಾರೆ. ಈಗ ಖರೀದಿಗೆ ಬೇಡ' ಎಂದರು. ಬಿಸ್ಕತ್ ಸೇಲ್ಸ್ ನನ್ನಿಂದಾಗದ ಕೆಲಸ ಎಂದು ಶಂಭು ಮರುದಿನ ಪಿಂಗಾಣಿ ತಟ್ಟೆ, ಲೋಟ ಇತರೆ ಮನೆಬಳಕೆಯ ವಸ್ತುಗಳನ್ನು ತುಂಬಿಕೊಂಡು ಮಾರಾಟಕ್ಕೆ ಹೊರಟ. ಈ ಬಾರಿ ಹುಷಾರಾಗಿರಬೇಕೆಂದು ಎಚ್ಚರಿಕೆಯಿಂದ ಸಾಗಿದ. ಮನೆಯೊಂದರ ಜಗಲಿಯಲ್ಲಿ ಕುಳಿತಿದ್ದ ಒಬ್ಬ ತರುಣಿ ಕರೆದಳು. ಖುಷಿಯಿಂದ ಮಾರು ದೂರದ ಅವರ ಮನೆಗೆ ಹೋದ. ಬಾಗಿಲಿಗೆ ಬೀಗ ಹಾಕಿದ್ದರು. ಅಲ್ಲಿಯೇ ನೋಡೋಣವೆಂದು ಎಲ್ಲವನ್ನೂ ಪರೀಕ್ಷಿಸಿ ಸುಮಾರು 3000 ರೂ ಗಳ ವಸ್ತು ಆರಿಸಿದರು. 'ಗಂಡ ಮನೆಯಲ್ಲಿಲ್ಲ . ನಾಳೆ ಕೊಡುತ್ತೇನೆ ಬನ್ನಿ' ಎಂದರು. ಭರ್ಜರಿ ವ್ಯಾಪಾರ! ನಾಳೆ ಬಂದು ತೆಗೆದುಕೊಂಡು ಹೋದರಾಯಿತು . ಶಂಭು ಅಪಾರ ಹರ್ಷಿತನಾಗಿದ್ದ. ಮರುದಿನ ಬಂದು ಆ ಮನೆಯ ಬಾಗಿಲು ತಟ್ಟಿ ಹಣ ಕೇಳಿದ. ಯಾರೋ ಹಿರಿಯ ನಾಗರಿಕರಿಬ್ಬರಿದ್ದರು. ಅವರಿಗೆ ಅಚ್ಚರಿ! 'ನಾವು ನಾಲ್ಕು ದಿನಗಳಿಂದ ಊರಿನಲ್ಲಿರಲಿಲ್ಲ. ಬೆಳಿಗ್ಗೆ ತಾನೇ ಬಂದಿದ್ದೇವೆ. ಯಾರೋ ನಮ್ಮ ಮನೆಯ ಕಟ್ಟೆಯ ಮೇಲೆ ಕುಳಿತು ಖರೀದಿಸಿ ನಿನ್ನನ್ನು ಯಾಮಾರಿಸಿದ್ದಾರೆ' ಶಂಭುಗೆ ಆಕಾಶವೇ ತಲೆಯ ಮೇಲೆ ಬಿದ್ದಂತಾಗಿತ್ತು! ಏನು ಮಾಡಿದರೂ ಕೈಹಿಡಿಯುತ್ತಿಲ್ಲ, ಏಕೆ ಹೀಗೆ ? ಬಿಚ್ಚಿ ತೋರಿಸುವುದು, ಸ್ಯಾಂಪಲ್ ಕೊಡುವುದು ಇಲ್ಲದ ವಸ್ತು ಮಾರಾಟವೇ ಸೈ ಎಂದು ಬಟ್ಟೆ ಸೋಪು, ಮಾರಾಟಕ್ಕಿಳಿದ. ಬೆಳಿಗ್ಗೆ ಬೇಗನೆ ಸೋಪು ಹೊತ್ತು ಹೊರಟ. ಎದುರಿಗೆ ಸರ್ಕಾರಿ ಮಹಿಳಾ ಹಾಸ್ಟಲ್ ಕಂಡಿತು.ಒಮ್ಮೆಲೇ ಹತ್ತಾರು ಹುಡುಗಿಯರು ಮುತ್ತಿಗೆ ಹಾಕಿ ಸೋಪಿನ ಬಗ್ಗೆ ಮಾಹಿತಿ ಕೇಳಿದರು.ಪ್ರಾತ್ಯಕ್ಷಿಕೆ ತೋರಿಸಲುಹೇಳಿದರು. ಅವರವರಲ್ಲೇ ಮಾತನಾಡಿಕೊಂಡು ಒಳಗೆ ಹೋದರು. ಕೆಲ ನಿಮಿಷಗಳಲ್ಲಿ ಹೊರಬಂದರು. ಪ್ರತಿಯೊಬ್ಬರ ಕೈಯಲ್ಲಿ ಬಟ್ಟೆಗಳು. 'ಇವುಗಳನ್ನು ಒಗೆದು ತೋರಿಸಿ ಸರ್..' ಶಂಭುಗೆ ಅರ್ಥವಾಗಿತ್ತು ! ಹಿಂದೆ ಒಗೆಯುವ ಪೌಡರ್ ಪ್ರಾತ್ಯಕ್ಷಿಕೆ ತೋರಿಸಿದ. ನಗುನಗುತ್ತ ಹೇಳಿದ. 'ಸಿಸ್ಟರ್ಸ್, ಮರೆತಿದ್ದೆ. ಇದು ಬಟ್ಟೆ ತೊಳೆಯುವ ಸೋಪಲ್ಲ. ಸ್ನಾನದ ಸೋಪು!' ಹುಡುಗಿಯರೆಲ್ಲ ಮುಸಿ ಮುಸಿ ನಗುತ್ತಾ ಒಳಸರಿದರು.

ಸವಣೂರಿನ ದೊಡ್ಡ ಹುಣಸೇ ಮರಗಳು



» ಮಂಜುನಾಥ ಡಿ. ಎಸ್.

ಅಗಲವಾದ, ಬೃಹದಾಕಾರವಾದ ಕಾಂಡಹೊಂದಿರುವ, ಹುಣಸೆ ಎಲೆಗಳನ್ನು ಹೋಲುವ ಎಲೆ ಹೊಂದಿರುವ ಈ ವಿಚಿತ್ರಾಕಾರದ ಮರಗಳು ಸಾವಿರಾರು ವರ್ಷ ಬದುಕಬಲ್ಲವು!

ಧಾರವಾಡಕ್ಕೆ ಹೋಗಿದ್ದಾಗ ಆಸುಪಾಸಿನ ಪ್ರವಾಸಿ ತಾಣಗಳನ್ನು ನೋಡಬೇಕೆನಿಸಿತು. ಸ್ಥಳೀಯರನ್ನು ವಿಚಾರಿಸಿದೆ. ಅನೇಕರು 'ಇಲ್ಲಿ ಪ್ರೇಕ್ಷಣೀಯ ಸ್ಥಳಗಳೇ ಇಲ್ಲ!' ಎಂದೇ ಉತ್ತರಿಸಿದರು! ಕಡೆಗೊಬ್ಬರು, ದೂರದ ಕೆಲವು ತಾಣಗಳನ್ನು ಸೂಚಿಸಿದರು. ಸುಮಾರು ಎಂಬತ್ತು ಕಿಲೋಮೀಟರ್ ದೂರದ ಸವಣೂರಿನ (ಹಾವೇರಿ ಜಿಲ್ಲೆ) ದೊಡ್ಡ ಹುಣಸೆ ಮರಗಳು ಅವುಗಳಲ್ಲಿ ಸೇರಿದ್ದವು. ಈ ವೃಕ್ಷಗಳ ವಿಶೇಷತೆಯನ್ನು ಪ್ರತ್ಯಕ್ಷ ದರ್ಶನದಿಂದ ತಿಳಿದುಕೊಳ್ಳಬಯಸಿದೆ. ಬಾಡಿಗೆ ಕಾರು ಮಾಡಿಕೊಂಡು ಅವುಗಳನ್ನು ನೋಡಲು ಹೊರಟೆ.

ರಸ್ತೆ ಮಾರ್ಗದಲ್ಲಿ ಸವಣೂರು ಸಲುಪಿದ್ದೇನೋ ಆಯಿತು. ಆದರೆ, ಅಲ್ಲಿ ಈ ಮರಗಳಿರುವ ಜಾಗವನ್ನು ಪತ್ತೆ ಹಚ್ಚಲು ಸ್ವಲ್ಪ ಕಷ್ಟ ಪಡಬೇಕಾಯಿತು. ಕೆಲವರನ್ನು ವಿಚಾರಿಸಿದಾಗ, ದಾರಿ ತಿಳಿಯಿತು. ಕಲ್ಮಠದ ಆವರಣದಲ್ಲಿದ್ದ ಅನೇಕ ಶತಮಾನಗಳಷ್ಟು ಹಿಂದಿನ ದೊಡ್ಡ ಹುಣಸೆ ಮರಗಳು ಕಡೆಗೂ ಗೋಚರಿಸಿದವು. ಇವು ಎಷ್ಟು ಹಳೆಯವೆಂಬುದಕ್ಕೆ ಖಚಿತವಾದ ದಾಖಲೆಗಳಿಲ್ಲ. ಆದರೆ ನೂರಾರು ವರ್ಷಗಳ ಹಿಂದಿನವು ಎಂಬುದಂತೂ ಸತ್ಯ!

ಆಫ್ರಿಕಾ ಮೂಲ

ಅಲ್ಲಿನ ಮರಗಳ ಬಳಿ ಒಂದು ಫಲಕವನ್ನು ಬರೆಯಿಸಿದ್ದಾರೆ. ಅದರ ಪ್ರಕಾರ, ಆಫ್ರಿಕಾ ಮೂಲದ ಈ

ಮರಗಳು ಬಾಂಬುಕೇಶಯಾ ವರ್ಗಕ್ಕೆ ಸೇರಿದುವೆಂದೂ ಮತ್ತು ಜಗತ್ತಿನಲ್ಲಿಯೇ ಅತಿ ದೊಡ್ಡದಾಗಿ ಬೆಳೆಯುವ ವೃಕ್ಷಗಳೆಂದೂ ತಿಳಿಯಿತು. ಮರದ ಬುಡವು ದೊಡ್ಡ ಗಾತ್ರ ಹೊಂದಿದ್ದು ಕೊಂಬೆಗಳು ಸಾಧಾರಣ ಗಾತ್ರದ್ದಾಗಿದ್ದವು. ಹದಿಮೂರರಿಂದ ಹದಿನಾರು ಮೀಟರ್ ಸುತ್ತಳತೆ ಹಾಗು ಹದಿನಾರರಿಂದ ಹದಿನೆಂಟು ಮೀಟರ್ ಎತ್ತರದ, ಬೃಹದಾಕಾರದ ಇಲ್ಲಿನ ಮೂರು ಮರಗಳಲ್ಲಿ ಒಂದು ಮರವು 2023ರ ಜುಲೈ ಏಳರಂದು ಜೋರು ಮಳೆಯಿಂದಾಗಿ ಧರೆಗುರುಳಿತು. ಹಾಗಾಗಿ ಈಗ ಪ್ರವಾಸಿಗರು ಎರಡು ಮರಗಳನ್ನು ಮಾತ್ರ ನೋಡಲು ಸಾಧ್ಯ. ಇನ್ನೊಂದು ಗಿಡ ಈಗ ಚಿಗುರೊಡೆದಿದೆ. ಇದು ಉಳಿದೆರಡರಂತೆ ಬೆಳೆಯಲು ಬಹಳ ವರ್ಷಗಳು ಬೇಕಾಗುತ್ತದೆ; ಬೆಳವಣಿಗೆಯೂ ಬಲು ನಿಧಾನ. ಮರಗಳ ಆಯಸ್ಸು ನೂರಾರು ವರ್ಷ.

ದೀರ್ಘಾಯಸ್ಸು!

ಈ ಪ್ರಭೇದದ ಮರಗಳು (ಬವೋಬಾಬ್ಸ್) ಆಫ್ರಿಕಾ ಖಂಡದಲ್ಲಿ ಅಧಿಕವಾಗಿವೆ. ಇವುಗಳು ದೀರ್ಘಾಯಸ್ಸಿನ ಮರಗಳು. ಎಷ್ಟು ದೀರ್ಘ ಎಂದರೆ, ಜಿಂಬಾಬ್ವೆ ದೇಶದಲ್ಲಿ ಇಂತಹ ಒಂದು ಮರವು 2450 ವರ್ಷ ಬದುಕಿತ್ತು! ಇತರ ಕೆಲವು ಮರಗಳು 2,000 ವರ್ಷ ಬದುಕಿದ್ದನ್ನು ವಿಜ್ಞಾನಿಗಳು ಗುರುತಿಸಿದ್ದಾರೆ. ನಮೀಬಿಯಾದಲ್ಲಿ ಇಂದಿಗೂ ಇರುವ ಇಂತಹ ಒಂದು ಮರವು ಸುಮಾರು 1,275 ವರ್ಷ ಬದುಕಿದೆ. ಆದ್ದರಿಂದ, ಸವಣೂರಿನಲ್ಲಿರುವ ಇದೇ ಪ್ರಭೇದಕ್ಕೆ ಸೇರಿದ ಈ ಬೃಹದಾಕಾರದ ಮರಗಳು ಸಾವಿರ ವರ್ಷಕ್ಕೂ ಹಿಂದಿನವು ಎಂದು ಹೇಳಬಹುದು.

ಈ ಮರಗಳ ತೊಗಟೆ, ಟೊಂಗೆ, ಹೂವು, ಕಾಯಿಗಳು ಔಷಧೀಯ ಗುಣಗಳಿಂದ ಕೂಡಿದ್ದು ಹಲವು ರೋಗಗಳನ್ನು ನಿವಾರಿಸುತ್ತವೆಂದು ಸ್ಥಳೀಯರು ನಂಬಿದ್ದಾರೆ. ಇವುಗಳ ಕಾಯಿಗಳು ವರ್ಷಗಟ್ಟಲೆ ಇಟ್ಟರೂ ಕೆಡುವುದಿಲ್ಲವಂತೆ. ಅಷ್ಟೇ ಅಲ್ಲದೆ, ಈ ಮರಗಳ ಕೆಳಗಿಟ್ಟ ಆಹಾರಗಳು ಸಹ ಬಹುಕಾಲ ಕೆಡುವುದಿಲ್ಲವಂತೆ. ಒಂದು ಗೋರಖನಾಥರು ಸಾವಿರಾರು ವರ್ಷಗಳ ಹಿಂದೆ ಈ ವೃಕ್ಷವನ್ನು ಇಲ್ಲಿಗೆ ತಂದರಂತೆ. ಆದ್ದರಿಂದ ಇದು ಗೋರಖನಾಥ ವೃಕ್ಷ ಎಂದು ಕರೆಯಲ್ಪಡುತ್ತದೆ. ಮನೋಭಿಲಾಷೆಗಳನ್ನು ಈಡೇರಿಸುತ್ತವೆಂಬ ಕಾರಣದಿಂದ ಇವನ್ನು ಕಲ್ಪವೃಕ್ಷ ಎಂದು ಕರೆಯುತ್ತಾರೆ. ಬೃಹತ್ ಗಾತ್ರದಿಂದಾಗಿ ಇವುಗಳಿಗೆ ಆನೆ ಮರಗಳು ಎಂಬ ಹೆಸರೂ ಇದೆ. ಈ ವೃಕ್ಷಗಳನ್ನು ಭಕ್ತರು ಪೂಜ್ಯ ಭಾವದಿಂದ ಕಾಣುತ್ತಾರೆ. ಕಲ್ಮಠದ ಪೀಠಾದಿಪತಿಗಳಾಗಿರುವ ಚೆನ್ನಬಸವಶ್ರೀಗಳು ಈ ವೃಕ್ಷಗಳ ಬಗ್ಗೆ ಕಾಳಜಿ ವಹಿಸಿ ಅವುಗಳನ್ನು ಸಂರಕ್ಷಿಸುತ್ತಿದ್ದಾರೆ. ಸುಗಮವಲ್ಲದ, ಅನೇಕ ಕಡೆ ಧೂಳಿನಿಂದ ಕೂಡಿದ್ದ ಎಂಬತ್ತು

ಕಿಲೋಮೀಟರ್ ರಸ್ತೆ ಹಾದಿಯನ್ನು ಕ್ರಮಿಸಿದ ಶ್ರಮ ಇಂತಹ ವಿರಳಾತಿವಿರಳ ವೃಕ್ಷಗಳ ದರ್ಶನದಿಂದ ನಿವಾರಣೆಯಾಯಿತು. ನಮ್ಮ ರಾಜ್ಯದಲ್ಲೇ ಇರುವ ಅತಿ ಅಪರೂಪದ ಮರಗಳು ಇವು. ಸಸ್ಯಾಸಕ್ತರು, ನಿಸರ್ಗಪ್ರೇಮಿ ಗಳು, ವಿದ್ಯಾರ್ಥಿಗಳು ಎಲ್ಲರೂ ಒಮ್ಮೆಯಾದರೂ ನೋಡಬೇಕಾದ ಈ ಮರಗಳು, ನಮ್ಮ ನಾಡಿನ ಚೋದ್ಯ.

ಸನ್ನೆ ಸಿಂಗಾರ ಬರಿದೆ ಉದ್ಗಾರ

» ಸುಮಾ ರಮೇಶ್, ಹಾಸನ

ಲಹರಿ

ಮಾತು ಬೆಳ್ಳಿ ಮೌನ ಬಂಗಾರ ಎಂಬ ಗಾದೆಗೆ ಹೊಸ ಸೇರ್ಪಡೆ 'ಸನ್ನೆ ಸಿಂಗಾರ ಬರಿದೇ ಉದ್ಗಾರ !' ಹೌದು, ಆಡುವ ಮಾತು ಇತ್ತೀಚೆಗೆ ಪ್ರಾಮುಖ್ಯತೆ ಕಳೆದುಕೊಳ್ಳುತ್ತಿದೆ. ಹೊಸ ಪೀಳಿಗೆಯವರು ಬಾಯಿಗಿಂತಾ ಇತರ ಅಂಗಗಳಿಗೆ ಹೆಚ್ಚು ಕೆಲಸ ಕೊಡುತ್ತಿದ್ದಾರೆ. 'ಬಾಯಿ ಲಾಂಗ್ವೇಜ್'ಗಿಂತ 'ಬಾಡಿ ಲಾಂಗ್ವೇಜ್' ಮುಖ್ಯವಾಗಿದೆ. ಕಣ್ಣು ಕಿವಿ ಕೈ ಬೆರಳುಗಳೆಲ್ಲಾ ಮೊಬೈಲ್, ಲ್ಯಾಪ್ ಟಾಪ್ ನಂತಹ ಎಲೆಕ್ಟ್ರಾನಿಕ್ಸ್ ಡಿವೈಸ್‌ಗಳೊಂದಿಗೆ ಬೆಸೆದು ಸಂವಹನದಲ್ಲಿ ತೊಡಗಿರುತ್ತವೆ. ಮೌನಕ್ಕೂ ದನಿ ಇದೆ ಎಂಬ ಕವಿವಾಣಿ ಇಲ್ಲಿ ಬೇರೆಯದೇ ಬಗೆಯಲ್ಲಿ ಧ್ವನಿಸುತ್ತಿದೆ.

ಈ ಮಧ್ಯೆ ಮೌಖಿಕ ಸಂವಹನ ಅನಿವಾರ್ಯವಾದಾಗ ಓಕೆ, ಕೆ, ಡನ್, ಮಸ್ತ್ , ಯ್ಯಾ.., ನೋ ಪ್ರಾಬ್ಲಂ, ಲೈಕ್, ಊಟಟ, ಊಪ್ಸ್, ನೋಪ್, ಡೋಪ್, ಲೋಲ್, ಫೈಯರ್, ಸಸ್...ಹೀಗೆ ಅವರು ಹೊರಡಿಸುವ ಸದ್ದುಗಳು ನಮ್ಮ ಸದ್ದಡಗಿಸುತ್ತವೆ. ಅವರ ಹಲವು ಸ್ಲ್ಯಾಂಗ್‌ಗಳು ನಮ್ಮನ್ನು ಹ್ಯಾಂಗ್ ಮಾಡಿಬಿಡುತ್ತವೆ. ಈ ಪದಗಳಿಗೆಲ್ಲಾ ಇಂತಿಷ್ಟೇ ಅರ್ಥವ್ಯಾಪ್ತಿ ಇದೆ ಎಂದಿಲ್ಲ. ಅವು ಸಮಯಕ್ಕೆ ತಕ್ಕಂತೆ ದೇಹಭಾಷೆಯ ಸಿಂಗಾರದೊಂದಿಗೆ ಬೇರೆಯದೇ ಅರ್ಥ ಸ್ಫುರಿಸುತ್ತವೆ. ಅಸಲಿಗೆ ಇದರಲ್ಲಿ ಹೆಚ್ಚಿನವು ಪದಗಳೇ ಅಲ್ಲ. ಇಂಟರ್ ಜಕ್ಷನ್ ಅರ್ಥಾತ್ ಪ್ರಕ್ಷೇಪಣಗಳು, ಉದ್ಗಾರಗಳು.

ನಾವು ಇಂಗ್ಲಿಷ್ ವ್ಯಾಕರಣ ಕಲಿಯುವ ಕಾಲದಲ್ಲಿ ಲಭ್ಯವಿದ್ದ ಉದ್ಗಾರ ಪದಗಳು ಕೆಲವೇ ಕೆಲವು! ಈಗ ಆಡುವ ಮಾತೇ ಉದ್ಗಾರ, ಸಂಕೇತಗಳಾಗಿ ಬದಲಾಗಿ ಮಾತೆಯರೆಲ್ಲಾ ಇದ್ಯಾವ ಮದರ್ ಟಂಗ್ ಎಂದು ದಂಗಾಗಿರುವರು. ಟಂಗ್‌ನ ಹಂಗಿಲ್ಲದೆ ಈಗ ಸಂವಹನ ಸಾಧ್ಯವಾಗಿದೆ. ಇದಕ್ಕೆ ಪುಷ್ಟಿ ಕೊಡುವಂತೆ ಅಪವಾಸ್ತವ ಭಾವನೆಗಳ ಅಭಿವ್ಯಕ್ತಿಸುವ ಎಮೋಜಿಗಳ ದಂಡೇ ಕೀಬೋರ್ಡ್ ನಡುವೆ ಸಿಲುಕಿ ಸೇವೆಗೈಯಲು ಸಿದ್ಧವಾಗಿರುತ್ತವೆ. ಎಮೋಶನ್ಸ್ ಎಲ್ಲಾ ಸ್ಲೋ ಮೋಶನ್ ನಲ್ಲಿ ರವಾನೆಯಾಗುತ್ತವೆ.

ನಮ್ಮ ಜನಪದರು, ಆಡುವ ಭಾಷೆಯಲ್ಲಿ ಉಪಮೆ ರೂಪಕಗಳನ್ನು ಬಳಸಿ ಕೊಂಚ ದೀರ್ಘವಾಗಿಸುತ್ತಿದ್ದರು. ಗಾದೆ ನುಡಿಗಟ್ಟುಗಳನ್ನು ಬಳಸಿ ಅರ್ಥಪೂರ್ಣವಾಗಿಸುತ್ತಿದ್ದರು. ಟೆಲಿಗ್ರಾಂ, ಟೆಲಿಫೋನ್ ಬಳಕೆ ಪ್ರಚಲಿತವಾದಂತೆ ಪ್ರತಿ ಮಾತಿಗೂ, ಪದಕ್ಕೂ ತಗುಲುವ ವೆಚ್ಚ ಹೆಚ್ಚಿ ವಾಕ್ಯಗಳು ಮೊಟಕಾದವು. ಇದರೊಂದಿಗೆ ಮಾತೂ ದುಬಾರಿಯಾಯಿತು. ಪರೀಕ್ಷೆಗಳಲ್ಲಿ ಪ್ರಬಂಧ ಬರೆಯುವ, ಗಾದೆ ವಿಸ್ತರಿಸುವ, ಹತ್ತು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆ ಪತ್ರಿಕೆಗಳ ಮಾದರಿ ಬದಲಾಗಿ ಒಂದೆರಡು ವಾಕ್ಯದಲ್ಲಿ ಉತ್ತರಿಸುವ, ಚಾಯ್ಸ್ ಟಿಕ್ ಮಾಡುವ ಎಂಸಿಕ್ಯೂ (ಮಲ್ಟಿಪಲ್ ಚಾಯ್ಸ್) ಮಾದರಿಯ ಪ್ರಶ್ನೆಪತ್ರಿಕೆಗಳು ಮುನ್ನೆಲೆಗೆ ಬಂದವು.

ಒಂದೇ ಪೆನ್ನಿನಲ್ಲಿ

ಪೆನ್ನಿಗೆ ರೀಫಿಲ್ ಬದಲಿಸುವ ತಾಪತ್ರಯ ಇಲ್ಲದಂತೆ ಎಲ್ಲಾ ಪರೀಕ್ಷೆಗಳೂ ಒಂದೇ ಪೆನ್ನಿನಲ್ಲಿ ಮುಗಿದವು. ಇಂತಹ ಉತ್ತರ ಕ್ರಮಕ್ಕೆ ಒಗ್ಗಿದ ಮಕ್ಕಳು ಮೌಖಿಕವಾಗಿಯೂ ಇದನ್ನೇ ಅಳವಡಿಸಿಕೊಂಡರು. ಪೇಪರ್‌ನಲ್ಲಿ ಟಿಕ್ ಮಾಡಿದಂತೆ, ಮಾತನಾಡುವಾಗಲೂ ಟಕ್ಕನೆ ಒಂದು ಸ್ವರ ಹೊರಡಿಸಿ, ತಾಕತ್ತಿದ್ರೆ ಅರ್ಥ ಮಾಡ್ಕೊಳ್ಳಿ ಎಂದು ಹಳೆಯ ಪೀಳಿಗೆಯವರಿಗೆ ಸವಾಲೆಸೆಯಲು ಅನುವಾದರು.

ಅತಿಥಿಗಳು ಬಂದಾಗ, ಪರಿಚಿತರು, ಸ್ನೇಹಿತರು ಎದುರಾದಾಗ ಕೈ ಮುಗಿದು 'ಬನ್ನಿ, ಕೂತ್ಕೊಳ್ಳಿ... ಚೆನ್ನಾಗಿದ್ದೀರಾ ? ' 'ಎಲ್ಲರೂ ಸೌಖ್ಯವೇ ?' ಎಂಬ ಔಪಚಾರಿಕ ಮಾತುಗಳು ಕಾಣೆಯಾಗಿ ಬಂದವರನ್ನು ಲಿಂಗಭೇದವಿಲ್ಲದೆ ತಬ್ಬಿ, ಕೈಕುಲುಕಿ ಹಾಯ್, ಹಲೋ, ಹೌ ಆ ಯು? ಫೈನ್, ಆಸಮ್, ಸೂಪರ್ಬ್ ಗಳು ತಲೆ ಎತ್ತಿದವು. ಇನ್ನು ಎಲ್ಲದಕ್ಕೂ ಮುಷ್ಟಿ ಕಟ್ಟಿ ಹೆಬ್ಬೆರಳೆತ್ತಿ ಯ್ಯಾ, ಡನ್ ಎನ್ನುವ, ಅದನ್ನೇ ಅಡ್ಡಡ್ಡ ಆಡಿಸುವ ಹೆಬ್ಬೆಟ್ಟಿಗರಿಗೆ ಬರವಿಲ್ಲ. ತೋರ್ಬೆರಳನ್ನು ಹೆಬ್ಬೆರಳಿಗೆ ಉಂಗುರವಾಗಿಸಿ ಸೂಪರ್ ಎನ್ನುವುದು, ಉದ್ದನೆಯ ಎಲ್ಲಾ ಬೆರಳುಗಳನ್ನು ಡಿಸೆಂಡಿಂಗ್ ಕ್ರಮದಲ್ಲಿ ಬಗ್ಗಿಸಿ ಒಂದು ಜರ್ಕ್ ಕೊಟ್ಟು ಹಾಯ್, ಬಾಯ್ ಹೇಳುವುದು ಇಂದಿನ ಸಹಜ ಮ್ಯಾನರಿಸಮ್.

'ನುಡಿದರೆ ಮುತ್ತಿನ ಹಾರದಂತಿರಬೇಕು ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು ' ಎಂದರು ಬಸವಣ್ಣನವರು.

ಬೆರಳಿನಲ್ಲೇ ಹೃದಯ!

ಅಂಗೈಗೆ ಮುತ್ತಿಟ್ಟುಕೊಂಡು ಗಾಳಿಯಲ್ಲಿ ಹರಿಯಬಿಡುವ ಫ್ಲೈಯಿಂಗ್ ಕಿಸ್ ಹಾವಳಿ ಕಡಿಮೆಯಾಗಿ ಎರಡೂ ಕೈಬೆರಳುಗಳನ್ನು 'ಸಿ' ಆಕಾರಕ್ಕೆ ಬಾಗಿಸಿ ಹೃದಯವಾಗಿಸಿ ವಾಯುಮಾರ್ಗದಲ್ಲಿ ಪ್ರೀತಿಯನ್ನು ಪಾಸ್ ಮಾಡುವ ಟ್ರೆಂಡ್ ಸೃಷ್ಟಿಯಾಯಿತು. ಇತ್ತೀಚೆಗೆ ಇದು ಇನ್ನೂ ಸಂಕ್ಷಿಪ್ತವಾಗಿ ಹೆಬ್ಬೆರಳು ಹಾಗು ತೋರು ಬೆರಳಿನ ತುದಿಯನ್ನು ಚಿಟಿಕೆ ಹೊಡೆದಂತೆ ವಿ ಆಕಾರವಾಗಿಸಿ ಪ್ರೀತಿಯನ್ನು ಹಂಚಲಾಗುವುದು. ಗ್ರೂಪ್ ಫೋಟೋದಲ್ಲಿ ಮುಂದಿನವರ ತಲೆಯ ಮೇಲೆ ಹಿಂದಿನವರು ಕೊಂಬು ಮೂಡಿಸುವುದು, ಎರಡು ಬೆರಳನ್ನು ಮೇಲೆತ್ತಿ ವಿ ಫಾರ್ ವಿಕ್ಟರಿ ಎಂದು ವಿಜಯದ ಸಂಕೇತ ತೋರುವುದು ಸಾಮಾನ್ಯ.

ಆದರೆ ಇವೆಲ್ಲಾ ಹಳೆಯ ಪೀಳಿಗೆಯವರಿಗೆ ಬೇರೆಯದೇ ಅರ್ಥ ಹೊಳೆಯಿಸುವುದು. ಅಂದು ಶಾಲೆಗಳಲ್ಲಿ ಇದೇ ವಿ ಆಕಾರವನ್ನು ಹಾಗು ಕಿರು ಬೆರಳನ್ನು ತೋರಿದಾಗ ನೇಚರ್ಸ್ ಕಾಲ್ ಎಂದು ಅರ್ಥೈಸಿಕೊಳ್ಳುತ್ತಿದ್ದ ಶಿಕ್ಷಕರು ಬಾಗಿಲೆಡೆಗೆ ಕೈ ತೋರುತ್ತಿದ್ದರು. ಅದಕ್ಕಾಗಿ ಬಳಸುವ ಪದವು ಅಸಹ್ಯಕರವೆಂದು ಸೆನ್ಸಾರ್ ಮಾಡಿ ಸನ್ನೆಯಾಗಿಸಿದ್ದರು. ಇಂದು ಬೆರಳುಗಳನ್ನು ವಿವಿಧ ಭಂಗಿಗಳಲ್ಲಿ ಎತ್ತಿ ಮಡಚಿ ಕೂಲ್, ಚಿಲ್, ರಾಕ್ ಎನ್ನುವಾಗ ಸನ್ನೆ ಭಾಷೆಗೂ ಒಂದು ನಿಘಂಟು ಬೇಕಿದೆ ಎನಿಸದಿರದು. ಭಾಷೆಯ ಹಂಗಿಲ್ಲದೆ ವಿಷಯವನ್ನು ದಾಟಿಸಲು ಈ ಬಗೆಯ ಸನ್ನೆ, ಉದ್ಗಾರಗಳು ಸಹಾಯಕ. ಕೋಪಗೊಂಡಾಗ, ಭಯಭೀತರಾದಾಗ, ಅರೆ ನಿದ್ರೆಯಲ್ಲಿ ಎಚ್ಚರಿಸಿದಾಗ ಏಯ್... ಯಾಯ್ ಹೊಯ್...ಎಂಬ ಉದ್ಗಾರಗಳು ಉದುರುವುದು ಸಹಜ. ಇದೊಂದು ಬಗೆಯ ಪ್ರಕ್ಷೇಪಣ ಜೆಟ್ ಲ್ಯಾಗ್!

ಹೊಯ್ ಸಳ!

ಸನ್ನೆ, ಉದ್ಗಾರಗಳಿಗೆ ಪುರಾಣ, ಇತಿಹಾಸಗಳ ನಂಟೂ ಇಲ್ಲದಿಲ್ಲ. ಹಲವು ಶತಮಾನಗಳ ಹಿಂದೆ ನೀರಿನ ತೊಟ್ಟಿಯಲ್ಲಿ ಮುಳುಗಿದ ಆರ್ಕಿಮಿಡೀಸ್ ಥಟ್ಟನೆ ಮೇಲೆದ್ದು 'ಯುರೇಕಾ..., ಯುರೇಕಾ' ಎನ್ನುತ್ತಾ ಬೀದಿಯಲ್ಲಿ ಬೆತ್ತಲಾಗಿ ಓಡಿ ಹೊಸ ತತ್ವದ ಕೊಡುಗೆಯನಿತ್ತ. ಸುದತ್ತಾಚಾರ್ಯರು ತಮ್ಮೆಡೆಗೆ ಆರ್ಭಟಿಸುತ್ತಾ ಬಂದ ಹೆಬ್ಬುಲಿಯನ್ನು ಕಂಡು 'ಹೊಯ್ ಸಳ ' ಎಂದು ಕೂಗಿ ಕಬ್ಬಿಣದ ಸಲಾಕೆಯನ್ನು ನೀಡಿದಾಗ ಸಳನು ಹುಲಿಯನ್ನು ಕೊಂದು ಅದರ ಬಾಯಲ್ಲಿ ಅದೇ ಸಲಾಕೆಯನ್ನು ತೂರಿ ಪ್ರಸಿದ್ಧ ಹೊಯ್ಸಳ ವಂಶದ ಹುಟ್ಟಿಗೂ, ಲಾಂಛನಕ್ಕೂ ಕಾರಣನಾದ. ಆ ಚಣ ಗುರುಗಳು ಬಳಸಿದ 'ಹೊಯ್! ' ಎಂಬ ಪ್ರಕ್ಷೇಪಣ ಆ ಮಟ್ಟಿಗಿನ ಕೆಚ್ಚು ಮೂಡಿಸಿದ್ದು ಬಹುಶಃ ಉದ್ಗಾರಗಳ ಉಗಮಕ್ಕೂ, ಪ್ರಾಮುಖ್ಯತೆಗೂ ಕಾರಣವಾಗಿರಬಹುದು. ಕುಂಭಕರ್ಣನು ಬ್ರಹ್ಮನಲ್ಲಿ ವರ ಕೇಳುವಾಗ 'ಇಂದ್ರಾಸನವನ್ನು ನೀಡು ' ಎನ್ನುವ ಬದಲು ತಪಸ್ಸಿನ ಆಯಾಸದಲ್ಲಿ ಚಣಕಾಲ ಮೈಮರೆತು 'ನಿದ್ರಾಸನವನ್ನು ನೀಡು ' ಎಂದು ಕೋರಿ ಬದುಕೆಲ್ಲಾ ನಿದ್ರೆಯಲ್ಲೇ ಕಳೆದ. ಹೀಗೆ ಮಾತಿನಿಂದಾಗುವ ಎಡವಟ್ಟುಗಳು ಉದ್ಗಾರ, ಸಂಕೇತಗಳ ಮರುಹುಟ್ಟಿಗೂ, ವ್ಯಾಪಕ ಬಳಕೆಗೂ ಕಾರಣವಾಗಿರಬಹುದು.

ಜಗತ್ತಿನ ಇತರ ಜೀವಿಗಳಿಗಿಂತ ಮಾನವ ಭಿನ್ನ ಎನಿಸುವುದು ಮಾತಿನಿಂದ. 'ನುಡಿದರೆ ಮುತ್ತಿನ ಹಾರದಂತಿರಬೇಕು ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು ' ಎಂದರು ಬಸವಣ್ಣನವರು. ಅಂತೆಯೇ ಮಾತು ಮನೆ ಕೆಡಿಸಿತು ತೂತು ಒಲೆ ಕೆಡಿಸಿತು ಎಂಬ ಜನಪದರ ಮಾತಿನಂತೆ ಕೆಲವೊಮ್ಮೆ ಆಡುವ ಮಾತು ಎಲ್ಲೆ ಮೀರಿ ಪಶುತ್ವಕ್ಕೂ ಇಳಿಸಿಬಿಡುವುದು. ಹಾಗಾಗಿ ಹೊಸ ಪೀಳಿಗೆಯವರು ಮಾತನ್ನು ಮಿತಗೊಳಿಸಿ ಸನ್ನೆ ಉದ್ಗಾರಗಳ ಸಮೂಹ ಸನ್ನಿಗೆ ಒಳಗಾಗಿರಲೂ ಬಹುದು!

ಕವಿಕಣ

» ಅನಿಲ್ ಕುಮಾರ್ ಹೊಸೂರು

ದೇವರು

ಏಳು ತುಂಬಿದ ಮಗನು
ನಿನ್ನೆ ಕೇಳಿದ ನನ್ನ
ನಾವು ದಿನವೂ ನಮಿಸುವ
ದೇವರು ಎಲ್ಲಿಹನು ಅಪ್ಪ?
ಹುಡುಕುತ ಅಲೆದವರು
ಲೆಕ್ಕವಿರದಷ್ಟು ಮಂದಿ
ನೀನಿನ್ನೂ ಚಿಕ್ಕವ; ಪುಸ್ತಕವ
ತೆರೆದು ಓದಿಕೋ ಎಂದೆ॥

ಮಕ್ಕಳಲಿ ಕುತೂಹಲವು ಸಹಜವು
ಬಿಡದೇ ಕಾಡಿದ ನನ್ನ;
ಕಥೆ ಕೇಳಿ ಅಭ್ಯಾಸವಿಹುದವಗೆ
ನಿತ್ಯವೂ ಮಲಗುವ ಮುನ್ನ॥

ಅಕ್ಷರದಲಿ ಅಮ್ಮನಕ್ಕರೆಯಲಿ
ಇರುತಿಹನು ದೇವರು ಮಗನೆ
ನೊಂದವನ ನೋವಿನಲಿ ಜೊತೆ
ನಿಲ್ಲುವವನು ದೇವರು ಮಗನೆ॥

ಬೆಳಕೀವ ಸೂರ್ಯ ತಂಪೆರೆವ ಚಂದ್ರ
ಗ್ರಹ ತಾರೆ ನೂರು ನೂರು
ಜೀವ ತಳೆವ ಇಳೆ ಹರಿವ ನದಿ ಹೊಳೆ
ನೀಲಿ ಬಾನು ಸೂರು ನಮ್ಮ ದೇವರು॥

ಕಂಡಿರದ ದೇವರ ನೂರೆಂಟು ಪ್ರವರ
ಹೇಳಿಯಾಯ್ತು ಹೀಗೆ ಸಾಕಷ್ಟು ವಿವರ
ನಿರಾಕಾರ ದೇವರು ನಿರ್ಗುಣನು ತಂದೆ
ಅರ್ಥವಾಯಿತೆ ನಿನಗೆ ಎಂದು ಸುಮ್ಮನಾದೆ॥

ಹೀಗೆಲ್ಲ ಹೇಳಿದರೆ ಪುಟ್ಟ ತಲೆಗೆಷ್ಟು
ಹೋದೀತು; ಹ್ಞೂಂ ಎನುತಲೆ ಮಂಪರು
ಗಳಿಗೆ ಹೊತ್ತು; ನಿದ್ದೆ ಹೋದವನ
ಮುಖದಲಿ
ಕಂಡಿತು ನನಗೆ ಪುಟ್ಟ ದೇವರು॥

ಹೇಗಿತ್ತು ಜಂಗಲ್ ರಾಜ್?

» ಎಸ್. ರಾಮಚಂದ್ರಪ್ಪ

ನಾನು 1992 ರಿಂದ 1995ರಲ್ಲಿ ಬಿಹಾರದ ಪಾಟ್ನದ ಬ್ಯಾಂಕ್ ಸೇವೆಯಲ್ಲಿ ಇದ್ದೆ. ಇಂದಿನ ಬಿಹಾರದ ಜನಜೀವನ, ಸಾಮಾಜಿಕ ಜೀವನದಲ್ಲಿ ಸಾಕಷ್ಟು ಬದಲಾವಣೆ ಬಂದಿದೆ. ಅಂದಿನ ಜಂಗಲ್ ರಾಜನ ಎರಡು ತುಣುಕುಗಳು ಇಲ್ಲಿವೆ.

ಅಲ್ಲಿ ಮೊದಲಿನಿಂದಲೂ ತುಸು ಮೌಢ್ಯ ಜಾಸ್ತಿ. ಜಗಳ ಅಥವಾ ಹೋರಾಟ ಮಾಡಿದರೆ ಮಾತ್ರ ನ್ಯಾ ದೊರಕುತ್ತದೆಂಬ ಭಾವನೆ ಅಲ್ಲಿದೆ. ಅನರಕ್ಷರೆ, ಅತಿಯಾದ ಮೂಢನಂಬಿಕೆ, ಬಾಲ್ಯವಿವಾಹ, ವರದಕ್ಷಿಣೆ ಎಲ್ಲಾ ಸಾಮಾನ್ಯ. ಉತ್ತರ ಪ್ರದೇಶದ ಮುಗಲ್ ಸೆರೈವರೆಗೆ ಸರಿಯಾದ ಸಮಯಕ್ಕೆ ಬರುವ ರೈಲು, ನಂತರ ಬಿಹಾರದ ಗಡಿ ಪ್ರವೇಶಿಸಿದ್ದಂತೆ, ಪ್ರಯಾಣಿಕರು ತಮ್ಮ ಮನೆ ಹತ್ತಿರ ಚೈನ್ ಎಳೆದು ರೈಲು ನಿಲ್ಲಿಸಿ, ಮನೆಗೆ ನಡೆಯುವುದು ಸಾಮಾನ್ಯವಾಗಿತ್ತು. ಟ್ರೈನ್ ತಡವಾಗಿ ತಲುಪುವುದೂ ಸಾಮಾನ್ಯ!

ಬ್ಯಾಂಕಿನ ಪಾಟ್ನ ಶಾಖೆಗೆ ನಾನು ಸೇರ್ಪಡೆ ಆಗಿ ವಾಸಕ್ಕೆ ಬಾಡಿಗೆ ಮನೆಯನ್ನು ಪಡೆದೆ. ನಂತರ ಎರಡು ದಿನ ನಮ್ಮ ಮನೆಯಲ್ಲಿ ವಿದ್ಯುತ್ ಇರಲಿಲ್ಲ. ಸ್ಥಳಿಯರಲ್ಲಿ ವಿಚಾರಿಸಿದಾಗ, ಯಾರೋ ಕಳ್ಳರು ವಿದ್ಯುತ್ ಕಂಬಕ್ಕೆ ಜೋಡಿಸಿದ್ದ ಟ್ರಾನ್ಸಫಾರ್ಮರ್ ಕಳ್ಳತನ ಮಾಡಿದ್ದಾರೆ ಎಂದು ಹೇಳಿದರೂ! ಇದು ಕೂಡ ಸಾಧ್ಯವಾ ಅನಿಸಿತ! ಇದು ಬಿಹಾರದಲ್ಲಿ ಇದ್ದ ವ್ಯವಸ್ಥೆ!

ಒಬ್ಬ ಸರ್ಕಾರಿ ನೌಕರ ಗುಮಾಸ್ತನಾಗಿದ್ದರೆ ಒಂದು ಬೈಕ್ ಮತ್ತು ನಗದು ವರದಕ್ಷಿಣೆ. ಸರ್ಕಾರಿ ನೌಕರಿಯಲ್ಲಿ ಅಧಿಕಾರಿಯಾದರೆ ಒಂದು ಕಾರು, ಒಂದು ಮನೆ ಹಾಗು ನಗದು ವರದಕ್ಷಿಣೆ. ಚಿಕ್ಕ ಚಿಕ್ಕ ವಿಷಯಗಳಿಗೆ, ವ್ಯಕ್ತಿಗಳ ಮಧ್ಯೆ ಮನಸ್ತಾಪ, ಜಗಳ ಮತ್ತು ಕೊಲೆ ನಡೆಯುತ್ತಿತ್ತು! ಆಟೊ ದರ ಜಾಸ್ತಿ ಕೇಳಿದ ಬಗ್ಗೆ ಪ್ರಯಾಣಿಕರ ಮಧ್ಯೆ ಜಗಳ, ಆಟೊ ಚಾಲಕನ ಕೊಲೆಯಾದ ಉದಾಹರಣೆ ಇತ್ತು. ಜನನಿಬಿಡ ನಗರ ಪ್ರದೇಶದಲ್ಲಿ ಮೈ ತುಂಬ ಬಂಗಾರದ ಆಭರಣಗಳನ್ನು ಧರಿಸಿ ಚಲಿಸುತ್ತಿದ್ದ ಮಹಿಳೆಗೆ ಗನ್ ತೋರಿಸಿ ಆಭರಣಗಳ ಲೂಟಿ ಮಾಡುತ್ತಿದ್ದರು; ಆ ಮಹಿಳೆಯು ಸಹಾಯಕ್ಕಾಗಿ ಅಂಗಲಾಚಿದಾಗ, ಕೂಗಾಡಿದರೂ, ಯಾರು ಸಹಾಯಕ್ಕೆ ಮುಂದಾಗಲಿಲ್ಲ, ಕಾರಣ ಗನ್ ನೋಡಿ ಎಲ್ಲರಿಗೂ ಭಯ. ಒಂದು ಬ್ಯಾಂಕಿನ ಅಧಿಕಾರಿ ಸಭೆ. ಒಂದು ಬ್ಯಾಂಕಿನ ಅಧಿಕಾರಿ ಪ್ರತಿಕ್ರಿಯಿಸುತ್ತಾ ಸಾರ್, 'ಈ ರಾಜ್ಯದಲ್ಲಿ ಬ್ಯಾಂಕ್ ಅಧಿಕಾರಿಗಳು ಕಾರ್ಯ ನಿರ್ವಹಿಸುವುದು ಕಷ್ಟವಾಗಿದೆ, ಕೆಲವು ಶಾಖೆಗಳಲ್ಲಿ ದರೋಡೆಯಾಗಿದೆ, ಸಾಕಷ್ಟು ಹಣ ಲೂಟಿಯಾಗಿದೆ, ಬ್ಯಾಂಕುಗಳಿಗೆ ಸುರಕ್ಷತೆ ಒದಗಿಸಬೇಕು' ಎಂದರು. ಅದಕ್ಕೆ ಮಂತ್ರಿಯೊಬ್ಬರು ಉತ್ತರಿಸಿದ ರೀತಿ: 'ಈಗ ಏನಾಗಿದೆ? ನಿಮ್ಮ ಬ್ಯಾಂಕಿನಲ್ಲಿ ಹಣ ಲೂಟಿ ಮಾಡಿದರೆ, ಆ ಹಣ ಇನ್ನೊಂದು ಬ್ಯಾಂಕಿಗೆ ಹೋಗುತ್ತದೆ, ಹೊರತು ನಮ್ಮ ರಾಜ್ಯ ಬಿಟ್ಟು ಹೊರಗೆ ಹೋಗುವುದಿಲ್ಲವಲ್ಲ! ನೀವು ನಮ್ಮ ರಾಜ್ಯದ ಸಂಪತ್ತನ್ನು ಬೇರೆ ರಾಜ್ಯದವರಿಗೆ ಸಾಲ ಕೊಟ್ಟು ಕಟಬಾಕಿಯಾಗಿದೆ ಹಾಗು ಸಾಲ ಮನ್ನಾ ಮಾಡುವ ಸ್ಥಿತಿ ಬಂದಿದೆ, ಅದಕ್ಕಿಂತ ಇದೇ ವಾಸಿ' ನೆರೆದಿದ್ದ ಬ್ಯಾಂಕ್ ಅಧಿಕಾರಿಗಳೆಲ್ಲ ಚುಪ್ ಚುಪ್. ಮೊನ್ನೆಯ ಬಿಹಾರದ ಚುನಾವಣಾ ಫಲಿತಾಂಶ ನೋಡಿದಾಗ, ಅಂದಿನ ಜಂಗಲ್ ರಾಜ್ ನೆನಪಾಯಿತು. ಇಂದು ಬಿಹಾರದಲ್ಲಿ ಸಾಕಷ್ಟು ಬದಲಾವಣೆ ಯಾಗಿದೆ; ಪ್ರಗತಿಯೂ ಆಗಿದೆ. ಅಂದಿನ ಜಂಗಲ್‌ರಾಜ್ ಮರೆಯಾಗಿದೆ.

ಅನನ್ಯ ಜೀವನಾನುಭವ ಸಂಗೀತದ ತಳಹದಿ

» ಡಾ. ಸುಭಾಷ್ ಪಟ್ಟಾಜೆ

ಕನ್ನಡ ಸಾಹಿತ್ಯದಲ್ಲಿ ಸಂಗೀತ ಮತ್ತು ಸಂಗೀತಗಾರರನ್ನು ಪ್ರಧಾನವಾಗಿಟ್ಟುಕೊಂಡು ಕೆಲವು ಕಾದಂಬರಿಗಳು ಪ್ರಕಟವಾಗಿವೆ. ಮಾಸ್ತಿಯವರ 'ಸುಬ್ಬಣ್ಣ', ಅ. ನ. ಕೃ. ಅವರ 'ಸಂಧ್ಯಾರಾಗ', ತ. ರಾ. ಸು. ಅವರ ಹಂಸಗೀತೆ ಇದಕ್ಕೆ ಉದಾಹರಣೆಗಳಾಗಿವೆ. ಇಂಥ ಕಾದಂಬರಿಗಳು ಸಾಮಾನ್ಯವಾಗಿ ನಾಯಕ ಪ್ರಧಾನವಾಗಿದ್ದು ಆಯಾ ಕಲಾವಿದರ ವೈಯಕ್ತಿಕ ಜೀವನದ ಕಡೆಗೆ ಬೆಳಕು ಚೆಲ್ಲುತ್ತವೆ. ಎಸ್. ಎಲ್. ಭೈರಪ್ಪನವರ ಮಹತ್ವಾಕಾಂಕ್ಷಿ ಕಾದಂಬರಿ 'ಮಂದ್ರ ಈ ಪರಂಪರೆಗೆ ಸೇರಿಯೂ ಹಲವು ನೆಲೆಗಳಲ್ಲಿ ಭಿನ್ನವೆನಿಸಿ ಕೊಳ್ಳುತ್ತದೆ.

ಎರಡು ಮೂರು ಕಾ'ದಂಬರಿಗಳಾಗಿ ಕವಲೊಡೆಯ ಬಹುದಾಗಿದ್ದ ಮಂದ್ರವು ತನ್ನ ಮುಕ್ತ ವಿನ್ಯಾಸದಿಂದಾಗಿ ಬೃಹತ್ ರೂಪವನ್ನು ತಾಳಿದೆ. ಮೇಲ್ನೋಟಕ್ಕೆ ಪ್ರತ್ಯೇಕವೆನಿಸುವ ಭಾಗಗಳನ್ನು ಸಂಗೀತವು ಕಾದಂಬರಿಯ ಒಟ್ಟು ಬಂಧದಲ್ಲಿ ಬೆಸೆಯುತ್ತದೆ. ಕೇಂದ್ರಪಾತ್ರವಾದ ಮೋಹನ ಲಾಲನು ಇತರ ಪಾತ್ರಗಳೊಂದಿಗೆ ವಿವಿಧ ರೀತಿಯಲ್ಲಿ ಸಂಬಂಧವನ್ನು ಇಟ್ಟು ಕೊಂಡಿರುವುದರಿಂದ ಕಾದಂಬರಿಯ ಸಂವಿಧಾನದಲ್ಲಿ ಐಕ್ಯತೆಯಿದೆ. ಪಾತ್ರಗಳು ತಮ್ಮ ಸುತ್ತಲಿನ ಲೋಕವನ್ನು, ಅನುಭವಗಳನ್ನು ಪರಿಭಾವಿಸುವ ಮತ್ತು ಅಭಿವ್ಯಕ್ತಿಸುವ ರೀತಿಯು ಸಂಗೀತದ ಪರಿಭಾಷೆಯಿಂದ ಕೂಡಿದೆ. ರಾಗಗಳ, ರಾಗವಿನ್ಯಾಸಗಳ ನುಡಿಗಟ್ಟಿ ನಲ್ಲಿ ಅವರು ತಮ್ಮ ಭಾವಸ್ಥಿತಿಗಳನ್ನು, ಭಾವ ವೈಪರೀತ್ಯಗಳನ್ನು ವಿವರಿಸುತ್ತಾರೆ. ಸಂಗೀತವೇ ಮುಖ್ಯ ವಸ್ತುವಾಗಿ, ಸಂಗೀತದ ನುಡಿಗಟ್ಟು ಭಾಷಿಕ ವಿನ್ಯಾಸದ ಭಾಗವಾಗಿರುವ ಮಂದ್ರವು ಈ ಬಗೆಯ ಇತರ ಕಾದಂಬರಿಗಳಿ ಗಿಂತ ವಿಶಿಷ್ಟವಾಗಿದೆ.

ಮಂದ್ರದ ಮೋಹನಲಾಲನದ್ದು ವಿಸ್ತಾರ ವಾದ, ಸಮೃದ್ಧ ವಿವರ ವರ್ಣನೆಗಳಲ್ಲಿ ಮೂಡಿದ ಪಾತ್ರವಾಗಿದೆ. ಸಂಗೀತದ ಮೂಲಕ ಆತನು ಗಳಿಸಿದ ಜನಪ್ರಿಯತೆ, ಲೌಕಿಕ ಯಶಸ್ಸು, ಲಂಪಟತನ, ನೈತಿಕ ಕಟ್ಟುಪಾಡು ಗಳಿಗೆ ಒಗ್ಗದ ಬದುಕಿನ ಕಡೆಗೆ ಕಾದಂಬರಿಯು ಹೆಚ್ಚಿನ ಒತ್ತು ನೀಡುತ್ತದೆ. ಆತನು ಕೊನೆಯ ವರೆಗೂ ತನ್ನ ಅಹಂಕಾರ, ವ್ಯಾಮೋಹ ಮತ್ತು ಸ್ವಾರ್ಥಗಳನ್ನು ಬಿಡುವುದಿಲ್ಲ. ಎಲ್ಲರಿಂದ ತಿರಸ್ಕಾರಕ್ಕೊಳಗಾಗಿ, ಅವಮಾನಿತನಾಗಿ ಮುಂಬಯಿಯನ್ನು ತೊರೆಯಬೇಕಾಗಿ ಬಂದರೂ ಆತನಲ್ಲಿ ಪಶ್ಚಾತ್ತಾಪ, ಪಾಪಪ್ರಜ್ಞೆ ಹುಟ್ಟುವುದಿಲ್ಲ. ಆದ್ದರಿಂದ ಕಾದಂಬರಿಯಲ್ಲಿ ಭಾವುಕತೆ ಕಡಿಮೆಯಾಗಿದ್ದು, ಪಾತ್ರಚಿತ್ರಣ, ಘಟನೆಗಳ ನಿರೂಪಣೆಯಲ್ಲಿ ನಿಷ್ಠುರತೆಯು ಕಂಡು ಬರುತ್ತದೆ. ಮೋಹನಲಾಲನ ಮೇಲೆ ಮೆಚ್ಚುಗೆಯನ್ನು ತೋರುವ ಬದಲು ವಿಮರ್ಶಾತ್ಮಕ ನೋಟವನ್ನು ಒದಗಿಸುತ್ತದೆ. ಆದ್ದರಿಂದ ಮೋಹನ ಲಾಲನು ನಾಯಕನಾಗಿ ಕಾಣಿಸಿಕೊಳ್ಳುವುದಿಲ್ಲ. ಖಳ ನಾಯಕನೆಂದು ಹೇಳಲಾಗದಿದ್ದರೂ ಪ್ರತಿನಾಯಕ ಪಾತ್ರಕ್ಕೆ ಹತ್ತಿರವಾಗಿರುವ, ಸಾಂಪ್ರದಾಯಿಕ ನಾಯಕ ಪಾತ್ರಕ್ಕಿಂತ ಭಿನ್ನ ಮಾದರಿಯಾಗಿ ಗೋಚರಿಸು ತ್ತಾನೆ. ಈ ಮೂಲಕ ಮಂದ್ರವು ಸಂಗೀತ ಮತ್ತು ಸಂಗೀತಗಾರರನ್ನು ಕುರಿತು ಇರುವ ಸಾಂಪ್ರ ದಾಯಿಕ ಕಲ್ಪನೆ, ನಿರೀಕ್ಷೆಗಳನ್ನು ಒಡೆಯುತ್ತದೆ.

ಸಂಪ್ರದಾಯ ಮುರಿದ ಕಾದಂಬರಿ

ಲಂಪಟ, ವಂಚಕ, ಶೋಷಕ, ದುರಹಂಕಾರಿ ಎನ್ನ ಬಹುದಾದ ಎಲ್ಲ ಗುಣಗಳೂ ಮೋಹನ ಲಾಲನಲ್ಲಿವೆ. ವೈಯಕ್ತಿಕ ಜೀವನದಲ್ಲಿ ಅವನ ನೈತಿಕತೆಯನ್ನು ಪ್ರಶ್ನಿಸುವ ಪ್ರಸಂಗಗಳಿವೆ. ಆದರೆ ಅವನಿಂದ ತೊಂದರೆಗೊಳಗಾದ ವರೂ ಸೇರಿದಂತೆ ಯಾರೂ ಆತನ ಸಾಧನೆಯನ್ನು ಪ್ರಶ್ನಿಸುವುದಿಲ್ಲ; ಅಲ್ಲಗಳೆಯುವುದಿಲ್ಲ. ಕಲಾ ವಿದನ ಪ್ರತಿಭೆ


(ಎ.ಐ. ಚಿತ್ರ)

ಮತ್ತು ಸಾಧನೆಗಳಿಗೆ ಅವನ ವೈಯಕ್ತಿಕ ಬದುಕನ್ನು ತಳುಕು ಹಾಕಬಾರದು ಎಂಬ ಆಧುನಿಕ ನಿಲುವು ಇಲ್ಲಿದೆ. ಸಂಗೀತ ಮತ್ತು ಸಂಗೀತಗಾರರ ಕುರಿತು ಇತರ ಕಾದಂಬರಿಗಳು ನಂಬಿಸಲು ಯತ್ನಿಸುವ ಪಾವಿತ್ರ್ಯ, ಪರಿಶುದ್ಧತೆ, ಸಂಪೂರ್ಣತೆಯ ಪರಿಕಲ್ಪನೆಗಳನ್ನು ಪ್ರಶ್ನಿಸುವ ಮೂಲಕ ಮಂದ್ರವು ಕನ್ನಡ ಕಾದಂಬರಿಗಳು ಹಾಕಿಕೊಟ್ಟ ಸಂಪ್ರದಾಯಗಳನ್ನು ಮುರಿದಿದೆ. ಭೈರಪ್ಪನ ವರು ಸಂಪ್ರದಾಯ ಶರಣರೆಂಬ, ಆಧುನಿ ಕತೆಯ ವಿರೋಧಿಯೆಂಬ ಟೀಕೆಗೆ ಕಾದಂಬರಿಯು ತಕ್ಕ ಉತ್ತರವನ್ನು ನೀಡಿದೆ.

ಆದರೆ ಕಾದಂಬರಿಯು ಮೋಹನ ಲಾಲನನ್ನು ವೈಭವೀಕರಿಸುವುದಿಲ್ಲ. ಆತನ ಮತ್ತೊಬ್ಬ ಗುರುಗಳಾದ ರಾಜಾಸಾಹೇಬರು ಆತನನ್ನು ಶಿಷ್ಯನನ್ನಾಗಿ ಸ್ವೀಕರಿಸುವ ಸಂದರ್ಭ ದಲ್ಲಿ ಹಾಡಿದ ಅನುಭವವನ್ನು ನಿರೂಪಿಸುವ

ಭೈರಪ್ಪನವರ ಜೀವನಾನುಭವ, ವಿಸ್ತಾರವಾದ ಅಧ್ಯಯನ, ಆಳವಾದ ಸಂಗೀತಜ್ಞಾನ, ಕಾದಂಬರಿಯನ್ನು ಕಟ್ಟಿ ಕೊಟ್ಟಿರುವ ರೀತಿ ಮತ್ತು ಸತ್ವದ ದೃಷ್ಟಿಯಿಂದ, ಮಂದ್ರವು ಕನ್ನಡದ ಅತ್ಯುತ್ತಮ ಕೃತಿಗಳ ಸಾಲಿಗೆ ಸೇರುತ್ತದೆ. ಈ ಕಾದಂಬರಿಗೆ ದೊರೆತ ಸರಸ್ವತಿ ಸಮ್ಮಾನ್ ಪ್ರಶಸ್ತಿಯು ಅದನ್ನು ಖಚಿತಪಡಿಸುತ್ತದೆ

ರೀತಿಯಲ್ಲಿ ಮೋಹನಲಾಲನ ಸಂಗೀತದ ಮಿತಿ ಗಳನ್ನು ಸೂಚಿಸುತ್ತದೆ. ಕಠೋರ ನಿಯಮಗಳಿಗೆ ಬದ್ಧವಾದ ಸಾಧನೆಯನ್ನು ಮಾಡಿದ ರಾಜಾ ಸಾಹೇಬರು ಕಛೇರಿಗಳನ್ನು ಕೊಡುವವರಲ್ಲ. ಸಂಗೀತದಿಂದ ಲೌಕಿಕ ಪ್ರಯೋಜನವನ್ನು ಪಡೆಯುವವರಲ್ಲ. ಮಹದೇವಜಿ ಮಂದಿರದಲ್ಲಿದ್ದಾಗ, ತಮ್ಮೆದುರು ಬಂದ ಕೆಲವು ಸಾಧಕರ ಮುಂದೆ ಹಾಡಿದಷ್ಟರಿಂದಲೇ ಅವರ ಹೆಸರು ಅಮರವಾಗಿದೆ. ಈ ಸಾಧನೆಯನ್ನು ಮೋಹನ ಲಾಲನ ಸಾಧನೆ, ಅವನು ಗಳಿಸಿಕೊಂಡ ಸಾರ್ವ ಜನಿಕ ಮನ್ನಣೆಯೊಡನೆ ಹೋಲಿಸಿದಾಗ ಕಾದಂಬರಿಯು ಸೂಚಿಸುವ ಮೌಲ್ಯ ಕಲ್ಪನೆಯು ಅರಿವಿಗೆ ಬರುತ್ತದೆ.

ಸಂಗೀತಕ್ಕಾಗಿ ತನ್ನ ಕನ್ಯತ್ವ ಮತ್ತು ದಾಂಪತ್ಯ ವನ್ನು ಮೋಹನಲಾಲನಿಗೆ ಅರ್ಪಿಸಿಯೂ ಆತನಿಂದ ಹೆಚ್ಚೇನೂ ಕಲಿಯದ ಮಧುಮಿತಾ ಹಣ, ಕೀರ್ತಿ, ಗೌರವಕ್ಕಾಗಿ ಹಾಡುವವಳಲ್ಲ. ಸಂಗೀತವೇ ಎಲ್ಲವೂ ಎಂಬ ನೆಲೆಯಿಂದ ಆಕೆಯು ಸಂಗೀತವೇ ಎಲ್ಲವೂ ಅಲ್ಲ ಎಂಬ ವಿಚಾರದತ್ತ ಚಲಿಸುವುದನ್ನು ಕಾದಂಬರಿಯು ಸೂಕ್ಷ್ಮವಾಗಿ ದಾಖಲಿಸುತ್ತದೆ.

ಮೋಹನ ಲಾಲನಿಗೆ ಸಾದೃಶ್ಯವೆಂಬಂತೆ ನರ್ತಕಿ ಮನೋ ಹರಿ, ಚಂಪಾ, ವೈದೃಶ್ಯವೆಂಬಂತೆ ಮಧುಮಿತಾ, ರಾಜಾಸಾಹೇಬ, ರಾಜರಾಮ ಟಿಪ್ನಿಸ್ ಮತ್ತು ಸಂಗೀತದ ಗಂಧಗಾಳಿಯಿಲ್ಲದ ರಾಮಕುಮಾರಿ, ಚುನ್ನಿಯ ಪಾತ್ರಗಳನ್ನು ಸೃಷ್ಟಿಸಿ, ಅವರ ಜೀವನಕ್ರಮ ಮತ್ತು ಮೌಲ್ಯಗಳನ್ನು ಮೋಹನಲಾಲನ ಬದುಕಿನ ರೀತಿ ಯೊಂದಿಗೆ ತುಲನೆ ಮಾಡುವ ಅವಕಾಶವನ್ನು ನೀಡುವ ಕಾದಂಬರಿಯು ಲೇಖಕರ ಜೀವನ ದೃಷ್ಟಿಯನ್ನು ವ್ಯಕ್ತಪಡಿಸುತ್ತದೆ.

ಗಾಯನ ತೊರೆದ ಕ್ಷಣ

ಪ್ರಸಿದ್ಧಿಯ ಉತ್ತುಂಗದಲ್ಲಿದ್ದ ಮೋಹನ ಲಾಲನು ಎಲ್ಲರಿಂದಲೂ ತಿರಸ್ಕೃತನಾಗಿ ಮುಂಬಯಿಯನ್ನು ಬಿಟ್ಟು, ಓಂಕಾರಾಶ್ರಮದ ಉಸ್ತುವಾರಿಯನ್ನು ನೋಡಿಕೊಂಡು, ಅಲ್ಲೇ ನೆಲೆಸಿ, ಆಸಕ್ತರಿಗೆ ಸಂಗೀತ ಪಾಠವನ್ನು ಹೇಳುತ್ತಾ ಜೀವನವನ್ನು ಕಳೆಯಬೇಕೆಂದು ಕೊಂಡರೂ ಅದರಲ್ಲಿ ಅವನಿಗೇ ನಂಬಿಕೆಯಿರು ವುದಿಲ್ಲ. ಬಲ್ಲವರೆಲ್ಲರೂ ಅವನ ನಿರ್ಧಾರವನ್ನು ಅನುಮಾನ, ಸಿನಿಕತನದಿಂದ ನೋಡುತ್ತಾರೆ. ಗಾಯನವನ್ನೇ ಬಿಟ್ಟುಬಿಡಬೇಕು ಎಂದೂ ಯೋಚಿಸುತ್ತಾನೆ. ತಾನು ಯಾವುದಕ್ಕೂ ನಾಲಾಯಕ್ಕು ಎಂಬ ಭಾವನೆಯಿಂದ ನಿರ್ವಿಣ್ಣ ನಾಗುತ್ತಾನೆ. ಅವನಿಗೆ ದೊಡ್ಡ ಮಟ್ಟದ ಬೀಳ್ಕೊಡುಗೆಯನ್ನು ನೀಡಲಾಗುತ್ತದೆ. ಮುಂಬಯಿಯಲ್ಲಿ ಅವನ ಕೊನೆಯ ಕಛೇರಿ. ಸಾವಿರಾರು ಪ್ರೇಕ್ಷಕರನ್ನು ನೇರವಾಗಿ ಸಂಧಿಸುವ, ರಂಜಿಸುವ, ಅವರ ಕಣ್ಣುಗಳಲ್ಲಿ ಆರಾಧನೆ ಪ್ರತಿಬಿಂಬಿಸುವಂತೆ ಮಾಡುವ ಕೊನೆಯ ಅವಕಾಶ. ಆದರೆ ಅವನಲ್ಲಿ ರಾಗದ ಭಾವ ಹತ್ತುವುದಿಲ್ಲ. ಅಭ್ಯಾಸಬಲದಿಂದ ಸ್ವರಗಳ ಮೇಲೆ ಸಂಚಾರ ಮಾಡಲು ಹೊರಟರೆ ರಾಗದ ನಾಡಿ ಸಿಗುವುದಿಲ್ಲ. ಐವತ್ತು ವರ್ಷಗಳಿಂದ ಮುಷ್ಠಿಗತ ಮಾಡಿಕೊಂಡಿದ್ದ ರಾಗವೂ ಕೈಬಿಡುತ್ತದೆ. ಸಭೆ ಅಸ್ತವ್ಯಸ್ತವಾಗುತ್ತದೆ. ಅವನು ಧ್ವನಿವರ್ಧಕವನ್ನು ಎಸೆದು ತೆರೆಮರೆಗೆ ನಡೆಯುತ್ತಾನೆ.

ಆಮೇಲೆ ಅವನಿಗೆ ಏನಾಯಿತು ಎಂಬು ದನ್ನು ಕಾದಂಬರಿಯು ಶೋಧಿಸುವುದಿಲ್ಲ. ಒಂದು ಕಾಲದಲ್ಲಿ ಮೋಹನಲಾಲನ ಶಿಷ್ಯೆ ಯಾಗಿದ್ದು, ಸ್ವತಂತ್ರ ಸಾಧಕಿಯಾಗಿ ಬೆಳೆಯು ತ್ತಿರುವ ಮಧುಮಿತಾ ಭವಿಷ್ಯದಲ್ಲಿ ದೊಡ್ಡ ಗಾಯಕಿಯಾಗುತ್ತಾಳೆ ಎಂಬ ಸೂಚನೆ ಯೊಂದಿಗೆ ಕಾದಂಬರಿಯು ಮುಗಿಯುತ್ತದೆ.

ಶಿವರಾಮ ಕಾರಂತರ ನಂತರ ಕನ್ನಡದಲ್ಲಿ ಅತಿ ಹೆಚ್ಚು, ಗಂಭೀರವಿಷಯಗಳ ಕಾದಂಬರಿ ಗಳನ್ನು ಬರೆದವರು ಬಹುಶಃ ಭೈರಪ್ಪನವ ರೊಬ್ಬರೇ. ಆದರೆ ಅವರ ಕಾದಂಬರಿಗಳು ಕೆಲವೊಮ್ಮೆ ಅನಗತ್ಯ ವಿವರಣೆಗಳು, ಪುನರಾ ವರ್ತನೆಗಳು ಮತ್ತು ಅತಿ ವಿಸ್ತಾರದಿಂದ ಬಳಲುತ್ತವೆ. ಅವರ ಅತ್ಯುತ್ತಮ ಕೃತಿಗಳಲ್ಲಿ ಇದು ಕಂಡು ಬರದಿದ್ದರೂ ಅಂಚು, ತಂತು ಎಂಬ ಕಾದಂಬರಿಗಳಲ್ಲಿ ಈ ದೋಷಗಳು ದಟ್ಟವಾಗಿ ಗೋಚರಿಸುತ್ತವೆ. ಮಂದ್ರದಲ್ಲಿ ಇಂಥ ಮಿತಿಗಳಿ ದ್ದರೂ ಭೈರಪ್ಪನವರ ಜೀವನಾನುಭವ, ವಿಸ್ತಾರ ವಾದ ಅಧ್ಯಯನ, ಆಳವಾದ ಸಂಗೀತಜ್ಞಾನ, ಕಾದಂಬರಿಯನ್ನು ಕಟ್ಟಿ ಕೊಟ್ಟಿರುವ ರೀತಿ ಮತ್ತು ಸತ್ವದ ದೃಷ್ಟಿಯಿಂದ ಕನ್ನಡದ ಅತ್ಯುತ್ತಮ ಕೃತಿಗಳ ಸಾಲಿಗೆ ಸೇರುತ್ತದೆ. ಈ ಕಾದಂಬರಿಗೆ ದೊರೆತ ಸರಸ್ವತಿ ಸಮ್ಮಾನ್ ಪ್ರಶಸ್ತಿಯು ಅದನ್ನು ಖಚಿತಪಡಿಸುತ್ತದೆ.

ಮಗನು ಬಾತ್‌ರೂಮಿನಲ್ಲಿ ಅರ್ಧ ಗಂಟೆ ಕೂತಿರುತ್ತಾನೆ!

Ask the Editor

• ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ
asktheeditorvv@gmail.com

ಮಂಜುಶ್ರೀ, ಶಿವಮೊಗ್ಗ

- **ಸಂಪಾದಕರೇ, ನನ್ನ ಮಗನಿಗೆ ಹದಿನಾರು ವರ್ಷ ವಯಸ್ಸು. ಬಾತ್ ರೂಮಿಗೆ ಹೋದರೆ, ಒಂದು ಗಂಟೆಯಾದರೂ ಹೊರಗೆ ಬರುವುದಿಲ್ಲ. ಮೊಬೈಲ್ ಹಿಡಿದು ಹೋದರೆ ಮತ್ತೂ ತಡವಾಗಿ ಬರುತ್ತಾನೆ. ಈ ವಿಷಯವಾಗಿ ತಂದೆ-ಮಗನ ಮಧ್ಯೆ ಅನೇಕ ಸಲ ಜಗಳವಾಗಿದೆ. ನನಗೂ ನನ್ನ ಮಗನ ಈ ಅಭ್ಯಾಸ ಸ್ವಲ್ಪವೂ ಹಿಡಿಸುತ್ತಿಲ್ಲ. 'ನನ್ನ ಮನೆಯಲ್ಲಿ ನನಗೆ ಸ್ವಾತಂತ್ರ್ಯ ಇಲ್ಲ. ನಾನು ಮನೆ ಬಿಟ್ಟು ಹೋಗುತ್ತೇನೆ' ಎಂದು ಮಗ ಇತ್ತೀಚೆಗೆ ಹೇಳಲಾರಂಭಿಸಿದ್ದಾನೆ. 'ಮೊದಲು ನೀನು ತೊಲಗು' ಎಂದು ನನ್ನ ಯಜಮಾನರು ಹೇಳುತ್ತಾರೆ. ಇದು ಸಣ್ಣ ವಿಷಯವಾಗಿರಬಹುದು, ಆದರೆ ಈ ವಿಷಯವನ್ನು ನಿಭಾಯಿಸಲು ಆಗುತ್ತಿಲ್ಲ. ನಿಮ್ಮ ಸಲಹೆ ಏನು?**

-ಮಂಜುಶ್ರೀ ಅವರೇ, ಇದು ಸಣ್ಣ ವಿಷಯವಾಗಿ ಕಂಡರೂ, ಇದು ಒಂದು ಕುಟುಂಬದೊಳಗೆ ನಡೆಯುತ್ತಿರುವ ದೊಡ್ಡ ಸಂವಹನ ಮತ್ತು ನಂಬಿಕೆಯ ಸಮಸ್ಯೆಯನ್ನು ಬಿಂಬಿಸುತ್ತದೆ. ನಿಮ್ಮ ಮಗನ ನಡವಳಿಕೆ, ನಿಮ್ಮ ಯಜಮಾನರ ಕೋಪ ಮತ್ತು ಮಗನಿಂದ 'ಮನೆ ಬಿಟ್ಟು ಹೋಗುತ್ತೇನೆ' ಎಂಬ ಮಾತು ಇವೆಲ್ಲವನ್ನೂ ಸೂಕ್ಷ್ಮವಾಗಿ, ಪ್ರೀತಿಯಿಂದ ಮತ್ತು ಕಾಳಜಿಯಿಂದ ನಿಭಾಯಿಸಬೇಕು. ಹದಿನಾರು ವರ್ಷ ಎಂದರೆ ಮಗನಿಗೆ ವೈಯಕ್ತಿಕ ಸ್ವಾತಂತ್ರ್ಯ ಮತ್ತು ಗುರುತು (Identity) ಮುಖ್ಯವಾಗುವ ಸಮಯ. ಈ ವಯಸ್ಸಿನ ಮಕ್ಕಳು ಹೀಗೆ ವರ್ತಿಸಲು ಕಾರಣ ಗಳಿರಬಹುದು. ಮನೆಯಲ್ಲಿ ಬೇರೆಲ್ಲಿಯೂ ಸಿಗದ ಖಾಸಗಿತನ ಬಾತ್‌ರೂಂನಲ್ಲಿ ಸಿಗುತ್ತದೆ ಎಂದು ಮಗನಿಗೆ ಅನಿಸಿರಬಹುದು. ಮೊಬೈಲ್ ನೊಂದಿಗೆ ಆ ಜಾಗದಲ್ಲಿ ಸಮಯ ಕಳೆಯುವುದು ಅವರಿಗೆ 'ತಮ್ಮದೇ ಆದ' ಜಗತ್ತಿನಲ್ಲಿ ಇರುವಂತೆ ಭಾಸವಾಗುತ್ತದೆ.

ಮೊಬೈಲ್ ಬಳಸಿ ಗೇಮ್ಸ್, ಸಾಮಾಜಿಕ ಮಾಧ್ಯಮ ಅಥವಾ ವೀಡಿಯೋಗಳನ್ನು ನೋಡುತ್ತಿದ್ದರೆ, ಸಮಯ ಕಳೆದು ಹೋಗು ವುದು ಅವರಿಗೆ ತಿಳಿದಿರುವುದಿಲ್ಲ. ಇದು ಕೇವಲ ಬಾತ್‌ರೂಂಗೆ ಸೀಮಿತವಾದ ಸಮಸ್ಯೆಯಲ್ಲ, ಬದಲಿಗೆ ಇಡೀ ದಿನದ ಮೊಬೈಲ್ ಬಳಕೆಯ ಸಮಸ್ಯೆಯಾಗಿದೆ. ತಂದೆಯವರ ಕಡೆಯಿಂದ ಬರುವ ಕೋಪ ಮತ್ತು ಜಗಳದಿಂದ ತಪ್ಪಿಸಿಕೊಳ್ಳಲು ಮಗ ಬಾತ್‌ರೂಂ ಅನ್ನು ಸುರಕ್ಷಿತ ತಾಣವಾಗಿ (Safe Haven) ಬಳಸುತ್ತಿದ್ದಾನೆ ಅನಿಸುತ್ತದೆ.

ನಿಮ್ಮ ಮನೆಯಲ್ಲಿ ನಡೆಯುತ್ತಿರುವ ಜಗಳವು ಸಮಸ್ಯೆಯನ್ನು ಇನ್ನೂ ಬಿಗಡಾಯಿಸಿದೆ. ಮೊದಲು ನೀವು, ಜಗಳ ಮತ್ತು ರೇಗಾಡುವುದನ್ನು ನಿಲ್ಲಿಸಬೇಕು. 'ನೀನು ಏಕೆ ಇಷ್ಟು ಹೊತ್ತು ಅಲ್ಲಿ ಇರುತ್ತೀಯಾ?' ಎಂದು ಪ್ರಶ್ನಿಸುವ ಬದಲು, ನಿಮ್ಮ ಭಾವನೆಗಳನ್ನು ಹೇಳಿ. 'ನೀನು ಅಲ್ಲಿ ಇಷ್ಟು ಹೊತ್ತು ಇದ್ದಾಗ ನನಗೆ ಆತಂಕವಾಗುತ್ತದೆ ಮತ್ತು ಮನೆಯ ಇತರರಿಗೆ ತೊಂದರೆಯಾಗುತ್ತದೆ.' ನಿಮ್ಮ ಮಗನಿಗೆ 'ತೊಲಗು' ಎಂದು ಹೇಳಿದಾಗ, ಅದು ಆತನಿಗೆ ತುಂಬಾ ನೋವು ನೀಡುತ್ತದೆ ಮತ್ತು ಅವನು ಮನೆಯವನಲ್ಲ, ಹೊರಗಿನವನು ಎಂಬ ಭಾವನೆ ಮೂಡಿಸುತ್ತದೆ. ನಿಮ್ಮ ಮಗನನ್ನು ನೀವು ಪ್ರೀತಿಸುತ್ತೀರಿ ಮತ್ತು ಅವನು ಮನೆಯ ಒಂದು ಪ್ರಮುಖ ಭಾಗ ಎಂದು ಸ್ಪಷ್ಟವಾಗಿ ತಿಳಿಸಿ.

ಮೊಬೈಲ್ ಬಳಕೆಯೇ ಇಲ್ಲಿ ದೊಡ್ಡ ಸಮಸ್ಯೆ. ಅದನ್ನು ನಿಯಂತ್ರಿಸಲು ಶಾಂತ ರೀತಿಯಲ್ಲಿ ನಿಯಮಗಳನ್ನು ಮಾಡಿ. ತಂದೆ, ತಾಯಿ ಮತ್ತು ಮಗ ಮೂವರೂ ಶಾಂತ ವಾತಾವರಣದಲ್ಲಿ ಕುಳಿತು ಮಾತನಾಡಿ. ಜಗಳದ ಬದಲು, ಪರಸ್ಪರ ಗೌರವ ವಿನಿಮಯವಾಗಲಿ. ಈ ನಿಯಮವನ್ನು ಇಡೀ ಕುಟುಂಬಕ್ಕೂ ಅನ್ವಯಿಸಿ, ತಂದೆ-ತಾಯಿ ಸೇರಿದಂತೆ ಯಾರೂ ಬಾತ್‌ರೂಂನಲ್ಲಿ ಮೊಬೈಲ್ ಬಳಸುವಂತಿಲ್ಲ. ಶೌಚಾಲಯ ಬಳಕೆಗೆ 15 ನಿಮಿಷ ಮತ್ತು ಸ್ನಾನಕ್ಕೆ 30 ನಿಮಿಷ ಎಂದು ಮಗನೊಂದಿಗೆ ಮಾತನಾಡಿ ಒಪ್ಪಬಹುದಾದ ಸಮಯ ಮಿತಿಯನ್ನು ನಿಗದಿಪಡಿಸಿ. ರಾತ್ರಿ ಒಂಬತ್ತು ಗಂಟೆಯ ನಂತರ ಎಲ್ಲರೂ ತಮ್ಮ ಮೊಬೈಲ್‌ಗಳನ್ನು ಮನೆಯ ಒಂದು ಸಾಮಾನ್ಯ ಸ್ಥಳದಲ್ಲಿ (ಉದಾಹರಣೆಗೆ, ಡೈನಿಂಗ್ ಟೇಬಲ್ ಮೇಲೆ ಅಥವಾ ಲಿವಿಂಗ್ ರೂಂನಲ್ಲಿ) ಇಡಬೇಕು ಎಂಬ ನಿಯಮವನ್ನು ಕಡ್ಡಾಯವಾಗಿ ಪಾಲಿಸಿ. ಮಗನಿಗೆ ಬೇರೆಲ್ಲಿ ಯಾದರೂ ಖಾಸಗಿ ಸಮಯ ಮತ್ತು ಜಾಗ ಸಿಗುವಂತೆ ಮಾಡಿ. ಉದಾಹರಣೆಗೆ, 'ನೀನು ನಿನ್ನ ರೂಮಿನಲ್ಲಿ ಅಥವಾ ಬಾಲ್ಕನಿಯಲ್ಲಿ ಒಂದು ಗಂಟೆ ಏಕಾಂತವಾಗಿರಬಹುದು' ಎಂದು ಹೇಳಿ.

'ಮನೆ ಬಿಟ್ಟು ಹೋಗುತ್ತೇನೆ' ಎಂದು ಮಗ ಹೇಳಿದರೆ, ತಕ್ಷಣ ನೀವು ಮತ್ತು ನಿಮ್ಮ ಯಜಮಾನರು ಇಬ್ಬರೂ ಕೋಪವನ್ನು ನಿಯಂತ್ರಿಸಿಕೊಳ್ಳಿ. 'ಮಗನೇ, ಮನೆ ಬಿಟ್ಟು ಹೋಗುವ ಮಾತನ್ನು ದಯವಿಟ್ಟು ಹೇಳಬೇಡ. ಇದು ನಿನ್ನ ಮನೆ. ನಾವು ನಿನ್ನನ್ನು ಪ್ರೀತಿಸುತ್ತೇವೆ. ನಿನಗೆ ಬೇಕಾದ ಸ್ವಾತಂತ್ರ್ಯವನ್ನು ನೀಡಲು ನಾವು ಸಿದ್ಧರಿದ್ದೇವೆ, ಆದರೆ ಅದಕ್ಕೆ ಮನೆಯ ನಿಯಮಗಳನ್ನು ಒಟ್ಟಿಗೆ ರೂಪಿಸಬೇಕು. ಈ ಸಮಸ್ಯೆಯನ್ನು ನಾವು ಒಟ್ಟಿಗೆ ಕುಳಿತು ಬಗೆಹರಿಸೋಣ' ಎಂದು ಅವನಿಗೆ ಸಮಾಧಾನದಿಂದ ಹೇಳಿ. ಈ ಸಮಸ್ಯೆಗಳನ್ನು ಪ್ರೀತಿ, ತಾಳ್ಮೆ ಮತ್ತು ಗಟ್ಟಿಯಾದ ನಿಯಮಗಳಿಂದ ಮಾತ್ರ ನಿಭಾಯಿಸಲು ಸಾಧ್ಯ.

ಕೆ.ಪಾಲನೇತ್ರ, (ಇಮೇಲ್ ಮೂಲಕ)

- **ಭಟ್ರೇ, 'ನೀವೇಕೆ ಪದೇ ಪದೇ ಕರವಸ್ತ್ರ ತೆಗೆದು ಮುಖ ಒರೆಸಿಕೊಳ್ಳುತ್ತೀರಿ?' ಎಂದು ನನ್ನ ಹೆಂಡತಿ ರೇಗುತ್ತಿರುತ್ತಾಳೆ. ಆಕೆ ಹೇಳಿದಂತೆ ನಾನು ಹಾಗೆ ಮಾಡುವುದು ನಿಜ. ನನ್ನ ಮುಖದ ಮೇಲೆ ಏನೋ ಕೊಳಕು ಇದ್ದಿರಬಹುದು, ನನ್ನ ಮುಖ ಸದಾ ಶುಭ್ರವಾಗಿ ಕಾಣಬೇಕು ಎಂದು ನನಗೆ ಅನಿಸುತ್ತದೆ. ನಾನು ಆಗಾಗ ಮುಖ ಒರೆಸಿಕೊಳ್ಳುವುದು ತಪ್ಪಾ?**

-ಪಾಲನೇತ್ರ ಅವರೇ, ಇದೊಂದು ಸಾಮಾನ್ಯ ಅಭ್ಯಾಸದಂತೆ ಕಾಣುತ್ತದೆ, ಆದರೆ ನಿಮ್ಮ ಪತ್ನಿ ಏಕೆ ಕೋಪಗೊಳ್ಳುತ್ತಾರೆ ಎಂಬುದನ್ನು ಮೊದಲು ಅರ್ಥಮಾಡಿಕೊಳ್ಳಬೇಕು. ನೀವು ಪದೇ ಪದೇ ಕರವಸ್ತ್ರದಿಂದ ಮುಖ ಒರೆಸಿಕೊಳ್ಳುವುದು ತಪ್ಪು ಎಂದು ಹೇಳಲು ಸಾಧ್ಯವಿಲ್ಲ, ಆದರೆ ಇದರಿಂದ ಆಗುವ ಕೆಲವು ಪರಿಣಾಮಗಳನ್ನು ಮತ್ತು ಇದರ ಹಿಂದಿನ ಕಾರಣಗಳನ್ನು ಪರಿಶೀಲಿಸುವುದು ಒಳ್ಳೆಯದು. ನಿಮಗೆ ಮುಖ ಸದಾ ಶುಭ್ರವಾಗಿ ಕಾಣಬೇಕು ಎಂಬ ಆಸೆ ಇರುವುದು ಒಳ್ಳೆಯದು, ಆದರೆ ಕೆಲವು ಕಾರಣಗಳಿಗಾಗಿ ನೀವು ಪದೇ ಪದೇ ಮುಖ ಒರೆಸಿಕೊಳ್ಳುತ್ತಿರಬಹುದು. ಒಂದು, ಶುಚಿತ್ವದ ಬಗ್ಗೆ ಅತಿಯಾದ ಕಾಳಜಿ. ನಿಮ್ಮ ಮುಖದ ಮೇಲೆ ಕೊಳಕು ಇದೆ ಅಥವಾ ಅದು ಸದಾ ಹೊಳೆಯುತ್ತಿರಬೇಕು ಎಂಬ ಅತಿಯಾದ ಆಸೆ.

ಕೆಲವೊಮ್ಮೆ, ಮಾನಸಿಕ ಒತ್ತಡ ಅಥವಾ ಆತಂಕದ ಸಮಯದಲ್ಲಿ ಜನರು ಒಂದು ನಿರ್ದಿಷ್ಟ ಚಟುವಟಿಕೆಯನ್ನು ಪದೇ ಪದೇ ಮಾಡುತ್ತಾರೆ. ಉದಾಹರಣೆಗೆ, ಕೂದಲು ಸರಿಪಡಿಸುವುದು, ಬಟ್ಟೆ ಮಡಚುವುದು ಅಥವಾ ಮುಖ ಒರೆಸುವುದು. ಇದು ನಿಮ್ಮ ನರಗಳ ಶಾಂತಗೊಳಿಸುವಿಕೆ ಆಗಿರಬಹುದು. ನಿಮ್ಮ ಮುಖವು ನಿಜವಾಗಿಯೂ ಅತಿಯಾಗಿ ಎಣ್ಣೆ ಉತ್ಪಾದಿಸುತ್ತಿರಬಹುದು ಅಥವಾ ಹೆಚ್ಚು ಬೆವರು ಬರುತ್ತಿರಬಹುದು.

ಪದೇ ಪದೇ ಕರವಸ್ತ್ರದಿಂದ ಮುಖ ಒರೆಸಿಕೊಳ್ಳುವುದರಿಂದ ಕೆಲವು ಸಮಸ್ಯೆಗಳು ಉಂಟಾಗಬಹುದು. ಮೊದಲನೆಯದಾಗಿ, ಚರ್ಮದ ಕಿರಿಕಿರಿ. ನೀವು ಬಳಸುವ ಕರವಸ್ತ್ರ ಒರಟಾಗಿದ್ದರೆ ಅಥವಾ ಅದನ್ನು ಬಲವಾಗಿ ಉಜ್ಜಿದರೆ, ಚರ್ಮ ಕೆಂಪಾಗಬಹುದು ಅಥವಾ ತುರಿಕೆಯಾಗಬಹುದು. ನೀವು ಒಂದು ಕರವಸ್ತ್ರವನ್ನು ದಿನವಿಡೀ ಬಳಸಿದರೆ, ಅದು ಕೊಳಕು ಮತ್ತು ಬ್ಯಾಕ್ಟೀರಿಯಾವನ್ನು ಸಂಗ್ರಹಿಸುತ್ತದೆ. ಅದನ್ನು ಪದೇ ಪದೇ ಮುಖಕ್ಕೆ ಒತ್ತುವುದರಿಂದ ಮೊಡವೆಗಳು ಅಥವಾ ಸೋಂಕು ಉಂಟಾಗಬಹುದು. ನೀವು ಚರ್ಮದ ಮೇಲಿನ ನೈಸರ್ಗಿಕ ಎಣ್ಣೆಯನ್ನು ಸಂಪೂರ್ಣವಾಗಿ ತೆಗೆದುಹಾಕಿದಾಗ, ಚರ್ಮವು ಅದಕ್ಕೆ ಪ್ರತಿಕ್ರಿಯೆಯಾಗಿ ಇನ್ನೂ ಹೆಚ್ಚು ಎಣ್ಣೆಯನ್ನು ಉತ್ಪಾದಿಸಲು ಪ್ರಾರಂಭಿಸುತ್ತದೆ. ಇದು ನಿಮ್ಮ ಸಮಸ್ಯೆಯನ್ನು ಹೆಚ್ಚಿಸಬಹುದು.

ಇನ್ನು, ನಿಮ್ಮ ಪತ್ನಿ ಏಕೆ ರೇಗುತ್ತಾರೆ ಎಂಬುದು. ಪದೇ ಪದೇ ಹೀಗೆ ಮಾಡುವುದು ಅವರಿಗೆ ಅಸಹಜವಾಗಿ ಅಥವಾ ಕಿರಿಕಿರಿಯಾಗಿ (Annoying) ಕಾಣಬಹುದು. ಆತಂಕದ ಸಂಕೇತವೆಂದು ಅನಿಸಬಹುದು. ಇದು ನೀವು ಯಾವುದೋ ವಿಷಯದ ಬಗ್ಗೆ ಆತಂಕದಲ್ಲಿದ್ದೀರಿ ಅಥವಾ ಆರಾಮವಾಗಿಲ್ಲ ಎಂಬ ಭಾವನೆಯನ್ನು ಅವರಿಗೆ ಮೂಡಿಸಬಹುದು. ನೀವು ಏಕೆ ಹಾಗೆ ಮಾಡುತ್ತೀರಿ ಎಂಬುದನ್ನು ಅವರಿಗೆ ಶಾಂತವಾಗಿ ವಿವರಿಸಿ. 'ನಾನು ಶುಭ್ರವಾಗಿ ಕಾಣಬೇಕೆಂದು ಬಯಸುತ್ತೇನೆ, ಇದು ನನಗೆ ಅಭ್ಯಾಸವಾಗಿದೆ, ನಿನ್ನ ಮುಂದೆ ನನ್ನ ಮುಖ ಸದಾ ಸ್ವಚ್ಛವಾಗಿರಬೇಕು ಎಂದು ಅನಿಸುತ್ತದೆ' ಎಂದು ಹೇಳಿ. ಅವರ ಕೋಪವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿ. ಈ ಅಭ್ಯಾಸವನ್ನು ನಿಧಾನಗೊಳಿಸಲು ಒಂದು ಟ್ರಿಕ್ ಬಳಸಿ. ಎಷ್ಟು ಬಾರಿ ಮುಖ ಒರೆಸುತ್ತೀರಿ ಎಂದು ಮನಸ್ಸಿನಲ್ಲಿ ಲೆಕ್ಕವಿಡಿ. ದಿನಕ್ಕೆ ಇಪ್ಪತ್ತು ಬಾರಿ ಒರೆಸುತ್ತಿದ್ದರೆ, ಅದನ್ನು ಹತ್ತಕ್ಕೆ ಇಳಿಸಲು ಪ್ರಯತ್ನಿಸಿ. ನೀವು ಎಣ್ಣೆಯನ್ನು ಒರೆಸಲು ಬಯಸಿದರೆ, ಕರವಸ್ತ್ರದ ಬದಲು ಫೇಶಿಯಲ್ ಬ್ಲಾಟಿಂಗ್ ಪೇಪರ್ ಬಳಸಿ. ಇದು ಎಣ್ಣೆಯನ್ನು ಮಾತ್ರ ಹೀರಿಕೊಳ್ಳುತ್ತದೆ, ಚರ್ಮವನ್ನು ಉಜ್ಜುವುದಿಲ್ಲ. ನಿಮ್ಮ ಚರ್ಮದ ಎಣ್ಣೆಯನ್ನು ನಿಯಂತ್ರಿಸಲು, ನಿಮ್ಮ ಚರ್ಮದ ಪ್ರಕಾರಕ್ಕೆ ಸೂಕ್ತವಾದ ಸೌಮ್ಯವಾದ ಫೇಸ್ ವಾಶ್ ಮತ್ತು ಮ್ಯಾಟಿಫೈಯಿಂಗ್ (Mattifying) ಮಾಯಿಶ್ಚರೈಸರ್ ಬಳಸಲು ಪ್ರಯತ್ನಿಸಿ.

ನಿಮ್ಮ ಪತ್ನಿ ರೇಗುವುದರ ಬಗ್ಗೆ ಹೆಚ್ಚು ಚಿಂತಿಸಬೇಡಿ, ಅವರು ನಿಮ್ಮ ಬಗ್ಗೆ ಕಾಳಜಿ ವಹಿಸುತ್ತಾರೆ ಮತ್ತು ನೀವು ಆರಾಮವಾಗಿ ಕಾಣಬೇಕೆಂದು ಬಯಸುತ್ತಾರೆ. ಅವರ ಮಾತನ್ನು ಕೇಳಿ. ಈ ಅಭ್ಯಾಸವನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಲು ಪ್ರಯತ್ನಿಸಿ.

ಬನವಳ್ಳಿ ಸಿದ್ದೇಶ, (ಇಮೇಲ್ ಮೂಲಕ)

- **ಸಂಪಾದಕರೇ, ನನಗೆ ಈಗ ಐವತ್ತೊಂದು ವರ್ಷ ವಯಸ್ಸು. ನನಗೆ ಎಲ್ಲವನ್ನೂ ಬರೆದಿಟ್ಟುಕೊಳ್ಳದಿದ್ದರೆ, ಯಾವುದೂ ನೆನಪಿರುವುದಿಲ್ಲ. ಇದನ್ನೇ ನನ್ನ ಸ್ನೇಹಿತರು ರೇಗಿಸುತ್ತಾರೆ. 'ಪಟ್ಟಿ ಶಾನುಭೋಗ ಬಂದ' ಎಂದು ರೇಗಿಸುತ್ತಾರೆ. ಇದು ನನಗೆ ಆಗಾಗ ಮುಜುಗರವನ್ನುಂಟು ಮಾಡುತ್ತದೆ. ನಾನು ಮಾಡುವುದು ಸರಿಯಾ ಅಥವಾ ತಪ್ಪಾ?**

-ಸಿದ್ದೇಶ ಅವರೇ, ಇದು ಸಂಪೂರ್ಣವಾಗಿ ಸರಿಯಾದ ಮತ್ತು ಅತ್ಯಂತ ಬುದ್ಧಿವಂತ ಅಭ್ಯಾಸವಾಗಿದೆ. ನೀವು ಮಾಡುತ್ತಿರುವುದು ತಪ್ಪಲ್ಲ, ಬದಲಾಗಿ ನೀವು ನಿಮ್ಮ ನೆನಪಿನ ಶಕ್ತಿಯನ್ನು ಅತ್ಯುತ್ತಮ ರೀತಿಯಲ್ಲಿ ನಿರ್ವಹಿಸುತ್ತಿದ್ದೀರಿ. ನಿಮ್ಮ ಗೆಳೆಯರು ರೇಗಿಸುವುದರಿಂದ ಮುಜುಗರಪಟ್ಟುಕೊಳ್ಳಬೇಡಿ. 'ಪಟ್ಟಿ ಶಾನುಭೋಗ' (List Keeper) ಎಂದು ಅವರು ಕರೆಯುತ್ತಿರುವುದು ತಮಾಷೆಗಾಗಿ ಯಾದರೂ, ನೀವು ಮಾಡುತ್ತಿರುವ ಕೆಲಸವು ವೃತ್ತಿಪರ ಜಗತ್ತಿನಲ್ಲಿ ಮತ್ತು ವೈಯಕ್ತಿಕ ಜೀವನದಲ್ಲಿ ಯಶಸ್ವಿಯಾಗಲು ಇರುವ ಪ್ರಮುಖ ಕೌಶಲಗಳಲ್ಲಿ ಒಂದಾಗಿದೆ.

ನೀವು ಮಾಡುತ್ತಿರುವುದು ಏಕೆ ಸರಿಯಾದ ಕ್ರಮ ಗೊತ್ತಾ? ಐವತ್ತೊಂದನೇ ವರ್ಷ ವಯಸ್ಸಿನಲ್ಲಿ, ಮಿದುಳಿನಲ್ಲಿ ನೈಸರ್ಗಿಕ ಬದಲಾವಣೆಗಳು ಆಗುತ್ತಿರುತ್ತವೆ. ಹೊಸ ಮಾಹಿತಿಯನ್ನು ನೆನಪಿಟ್ಟುಕೊಳ್ಳಲು ಪ್ರಯತ್ನಿಸುವುದಕ್ಕಿಂತ, ಪ್ರಮುಖವಾದ ವಿಷಯಗಳನ್ನು ಬರೆದಿಡುವುದು ಸಂಪೂರ್ಣವಾಗಿ ಸಹಜ. ಇದು ಕಡಿಮೆ ನೆನಪಿನ ಶಕ್ತಿಯ ಲಕ್ಷಣವಲ್ಲ, ಬದಲಿಗೆ ಜಾಣ್ಮೆಯ ನಿರ್ವಹಣೆಯ (Smart Management) ಲಕ್ಷಣ. ಎಲ್ಲವನ್ನೂ ನೆನಪಿನಲ್ಲಿ ಇಟ್ಟುಕೊಳ್ಳಲು ಪ್ರಯತ್ನಿಸಿದಾಗ ಮಿದುಳಿನ ಮೇಲೆ ಅನಗತ್ಯ ಒತ್ತಡ ಬೀಳುತ್ತದೆ. ವಿಷಯಗಳನ್ನು ಬರೆದಿಟ್ಟಾಗ, ಮಿದುಳು ಆ ಮಾಹಿತಿಯನ್ನು ಸುರಕ್ಷಿತವಾಗಿಡಲು ಪ್ರಯತ್ನಿಸುವುದನ್ನು ನಿಲ್ಲಿಸಿ, ಹೆಚ್ಚು ಮುಖ್ಯವಾದ ವಿಷಯಗಳಾದ ವಿಶ್ಲೇಷಣೆ, ಸೃಜನಶೀಲತೆ ಮತ್ತು ತೀರ್ಮಾನಗಳನ್ನು ತೆಗೆದುಕೊಳ್ಳಲು ಗಮನ ಕೊಡುತ್ತದೆ.

ದಿನನಿತ್ಯದ ಕೆಲಸಗಳು, ಅಪಾಯಿಂಟ್‌ಮೆಂಟ್‌ಗಳು, ಖರೀದಿ ವಸ್ತುಗಳು ಅಥವಾ ಪ್ರಮುಖ ದಿನಾಂಕಗಳು - ಯಾವುದೂ ತಪ್ಪಿ ಹೋಗದಂತೆ ನೋಡಿಕೊಳ್ಳಲು ಪಟ್ಟಿಗಳು ಅತ್ಯುತ್ತಮ ಮಾರ್ಗ. ಪಟ್ಟಿಗಳನ್ನು ಬಳಸುವವರನ್ನು ಇತರರು ಹೆಚ್ಚು ವಿಶ್ವಾಸಾರ್ಹರು ಎಂದು ನಂಬುತ್ತಾರೆ. ವಿಶ್ವದ ಅನೇಕ ಯಶಸ್ವಿ ವ್ಯಕ್ತಿಗಳು ಮತ್ತು ವೃತ್ತಿಪರರು (ಉದಾಹರಣೆಗೆ, ಬಿಸಿನೆಸ್ ಮುಖ್ಯಸ್ಥರು, ವಿಜ್ಞಾನಿಗಳು) ಪ್ರತಿಯೊಂದು ಸಣ್ಣ ವಿಷಯವನ್ನೂ ಟಿಪ್ಪಣಿ ಮಾಡಿಕೊಳ್ಳುವ ಅಭ್ಯಾಸ ಹೊಂದಿರುತ್ತಾರೆ. ಈ ಅಭ್ಯಾಸ ವನ್ನು Getting Things Done ವಿಧಾನದಲ್ಲಿ ಅತ್ಯಂತ ಮಹತ್ವದ್ದು ಎಂದು ಪರಿಗಣಿಸಲಾಗಿದೆ.

ಹಾಗಾದರೆ ಗೆಳೆಯರ ರೇಗಿಸುವಿಕೆಯನ್ನು ಹೇಗೆ ಎದುರಿಸುವುದು? ನಿಮ್ಮ ಗೆಳೆಯರ ರೇಗಿಸುವಿಕೆ ನಿಮಗೆ ಮುಜುಗರ ತಂದರೆ, ನೀವು ಅದಕ್ಕೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಬಹುದು. ಅವರು 'ಪಟ್ಟಿ ಶಾನುಭೋಗ' ಎಂದು ಹೇಳಿದಾಗ, ನಕ್ಕು 'ಹೌದು, ನಾನು ಪಟ್ಟಿ ಶಾನುಭೋಗನೇ. ಅದಕ್ಕೆ ನನ್ನ ಯಾವ ಕೆಲಸವೂ ಮಿಸ್ ಆಗಲ್ಲ. ನನಗೆ ನೆನಪಿಲ್ಲದ ವಿಷಯಗಳನ್ನು ಕೇಳುವ ಅಗತ್ಯ ನನಗಿಲ್ಲ. ಏಕೆಂದರೆ ನನ್ನ ಪಟ್ಟಿಗಳು ಸದಾ ನನ್ನೊಂದಿಗೆ ಇರುತ್ತವೆ' ಎಂದು ಹೇಳಿ. ಅದು ಕೇವಲ ತಮಾಷೆಯಷ್ಟೇ ಎಂದು ತಿಳಿದುಕೊಳ್ಳಿ. ಯಾರಾದರೂ ನಿಮ್ಮನ್ನು ಹೀಗೆ ಕರೆಯುವುದರಿಂದ ನಿಮ್ಮ ಕಾರ್ಯಕ್ಷಮತೆ ಕಡಿಮೆಯಾಗುವುದಿಲ್ಲ. ಅದು ನಿಮಗೆ ನಿಜವಾಗಿಯೂ ಇಷ್ಟವಾಗದಿದ್ದರೆ, 'ನೋಡಿ, ಇದು ನನಗೆ ಅಭ್ಯಾಸವಾಗಿದೆ. ಇದು ನನ್ನ ಕೆಲಸಗಳನ್ನು ಸರಿಯಾಗಿ ಮಾಡಲು ಸಹಾಯ ಮಾಡುತ್ತದೆ. ಹಾಗಾಗಿ ಈ ಬಗ್ಗೆ ರೇಗಿಸ ಬೇಡಿ' ಎಂದು ಶಾಂತವಾಗಿ ಆದರೆ ದೃಢವಾಗಿ ಹೇಳಿ. ನೀವು ಮಾಡುತ್ತಿರುವುದು ತಪ್ಪಲ್ಲ. ಅದೊಂದು ಶ್ಲಾಘನೀಯ ಅಭ್ಯಾಸ. ನಿಮ್ಮ ನೆನಪಿನ ಶಕ್ತಿಯ ಮೇಲಿನ ಒತ್ತಡವನ್ನು ಕಡಿಮೆ ಮಾಡಲು ಮತ್ತು ನಿಮ್ಮ ಕೆಲಸಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಇದು ಉತ್ತಮ ಮಾರ್ಗವಾಗಿದೆ. ನಿಮ್ಮ ಅಭ್ಯಾಸದ ಬಗ್ಗೆ ಹೆಮ್ಮೆ ಪಡಿ!

ವಿನೋದ ಹಿರೇಹಳ್ಳ, (ಇಮೇಲ್ ಮೂಲಕ)

- **ಭಟ್ರೇ, ನಾನು ವಾಸವಾಗಿರುವುದು ಬಾಡಿಗೆ ಮನೆಯಲ್ಲಿ. ನನ್ನ ಮನೆಗೆ ತಾಗಿಕೊಂಡು ಇನ್ನೊಂದು ಮನೆಯಿದೆ. ಆ ಮನೆಯಲ್ಲಿ ಗಂಡ-ಹೆಂಡತಿ ಮಧ್ಯೆ ಸದಾ ಜಗಳ ಆಗುತ್ತಿರುತ್ತದೆ.ಅದು ನನ್ನ ಮನೆಯಲ್ಲಾದಷ್ಟು ಜೋರಾಗಿ ಕೇಳಿಸುತ್ತದೆ. ಹಾಗೆಯೇ, ಆಗಾಗ ಅವರ ಪ್ರಣಯ ಸಲ್ಲಾಪವೂ ಕೇಳಿಸುತ್ತದೆ. ಅವೆರಡೂ ನನ್ನ ವಿದ್ಯಾಭ್ಯಾಸಕ್ಕೆ ತೊಂದರೆ ಆಗುತ್ತಿದೆ. ಇದನ್ನು ಅವರಿಗೆ ಹೇಗೆ ಹೇಳುವುದು? ಗೊತ್ತಾಗುತ್ತಾ ಇಲ್ಲ. ನಿಮ್ಮ ಸಲಹೆ ಬೇಕು.**

-ವಿನೋದ ಅವರೇ, ಇದು ಬಾಡಿಗೆ ಮನೆಗಳಲ್ಲಿ ಎದುರಾಗುವ ಬಹಳ ಸೂಕ್ಷ್ಮವಾದ ಪ್ರಸಂಗ. ಆದರೆ ಇದು ನಿಮ್ಮ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತಿರುವುದು ಗಂಭೀರ ವಿಷಯ. ನೆರೆಹೊರೆಯವರೊಂದಿಗೆ ಜಗಳ ಮಾಡದೇ, ನಿಮ್ಮ ಸಮಸ್ಯೆಯನ್ನು ಪರಿಹರಿಸಿಕೊಳ್ಳಬಹುದು. ನೆರೆಹೊರೆಯವರಿಗೆ ಹೇಳುವಾಗ, ನೀವು ಅವರ ಜಗಳ ಮತ್ತು ಪ್ರಣಯ ಸಲ್ಲಾಪ ಎರಡರ ಬಗ್ಗೆಯೂ ಹೇಳುತ್ತಿದ್ದರೂ, ನಿಮ್ಮ ಸಂವಹನದಲ್ಲಿ ಕೇವಲ ಶಬ್ದದ (Noise) ಬಗ್ಗೆ ಮಾತ್ರ ಗಮನ ಕೊಡಿ. ಅವರ ಖಾಸಗಿ ವಿಷಯಗಳ (ಜಗಳ ಅಥವಾ ಪ್ರಣಯ) ಬಗ್ಗೆ ನೇರವಾಗಿ ಹೇಳಲು ಹೋಗಬೇಡಿ, ಅದು ವಿಷಯವನ್ನು ಇನ್ನಷ್ಟು ಗೊಂದಲಗೊಳಿಸಬಹುದು.

ನಿಮ್ಮ ಮಾತು ಮೃದುವಾಗಿರಲಿ, ನೇರವಾಗಿರಲಿ. ಇದೊಂದು ಉತ್ತಮ ಆರಂಭ. ನಿಮ್ಮ ನೆರೆಹೊರೆಯವರಿಗೆ ಮುಜುಗರವಾಗದಂತೆ, ಆದರೆ ಸ್ಪಷ್ಟವಾಗಿ ಮಾತನಾಡಿ.

ಅವರು ಸಾಮಾನ್ಯ ಮನಸ್ಥಿತಿಯಲ್ಲಿರುವಾಗ (ಜಗಳ ಮುಗಿದ ನಂತರ ಅಥವಾ ಪ್ರಣಯ ಸಲ್ಲಾಪ ಮುಗಿದ ನಂತರ) ಒಬ್ಬರೊಂದಿಗೆ ಮಾತ್ರ ಮಾತನಾಡಿ. 'ನಮಸ್ಕಾರ (ಅವರ ಹೆಸರು ಹೇಳಿ). ಒಂದು ಕ್ಷಣ ದಯವಿಟ್ಟು. ನಾನು ನಿಮ್ಮೊಂದಿಗೆ ವೈಯಕ್ತಿಕವಾಗಿ ಒಂದು ವಿಷಯ ಮಾತನಾಡಬೇಕಿತ್ತು. ನಾನು ವಿದ್ಯಾಭ್ಯಾಸ ಮಾಡುತ್ತಿರುವುದರಿಂದ ಹೆಚ್ಚಾಗಿ ಮನೆಯಲ್ಲಿ ಓದಬೇಕಾಗುತ್ತದೆ. ನಮ್ಮ ಮನೆಗಳು ಬಹಳ ಹತ್ತಿರವಿರುವುದರಿಂದ, ರಾತ್ರಿ ಹೊತ್ತು ನೀವು ಮಾತನಾಡುವುದು ಮತ್ತು ಓಡಾಡುವುದು (ಅಥವಾ ಶಬ್ದ ಮಾಡುವುದು) ಬಹಳ ಜೋರಾಗಿ ನನ್ನ ಮನೆಗೆ ಕೇಳಿಸುತ್ತದೆ. ಇದರಿಂದ ನನಗೆ ಓದಲು ಬಹಳ ತೊಂದರೆಯಾಗುತ್ತಿದೆ. ನೀವು ಸ್ವಲ್ಪ ಸಣ್ಣ ಧ್ವನಿಯಲ್ಲಿ ಮಾತನಾಡಲು ಪ್ರಯತ್ನಿಸಿದರೆ ನನಗೆ ಬಹಳ ಸಹಾಯವಾಗುತ್ತದೆ. ದಯವಿಟ್ಟು ಅರ್ಥಮಾಡಿಕೊಳ್ಳುತ್ತೀರಾ?' ಎಂದು ಹೇಳಿ.

ಇಲ್ಲಿ ನೀವು 'ಜಗಳ' ಅಥವಾ 'ಪ್ರಣಯ ಸಲ್ಲಾಪ' ಎಂಬ ಪದಗಳನ್ನು ಬಳಸಿಲ್ಲ. ಬದಲಿಗೆ 'ಮಾತನಾಡುವುದು' ಮತ್ತು 'ಶಬ್ದ' ಎಂಬ ಪದಗಳನ್ನು ಬಳಸಿದ್ದೀರಿ. ಅವರಿಗೆ ಗೊತ್ತಿಲ್ಲದೆಯೇ ತಮ್ಮ ಧ್ವನಿ ಜೋರಾಗುತ್ತಿದೆ ಎಂದು ಭಾವಿಸುವಂತೆ ಮಾಡಿ. (ಇದರಿಂದ ಅವರಿಗೆ ಮುಜುಗರ ಕಡಿಮೆಯಾಗುತ್ತದೆ). ಬಹಳ ವಿನಯದಿಂದ ಮತ್ತು ಮೃದು ಧ್ವನಿಯಲ್ಲಿ ಮಾತನಾಡಿ. ನಿಮ್ಮ ಸಮಸ್ಯೆಯನ್ನು ನೇರವಾಗಿ ಅವರ ಮೇಲೆ ಹಾಕುವ ಬದಲು, ಮನೆಯ ನಿರ್ಮಾಣದ ಮೇಲೆ ಹಾಕಿ. 'ನಾನು ಈ ಮನೆಯಲ್ಲಿ ಓದಲು ಪ್ರಯತ್ನಿಸುತ್ತಿದ್ದೇನೆ. ಆದರೆ ಈ ಮನೆಗಳ ಗೋಡೆಗಳು ತುಂಬಾ ತೆಳುವಾಗಿರುವುದರಿಂದ ನಿಮ್ಮ ಕಡೆಯಿಂದ ಬರುವ ಪ್ರತಿಯೊಂದು ಶಬ್ದವೂ ತುಂಬಾ ಸ್ಪಷ್ಟವಾಗಿ ಕೇಳಿಸುತ್ತದೆ. ದಯವಿಟ್ಟು ಸ್ವಲ್ಪ ಎಚ್ಚರ ವಹಿಸುತ್ತೀರಾ? ಇದು ನನ್ನ ವಿದ್ಯಾಭ್ಯಾಸದ ಸಮಯವಾಗಿದ್ದು, ಸಹಾಯ ಮಾಡಿ' ಎಂದು ಹೇಳಿ ನೋಡಿ. ಈ ಸಂದರ್ಭದಲ್ಲಿ ಅವಶ್ಯವೆನಿಸಿದರೆ, ಮನೆ ಮಾಲೀಕರ ಅಥವಾ ನೆರೆಮನೆಯವರ ಸಹಾಯ ಪಡೆಯಿರಿ.

ಮಾತುಕತೆಯ ಫಲಿತಾಂಶಕ್ಕಾಗಿ ಕಾಯುವ ಬದಲು, ನಿಮ್ಮ ಓದಿಗೆ ತೊಂದರೆಯಾಗದಂತೆ ನಿಮ್ಮ ಅಭ್ಯಾಸದ ಸಮಯದಲ್ಲಿ ಬದಲಾವಣೆ ಮಾಡಿಕೊಳ್ಳಿ. ಆ ದಂಪತಿಗಳು ಸಾಮಾನ್ಯವಾಗಿ ಯಾವಾಗ ಹೆಚ್ಚು ಗಲಾಟೆ ಮಾಡುತ್ತಾರೆ ಅಥವಾ ಶಬ್ದ ಮಾಡುತ್ತಾರೆ ಎಂಬುದನ್ನು ಗಮನಿಸಿ. ಆ ಸಮಯವನ್ನು ತಪ್ಪಿಸಿ ಬೇರೆ ಸಮಯದಲ್ಲಿ ಓದಲು ಪ್ರಯತ್ನಿಸಿ. ಓದುವಾಗ ಇಯರ್ ಪ್ಲಗ್‌ಗಳು ಅಥವಾ ನಾಯ್ಸ್ ಕ್ಯಾನ್ಸಲಿಂಗ್ ಹೆಡ್‌ಫೋನ್‌ಗಳನ್ನು ಬಳಸಿ. ನೀವು ಓದುವ ಸ್ಥಳವನ್ನು ಆ ಸಾಮಾನ್ಯ ಗೋಡೆಯಿಂದ ದೂರವಿರುವ ಮನೆಯ ಇನ್ನೊಂದು ಕೋಣೆಗೆ ಬದಲಾಯಿಸಿ.

ಅವರಿಬ್ಬರ ಜಗಳ ಮತ್ತು ಪ್ರಣಯ ಸಲ್ಲಾಪ ಎರಡನ್ನೂ ಎಂಜಾಯ್ ಮಾಡಲಾರಂಭಿಸುವುದರಿಂದ ಎಚ್ಚರವಾಗಿರಿ. ಯಾಕೆಂದರೆ ಆಗ ನೀವು ಗೋಡೆಗೆ ಕಿವಿ ಹಚ್ಚಿ ಕುಳಿತುಕೊಳ್ಳುವುದನ್ನು ಅಭ್ಯಾಸ ಮಾಡಿಕೊಳ್ಳುವ ಅಪಾಯವಿದೆ.

ಚಂದ್ರು, ಬಾವಿ, ಅರಸೀಕೆರೆ

- **ಭಟ್ರೇ, ಒಂದು ತಿಂಗಳ ಹಿಂದೆ, ನನ್ನ ಹೆಂಡತಿ ತನ್ನ ಮೊಬೈಲ್‌ಗೆ ಹೊಸ ಸ್ಕ್ರೀನ್ ಪ್ರೊಟೆಕ್ಟರ್ ಹಾಕಿಸಿಕೊಂಡಿದ್ದಾಳೆ. ಇದರಿಂದ ಅವಳ ಪಕ್ಕದಲ್ಲಿ ಕುಳಿತು ಅವಳ ಮೊಬೈಲ್ ನೋಡಿದರೂ, ನನಗೆ ಆ ಸ್ಕ್ರೀನ್‌ನಲ್ಲಿ ಏನೂ ಕಾಣಿಸುವುದಿಲ್ಲ. ಈ ರೀತಿ ಮಾಡಿರುವುದು ನನ್ನಲ್ಲಿ ಏನೋ ಸಂದೇಹ ಮೂಡುವಂತೆ ಮಾಡಿದೆ. ನೇರವಾಗಿ ಆಕೆಯ ಮೊಬೈಲ್ ನೋಡಿದರೆ ಮಾತ್ರ ಸ್ಕ್ರೀನ್ ಕಾಣಿಸುತ್ತದೆ. ಇಲ್ಲದಿದ್ದರೆ ಕಾಣಿಸುವುದಿಲ್ಲ. ಇದರ ಅರ್ಥ ಏನಿದ್ದಿರಬಹುದು?**

-ಚಂದ್ರು ಅವರೇ, ನೀವು ಹೇಳುತ್ತಿರುವ ಸ್ಕ್ರೀನ್ ಪ್ರೊಟೆಕ್ಟರ್ ಒಂದು ನಿರ್ದಿಷ್ಟ ವಿನ್ಯಾಸವನ್ನು ಹೊಂದಿದೆ. ಇದರ ತಾಂತ್ರಿಕ ಅರ್ಥ ಮತ್ತು ನಿಮ್ಮಲ್ಲಿ ಮೂಡಿರುವ ಭಾವನಾತ್ಮಕ ಅರ್ಥ ಎರಡನ್ನೂ ಅರ್ಥೈಸಿಕೊಳ್ಳಬಹುದು.

ನಿಮ್ಮ ಹೆಂಡತಿ ಹಾಕಿಸಿರುವ ಸ್ಕ್ರೀನ್ ಪ್ರೊಟೆಕ್ಟರ್ ಅನ್ನು ಸಾಮಾನ್ಯವಾಗಿ 'ಪ್ರೈವಸಿ ಸ್ಕ್ರೀನ್ ಪ್ರೊಟೆಕ್ಟರ್' ಅಥವಾ 'ಆ್ಯಂಟಿ-ಪೀಪ್ ಸ್ಕ್ರೀನ್ ಗಾರ್ಡ್' ಎಂದು ಕರೆಯುತ್ತಾರೆ. ಈ ಪ್ರೊಟೆಕ್ಟರ್‌ಗಳಲ್ಲಿ 'ಮೈಕ್ರೋಲೂವರ್' (Microlouvre) ಎಂಬ ಸೂಕ್ಷ್ಮ ಪದರ ಇರುತ್ತದೆ. ಇದು ಪರದೆಯಿಂದ ಬರುವ ಬೆಳಕನ್ನು ಕೇವಲ ನೇರವಾದ ಕೋನದಲ್ಲಿ ಮಾತ್ರ ನೋಡುವಂತೆ ಮಾಡುತ್ತದೆ. ನೀವು ಪಕ್ಕದಲ್ಲಿ ಅಥವಾ ಓರೆಯಾದ ಕೋನದಲ್ಲಿ ಕುಳಿತು ನೋಡಿದಾಗ, ಆ ಬೆಳಕು ನಿರ್ಬಂಧಿತವಾಗಿ ಸ್ಕ್ರೀನ್ ಕಪ್ಪಾಗಿ ಅಥವಾ ಪೂರ್ತಿಯಾಗಿ ಕಪ್ಪು ಬಣ್ಣದಲ್ಲಿ ಕಾಣಿಸುತ್ತದೆ. ನಿಮ್ಮ ಪತ್ನಿ ತನ್ನ ಮೊಬೈಲ್ ಅನ್ನು ಸಾರ್ವಜನಿಕ ಸ್ಥಳಗಳಲ್ಲಿ ಬಸ್, ರೈಲು, ಅಥವಾ ಕೆಲಸದ ಸ್ಥಳದಲ್ಲಿ ಇರುವಾಗ ಪಕ್ಕದಲ್ಲಿರುವವರು ಸುಲಭವಾಗಿ ನೋಡಬಾರದು ಎಂದು ಬಯಸಿದ್ದಾರೆ ಎಂದರ್ಥ. ಸಾರ್ವಜನಿಕ ಸ್ಥಳದಲ್ಲಿ ಗೌಪ್ಯತೆ ಪಡೆಯಲು ಈ ಗ್ಲಾಸ್ ಉತ್ತಮ ಆಯ್ಕೆಯಾಗಿದೆ ನಿಜ. ಆದರೆ ನಿಮ್ಮಲ್ಲಿ 'ಏನೋ ಸಂದೇಹ' ಮೂಡಿರುವುದಕ್ಕೆ ಕಾರಣ, ನೀವು ಮನೆಯೊಳಗೆ, ಪಕ್ಕದಲ್ಲಿ ಕುಳಿತಿದ್ದರೂ ಪರದೆ ಕಾಣಿಸದಿರುವುದು.

ನಿಮ್ಮ ಸಂದೇಹವು ಮುಖ್ಯವಾಗಿ ವಿಶ್ವಾಸದ ಕೊರತೆಯಿಂದ ಉದ್ಭವಿಸಿದೆ. ಈ ವಿಷಯವನ್ನು ನೀವು ಈ ರೀತಿ ನಿಭಾಯಿಸಬಹುದು. ಗೌಪ್ಯತೆ ಪ್ರತಿಯೊಬ್ಬರ ವೈಯಕ್ತಿಕ ಹಕ್ಕು. ನಿಮ್ಮ ಪತ್ನಿ ಮೊಬೈಲ್‌ನಲ್ಲಿ ಏನೇ ನೋಡುತ್ತಿರಲಿ, ಅದು ಅವರಿಗೆ ಖಾಸಗಿಯಾಗಿರಬೇಕು ಎಂದು ಬಯಸುವುದು ಸಹಜ. ಇದು ತಕ್ಷಣವೇ ಏನೋ ಮುಚ್ಚಿಡುತ್ತಿದ್ದಾರೆ ಎಂಬುದಕ್ಕೆ ಪುರಾವೆಯಲ್ಲ. ಅವರು ಕೆಲಸಕ್ಕೆ ಸಂಬಂಧಿಸಿದ ವಿಷಯಗಳನ್ನು, ಬ್ಯಾಂಕ್ ವಿವರಗಳನ್ನು ಅಥವಾ ತಮ್ಮ ವೈಯಕ್ತಿಕ ಭಾವನೆಗಳನ್ನು ಯಾರೂ ನೋಡಬಾರದು ಎಂದು ಬಯಸುತ್ತಿರಬಹುದು. ಸಂದೇಹವನ್ನು ನಿಮ್ಮೊಳಗೆ ಇಟ್ಟುಕೊಂಡು ಸಂಬಂಧ ಹಾಳು ಮಾಡಿಕೊಳ್ಳುವ ಬದಲು, ಶಾಂತವಾಗಿ ಅವರೊಂದಿಗೆ ಮಾತನಾಡಿ. ಜಗಳದ ಧ್ವನಿಯಲ್ಲಿ ಅಥವಾ ನೇರ ಆರೋಪ ಮಾಡಬೇಡಿ.

'ಕಳೆದ ತಿಂಗಳು ನೀನು ಹೊಸ ಸ್ಕ್ರೀನ್ ಪ್ರೊಟೆಕ್ಟರ್ ಹಾಕಿಸಿದ್ದೀಯಾ ಎಂದು ನನಗೆ ಗೊತ್ತು. ಅದು ಪಕ್ಕದಿಂದ ನೋಡಿದರೆ ಕಾಣಿಸುವುದಿಲ್ಲ. ಅದು ಪ್ರೈವಸಿ ಗ್ಲಾಸ್ ಎಂದು ನನಗೆ ಗೊತ್ತಿದೆ. ನನಗೆ ಸ್ವಲ್ಪ ಮುಜುಗರವಾಯಿತು, ಏಕೆಂದರೆ ನೀನು ಮನೆಯಲ್ಲಿಯೂ ನನ್ನಿಂದ ಏನನ್ನಾದರೂ ಮುಚ್ಚಿಡು ತ್ತಿದ್ದೀಯಾ ಎಂದು ಅನಿಸಿತು. ನಾನು ತಿಳಿದುಕೊಳ್ಳಬೇಕಾದ ವಿಷಯವಿದ್ದರೆ, ದಯವಿಟ್ಟು ಹೇಳು' ಎಂದು ಹೇಳಿ ನೋಡಿ.

ಯಾವುದೇ ಸಂಬಂಧದಲ್ಲಿ ಪಾರದರ್ಶಕತೆ ಮುಖ್ಯವಾದರೂ, ನಿಮ್ಮ ಸಂಗಾತಿಗೆ ವೈಯಕ್ತಿಕ ಜಾಗ (Personal Space) ಮತ್ತು ಗೌಪ್ಯತೆ (Privacy) ಇರುವುದು ಅಷ್ಟೇ ಮುಖ್ಯ. ನಿಮ್ಮ ಸಮಸ್ಯೆ ಸ್ಕ್ರೀನ್ ಪ್ರೊಟೆಕ್ಟರ್ ಅಲ್ಲ, ಬದಲಿಗೆ ನಿಮ್ಮಿಬ್ಬರ ನಡುವೆ ವಿಶ್ವಾಸ ಕುಂದಿದೆಯೇ ಎಂಬ ಆತಂಕ. ನಿಮ್ಮ ಸಂದೇಹಕ್ಕೆ ಇತ್ತೀಚೆಗೆ ನಡೆದ ಬೇರೆ ಯಾವುದಾದರೂ ಘಟನೆ ಕಾರಣವಾಗಿದೆಯೇ ಎಂದು ಯೋಚಿಸಿ. ಮೊಬೈಲ್ ಅನ್ನು ಪರಿಶೀಲಿಸುವುದಕ್ಕಿಂತ, ನಿಮ್ಮಿಬ್ಬರ ಸಂಬಂಧವನ್ನು ಪರಿಶೀಲಿಸಿ. ಮೊಬೈಲ್ ಬಗ್ಗೆ ಮಾತನಾಡುವುದಕ್ಕಿಂತ, ನಿಮ್ಮ ಭಾವನೆಗಳು ಮತ್ತು ನಿರೀಕ್ಷೆಗಳ ಬಗ್ಗೆ ಮಾತನಾಡಿ.

ಈ ಅಭ್ಯಾಸವು ಸಾರ್ವಜನಿಕ ಗೌಪ್ಯತೆಗಾಗಿರಬಹುದು. ಮೊದಲು ಶಾಂತವಾಗಿ ಮತ್ತು ಪ್ರೀತಿಯಿಂದ ಮಾತನಾಡಿ, ಆಗ ನಿಮ್ಮ ಸಂದೇಹಕ್ಕೆ ನಿಜವಾದ ಕಾರಣ ಏನು ಎಂಬುದು ತಿಳಿದುಬರುತ್ತದೆ.